ಪ್ರಬುದ್ಧ ಕರ್ಣಾಟಕ

ಸಂಪುಟ ೫೩ ಸಂಚಿಕೆ ೩

ಮೈಸೂರು
ಮೈಸೂರು ವಿಶ್ವವಿದ್ಯಾನಿಲಯ
೧೯೭೧

ಲೇಖಕರಿಗೆ ಸೂಚನೆಗಳು

೧. 'ಪ್ರಬುದ್ಧ ಕರ್ಣಾಟಕ'ದಲ್ಲಿ ಪ್ರಕಟನೆಗಾಗಿ ಎಲ್ಲ ಬಗೆಯ ಲೇಖನಗಳಿಗೂ ಸ್ವಾಗತವಿದೆ. ಲೇಖನಗಳು ಸ್ವತಂತ್ರವಾಗಿರಬಹುದು, ಇಲ್ಲವೆ ಅನುವಾದಗಳಾಗಿರಬಹುದು. ಅನುವಾದವಾಗಿದ್ದರೆ ಮೂಲಲೇಖಕರ ಹಾಗೂ ಲೇಖನದ ಹೆಸರನ್ನು ತಪ್ಪದೆ ಸೂಚಿಸಿದ್ದು, ಲೇಖನದ ಜೊತೆಯಲ್ಲಿಯೇ ಮೂಲಲೇಖಕರ ಅಥವಾ ಪ್ರಕಾಶಕರ ಸಮ್ಮತಿಯನ್ನು ಕಳುಹಿಸಬೇಕು.

೨. ಲೇಖನಗಳನ್ನು ಕಾಗದದ ಒಂದೇ ಮಗ್ಗುಲಿನಲ್ಲಿ ಸ್ಪಷ್ಟವಾಗಿ ಬರೆದಿರಬೇಕು. ಇಲ್ಲವೇ ಟೈಪ್ ಮಾಡಿರಬೇಕು. ಲೇಖನದೊಂದಿಗೆ ಲೇಖಕರ ಸಂಕ್ಷಿಪ್ತ ಪರಿಚಯವನ್ನು ಕಳುಹಿಸಿಕೊಡಬೇಕು. ಲೇಖಕರಿಗೆ ಕರಡನ್ನು ತಿದ್ದುವ ಅವಕಾಶವಿಲ್ಲದಿರುವುದರಿಂದ ಹಸ್ತಪ್ರತಿಗಳು ಯಾವ ರೀತಿಯಿಂದಲೂ ಅಸ್ಪಷ್ಟವಾಗಿರಬಾರದು; ಅಸಂಪೂರ್ಣವಾಗಿರಬಾರದು. ಲೇಖನಗಳು ಸಚಿತ್ರವಾಗಿದ್ದರೆ, ಲೇಖನದಲ್ಲಿ ಚಿತ್ರಗಳು ಇರಬೇಕಾದ ಜಾಗವನ್ನು ನಿರ್ದೇಶಿಸಿರಬೇಕು.

೩. ಲೇಖನಗಳಲ್ಲಿ, ಇಂಗ್ಲಿಷನ್ನುಳಿದ ಅನ್ಯಭಾಷೆಗಳ ಉದ್ಧರಿತ ಭಾಗಗಳು ಕನ್ನಡ ಲಿಪಿಯಲ್ಲೇ ಇರಬೇಕು. ಅಡಿ ಟಿಪ್ಪಣಿಗಳಲ್ಲಿ, ಲೇಖಕರ ಹೆಸರು, ಪುಸ್ತಕ ಅಥವಾ ಲೇಖನಗಳ ಹೆಸರು, ಪ್ರಕಾಶಕರ ಹೆಸರು, ಸ್ಥಳ, ಪ್ರಕಟನೆಯ ವರ್ಷ ಹಾಗೂ ಸಂಬಂಧಿಸಿದ ಪುಟಸಂಖ್ಯೆ ಇವುಗಳನ್ನು ಉಚಿತವಾಗಿ ನಮೂದಿಸಿರಬೇಕು. ಮಾದರಿಗಾಗಿ ಇಲ್ಲಿ ಎರಡು ಉದಾಹರಣೆಗಳನ್ನು ಕೊಟ್ಟಿದೆ:

ನರಸಿಂಹಾಚಾರ್, ಡಿ. ಎಲ್., ಕನ್ನಡ ಗ್ರಂಥಸಂಪಾದನೆ (ಶಾರದಾಮಂದಿರ, ಮೈಸೂರು), ೧೯೫೪, ಪು. ೧೩.

Sreekantaiya, T. N., 'A century and a half of Literary Activity in Kannada,' **Kannada Studies**, Vol. 1, No. 2 (Mysore 1965). p. 62.

೪. ಕನ್ನಡ, ಇಂಗ್ಲಿಷ್, ಸಂಸ್ಕೃತ, ತೆಲುಗು ಮತ್ತು ಹಿಂದಿ ಭಾಷೆಗಳ ಪುಸ್ತಕಗಳನ್ನು ವಿಮರ್ಶೆಗಾಗಿ ಸ್ವೀಕರಿಸಲಾಗುತ್ತದೆ. ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸುವವರು **ಎರಡು** ಪ್ರತಿಗಳನ್ನು ಕಳುಹಿಸಬೇಕು.

೫. ಲೇಖಕರಿಗೆ ಅವರ ಲೇಖನಗಳ ೨೫ ಪ್ರತಿಗಳನ್ನು ಒದಗಿಸಲಾಗುತ್ತದೆ. ತಗಲಬಹುದಾದ ವೆಚ್ಚವನ್ನು ವಹಿಸಿದರೆ ಹೆಚ್ಚಿಗೆ ಪ್ರತಿಗಳನ್ನೂ ಒದಗಿಸಲಾಗುತ್ತೆ. ಲೇಖನ ಸ್ವೀಕೃತವೇ ಇಲ್ಲವೇ ಎಂಬುದನ್ನು ತಿಳಿಯಬಯಸುವವರು, ಅಸ್ವೀಕೃತ ಲೇಖನಗಳನ್ನು ಮರಳಿ ಪಡೆಯಲಿಚ್ಛಿಸುವವರು ಸಾಕಷ್ಟು ಅಂಚೆ ಚೀಟಿಗಳನ್ನು ಕಳುಹಿಸಬೇಕು.

೬. ಲೇಖನಗಳನ್ನು, ವಿಮರ್ಶೆಗಾಗಿ ಪುಸ್ತಕಗಳನ್ನು, **ಸಂಪಾದಕರು, ಪ್ರಬುದ್ಧ ಕರ್ಣಾಟಕ, ಪ್ರಸಾರಾಂಗ, ಮಾನಸಗಂಗೋತ್ರಿ, ಮೈಸೂರು-೬,** ಇವರಿಗೆ ಕಳುಹಿಸಬೇಕು.

ಪ್ರಬುದ್ಧ ಕರ್ಣಾಟಕ

ಸಂಪುಟ ೫೩ ಸಂಚಿಕೆ ೩

೨೦೯

ವಿರೋಧಿಕೃತ್ ಸಂವತ್ಸರ

ಆಶ್ವಯುಜ ಸಂಚಿಕೆ

ಮೈಸೂರು

ಮೈಸೂರು ವಿಶ್ವವಿದ್ಯಾನಿಲಯ

೧೯೭೧

PRABUDDHA KARNATAKA, Kannada Quarterly of the *University of Mysore*. Volume 53, Number 3, October 1971. Edited by C. P. Krishna Kumar and T. V. Venkatachala Sastry.

ಪ್ರಧಾನ ಸಂಪಾದಕರು

ಡಾ. ಹಾ. ಮಾ. ನಾಯಕ

ಸಂಪಾದಕರು

ಸಿ. ಪಿ. ಕೃಷ್ಣಕುಮಾರ್

ಟಿ. ವಿ. ವೆಂಕಟಾಚಲ ಶಾಸ್ತ್ರೀ

ಪ್ರಕಾಶಕರು

ಡಾ. ಪ್ರಭುಶಂಕರ

ಡೈರೆಕ್ಟರ್, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ

ಮುದ್ರಕರು

ಎಚ್. ನರಸಣ್ಣ

ಡೆಪ್ಯೂಟಿ ಡೈರೆಕ್ಟರ್, ಮೈಸೂರು ವಿಶ್ವವಿದ್ಯಾನಿಲಯ ಮುದ್ರಣಾಲಯ

ವಿಷಯಸೂಚಿಕೆ

ಈ ಸಂಚಿಕೆಯ ಲೇಖಕರು

ಶ್ರೀಯುತರಾದ

1. ಕುವೆಂಪು	ರಾಷ್ಟ್ರಕವಿ ಡಾ. ಕೆ. ವಿ. ಪುಟ್ಟಪ್ಪನವರು
2. ಮೇಗರವಳ್ಳಿ ರಮೇಶ್	ಒಬ್ಬರು ತರುಣ ಬರಹಗಾರರು
3 ಎಂ. ಜಿ. ನಂಜುಂಡಾರಾಧ್ಯ	ಮೈಸೂರಿನ ಸಂಸ್ಕೃತ ಮಹಾ ಪಾಠಶಾಲೆಯಲ್ಲಿ ಪ್ರಾಧ್ಯಾಪಕರು
4. ಮುರಳೀಧರ ಉಪಾಧ್ಯ ಹಿರಿಯಡಕ	ಮಂಗಳೂರಿನ ಸ್ನಾತಕೋತ್ತರ ಕೇಂದ್ರದಲ್ಲಿ ದ್ವಿತೀಯ ಕನ್ನಡ ಎಂ. ಎ. ವಿದ್ಯಾರ್ಥಿ
5. 'ವಿಹಂಗಮ'	ಕೃಷ್ಣರಾಜನಗರದ ಕಾಲೇಜಿನ ಪ್ರಿನ್ಸಿಪಾಲರಾದ ಜೆ. ಆರ್. ನಂಜುಂಡೇಗೌಡರು
6. ವಿ. ಎನ್. ಲಕ್ಷ್ಮೀನಾರಾಯಣ	ಮಾನಸಗಂಗೋತ್ರಿಯಲ್ಲಿ ಪ್ರಥಮ ಇಂಗ್ಲಿಷ್ ಎಂ.ಎ. ವಿದ್ಯಾರ್ಥಿ
7. ಡಿ.ಎಲ್. ನರಸಿಂಹಾಚಾರ್	ಖ್ಯಾತ ವಿದ್ವಾಂಸರು; ಈಗ ದಿವಂಗತರು
8. ಬಿ. ಪಿ. ಚಂದ್ರಾಬಾಯಿ	ಮೈಸೂರು ವಿಶ್ವವಿದ್ಯಾನಿಲಯದ ಅಂಚೆ ಮತ್ತು ತೆರಪಿನ ಶಿಕ್ಷಣ ವಿಭಾಗದಲ್ಲಿ ಅಧ್ಯಾಪಿಕೆ
9. ಗುಂಡ್ಮಿ, ಚಂದ್ರಶೇಖರ ಐತಾಳ	ಮಂಗಳೂರಿನ ಸ್ನಾತಕೋತ್ತರ ಕೇಂದ್ರದಲ್ಲಿ ಕನ್ನಡ ಅಧ್ಯಾಪಕರು.
10. ಎಚ್. ಎಸ್. ಹರಿಶಂಕರ್	ಮೈಸೂರಿನ ಕನ್ನಡ ಅಧ್ಯಯನಸಂಸ್ಥೆಯ ಭಾಷಾಂತರ ಮತ್ತು ಪಠ್ಯಪುಸ್ತಕ ವಿಭಾಗದಲ್ಲಿ ಅಧ್ಯಾಪಕರು
11. ಎಂ. ಸಿ. ವಸಂತಕುಮಾರ್	ಮೈಸೂರು ವಿಶ್ವವಿದ್ಯಾನಿಲಯದ ಸಂಜೆ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕರು
12. ಆ. ನೇ. ಉಪಾಧ್ಯೆ	ಖ್ಯಾತ ವಿದ್ವಾಂಸರು; ಮಾನಸಗಂಗೋತ್ರಿಯಲ್ಲಿ ಜೈನ ಶಾಸ್ತ್ರ ಮತ್ತು ಪ್ರಾಕೃತ ಭಾಷೆಗಳ ಪ್ರಾಧ್ಯಾಪಕರು
13. ಕೆ. ಕೆಂಪೇಗೌಡ	ಮೈಸೂರಿನ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಭಾಷಾ ಶಾಸ್ತ್ರದ ಅಧ್ಯಾಪಕರು
14. ಎಚ್. ಚಂದ್ರಶೇಖರ್	ಒಬ್ಬರು ಉದಯೋನ್ಮುಖ ಬರಹಗಾರರು
15. ಎಂ. ಚಿದಾನಂದಮೂರ್ತಿ	ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಕನ್ನಡ ರೀಡರ್
16. ಎಂ. ವಿ. ಸೀತಾರಾಮಯ್ಯ	ನಿವೃತ್ತ ಕನ್ನಡ ಪ್ರಾಧ್ಯಾಪಕರು; ಪ್ರಸಿದ್ಧ ಲೇಖಕರು
17. ಓ. ಎಸ್. ಲಿಂಗಣ್ಣಯ್ಯ	ನಿವೃತ್ತ ರೆವಿನ್ಯೂ ಅಧಿಕಾರಿಗಳು; ಪ್ರಸಿದ್ಧ ಬರಹಗಾರರು
18. ಕುಕ್ಕಿಲ ಕೃಷ್ಣಭಟ್ಟ	ಪ್ರಸಿದ್ಧ ವಿದ್ವಾಂಸರು
19. ಕೆ. ಅನಂತರಾಮು	ಮೈಸೂರಿನ ಮಹಾರಾಜಾ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕರು
20. ಶಂಸ ಐತಾಳ	ಮೈಸೂರಿನ ರೀಜನಲ್ ಕಾಲೇಜಿನ ಡೆಮಾನ್‌ಸ್ಟ್ರೇಟಿವ್ ಪ್ರೌಢಶಾಲೆಯಲ್ಲಿ ಅಧ್ಯಾಪಕರು
21. ರಾಗೌ	ಮೈಸೂರಿನ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಅಧ್ಯಾಪಕರು

ಕುವೆಂಪು

ಸತಿ

1

ತಿರುತಿರುಗಿ ಬಲುಬಳಲಿ, ಬಾಳಿನ ತಿರುಳ ಪರಿಯನು ಕಂಡು ಬೇಸರ
ಗೊಂಡು, ವೈರಾಗ್ಯದಲಿ ಕಾವಿಯನುಟ್ಟ ಯತಿಯಂತೆ,
ಮುನಿಸನುಳಿದತಿಶಾಂತವಾಗಿಹ ಮೊಗದ ಬಗೆಯನು ಬೀರಿ, ಪಡುವಣ
ಬೆಟ್ಟದುದಿಯೊಳು ತಳಿತ ಬನದೆಡೆ ರವಿಯು ರಂಜಿಸಿದ.

2

ತನ್ನಿನಿಯ ಸಂನ್ಯಾಸಿಯಾಗುವನೆಂಬ ಹೆದರಿಕೆಯಿಂದ ಸಂಜೆಯ
ಹೆಣ್ಣು, ಕುಂಕುಮ ರಾಗರಂಜಿತ ನವದುಕೂಲವನು
ಧರಿಸಿ, ಮುಗಿಲಿನ ಕರಿಯ ಮುಂಗುರುಳಾಡೆ ಕೆನ್ನೆಯ ಮೇಲೆ, ಲಜ್ಜೆಯ
ತೋರಿ, ಮೆಲ್ಲನೆ ಮೋಹಿಸೆರೆಯನ ಮುಂದೆ ಚರಿಸಿದಳು!

3

ಬಾಲೆ ತಾರೆಯು ಕೆಳದಿಯರೆ ಕೂಡಿಂಚರವಗೈಯುತ್ತ ಗೂಡಿಗೆ
ಹಾರುವೆಣೆವಕ್ಕಿಗಳ ಬಳಗವ ನೋಡುತನುಕರಿಸಿ
ತನ್ನ ವಾಣಿಯೊಳವರ ವಾಣಿಯ ನಗುವ ಹೆಮ್ಮೆಯೊಳುಬ್ಬಿ ಬಿಂಕದಿ
ಕೆಳದಿಯರ ಮೊಗನೋಡಿ ನಿಂತಿರೆ ರವಿಯು ಮುಳುಗಿದನು.

4

ಎಂಟು ವರುಷದ ಬಾಲೆ, ಲೋಕದ ಭಾವಗಳನರಿಯದಿಹ ಮುಗ್ಧೆಗೆ,
ಸಾವು ಬಾಳುಗಳೆಂಬ ಭೇದವ ತಿಳಿಯದಂಗನೆಗೆ
ಇನಿಯನಂತಕನೂರ ಸೇರಲು ಚಿತೆಯನೇರುವ ಕಾಲ ಬಂದಿರೆ
ಘೋರದೃಶ್ಯವ ನೋಡುವನೆ ರವಿ? ಹೊಕ್ಕನಂಬುಧಿಯ!

5

ಮಾವ ಬಂದನು, ಕರೆದು ತಾರೆಯನೆತ್ತಿಕೊಂಡನು ; ಕಂಬನಿಯ ಕರೆ
ಯುತ್ತ ನುಡಿದನು : "ತಾರೆ, ಗಂಡನ ಕೂಡಿ ನೀ ಹೋಗು!
ಹದಿಬದೆಗೆ ಸೊಗವಹುದು ಮೇಲಿನ ಲೋಕದಲಿ, ಹೆದರದಿರು, ಮಗಳೇ!"
ತಾರೆಗಳು ಮೂದಲಿಸಿ ಮಾವನ, ಮಿಣುಕಿದುವು ನಭದಿ!

6

ತನಗೆ ಸಕ್ಕರೆ ಕೊಟ್ಟು ಸಲಹಿದ ಮಾವನಕ್ಕರೆಯಿಂದ ನುಡಿದುದ
ಕೇಳಿ ನಕ್ಕಳು ತಾರೆ, ಚಿಮ್ಮಿದಳವನ ತೆಕ್ಕೆಯಲಿ!
ಬಿದಿರ ದಂಡಿಗೆಯೇರಿ ಮಲಗಿದ ಪತಿಯ ಬಳಿಯಲಿ ತಾರೆ ಕುಳಿತಳು
ಪೊಂದೊಡಿಗೆಗಳ ತೊಟ್ಟು, ಚಂದನವಿಟ್ಟು, ಬಾಚಿ ಬೈತಲೆಯ!

7

ಮೊಳಗಿದುವು ಭೇರಿಗಳು ಮುಳುಗಿಸಿ ಬಂಧುಗಳ ರೋದನವ! ಬಂದರು
ವಿಪ್ರವೇಷವನಾಂತ ಯಮಭಟರಂತೆ ಜೋಯಿಸರು!
ಮಂತ್ರಗಳ ಜಪಿಸುತ್ತ ನಡೆದರು ಮುಂದೆ, ಹೊರಟಿತು ಬಿದಿರ ದಂಡಿಗೆ
ಹಿಂದೆ ಜವದಿಂ ಮಸಣದಲ್ಲಿಹ ಚಿತೆಯ ಮಂಟಪಕೆ!

8

ಜೀವದಾಸೆಯ ಕೊಚ್ಚಿ ಮಿತ್ತುವಿನೂರಿಗೋಡುವ ಕಾಲವಾಹಿನಿ
ಯಲ್ಲಿ ತೇಲುವ ಯಮನ ನೌಕೆಯ ತೆರದಿ ದಂಡಿಗೆಯು
ಮಂತ್ರಗಳ ಲೆಕ್ಕಿಸದೆ, ಗಣನೆಗೆ ತಾರದಳುತಿಹ ಸಂಟರಿಪ್ಪರ,
ಬಾಲೆ ತಾರೆಯ ನೋಡದೋಡಿತು ಮಸಣದೆಡೆಗಾಗಿ!

9

ಬಾಯ್ದೆರೆದು ನರಬಲಿಯ ಕಾಯುವ ಯಮನೂರ ಹೆಬ್ಬಾಗಿಲಂದದಿ
ಮೂಢತನ ಮೈದೋರಿ ಕಾರೊಡಲಾಂತು ಬಂದಂತೆ
ಪಂಡಿತರ ಪಾಪಗಳು ನುಂಗಲು ಪಾಮರರನೊಟ್ಟಾಗಿ ಬಂದಿಹ
ವೆಂಬಂತೆ ತೋರಿತು ಭಯಂಕರ ಚಿತೆಯು ದೂರದಲಿ!
ಗಂಡನೊಡನೇರಿದಳು ತಾರೆಯು ಚಿತೆಯನತ್ತೆಯು ಬಳಿಗೆ ಬಂದಳು
ಕಳಚಲಾಭರಣಗಳ : ನಡುಗಿತು ಬೆದರಿ ಸುಡುಗಾಡು!

10

ಗಾಳಿ ನಿಂತಿತು ನಡುಗಿ, ಚುಕ್ಕಿಗಳೆಲ್ಲ ಕಂಪಿಸಿಯವಿತುಕೊಂಡುವು ;
ಮೋಡ ಮುಸುಗಿತು ; ಭೂಮಿದೇವಿಯು ಘೋರದೃಶ್ಯವನು
ನೋಡಲಾರದೆ ತನ್ನ ಮೊಗವನು ಮುಚ್ಚಿದಳು ಸೆರಗಿಂದ ; ಕತ್ತಲೆ
ಹಬ್ಬಿದುದು! ಬಾಲಕಿಯು ಕುಳಿತಳು ಮುಂದನರಿಯದಲೆ!

11

ಮಾವನಲ್ಲಿಹನತ್ತೆಯಲ್ಲಿಹಳಿನಿಯನೆಡೆಯೊಳು ಮಲಗಿ ನಿದ್ರಿಪ
ನಲ್ಲಿ ಪೂಜ್ಯರು, ನರರು, ಭೂಸುರರೆಂಬ ಜೋಯಿಸರು ;
ವೇದಗಳ ಬಲ್ಲವರು ; ನೀತಿಯನರಿತವರು ; ಧಾರ್ಮಿಕರು ; ಧರ್ಮದ
ನೆಲೆಯ ಮರ್ಮವ ಕಂಡವರು ಬಳಸಿರಲು ಭಯವೇಕೆ?

12

ಧೂಮವೆದ್ದಿತು! ಚಿತೆಯ ಮುತ್ತಿತು! ಬಾಲೆ ತಾರೆಯ ಬಳಸಿಕೊಂಡಿತು!
ಮೊಳಗಿದವು ಭೇರಿಗಳು! ಮಂತ್ರಗಳುಲಿಯು ಪೆರ್ಚಿದುದು!

ಕಾಳ್ಗಿಚ್ಚಿನಲಿ ಸಿಲುಕಿ ಬೇಯುವ ಚೈತ್ರವನಲತೆಯಂತೆ ತರಳೆಯು
ಕುಂದಿದಳು, ಕಂದಿದಳು, ಬಾಡುತ ಬೆಂದಳುರಿಯಲ್ಲಿ!

13

ಚೀರಿದುದು ಕೋಗಿಲೆಯು ; ಪೂಗಳಲುಲಿವ ದುಂಬಿಗಳುರಿದು ಸೀದುವು ;
ಪುತ್ತಿನಿಂ ಪೊರಮಟ್ಟು ಪಾವುಗಳಳಿದುವಗ್ನಿಯಲಿ!
ಕೊಳದ ತಾವರೆಯೊಡನೆ ಕುದಿದವು ಸಂಚರಿಪ ಮೀನುಗಳು ; ಬೆಂದುವು
ಬಾಳೆ, ಸಂಪಗೆಯರಳು ಸುಟ್ಟುರಿದಾಯ್ತು ವನದಹನ!

14

ಚೀರಿದುದೆ ಕೋಗಿಲೆಯು? ಶಾರೆಯು ಕೂಗಿದಳು! ದುಂಬಿಗಳು ಸೀದುವೆ?
ಕಮಲ ಬೆಂದುದೆ? ಮೊಗವ ಮುತ್ತಿದ ಕುರುಳು ಕರಿಯಾಯ್ತು!
ಫಣೆಗಳಳಿದುವೆ? ಬೂದಿಯಾದುವು ಕೇಶಪಾಶಗಳಾಳಿ! ಕುದಿದುವೆ
ಮೀನುಗಳು? ಮರುಗಿದುವು ಕಂಗಳು! ಬನದುರಿಯೆ? ಚಿತೆಯು!

15

ಒರಲಿದಳೆ ಬಾಲಕಿಯು? ಕೇಳಿರಿ ಭೇರಿಗಳ! ಹೊರಳಿದಳೆ ? ಕೇಳಿರಿ
ಧೂಮವನು! ಕೋಮಲೆಯೆ? ಕೇಳಿರಿ ಸುಟ್ಟ ಬೆಂಕಿಯನು!
ಧಗಧಗಿಸಿ ಭುಗಿಭುಗಿಲು ಭುಗಿಲೆಂದುರಿಯು ಕಾಳಿಯ ರಕ್ತಜಿಹ್ವೆಗ
ಳಂತೆ ರಂಜಿಸಿತಿರುಳು ಕಾಳಿಯ ಕರಿಯ ಮೈಯಾಯ್ತು!

28-7-1928

ಮೇಗರವಳ್ಳಿ ರಮೇಶ್

ಗೂಢಾರ್ಥ

ಹಲವು ಹತ್ತು ನವ್ಯಚಿತ್ರಗಳ ನೋಡಿ
ಕಲಾವಿದರ ಅಂತರಾರ್ಥವರಿತಿದ್ದೇನೆ.
ನವ್ಯಕವಿಗಳ ನೂರು ಕವನಗಳನು
ಓದಿ ಅರ್ಥೈಸಿದ್ದೇನೆ.
ಆದರೆ,
ಮಾರು ದೂರದಲೆನ್ನ ಬರುವಿಕೆಯ ಕಂಡಾಗ
ಕದವಿಕ್ಕಿ ಒಳನಡೆದು,
ಮಾರು ದೂರ ಮುಂದೆ ಸರಿದಾಗ
ಹಿಂದಿನಿಂದೆನ್ನ ಫೋಟೋ ತೆಗೆವ ನೀನು
ಮನದ ಪುಟದಲಿ ಬರೆದಿಟ್ಟ
ನೀಳ್ಗವನವನು ಓದಿ
ಗೂಢಾರ್ಥವನ್ನರಿಯಲಾಗದೇ
ತಳಮಳಿಸುತ್ತಿದ್ದೇನೆ.

ಎಂ. ಜಿ. ನಂಜುಂಡಾರಾಧ್ಯ

ತೋಂಟದ ಸಿದ್ಧಲಿಂಗ ಶಿವಯೋಗಿಗಳ ವಚನಗಳಲ್ಲಿ ಕಾವ್ಯಸತ್ವ

1

ಕ್ರಿ. ಶ. ಸುಮಾರು ಹದಿನೈದನೆಯ ಶತಮಾನದಲ್ಲಿ ಅವತರಿಸಿ, ತಮ್ಮ ಅನುಭಾವ ಸಂಪತ್ತಿನಿಂದ, ವೀರವೈರಾಗ್ಯದಿಂದ, ಮಹಿಮಾ ವಿಶೇಷಗಳಿಂದ ಜನತೆಯಲ್ಲಿ ಅಧ್ಯಾತ್ಮ ಜಾಗೃತಿಯನ್ನುಂಟು ಮಾಡಿದ ಸಿದ್ಧಲಿಂಗ ಶಿವಯೋಗಿಗಳ ಹೆಸರು ಚಿರಸ್ಮರಣೀಯ. ಅವರು ತಮ್ಮ ಆದರ್ಶ ಜೀವನ ದಿಂದ ಮಾತ್ರವಲ್ಲದೆ ಉಪದೇಶ ವಚನಗಳಿಂದ ಎಂದೆಂದಿಗೂ ಜನಮನವನ್ನು ಪುನೀತಗೊಳಿಸುತ್ತಿದ್ದಾರೆ.

ಸಿದ್ಧಲಿಂಗೇಶ್ವರರ ವಚನಗಳು 'ಷಟ್‌ಸ್ಥಲ ಜ್ಞಾನಸಾರಾಮೃತ' ಎಂಬ ಹೆಸರಿನಿಂದ ಪ್ರಕಾಶ ಗೊಂಡಿವೆ. ತಮ್ಮ ಹೆಸರೇ ಹೇಳುವಂತೆ ಅವು ಷಟ್‌ಸ್ಥಲ ಸಿದ್ಧಾಂತ ಸಾರಸರ್ವಸ್ವವನ್ನು ಒಳಗೊಂಡಿವೆ.

ವಚನಕಾರರಲ್ಲಿ ಪ್ರಮುಖರಾದ ಬಸವಣ್ಣ, ಅಕ್ಕಮಹಾದೇವಿ, ದೇವರ ದಾಸಿಮಯ್ಯ ಮುಂತಾ ದವರ ವಚನಗಳು ಒಂದು ವರ್ಗಕ್ಕೆ ಸೇರಿದವು. ಅವು ಮಧುರ ಭಾವ ಹಾಗೂ ಹೃದಯಂಗಮ ಭಾಷಾಸೌಂದರ್ಯದಿಂದ ಆಹ್ಲಾದಕರವಾಗಿವೆ. ಜನಮನವನ್ನು ಸರ್ವಾಂಗೀಣವಾಗಿ ಆವರಿಸಿ ತನ್ಮಯ ಗೊಳಿಸುವಂತಹವು. ಪ್ರಸಾದ ಮಾಧುರ್ಯಾದಿ ಗುಣಗಳಿಂದಲೂ ಸರಸಾಲಂಕಾರಗಳಿಂದಲೂ ಗುಂಫಿತ ವಾಗಿ, ಅಪ್ಯಾಯಮಾನವಾಗಿವೆ. ಅಲಂಕಾರ ಶಾಸ್ತ್ರೋಕ್ತವಾದ 'ದ್ರಾಕ್ಷಾಪಾಕ'ಧ ವಚನಗಳಿವು.

ಅಲ್ಲಮಪ್ರಭು, ಚನ್ನಬಸವಣ್ಣ, ಸಿದ್ಧರಾಮ ಮತ್ತು ಮೋಳಿಗೆ ಮಾರಯ್ಯ ಮುಂತಾದವರ ವಚನಗಳದು ಮತ್ತೊಂದು ವರ್ಗ. ಅಲ್ಲಿ ರಸಾನುಭವಕ್ಕಿಂತ ರಸಯೋಗಕ್ಕೆ ಹೆಚ್ಚಿನ ಸ್ಥಾನ ಮೀಸಲು. ಅದು ತತ್ತ್ವಾನುಭವದ ಕಾಸಾರ. ಅಲ್ಲಿಯ ನುಡಿಕುಸುಮಗಳಲ್ಲಿ ದಾರ್ಶನಿಕ ಸೌರಭ ಹೊರಚಲ್ಲುತ್ತಿ ರುತ್ತದೆ. ಗಂಭೀರ ಶೈಲಿ, ತಾರ್ಕಿಕ ವಿವೇಚನೆಯ ಸೆಣಸಾಟದಲ್ಲಿಯೂ ಸಹ ಅಲ್ಲಿಯ ಬೆಡಗಿನ ನುಡಿಗಳಲ್ಲಿ ಅಭಿವ್ಯಕ್ತವಾಗುವ ಧ್ವನಿ ಇಂದಿನ ನವ್ಯಕಾವ್ಯದ ಸೆಲೆಯೆಂಬಂತೆ ಓದುಗರನ್ನು ಮುಗ್ಧಗೊಳಿಸುತ್ತದೆ. ಏನೇ ಆದರೂ ಅದು ನಾರಿಕೇಳ ಪಾಕ. ಅರ್ಥಸ್ಫುರಣೆ ಅಧ್ಯಾತ್ಮ ಮಾರ್ಗದಲ್ಲಿರುವವರಿಗೂ ಅಸಾಧ್ಯವೆ!

2

ಸಿದ್ಧಲಿಂಗ ಶಿವಯೋಗಿಗಳ ವಚನಗಳಲ್ಲಿ ತತ್ತ್ವ ವಿಚಾರಕ್ಕೆ ಅಗ್ರಸ್ಥಾನ. ಗಹನ ತತ್ತ್ವವಿಚಾರಗಳು ಸಾಮಾನ್ಯ ಜನತೆಗೆ ಎಟುಕಬೇಕಾದರೆ ಜನಜನಿತವೂ, ಹೃದಯಂಗಮವೂ ಆದ ಉಪಮೆಗಳ ಅವಶ್ಯ ಕತೆ ಹೆಚ್ಚು. ಶಿವಯೋಗಿಗಳು ನಿರೂಪಿಸುವ ವಿಧಾನ ಅವರ ಸಹಜ ಕವಿಹೃದಯಕ್ಕೆ ನಿದರ್ಶನ.

ಒಳ್ಳೆಯ ಶಿಕ್ಷಣದಿಂದ ಗಳಿಸಬೇಕಾದ ವಸ್ತು ಪಾಂಡಿತ್ಯ; ಅದನ್ನು ಪರಿಶ್ರಮದಿಂದ ಯಾರಾ ದರೂ ಗಳಿಸಬಹುದು. ಆದರೆ ಸಹಜ ಸಂಸ್ಕಾರಿಯಾದ ಸ್ವಾನುಭಾವಿಗೆ ಅಂಥ ಶಿಕ್ಷಣದ ಅವಶ್ಯಕತೆ ಕಾಣಬರುವುದಿಲ್ಲವೆಂಬುದು ಇಲ್ಲಿ ಮನೋಜ್ಞವಾಗಿ ಅಭಿವ್ಯಕ್ತವಾಗಿದೆ :

ಸೂರ್ಯನ ಬೆಳಗಿಂಗೆ ಕೊಳ್ಳಿಯ ಬೆಳಗ ಹಿಡಿಯಲುಂಟೆ ಮರುಳೆ?
ತನ್ನ ಮುಖವ ತಾ ಬಲ್ಲವಂಗೆ ಕನ್ನಡಿಯ ಹಿಡಿದು ನೋಡಲುಂಟೆ ಹೇಳಾ?
ತನ್ನ ಸುಳುಹಿನ ಸೂಕ್ಷ್ಮವ ತಾನರಿಯದ ಸ್ವಯಂಜ್ಞಾನಿಗೆ
ಇನ್ನಾವ ಆಗಮ ಬೋಧೆಯೇಕೆ ಹೇಳಾ?
ಆಗಮ ಶಿಕ್ಷೆ ಎಂಬುದು ಲೋಗರಿಗಲ್ಲದೆ
ಆದಿಯಲ್ಲಿ ಶಿವ ಬೀಜವಾದ ಮಹಾಮಹಿಮರಿಗುಂಟೆ?
ಸ್ವಾನುಭಾವ ಜ್ಞಾನ ಎಲ್ಲರಿಗೂ ಇಲ್ಲವಲ್ಲಾ!......

(ಷ. ಸಾ. 57)

ಇಲ್ಲಿ 'ತನ್ನ ಸುಳುಹಿನ ಸೂಕ್ಷ್ಮವ ತಾನರಿದ ಸ್ವಯಂಜ್ಞಾನಿಗೆ ಆಗಮಬೋಧೆಯೇಕೆ?' ಎಂಬ ಮಾತನ್ನು ಸಮರ್ಥಿಸಲು ಕೊಟ್ಟಿರುವ "ಸೂರ್ಯನ ಬೆಳಗಿಂಗೆ ಕೊಳ್ಳಿಯ ಬೆಳಗ ಹಿಡಿಯಲುಂಟೆ?" "ತನ್ನ ಮುಖವ ತಾ ಬಲ್ಲಂಗೆ ಕನ್ನಡಿಯ ಹಿಡಿದು ನೋಡಲುಂಟೆ?" ಎಂಬ ಹೋಲಿಕೆಗಳ ಔಚಿತ್ಯ ಅನುಭವವೇದ್ಯ. ಮತ್ತು "ಆದಿಯಲ್ಲಿ ಶಿವಬೀಜವಾದ ಮಹಾಮಹಿಮರು" ಎಂಬ ಮಾತಿನಲ್ಲಿ, ಅನೇಕ ಜನ್ಮಗಳಲ್ಲಿ ಗಳಿಸಿದ ಸಂಸ್ಕಾರ ಹಾಗೂ ಪ್ರತಿಭಾಸಂಪತ್ತುಳ್ಳವರು ಎಂಬ ಮತ್ತು, ಸ್ವಾನುಭಾವ ಜ್ಞಾನ ಎಲ್ಲರಿಗೂ ಲಭ್ಯವಲ್ಲ ಎಂಬ ಅಂಶಗಳು ಹೃದಯಂಗಮವಾಗಿ ನಿರೂಪಿತವಾಗಿವೆ.

"ಮಹಾಜ್ಞಾನ ಸ್ವರೂಪರಪ್ಪ ಶರಣರೇ ಲಿಂಗವೆಂದರಿದ ಮಹಾತ್ಮರಿಗೆ ಸಂಕಲ್ಪ ಭ್ರಮೆಯುಂಟೆ?" ಎಂಬುದನ್ನು ಸಮರ್ಥಿಸಿಕೊಳ್ಳಲು ಉಪಮೆಗಳ ಮಾಲೆ ಇಲ್ಲಿ ಬಳ್ಳಿವರೆದಿದೆ :

ಸುಧೆಯೊಳಗೆ ವಿಷವುಂಟೆ? ಮಧುರದೊಳಗೆ ಕಹಿಯುಂಟೆ?
ದಿನಮಣಿಯೊಳಗೆ ಕಪ್ಪುಂಟೆ? ಬೆಳದಿಂಗಳೊಳಗೆ ಕಿಚ್ಚುಂಟೆ?
ಅಮೃತ ಸಾಗರದೊಳಗೆ ಬೇವಿನ ಬಿಂದುವುಂಟೆ?
ಮಹಾಜ್ಞಾನ ಸ್ವರೂಪರಪ್ಪ ಶರಣರೇ ಲಿಂಗವೆಂದರಿದ ಮಹಾತ್ಮರಿಗೆ
ಸಂಕಲ್ಪಭ್ರಮೆಯುಂಟೆ?................."

(ಷ. ಸಾ. 58)

ಈ ಮಾತುಗಳಲ್ಲಿ ಅರ್ಥಾಂತರನ್ಯಾಸ ಹಾಗೂ ಕಾವ್ಯಲಿಂಗಾಲಂಕಾರಗಳ ವಿಲಾಸವೇ ಎದ್ದು ಕಾಣುತ್ತದೆ.

ಉಪನಿಷತ್ತುಗಳಲ್ಲಿ 1 ಮತ್ತು ಶಿವಾಗಮಗಳಲ್ಲಿ 2 ಜೀವ ಪರಮಾತ್ಮರ ಐಕ್ಯವನ್ನು "ನದೀ ಸಮುದ್ರ ನ್ಯಾಯದಿಂದ" ಸಮರ್ಥಿಸಲಾಗಿದೆ. ಎಂದರೆ ಬೇರೆ ಬೇರೆ ಕಡೆಯಿಂದ ಹರಿದು ಬರುವ ನಾಮ, ರೂಪ, ರುಚಿಗಳುಳ್ಳ ನದಿಗಳು ಸಮುದ್ರದಲ್ಲಿ ಬೆರೆದು ಸಮುದ್ರವೇ ಆಗುವಂತೆ ವಿಭಿನ್ನ ಕರ್ಮಾನುಗುಣವಾದ ಶೀಲ, ಸ್ವಭಾವ, ಜ್ಞಾನ ಪರಿಪಾಕವುಳ್ಳ ಜೀವಾತ್ಮರು ಶಿವಜ್ಞಾನ ಪರಿಪಕ್ವಾಂತಃಕರಣರಾಗಿ ಶಿವಸ್ವರೂಪವನ್ನೇ ಪಡೆಯುತ್ತಾರೆ. ಈ ಸ್ಥಿತಿಯನ್ನು ಐಕ್ಯ, ಅದ್ವೈತ ಹಾಗೂ ಸಮರಸ ಎಂಬ ಪದಗಳಿಂದ ಕರೆಯಲಾಗಿದೆ. ಈ ವಿಷಯವನ್ನು ಶಿವಯೋಗಿಗಳು ನಿರೂಪಿಸಿರುವ ರೀತಿ ಇದು :

1ಯಥಾ ನದ್ಯಾಃ ಸ್ಯಂದಮಾನಾಃ ಸಮುದ್ರೇ ಅಸ್ತಂ ಗಚ್ಛಂತಿ ನಾಮರೂಪೇ ವಿಹಾಯ।
ತಥಾ ವಿದ್ವಾನ್ನಾಮರೂಪಾದ್ವಿಮುಕ್ತಃ ಪರಾತ್ಪರಂ ಬ್ರಹ್ಮಮುಪೈತಿ ದಿವ್ಯಂ॥

(ಮುಂಡಕ 3–8)

2 ಜಲೇ ಜಲಮಿವ ನ್ಯಸ್ತಂ ವಹ್ನೌ ವಹ್ನಿರಿವಾರ್ಪಿತಂ
ಪರೇ ಬ್ರಹ್ಮಣಿ ಲೀನಾತ್ಮಾ ವಿಭಾಗೇನ ನ ದೃಶ್ಯತೇ॥ (ಸಿ.ಶಿ. 20–60)

......ಏಳುನೂರೆಪ್ಪತ್ತು ಅಮರ ಗಣಂಗಳು
ಕ್ಷೀರ ಕ್ಷೀರವ ಬೆರೆಸಿದಂತೆ, ನೀರು ನೀರ ಬೆರೆಸಿದಂತೆ,
ಘೃತ ಘೃತವ ಬೆರೆಸಿದಂತೆ, ಬಯಲು ಬಯಲ ಬೆರೆಸಿದಂತೆ
ಲಿಂಗವ ಬೆರೆಸಿ ಮಹಾಲಿಂಗವೆಯಾದರು ನೋಡಾ!

(ಷ. ಸಾ. 60)

ವೈದಿಕ ಯುಗದಲ್ಲಿ ಅಧ್ಯಾತ್ಮ ವಿಷಯಗಳನ್ನು ಪ್ರಶ್ನೋತ್ತರ ರೂಪದಲ್ಲಿ ಬೋಧಿಸುವ ಕ್ರಮವಿದ್ದುದು ಉಪನಿಷತ್ತುಗಳಲ್ಲಿ ಕಂಡುಬರುತ್ತದೆ. ಸಿದ್ಧಲಿಂಗ ಶಿವಯೋಗಿಗಳು ತಮ್ಮ ಶಿಷ್ಯರಿಗೆ ಪುತ್ರವಾತ್ಸಲ್ಯದಿಂದ ಸಂಬೋಧಿಸಿ ಉಪದೇಶಿಸುತ್ತಿದ್ದುದು ಇಲ್ಲಿ ಮೂರ್ತಗೊಂಡಿದೆ :

"ವಸ್ತುವೆಂದಡೆ ಹೇಂಗಾಯಿತ್ತಯ್ಯೆಂದಡೆ, ಹೇಳಿಹೆ ಕೇಳಯ್ಯಾ ಮಗನೆ–
ಕಾಷ್ಠದಲ್ಲಿ ಅಗ್ನಿ ಹೇಂಗೆ ಹಾಂಗಿಪ್ಪುದು,
ಕ್ಷೀರದೊಳಗೆ ಘೃತ ಹೇಗೆ ಹಾಂಗಿಪ್ಪುದು,
ತಿಲದಲ್ಲಿ ತೈಲ ಹೇಂಗೆ ಹಾಂಗಿಪ್ಪುದು,
ಜಲದೊಳಗೆ ಸೂರ್ಯ ಹೇಂಗೆ ಹಾಂಗಿಪ್ಪುದು,
ಕನ್ನಡಿಯೊಳಗೆ ಪ್ರತಿಬಿಂಬ ಹೇಗೆ ಹಾಂಗಿಪ್ಪುದು,
ಸರ್ವತ್ರ ಎಲ್ಲಾ ಠಾವಿನಲ್ಲಿಯೂ ವಸ್ತುವಿನ ಕಳೆ, ಪರಿಪೂರ್ಣವಾಗಿಪ್ಪುದಯ್ಯಾ!

(ಷ. ಸಾ. 77)

ಪರಾತ್ಪರ ವಸ್ತು ಅಣುರೇಣು ತೃಣ ಕಾಷ್ಠಾದಿಗಳಲ್ಲಿ ಸರ್ವಾಂಗೀಣವಾಗಿ ವ್ಯಾಪಿಸಿದೆ ಎಂಬ ತತ್ತ್ವವನ್ನು ಸಮರ್ಥಿಸಲು ಇಲ್ಲಿ ಕೊಟ್ಟಿರುವ ಉಪಮೆಗಳು ಒಂದಕ್ಕಿಂತ ಒಂದು ಮನೋಜ್ಞವಾಗಿವೆ.

ಶಿವದೀಕ್ಷಾ ವಿಧಾನದಿಂದ ಲಿಂಗಧಾರಣವಾದ ಮೇಲೆ ಪಂಚಭೂತ ಪ್ರಕೃತಿಕಾಯ ಹೇಗೆ ಪ್ರಸಾದ ಕಾಯವಾಗುತ್ತದೆ ಎಂಬುದಕ್ಕೆ ಕೊಟ್ಟಿರುವ ಉಪಮೆಯಿದು :

ಉರಿಬಂದು ಕಪ್ಪುರವ ಸೋಂಕಲಾಗಿ
ಕಪ್ಪುರದ ಗುಣ ಕೆಟ್ಟು ಉರಿಯೇ ಆದಂತೆ
ಪರುಷ ಬಿಂದು ಬಂದು ಲೋಹವ ಸೋಂಕಲು
ಆ ಲೋಹದ ಗುಣ ಕೆಟ್ಟು ಚಿನ್ನವಾದಂತೆ
ಲಿಂಗವು ಬಂದು ಶರಣನ ಸೋಂಕಲಾಗಿ
ಆ ಪಂಚಭೂತ ಪ್ರಕೃತಿಕಾಯ ಹೋಗಿ
ಪ್ರಸಾದ ಕಾಯವಾಯಿತ್ತು............"

ಇಲ್ಲಿ ಶಿವಕೃಪಾ ಪಾತ್ರ (ಶಕ್ತಿಪಾತ್ರ) ನಾದ ಶರಣನಲ್ಲಿಗೆ ಗುರುಕೃಪೆಯಿಂದ ಲಿಂಗವು ತಾನಾಗಿಯೇ ಬಂದು ಸಂಬಂಧವಾಗುತ್ತದೆ ಎಂಬ ಅರ್ಥವು "ಉರಿ ಬಂದು ಕಪ್ಪುರವ ಸೋಂಕಲು" ಮುಂತಾದ ಉಪಮೆಗಳಲ್ಲಿ ಅಡಗಿದೆ. "ಶಕ್ತಿಪಾತಂ ಸಮಾಲೋಕ್ಯದೀಕ್ಷಯಾ ಯೋಜಯೇದ್ಗುರುಃ" ಎಂಬ ಅರ್ಥವು ಇಲ್ಲಿ ಅಭಿವ್ಯಕ್ತವಾಗಿದೆ. ಶಕ್ತಿಪಾತ್ರವಿಲ್ಲದವನು ಶಿವದೀಕ್ಷೆಗೆ ಯೋಗ್ಯನಲ್ಲ. ಶಿಷ್ಯನ ಅರ್ಹತೆಯನ್ನು ಅರಿತೇ ಗುರುವು ಲಿಂಗದೀಕ್ಷೆ ಕೊಡಬೇಕು. ಹಾಗೆ ಲಿಂಗ ಸಂಬಂಧವಾದವನ ಪ್ರಾಕೃತಕಾಯವು ಪ್ರಸಾದ ಕಾಯವಾಗುತ್ತದೆ ಎಂಬ ಮಾರ್ಮಿಕ ಅರ್ಥವು ಈ ವಚನದಲ್ಲಿ ಎಷ್ಟು ಹೃದಯಂಗಮವಾಗಿ ಸ್ಫುರಿಸಿದೆ ಯೆಂಬುದನ್ನು ಸಹೃದಯರು ಗುರುತಿಸಬಲ್ಲರು.

ಬೀಜವೃಕ್ಷನ್ಯಾಯ

ದೇಹವ ಮರೆಗೊಂಡಿಪ್ಪ ಆತ್ಮದಂತೆ,

ಶಕ್ತಿಯ ಮರೆಗೊಂಡಿಪ್ಪ ಶಿವನಂತೆ,
ಕ್ಷೀರವ ಮರೆಗೊಂಡಿಪ್ಪ ತುಪ್ಪದಂತೆ,
ವಾಚ್ಯವ ಮರೆಗೊಂಡಿಪ್ಪ ಅನಿರ್ವಾಚ್ಯದಂತೆ
ಎನ್ನೊಳಡಗಿಪ್ಪ ಪರಮಾರ್ಥ ತತ್ತ್ವವು........."

(ಷ. ಸಾ. 80)

ಎಂಬ ಈ ವಚನದಲ್ಲಿ "ಬೀಜದೊಳಡಗಿಪ್ಪ ವೃಕ್ಷದಂತೆ ತಾನರಿಯದ ಮುನ್ನ ಎನ್ನೊಳಗಡಗಿದ್ದಿತಯ್ಯಾ ಪರಮಾರ್ಥ ತತ್ತ್ವ" ಎಂಬ ಮಾತಿನ ಔಪಮ್ಯದ ಸ್ವಾರಸ್ಯಕ್ಕೆ ಎಣೆಯುಂಟೆ?

ಕೆಲವು ಬೆಡಗಿನ ವಚನಗಳು

ಧ್ವನಿ ಕಾವ್ಯದ ಜೀವಾಳ. "ರಸವು ಕಾವ್ಯದ ಆತ್ಮ" ಎಂಬುದು ಆಲಂಕಾರಿಕರ ಮತ. ರಸವು ಧ್ವನಿತವೇ ತಾನೇ! ಆದರೆ ಧ್ವನಿತವಾಗುವುದು ಕೇವಲ ರಸವೊಂದೇ ಅಲ್ಲ; ರಸ, ಭಾವ, ಅಲಂಕಾರಾದಿಗಳೆಲ್ಲವೂ ಧ್ವನಿತವಾಗಬಹುದು. ಅದೇ ಉತ್ತಮ ಕಾವ್ಯ. ಇಂದಿನ ನವ್ಯಕಾವ್ಯವು ಜನತೆಯನ್ನು ಆಕರ್ಷಿಸುತ್ತಿರುವುದು ಧ್ವನಿ ಪ್ರಾಧಾನ್ಯತೆಯಿಂದ ಮಾತ್ರ. ಆದರೆ ಅಂಥ ಧ್ವನಿ ಲೋಕ ಶಿಕ್ಷಕ ಗುರಿಯುಳ್ಳದ್ದಾದರೆ ಅದರಿಂದ ಉಪಯೋಗ. ಅದು ಕವಿಹೃದಯ ಸಂಸ್ಕಾರವನ್ನು ಅವಲಂಬಿಸಿರುತ್ತದೆ. ಸಿದ್ಧಲಿಂಗ ಶಿವಯೋಗಿಗಳ ಬೆಡಗಿನ ವಚನಗಳಲ್ಲಿ ಅವರ ಹೃದಯ ಪರಿಪಾಕ ನಿಚ್ಚಳವಾಗಿದೆ.

ನೀರಜದೊಳಗೆ ಹುಟ್ಟಿದ ಕಿಚ್ಚು ವಾರಿಧಿಯ ಕುಡಿವುದ ಕಂಡೆನಯ್ಯಾ!
ಸಾಗರ ಬತ್ತಿ, ಇಪ್ಪತ್ತೈದು ಗ್ರಾಮವ ನುಂಗಿದ ಕಪ್ಪೆ,
ಬಾಯಾರಿ ಸತ್ತಿತ್ತು ಕಾಣಾ ದೇವ..........."

(ಷ. ಸಾ. 90)

ಇದು ಪಿಂಡಜ್ಞಾನಸ್ಥಲದ ವಚನ. ವೀರಶೈವ ಪರಿಭಾಷೆಯಲ್ಲಿ ಪುಣ್ಯವು ಅಧಿಕವಾಗಿಯೂ ಪಾಪವು ಕ್ಷೀಣವಾಗಿಯೂ ಇರುವ ಶುದ್ಧ ಜೀವಿಗೆ 'ಪಿಂಡ'ವೆಂದು ಹೆಸರು[1]. ಇದು ಶರೀರ, ಇದು ಆತ್ಮ ಎಂಬ ವಿವೇಕವುಳ್ಳವನು 'ಪಿಂಡಜ್ಞಾನಿ'[2] ಎನಿಸುತ್ತಾನೆ. ಸಿದ್ಧಲಿಂಗ ಶಿವಯೋಗಿಗಳ ಅಭಿಮತದಂತೆ–

ಮುಗಿಲ ಮರೆಯಿಂದ ಉದಯವಾದ ಸೂರ್ಯನಂತೆ
ಪಿಂಡದೊಳಗಿರ್ದ ಶಿವತತ್ತ್ವ ಉದಯವಾಗಿ ತೋರಲು
ಆತ್ಮತತ್ತ್ವವಿದು, ಶಿವತತ್ತ್ವವಿದೆಂಬ ವಿವೇಕ ತಲೆದೋರುವುದು ಪಿಂಡಜ್ಞಾನ.

ಪ್ರಕೃತ "ನೀರ(ಧಿ)ದೊಳಗೆ ಹುಟ್ಟಿದ ಕಿಚ್ಚು" ಎಂಬುದರಿಂದ ಜೀವಾತ್ಮನಲ್ಲಿ ಶಿವಕಾರುಣ್ಯ (ಶಕ್ತಿಪಾತ)ದಿಂದ ಉಂಟಾದ ಶಿವಜ್ಞಾನವು ವೇದ್ಯವಾಗುತ್ತದೆ. ಸಾಗರದಲ್ಲಿ ಹುಟ್ಟಿದ ಬಡಬಾನಲವು ಸಾಗರ ಜಲವನ್ನೇ ಹೀರುವಂತೆ ಈ ಶಿವಜ್ಞಾನವು ಸಂಸಾರವೆಂಬ ನೀರಧಿಯನ್ನೇ ಕುಡಿಯುತ್ತದೆ. ಭವಸಾಗರವು ಬತ್ತಿದಾಗ ಅದರಲ್ಲಿರುವ 25 (ಪುರುಷನಿಂದ – ಪೃಥ್ವೀವರೆಗಿನ) ತತ್ತ್ವಗಳನ್ನು ಒಳಗೊಂಡ ಕಪ್ಪೆ ಎಂದರೆ ಮಾಯೆ. ಈ ಮಾಯೆ ತನಗೆ ಬೇಕಾದ ವಿಷಯ ವಾಸನೆ ಅಳಿದುದರಿಂದ ಅದು ಬಾಯಾರಿ ಸಾಯಲೇ ಬೇಕು. "ಜ್ಞಾನಾಗ್ನಿಃ ಸರ್ವಕರ್ಮಾಣಿ ಭಸ್ಮಸಾತ್ಕುರುತೇಽರ್ಜುನ" ಎಂಬ ಭಗವದುಕ್ತಿಯ ವಿವರಣವೇ ಇದು. ಗೀತೆಯಲ್ಲಿ ಪಿಂಡ ಮತ್ತು ಪಿಂಡಜ್ಞಾನಿ ಎಂಬುದಕ್ಕೆ 'ಕ್ಷೇತ್ರ' ಮತ್ತು 'ಕ್ಷೇತ್ರಜ್ಞ' ಎಂಬ ಪಾರಿಭಾಷಿಕ ಪದಗಳನ್ನು ಬಳಸಲಾಗಿದೆ. ಆದರೆ ಅಲ್ಲಿ 'ಶರೀರವನ್ನೇ'ಕ್ಷೇತ್ರವೆಂದೂ

---

1 "ಪುಣ್ಯಾಧಿಕಃ ಕ್ಷೀಣಪಾಪಃ ಶುದ್ಧಾತ್ಮಾ ಪಿಂಡ ನಾಮಕಃ" (ಸಿ.ಶಿ. 5–32)

2 ಶರೀರಾತ್ಮ ವಿವೇಕೇನ ಪಿಂಡಜ್ಞಾನೀ ಸ ಕಥ್ಯತೇ" (ಸಿ. ಶಿ. 5–51)

ಅದನ್ನು ತಾತ್ವಿಕವಾಗಿ ಅರಿದವನು 'ಕ್ಷೇತ್ರಜ್ಞ'ನೆಂದೂ ಹೇಳಿದೆ. ಇಲ್ಲಿ ಮಾತ್ರ ಪಿಂಡವು ದೇಹವಲ್ಲ; ಶುದ್ಧಾತ್ಮ ಜೀವ ಎಂದು ಎರಡಕ್ಕೂ ಅಂತರವನ್ನು ಅರಿಯಬೇಕು.

ಹರಿವ ನೀರ ಮಧ್ಯದಲ್ಲಿ
ಉರಿವ ಜ್ಯೋತಿಯ ಬೆಳಗ ನೋಡಿ ಕಂಡೆನಯ್ಯಾ.
ಸಾರಿರ್ದು ನೋಡಿದರೆ, ನೀರೊಳಗೆ ಮುಳುಗಿ ಉರಿವುತ್ತಿದೆ ನೋಡಾ।
ದೂರದಲ್ಲಿರ್ದು ನೋಡಿದರೆ, ನೀರ ಮೇಲೆ ಉರಿವುತ್ತಿದೆ ನೋಡಾ.

'ಹರಿವ ನೀರು' ಎಂದರೆ ಸಂಸಾರ ಪ್ರವಾಹ. ಅದರ 'ಮಧ್ಯದಲ್ಲಿ ಉರಿವ ಜ್ಯೋತಿ' ಅರಿವಿನ ಬೆಳಕು. ಆ ಜ್ಯೋತಿಯು ಇದು ಶರೀರ ಮತ್ತು ಇದು ಆತ್ಮ ಎಂಬ ವಿವೇಕವುಳ್ಳ ಪಿಂಡಜ್ಞಾನಿಗೆ ಮಾತ್ರ ಗೋಚರವಾಗುತ್ತದೆ. 'ಸಾರಿರ್ದು ನೋಡಿದರೆ - ಒಳಹೊಕ್ಕು' ನೋಡಿದರೆ ಆ ಜ್ಯೋತಿ ನೀರೊಳಗೆ ಮುಳುಗಿಯೂ ಉರಿಯುತ್ತದೆ. ಎಂದರೆ ಸಾಧಕನು ಸಂಸಾರದಲ್ಲಿದ್ದು ಅನಾಸಕ್ತನಾಗಿ ಶಿವಜ್ಞಾನಿಯಾಗಿರಬಹುದು. 'ದೂರದಲ್ಲಿರ್ದು ನೋಡಿದರೆ, ನೀರಮೇಲೆ ಉರಿವುತ್ತಿದೆ' ಹಾಗೆ ಕಾಣುವುದು ಜ್ಯೋತಿಯ ಗುಣವೋ, ತನ್ನ ಭ್ರಾಂತಿಯ ಗುಣವೋ ಎಂಬುದನ್ನು ಸ್ವಯಂಬುದ್ಧನಾದ ಗುರುವಿನಿಂದ ಅರಿಯಬೇಕಂತೆ! ಹಾಗೆ ಗುರುಕೃಪಾ ಪಾತ್ರನಾದಾಗ ಅವನ ಸಂಸಾರ ಪ್ರವಾಹವು ಬತ್ತಿ ಶಿವಜ್ಯೋತಿ ಬೆಳಗುತ್ತದೆ. ಆ ಜ್ಯೋತಿಯನ್ನು 'ಶಿವೋಹಂ' ಭಾವದಿಂದ ಸ್ವಸ್ವರೂಪವಾಗಿ ತಿಳಿದಾತನೇ ನಿಜ ಶರಣ ಎಂಬ ಮಾರ್ಮಿಕ ಅರ್ಥವು ಈ ವಚನದಲ್ಲಿ ಎಷ್ಟೋ ಮನೋಜ್ಞವಾಗಿ ನಿರೂಪಿತವಾಗಿದೆ.

ಮಾಯೆಯ ಪ್ರಾಬಲ್ಯ

ಊರಿಗೆ ಹೋಹ ದಾರಿಯಲ್ಲಿ
ಒಂದು ಕೋಡಗ ಕುಳಿತಿಪ್ಪುದ ಕಂಡೆನಯ್ಯ.
ಊರಿಗೆ ಹೋಹ ಅಣ್ಣಗಳ ಏಡಿಸಿ ಕಾಡುತ್ತಿದೆ ನೋಡಾ.
ಕೋಡಗನ ಹಿಡಿದು ಕೊಡೆತಕ್ಕೆ ಹಾಕಿಹೆನೆಂದು ಹೋದರೆ, ಊರನೆಲ್ಲಾ ನುಂಗಿತ್ತು
ಆರಿಗೂ ಕಾಣಿಸದಿದೆ, ಇದೇನು ಸೋಜಿಗವೋ!......

ಅಧ್ಯಾತ್ಮ ಪಿಪಾಸುಗಳ ಗುರಿ ಮೋಕ್ಷ, ಸಂಸಾರದಿಂದ ಬಿಡುಗಡೆ, ಅದೇ ಪರಮಪದ, ಊರಿನ ದಾರಿ ಮೋಕ್ಷ ಸಾಧನ ಮಾರ್ಗ. ಆ ದಾರಿಯಲ್ಲಿ ನಡೆಯ ಹೊರಟ ಸಾಧಕರೆಲ್ಲರಿಗೂ ಎದುರಾಗುವ ಕೋಡಗ ಚಾಂಚಲ್ಯಾತ್ಮಕವಾದ ಮನಸ್ಸು. ಗುರಿತಪ್ಪಿಸುವ ಮಾಯಾಮಯವಾದ ಈ ಕೋಡಗವನ್ನು ಹಿಡಿದು ಬಂಧಿಸ ಹೊರಟರೆ ಅದು ಆ ಊರನ್ನೇ ತಿರುವು ಮುರುವು ಮಾಡಿ, ಭವಾಭಿಮುಖ (ಭವ–ಶಿವನ ಅಭಿಮುಖ) ತಪ್ಪಿಸಿ ಭವ (ಸಂಸಾರ) ದೆಡೆಗೊಯ್ಯುತ್ತದೆ. ಅದೇ ಮಾಯಾಭ್ರಾಂತಿ. ಸೋಜಿಗದ ಸಂತೆ. ಅಂಥ ಮಾಯೆಯಿಂದ ಪಾರಾಗಲು ಈ ವಚನ ದಾರಿ ತೋರಿದೆ.

ಜೀವನ ನೆಲೆ

ಐದು ಬಣ್ಣದ ಊರಿಂಗೆ ಐದು ಬಗೆಯ ಕೇರಿ ರಚಿಸುತ್ತಿದಾವೆ ನೋಡಾ.
ಊರಕೇರಿಯ ಮಧ್ಯದಲ್ಲಿ ಅಷ್ಟದಳ ಮಂಟಪವದೆ ನೋಡಾ
ಅಷ್ಟದಳ ಮಂಟಪದೊಳಗಾಡುವ ಹಂಸನ ನಿಲವ
ನಟ್ಟನಡು ಮಧ್ಯದಲ್ಲಿ ನಿಲ್ಲಿಸಿ ನೆರೆಯಬಲ್ಲಾತನೆ ದಿಟ್ಟ ಕಾಣಾ
(ಮ. ಗು. ಶಿ. –ಷ. ಸಾ. 351)

ಈ ವಚನವು ಹಂಸೋಪನಿಷತ್ತಿನಲ್ಲಿ ಉಕ್ತವಾದ ಈ ಕೆಳಗಿನ ಉಕ್ತಿಯನ್ನು ಸಮರ್ಥಿಸಿದೆ :

"ಹೃದಯ ಕಮಲದಲ್ಲಿ ಸಂಚರಿಸುವ ಹಂಸರೂಪಿಯಾದ ಆತ್ಮನು ಆ ಕಮಲದ ಯಾವ ಯಾವ ದಳಗಳಲ್ಲಿ ಸಂಚರಿಸುವನೋ ಆಯಾ ವೃತ್ತಿಗಳು ಅವನಲ್ಲಿ ಉದಯುವಾಗುವುವು. ಆ ದಳಗಳಲ್ಲಿರುವ ವೃತ್ತಿಗಳು ಹೀಗಿವೆ–ಪೂರ್ವದಳದಲ್ಲಿ ಪುಣ್ಯಕರ್ಮ, ಆಗ್ನೇಯದಲ್ಲಿ ನಿದ್ದೆ ಆಲಸ್ಯ ಮುಂತಾದವು, ದಕ್ಷಿಣ ದಳದಲ್ಲಿ ಕ್ರೂರ ಬುದ್ಧಿ, ನೈರುತ್ಯದಲ್ಲಿ ಪಾಪಕರ್ಮದಲ್ಲಿ ಆಸಕ್ತಿ, ಪಶ್ಚಿಮದಲ್ಲಿ ಕ್ರೀಡಾವಿಹಾರ ಗಳಲ್ಲಿ ಇಚ್ಛೆ, ವಾಯುವ್ಯದಲ್ಲಿ ಸಂಚಾರಾಭಿಲಾಷೆ, ಉತ್ತರದಳದಲ್ಲಿ ರತಿಪ್ರೀತಿ(ಕಾಮೇಚ್ಛೆ), ಈಶಾನ್ಯದಲ್ಲಿ ಹಣವನ್ನು ಗಳಿಸುವ ಆಸೆ, ಮಧ್ಯಭಾಗದಲ್ಲಿ ವೈರಾಗ್ಯ. ಆ ಕಮಲದ ಕೇಸರಗಳಲ್ಲಿ ಜಾಗ್ರತಾವಸ್ಥೆ (ಎಚ್ಚರ), ಕಮಲ ಕರ್ಣಿಕೆಯಲ್ಲಿ ಸ್ವಪ್ನಾವಸ್ಥೆ, ಲಿಂಗದಲ್ಲಿ ಸುಷುಪ್ತಿ, ಆ ಪದ್ಮ ತ್ಯಾಗ ಮಾಡಲು ತುರೀಯಾವಸ್ಥೆ. ಹಂಸ ಪಕ್ಷಿಯಂತೆ ಗುಣದೋಷಗಳುಳ್ಳ ಜೀವಾತ್ಮನು ಯಾವಾಗ ನಾದಸ್ವರೂಪವಾದ ಬ್ರಹ್ಮದಲ್ಲಿ ವಿಲೀನನಾಗುತ್ತಾನೆಯೋ ಆಗ ಅದು ತುರೀಯಾತೀತಾವಸ್ಥೆ"

ಪ್ರಕೃತ, 'ಐದು ಬಣ್ಣದ ಊರು' ಪಂಚ ಭೂತಾತ್ಮಕವಾದ ಶರೀರ. ಅಲ್ಲಿಯ ಐದು ಬಗೆಯ ಕೇರಿಗಳು ಪಂಚ ಇಂದ್ರಿಯ ಉಪಟಳಗಳು. ಆ ಇಂದ್ರಿಯಗಳಲ್ಲಿ ಕಣ್ಣು ರೂಪವನ್ನು, ಕಿವಿ ಶಬ್ದವನ್ನು, ನಾಲಗೆ ರುಚಿಯನ್ನು, ಮೂಗು ವಾಸನೆಯನ್ನು,ಚರ್ಮವು ಸ್ಪರ್ಶವನ್ನು ಬಯಸುತ್ತವೆ. ಈ ಇಂದ್ರಿಯಗಳು ವಿಷಯುಗಳ ಅಭಿಲಾಷೆಯೆಂಬ ಬೇರೆ ಬೇರೆ ಕೇರಿಗಳನ್ನು ರಚಿಸುತ್ತವೆ. ಊರ ಮಧ್ಯ – ಶರೀರ ಮಧ್ಯದಲ್ಲಿರುವ ಅಷ್ಟದಳಗಳ ಕಮಲವೇ ಹೃದಯ ಕಮಲ. ಆ ಅಷ್ಟದಳ ಕಮಲವೆಂಬ ಮಂಟಪ ದಲ್ಲಿ ಆಡುವ ಹಂಸನೇ ಜೀವ. ಅವನು ಮೇಲೆ ಹೇಳಿದಂತೆ ಆಯಾ ದಳದಲ್ಲಿ ಸಂಚರಿಸುವಾಗ ಆಯಾ ಮನಃಪ್ರವೃತ್ತಿಯನ್ನು ಹೊಂದುತ್ತಾನೆ. ಆ ಜೀವನು ಯಾವಾಗ ಜಾಗ್ರದಾದಿ ಅವಸ್ಥೆಗಳನ್ನು ದಾಟಿ ಲಿಂಗ (ಪರಶಿವ)ದಲ್ಲಿ ಸುಷುಪ್ತಿ ಹೊಂದಿ ಆ ಪದ್ಮತ್ಯಾಗ ಮಾಡಿ ನಾದ ರೂಪಿಯಾದ ಪರಬ್ರಹ್ಮದಲ್ಲಿ ವಿಲೀನ ಹೊಂದುವನೋ ಆಗ ಅವನು ದಿಟ್ಟ ಸಿದ್ಧನೆನಿಸುವನು ಎಂಬ ವೇದಾಂತ ಗಮ್ಯವಾದ ಅರ್ಥವು ಇಲ್ಲಿ ಅಡಗಿದೆ.

ಮೂರೊಂದುಗೂಡಿದ ಬಟ್ಟೆಯಲ್ಲಿ
ಮಾರಿ ಮನೆಯ ಮಾಡಿಕೊಂಡಿಪ್ಪುದ ಕಂಡೆನಯ್ಯಾ.
ಮಾರಿಯ ಮುಖದಲ್ಲಿ ಮರ್ಕಟ ಹುಟ್ಟಿ, ಮಾರುತನ ಬೆರೆಸಿ,
ಈರೇಳು ಲೋಕವ ನುಂಗಿತ್ತು ನೋಡಾ.
ಈರೇಳು ಲೋಕವ ನುಂಗಿದ ಕಪಿ ಮೇಲುಗಿರಿಯನೇರಿ
ದಾರಿಗೊಂಡು ಬರುವರ ಹಿಡಿಸಿ ಕಾಡುತ್ತಿರ್ದುದು ನೋಡಾ.
ಕೋಡಗನ ಮುಖವ ನೋಡಿಹೆನೆಂದು ಹೋದರೆ,
ಅದು ಕಾಲಸರ್ಪನಾಗಿ ನುಂಗಿ ಹೋಳಿಗೆಯೊಂದರೊಳಡಗಿತ್ತು ನೋಡಾ.
ಹೋಳಿಗೆ ಮುರಿಯಿತ್ತು; ಕಾಲಸರ್ಪ ಸತ್ತಿತ್ತು.
ಮೇಲುಗಿರಿಯನೇರಿದ ಮರ್ಕಟ, ನಾರಿಯ ಶಿರಮೆಟ್ಟಿ
ಮಾರಾರಿಯ ಬೆರಸಿದ್ದುದ ಕಂಡು ಬೆರಗಾದೆನು ಕಾಣಾ.

(ಮ. ಗು. ಶಿವ. ಷ. ಸಾ. 390)

ಈ ವಚನದಲ್ಲಿರುವ 'ಮೂರೊಂದುಗೂಡಿದ ಬಟ್ಟೆ' ಎಂದರೆ ಸತ್ವ,ರಜಸ್ಸು ಮತ್ತು ತಮೋ ಗುಣಗಳಿಂದ ಕೂಡಿದ ದಾರಿ. ಈ ದಾರಿಯಲ್ಲಿ ಮನೆ ಮಾಡಿಕೊಂಡಿರುವ ಮಾರಿಯೇ ಮಾಯೆ. ಈ ಮಾರಿಯ ಮುಖದಲ್ಲಿರುವ ಮರ್ಕಟನೆಂದರೆ ಚಾಂಚಲ್ಯ ರೂಪವಾದ ಮನಸ್ಸು. ಆ ಮನಸ್ಸು ಮಾರುತನ – ಪ್ರಾಣವಾಯುವಿನೊಡನೆ ಸೇರಿ ಈರೇಳು – ಹದಿನಾಲ್ಕು ಲೋಕಗಳನ್ನು ಸುತ್ತುತ್ತದೆ. ಹೀಗೆ ಹದಿನಾಲ್ಕು ಲೋಕಗಳನ್ನು ಸುತ್ತಿದ ಈ ಕಪಿಮನಸ್ಸು ಐಹಿಕ ವ್ಯಾಪಾರವನ್ನೆಲ್ಲ ಮುಗಿಸಿ, ಮೇಲುಗಿರಿ ಮಸ್ತಕವೆಂಬ ಕೈಲಾಸಕ್ಕೆ ದಾರಿ ಹಿಡಿದು ಬರುವ ಸಾಧಕರನ್ನು ಹಿಡಿಸಿ ಕಾಡುತ್ತದೆ, ಎಂದರೆ ದಾರಿಗೆಡಿಸುತ್ತದೆ. ಆದರೆ ಅಂಥಮನಸ್ಸನ್ನು ಮಸ್ತಕದ ಸಹಸ್ರಾರದಲ್ಲಿ ಬಂಧಿಸಿದಾಗ ಅದು ಕಾಲ ಸರ್ಪನಾಗಿ

(ಸುಷುಮ್ನಾ ಮಾರ್ಗವಾಗಿ) ಹೇಳಿಗೆ (ಆಧಾರ ಚಕ್ರ)ಯಲ್ಲಿ ಅಡಗುತ್ತದೆ. ಹೀಗಾದಾಗ ಮಾಳಿಗೆಯು ನೇರಿದಮೇಲೆ ಏಣಿಯು ಹಂಗೇಕೆ ಎಂಬಂತೆ ಸಾಧಕನಿಗೆ ಸ್ಥಿತಪ್ರಜ್ಞ ಸ್ಥಿತಿ ಪ್ರಾಪ್ತವಾದಾಗ ಸಹಸ್ರಾರ ಕಮಲದಲ್ಲಿ ನೆಲೆಗೊಂಡ ಮನಸ್ಸು ನಾರಿಯ (ಮಾಯೆ) ಶಿರ ಮೆಟ್ಟಿ ಮಾರಾರಿ(ಪರಬ್ರಹ್ಮ)ಯನ್ನು ಬೆರೆಯುತ್ತದೆ.

ಯೋಗಶಾಸ್ತ್ರ ಪ್ರಸಿದ್ಧವಾದ ಈ ಅರ್ಥವನ್ನು ಮನಸ್ಸಿನಲ್ಲಿಟ್ಟುಕೊಂಡು ಕೇವಲ ಸಾಂಕೇತಿಕ ಪದಗಳಿಂದಲೇ ತತ್ತ್ವಾರ್ಥವನ್ನು ಮನಂಬುಗುವಂತೆ ಬೋಧಿಸಿರುವ ಋಷಿಕವಿ ಸಿದ್ಧಲಿಂಗ ಶಿವಯೋಗಿಗಳ ಕಾವ್ಯಸತ್ವ ದೊಡ್ಡದು.

4

ಲೋಕಾನುಭವ

ಸಿದ್ಧಲಿಂಗ ಶಿವಯೋಗಿಗಳಿಗೆ ಇದ್ದ ಲೋಕಾನುಭವ ಅವರ ವಚನಗಳಲ್ಲಿ ಒಡಮೂಡಿದೆ. ಮುಂದಿನ ಕೆಲವು ವಚನಗಳನ್ನು ಇದಕ್ಕೆ ನಿದರ್ಶನವಾಗಿ ಕೊಡಲಾಗಿದೆ.

ನಂಬಿಕೆ ಅಥವಾ ಶ್ರದ್ಧೆ:– ನಂಬಿಕೆ ಅಥವಾ ಶ್ರದ್ಧೆ ಲೌಕಿಕ ಮತ್ತು ಪಾರಮಾರ್ಥಿಕಗಳೆರಡಕ್ಕೂ ಆವಶ್ಯ. ಅದು ಅಧ್ಯಾತ್ಮದ ಮೊದಲ ಮೆಟ್ಟಲು. ಉಪನಿಷತ್ತುಗಳಲ್ಲಿ 'ಶ್ರದ್ಧಸ್ವ' ಎಂದು ಮೊದಲು ಶ್ರದ್ಧೆಯನ್ನೇ ಉಪದೇಶಿಸಲಾಗಿದೆ. ಭಗವದ್ಗೀತೆಯಲ್ಲಿ ಶ್ರದ್ಧೆಗೆ ಮಹತ್ವ ನೀಡಲಾಗಿದೆ. "ಶ್ರದ್ಧಾವಾನ್ ಲಭತೇ ಜ್ಞಾನಂ' (4–39). ಗುರು, ದೈವ ಮತ್ತು ಸಚ್ಛಾಸ್ತ್ರಗಳಲ್ಲಿ ನಂಬಿಕೆಯುಳ್ಳವನೇ ಆತ್ಮಜ್ಞಾನವನ್ನು ಪಡೆಯುತ್ತಾನೆ". "ಶ್ರದ್ಧಾವಾನನಸೂಯಶ್ಚ...ಸೋಽಪಿಮುಕ್ತಃ..."(18–71): ನಂಬಿಕೆಯಳ್ಳವನು ಮುಕ್ತನಾಗುತ್ತಾನೆ. "ಶ್ರದ್ಧಯಾ ಪರಯಾ ತಪ್ತಾಂ..." (17–17) : ಅತ್ಯಂತ ಶ್ರದ್ಧೆಯಿಂದ ಫಲಾಪೇಕ್ಷೆಯಿಲ್ಲದೆ ಮಾಡಿದ ತಪಸ್ಸು ಸಾತ್ವಿಕವೆನಿಸಿದೆ. ಈ ಅಂಶವನ್ನು ಶಿವಯೋಗಿಗಳ ಈ ವಚನ ಸ್ಪಷ್ಟಪಡಿಸಿದೆ. ಇದು ಅನೇಕ ಶಿವಶರಣರ (ಪುರಾತನರ) ಕಥಾನಿದರ್ಶನಗಳೊಡನೆ ಸಮರ್ಥಿಸಲ್ಪಟ್ಟಿದೆ :

"ವಿಶ್ವಾಸದಿಂದ ಅಂಗನೆಯ ಕುಚ, ಲಿಂಗವಾದುದಿಲ್ಲವೆ?
ವಿಶ್ವಾಸದಿಂದ ಬಳ್ಳ, ಲಿಂಗವಾದುದಿಲ್ಲವೆ?
ವಿಶ್ವಾಸದಿಂದ ಆಡಿನ ಹಿಕ್ಕೆ, ಲಿಂಗವಾದುದಿಲ್ಲವೆ?
ವಿಶ್ವಾಸದಿಂದ ಲಿಂಗವನಪ್ಪಿದ ಹೆಣ್ಣು, ಗಂಡಾದುದಿಲ್ಲವೆ?
ವಿಶ್ವಾಸದಿಂದ ಓಗರ ಪ್ರಸಾದವಾಗಿ
ಎಂಜಲೆಂಬ ವಿಪ್ರರ ಮಂಡೆಯ ಮೇಲೆ ತಳೆಯಲು
ಕೆಂಡವಾಗಿ ಸುಟ್ಟುದಿಲ್ಲವೆ ಗ್ರಾಮಸಹಿತವಾಗಿ?

ಇದುಕಾರಣ

ವಿಶ್ವಾಸದಿಂದ ಗುರು;
ವಿಶ್ವಾಸದಿಂದ ಲಿಂಗ;
ವಿಶ್ವಾಸದಿಂದ ಜಂಗಮ;
ವಿಶ್ವಾಸದಿಂದ ಪ್ರಸಾದ;
ವಿಶ್ವಾಸಹೀನಂಗೆ ಗುರುವಿಲ್ಲ, ಲಿಂಗವಿಲ್ಲ;
ಜಂಗಮವಿಲ್ಲ; ಪ್ರಸಾದವಿಲ್ಲ ಕಾಣಾ—ಮ. ಶಿ. ಪ್ರಭುವೇ

(ಷ. ಸಾ. 233)

ಜ್ಞಾನ ಮತ್ತು ಕ್ರಿಯೆ

ಅಧ್ಯಾತ್ಮ ಶಾಸ್ತ್ರದಲ್ಲಿ ಕರ್ಮ ಮತ್ತು ಜ್ಞಾನಗಳ ಅವಶ್ಯಕತೆಯ ಬಗೆಗೆ ವಿಭಿನ್ನ ಅಭಿಪ್ರಾಯಗಳಿವೆ. ಸತ್ಕರ್ಮಗಳನ್ನು ಆಚರಿಸುವುದರಿಂದ ಜ್ಞಾನೋದಯವಾಗಿ ಮುಕ್ತಿ ಲಭಿಸುವುದೆಂದು ಕೆಲವರು ಅಭಿಪ್ರಾಯ ಪಡುತ್ತಾರೆ. ಮೊದಲು ಹೂ ಬಿಟ್ಟು ಮುಂದೆ ಅದೇ ಫಲವಾಗುತ್ತದೆ. ಇದನ್ನು ಕ್ರಮ ಸಮುಚ್ಚಯ ಎಂದು ಹೇಳುತ್ತಾರೆ. ಅದ್ವೈತಿಗಳು ಮೋಕ್ಷಕ್ಕೆ ಜ್ಞಾನವು ಮಾತ್ರ ಸಾಕು. "ಜ್ಞಾನಾದೇವ ತು ಕೈವಲ್ಯಂ" ಎನ್ನುತ್ತಾರೆ. ಅವರ ಮತದಂತೆ ಜ್ಞಾನಾಗ್ನಿಯು ಎಲ್ಲ ಕರ್ಮಗಳನ್ನೂ ಸುಟ್ಟು ಹಾಕುತ್ತದೆ.

ವೀರಶೈವ ಪರಿಭಾಷೆಯಲ್ಲಿ ಕರ್ಮವನ್ನು 'ಕ್ರಿ' ಎಂದು ಕರೆಯಲಾಗಿದೆ. ಎಂದರೆ ಫಲಾಪೇಕ್ಷೆಯಿಲ್ಲದೆ ಶಿವಪ್ರೀತ್ಯರ್ಥವಾಗಿ ಮಾಡುವ ಕರ್ಮ. ಇದನ್ನು ಅಲ್ಲಿ 'ಪತಿಕರ್ಮ' ಎನ್ನಲಾಗಿದೆ. ಉಳಿದುದು ಪಶುಕರ್ಮ ಎಂದರೆ ಸ್ವರ್ಗ ಸ್ವಾರಾಜ್ಯಾದಿ ಫಲೋದ್ದೇಶದಿಂದ ಮಾಡುವ ಕರ್ಮಗಳು. ಮೋಕ್ಷಸಾಧನೆಗೆ ಮೇಲೆ ಹೇಳಿದ ಪತಿಕರ್ಮ ಅಥವಾ ಕ್ರಿಯೆ ಮತ್ತು ಜ್ಞಾನಗಳೆರಡೂ ಅವಶ್ಯಕ. ಗಗನದಲ್ಲಿ ವಿಹರಿಸುವ ಹಕ್ಕಿಗೆ ಹೇಗೆ ಎರಡೂ ರೆಕ್ಕೆಗಳು ಅವಶ್ಯಕವೋ ಹಾಗೆ ಅಧ್ಯಾತ್ಮ ತತ್ತ್ವಾಕಾಶ ವಿಹಾರಿಯಾದ ಜೀವನೆಂಬ ಹಕ್ಕಿಗೆ ಕ್ರಿಯೆ ಮತ್ತು ಜ್ಞಾನಗಳು ಮುಖ್ಯ. ರೇಣುಕಾಚಾರ್ಯರು ಅಂಧ–ಪಂಗು ನ್ಯಾಯವನ್ನು ನಿದರ್ಶಿಸಿ ಅಧ್ಯಾತ್ಮ ಸಾಧಕನಿಗೆ ಜ್ಞಾನಕರ್ಮಗಳೆರಡೂ ಬೇಕು ಎನ್ನುತ್ತಾರೆ. ಇಲ್ಲಿಯ ಅಂಧ (ಕುರುಡ), ಪಂಗು (ಕುಂಟ) ಎಂಬ ಪದಗಳು ಜ್ಞಾನಹೀನ ಮತ್ತು ಕ್ರಿಯಾಹೀನ ಎಂಬ ಸಂಕೇತಾರ್ಥದಲ್ಲಿವೆ. ಹೇಗೆ ಕಣ್ಣಿಲ್ಲದವನು ಕಾಲಿಲ್ಲದವನನ್ನು ಹೆಗಲ ಮೇಲೆ ಕೂರಿಸಿಕೊಂಡು ಪರಸ್ಪರ ನೆರವಿನಿಂದ ಇಬ್ಬರೂ ದಾರಿಯನ್ನು ನಡೆಯುವರೋ ಅದರಂತೆ ಜ್ಞಾನ ಮತ್ತು ಕರ್ಮಗಳ ಪರಸ್ಪರ ಸಹಕಾರದಿಂದಲೆ ಮುಕ್ತಿಮಾರ್ಗವನ್ನು ಹಿಡಿಯಬೇಕು. ನ ಹಿ ಕಶ್ಚಿತ್ ಕ್ಷಣಮಪಿ ಜಾತು ತಿಷ್ಠತ್ಯಕರ್ಮಕೃತ್ (ಭ.ಗೀ. 3–5). ಕರ್ಮವಿಲ್ಲದೆ ಯಾರೂ ಒಂದು ಕ್ಷಣವೂ ಇರಲಾಗುವುದಿಲ್ಲ ಎಂದು ಹೇಳಿರುವ ಮಾತು ಮಾನಸಿಕ ಪ್ರವೃತ್ತಿಯನ್ನು ಸೂಚಿಸುತ್ತದೆ. ವೇದಾಂತದಲ್ಲಿ ಇದನ್ನು 'ಸಮಸಮುಚ್ಚಯ' ಎಂದು ಕರೆಯಲಾಗಿದೆ. ಸಿದ್ಧಲಿಂಗ ಶಿವಯೋಗಿಗಳ ಈ ವಚನವು ಜ್ಞಾನ ಕರ್ಮಗಳ ಮಧುರ ಸಮನ್ವಯವನ್ನು ಸುಂದರವಾಗಿ ನಿರೂಪಿಸಿದೆ :

ಇಂತು ಕ್ರಿಯಿಲ್ಲದೆ ಜ್ಞಾನಪ ಯೋಜನವಿಲ್ಲ:
ಜ್ಞಾನವಿಲ್ಲದೆ ಕ್ರಿ ಪ್ರಯೋಜನವಿಲ್ಲವಯ್ಯಾ!
ಅದು ಹೇಗೆಂದರೆ–
ದೇಹವಿಲ್ಲದೆ ಪ್ರಾಣಕ್ಕೆ ಆಶ್ರಯವುಂಟೇ ಅಯ್ಯಾ?
ಪ್ರಾಣವಿಲ್ಲದೆ ಕಾಯಕ್ಕೆ ಚೈತನ್ಯವುಂಟೆ ಅಯ್ಯಾ?
ಕ್ರಿಯಿಲ್ಲದೆ ಜ್ಞಾನಕ್ಕೆ ಆಶ್ರಯವಿಲ್ಲ:
ಜ್ಞಾನವಿಲ್ಲದೆ ಕ್ರೀಗೆ ಆಶ್ರಯವಿಲ್ಲ:
ಕ್ರಿಯಾಜ್ಞಾನ ಪ್ರಕಾಶವಿಲ್ಲದೆ ಲಿಂಗಕ್ಕಾಶ್ರಯವಿಲ್ಲ.
ಇದು ಕಾರಣ
ಜ್ಞಾನ – ಸತ್ಕ್ರಿಯೋಪಚಾರವಿರಬೇಕೆಂದಿತ್ತಯ್ಯಾ – ಮ. ಶಿ. ಪ್ರಭುವೇ.
(ವ. ಸಾ. 248)

ಸರ್ಪದಷ್ಟ – ಲಿಂಗದಷ್ಟ

ಉಂಗುಷ್ಠದಲ್ಲಿ ಸರ್ಪದಷ್ಟವಾಗಲು
ಸರ್ವಾಂಗವೆಲ್ಲವೂ ವಿಷಮಯವಾಗಿಪ್ಪುದು ನೋಡಾ!
ಶರಣನೆಂಬಂಗದ ಮೇಲೆ ಲಿಂಗದಷ್ಟವಾಗಲು

ಆ ಶರಣನ ಸರ್ವಾಂಗವೆಲ್ಲವು ಲಿಂಗಮಪ್ಪುದು ತಪ್ಪದು ನೋಡಾ!
ಲಿಂಗವನಪ್ಪಿ ಲಿಂಗಸಂಗಿಯಾದ ಅಭಂಗ ಶರಣಂಗೆ
ಅನಂಗ ಸಂಗವುಂಟೆ? ಬಿಡಾ ಮರುಳೆ!
(ಷ. ಸಾ. – 289)

ಇಲ್ಲಿ ಲಿಂಗದಪ್ಪನಿಗೆ ಕೊಟ್ಟ ಉಪಮಾನ ಸರ್ಪದಪ್ಪತ್ವ. ಅದು ಉಪಮೇಯವಾದ ಲಿಂಗದಪ್ಪತ್ವದ ಮಹಿಮೆಯನ್ನು ನಿಚ್ಚಳವಾಗಿ ಚಿತ್ರಿಸಿದೆ. ಲಿಂಗದಪ್ಪನಾದವನ ತ್ರಿಕರಣಗಳೂ (ಸರ್ವಾಂಗವೆಲ್ಲವೂ) ಲಿಂಗಮಯವಾಗಿ ಅವನು ಹುರಿದ ಬೀಜದಂತಾಗುವುದರಿಂದ ಅವನಲ್ಲಿ ಪ್ರಾಕೃತವಾದ ವಿಷಯಾನುರಾಗವು ತಾನಾಗಿಯೇ ನಷ್ಟವಾಗುವುದೆಂಬ ಭಾವವು ಹೃದಯಂಗಮವಾಗಿ ಅಭಿವ್ಯಕ್ತವಾಗಿದೆ.

ಸಂಸಾರ ಹೇಯ

ವೇದಾಂತದಲ್ಲಿ ಮಾಯೆಯ ಉಪಟಳವನ್ನು ಬಹುವಾಗಿ ಹೇಳಿದೆ. ಅಲ್ಲಿ ಮುಖ್ಯವಾದದ್ದು ವಿಷಯತೃಷ್ಣೆ. ಅದರಲ್ಲಿ ಮೊದಲನೆಯದು ಹೆಣ್ಣು. ಅದನ್ನು ವೇದಾಂತಿಗಳು "ನಾರೀ ಪ್ರತ್ಯಕ್ಷ ರಾಕ್ಷಸೀ" ಎನ್ನುತ್ತಾರೆ. ಆದರೆ ಶಿವಶರಣ ವಾಙ್ಮಯದಲ್ಲಿ ಕೇವಲ ಹೆಣ್ಣು ಮಾತ್ರ ಮಾಯೆಯಲ್ಲ. "ಗಂಡಿಗೆ ಹೆಣ್ಣಾಗಿ ಕಾಡಿತ್ತು ಮಾಯೆ, ಹೆಣ್ಣಿಂಗೆ ಗಂಡಾಗಿ ಕಾಡಿತ್ತು ಮಾಯೆ" ಎಂಬ ಶರಣರ ಉಕ್ತಿಗಳಲ್ಲಿ ಸ್ತ್ರೀ ಪುರುಷರಿಗೆ ಪರಸ್ಪರ ಪುರುಷ – ಸ್ತ್ರೀಯರೇ ಮಾಯೆ ಎಂಬ ಅರ್ಥವು ನಿಚ್ಚಳವಾಗಿದೆ. ಸಾಧಕನು ಪುರುಷನಾಗಿದ್ದರೆ ಆತ ಹೆಣ್ಣನ್ನು ತನ್ನ ದಾರಿಗೆ ಕಂಟಕವೆಂದು ಭಾವಿಸಿ ಅದರಿಂದ ದೂರವಿರಲು ಬೇಡುತ್ತಾನೆ. ಸಿದ್ಧಲಿಂಗಶಿವಯೋಗಿಗಳ ಈ ಕೆಳಗಿನ ವಚನಗಳು ಈ ಅರ್ಥದಲ್ಲಿವೆ :

ಶಶಿಮುಖಿಯರ ಸಂಗಕ್ಕೆ ಎಣಿಸುವ ಪಶುಪ್ರಾಣಿಗಳು
ಪಶುಪತಿಯ ಸಂಗಸುಖಕ್ಕೆ ಯಾಕೆ ಎಣಿಸಲೊಲ್ಲವಯ್ಯಾ?
ಶಿವ ಶಿವಾ! ನೀ ಮಾಡಿದ ವಿಷಯ ವಿಧಿ,
ಈರೇಳು ಲೋಕವನಂಡಲೆವುತ್ತಿದೆ ನೋಡಾ
ಮ. ಶಿ. ಪ್ರಭುವೇ!
(ಷ. ಸಾ. 109)

ಲಲನೆಯರ ನಟನೆಯೆಂಬ ಕುಟಿಲಕ್ಕೆ ಸಿಕ್ಕಿ,
ಕೋಟಲೆಗೊಳದಿರಾ ಮರುಳು ಮಾನವಾ.
ನಿಟಿಲ ತಟದಲ್ಲಿ ಮಠವ ಮಾಡಿಕೊಂಡು
ನಿಶ್ಚಿಂತ ನಿರಾಳನಾಗಿರಾ.
ಹುಸಿಯ ಮಾಯಾ ತಮಂಧಕೆ ದಿಟಪುಟ ದಿವಾಕರ ಎನ್ನೊಡನೆಯ
(ಷ. ಸಾ. 110)

ವಚನಗಳಲ್ಲಿ 'ಶಿವಜ್ಞಾನವು' ಈ ಹುಸಿಯ ಮಾಯಾಂಧಕಾರಕ್ಕೆ ಸೂರ್ಯನಂತಹುದು ಎಂಬ ಭಾವವೂ ಸಂಸಾರದಲ್ಲಿ ವಿಷಯಗಳ ಉಪಟಳಕ್ಕೆ ಸಿಕ್ಕಿ ಬಳಲುವ ಸಾಧಕರನ್ನು ಗುರಿಮುಟ್ಟಿಸಬಲ್ಲುದು ಎಂಬ ಆಶಯವೂ ಅಭಿವ್ಯಕ್ತವಾಗಿದೆ.

ಸಾಧಕಾವಸ್ಥೆಯಲ್ಲಿ ಕಾಮ, ಕ್ರೋಧ ಮೊದಲಾದ ಅರಿಷಡ್ವರ್ಗಗಳು ಹೇಗೆ ಮಾನವನನ್ನು ಕಂಗೆಡಿಸುತ್ತವೆ ಎಂಬುದು ಈ ವಚನದಲ್ಲಿ ಮೂಡಿ ಬಂದಿದೆ :

ಕಾಮದಿಂದ ಕರಗಿದೆನಯ್ಯಾ, ಕ್ರೋಧದಿಂದ ಕೊರಗಿದೆನಯ್ಯಾ;
ಲೋಭಮೋಹಂಗಳಿಂದ ಅತಿನೊಂದೆನಯ್ಯಾ;
ಮದಮತ್ಸರಗಳಿಂದ ಬೆದೆಬೆದೆನೆ ಬೆಂದೆನಯ್ಯಾ;
ಅಹಂಕಾರ ಮಮಕಾರದಿಂದ ಮತಿ ಮಂದನಾಗಿರ್ದೆನಯ್ಯಾ;

ಇದು ಕಾರಣ
ಎನ್ನ ಕಾಮಾದಿ ಕಡುಗರ್ವಂಗಳ ಕಳೆದು,
ಅಹಂಕಾರ ಮಮಕಾರಂಗಳ ಮಾಣಿಸಿ,
ನಿರಹಂಕಾರಿ ಎಂದೆನಿಸಯ್ಯಾ ಮ. ಶಿ. ಪ್ರಭುವೇ!
(ಷ. ಸಾ. 127.)

ಹೀಗೆ ಸಂಸಾರ ಸಾಗರದಲ್ಲಿ ಬಿದ್ದು, ವಿಷಯುಗಳ ಉಪಟಳಕ್ಕೆ ಪಕ್ಕಾಗಿ ದಿಕ್ಕುಕೆಟ್ಟ ಸಾಧಕನು ಅದರಿಂದ ಪಾರಾಗಲು ಮೊರೆಯಿಡುತ್ತಿದ್ದಾಗ ಶಿವಕಾರುಣ್ಯಾಮೃತ ಗುರುರೂಪದಿಂದ ಬಳಿಸಾರುತ್ತದೆ. ಆಗ ಅವನಲ್ಲಿ ಕತ್ತಲು ಕರಗಿ ಜ್ಞಾನಜ್ಯೋತಿ ಬೆಳಗುತ್ತಿದೆ :

ಭವತಿಮಿರವೆಂಬ ಅಜ್ಞಾನದಿಂದ ಮುಸುಕಿಕೊಂಡು,
ಕಾಣಬಾರದೆಯಿದ್ದ ಕಣ್ಣಿಂಗೆ ಜ್ಞಾನವೆಂಬ ಅಂಜನವನೆಚ್ಚಿ
ಶಿವಪಥವಿದೆಂದು ತೋರಿಸಿದ ಸದ್ಗುರುದೇವಂಗೆ
ನಮೋನಮೋಯೆಂಬೆನಯ್ಯಾ ಮ. ಶಿ. ಪ್ರಭುವೇ
(ಷ. ಸಾ. 158)

ಅಜ್ಞಾನ ತಿಮಿರಾಂಧಸ್ಯ ಜ್ಞಾನಾಂಜನಶಲಾಕಯಾ
ಚಕ್ಷುರುನ್ಮೀಲಿತಂ ಯೇನ ತಸ್ಮೈ ಶ್ರೀಗುರವೇ ನಮಃ

ಎಂಬ ಉಕ್ತಿಯ ಆಶಯ ಇಲ್ಲಿ ಒಡಮೂಡಿದೆ.

"ಏನನೋದಿದರೇನಯ್ಯಾ? ಏನ ಕೇಳಿದರೇನಯ್ಯಾ?
ಏನ ಹಾಡಿದರೇನಯ್ಯಾ?
ಓದಿ ಮರುಳಾದೆಯೊ ಕೂಚ ಭಟ್ಟ? ಎಂದು
ಗಿಳಿಯೋದಿ ತನ್ನ ಹೇಲ ತಾ ತಿಂದಂತೆ..."
(ಷ. ಸಾ. 218)

"ಈಚಲ ತಿಂದ ನರಿ ತನ್ನ ವಿಕಾರಕ್ಕೆ ಒರಲುವಂತೆ.
ಮಾತಿನ ಮಮಕಾರಕ್ಕೆ ಆಗಮವ ಬಲ್ಲೆವೆಂದು ಕೂಗಿಡುವರು ನೋಡಾ."
(ಷ. ಸಾ. 354)

ಜೇನುತುಪ್ಪದಲ್ಲಿ ಬಿದ್ದು ಸಾವ ನೊಣನಂತೆ,
ಕೀಳುಮಾಂಸದ ಸವಿಗೆ ಗಂಟಲಗಾಳದಲ್ಲಿ ಸಿಕ್ಕಿ ಸಾವ ಮೀನಿನಂತೆ,
ಹೀನವಿಷಯಕ್ಕೆ ನಚ್ಚಿ ಮಚ್ಚದಿರಾ ಎಲೆಲೆ ಹುಚ್ಚುಮನವೇ,
ಅಲ್ಪಸುಖಕ್ಕೆ ಮಚ್ಚಿ, ಅನಂತ ಭವಭಾರಕ್ಕೊಳಗಾಗಿ
ದುರ್ಗತಿಗಿಳಿಯದಿರಯ್ಯಾ ಬೆಂದ ಮನವೇ–
ಹರಹರಾ, ಶಿವ ಶಿವಾ ಎಂಬುದ ಮರೆಯದಿರು; ಮರೆದೊರಗದಿರು;
ನಾಯ ಸಾವ ಸಾವೆ ಕಂಡಾ ಎಲೆಲೆ ಮನವೇ.
ಈ ಮರುಳತನವ ಬಿಟ್ಟು ಎನ್ನೊಡೆಯ ಮಹಾಲಿಂಗ ಪ್ರಭುವಿಗೆ
ಶರಣಾಗು (ಷ.ಸಾ. 399)

ಬೂದಿಯಲ್ಲಿ ಹೊರಳುವ ಕತ್ತೆಯಂತೆ,
ಎಲುವ ಕಡಿವ ಶ್ವಾನನಂತೆ,
ಹಾತೆಯ ತಿಂಬ ಹಲ್ಲಿಯಂತೆ,

ಕಿಚ್ಚ ಹಾಯುವವಳಂತೆ
ವಚ್ಚಿ ಹೊತ್ತಿನ ಭೋಗಕ್ಕೆ ಮಚ್ಚ ಹುಚ್ಚಾದಿರಲ್ಲಾ!...
(ಪ.ಸಾ. 400)

ಕತ್ತೆಗೇಕಯ್ಯಾ ಕಡಿವಾಣ? ತೊತ್ತಿಗೆ ತೋಳ ಬಂದಿಯೇಕಯ್ಯಾ?
ಶ್ವಾನಗೇಕೆ ಆನೆಯ ಚೋಹವಯ್ಯಾ? ಹಂದಿಗೇಕೆ ಚಂದ್ರಾಯುಧವಯ್ಯಾ?
ಶಿವನಿಷ್ಠೆಯಿಲ್ಲದವಂಗೆ ವಿಭೂತಿ ರುದ್ರಾಕ್ಷಿ... ಏತಕಯ್ಯಾ?
(ಪ. ಸಾ. 42)

ಕಟ್ಟರಸಿಲ್ಲದ ರಾಜ್ಯದಂತೆ, ಜೀವವಿಲ್ಲದ ಕಾಯದಂತೆ,
ದೇವನಿಲ್ಲದ ದೇಗುಲದಂತೆ, ಪತಿಯಿಲ್ಲದ ಸತಿಯ ಶೃಂಗಾರದಂತೆ,
ಗುರುವಾಜ್ಞೆಯಿಲ್ಲದೆ ತನ್ನ ಮನಕ್ಕೆ ತೋರಿದ ಹಾಂಗೆ ಮಾಡಿದ ಭಕ್ತಿ.

ಎಂಬ ಮಾತುಗಳಲ್ಲಿ ಅಲಂಕಾರಗಳ ವೈವಿಧ್ಯವು ತುಂಬಿತುಳುಕುತ್ತದೆ.

ವಾಗದ್ವೈತ

ವಾಗದ್ವೈತಿಗಳನ್ನು ವಿಡಂಬಿಸಿರುವ ವೈಖರಿಯನ್ನು ನೋಡಿ–

ಅದ್ವೈತವ ನುಡಿವ ಬದ್ಧಭವಿಗಳಿರಾ, ಮನದ ಕ್ಷುದ್ರವಡಗದು ಕಾಣಿ ಭೋ;
ತತ್ತ್ವಾರ್ಥವ ನುಡಿವ ವ್ಯರ್ಥಕಾಯರುಗಳಿರಾ
ವಿಕಾರದ ಕತ್ತಲೆ ಹರಿಯದು ಕಾಣೆ ಭೊ.
ಶಿವಾನುಭಾವ ನಿಮಗೇಕೆ? ಸತ್ತಹಾಂಗಿರಿ ಭೋ.
ತತ್ತ್ವವತ್ತಲೆಯಾಗಿ ನೀವಿತ್ತಲೆಯಾಗಿ
ಮೃತ್ಯುವಿನ ಬಾಯ ತುತ್ತಾದಿರಲ್ಲಾ;
ತತ್ತ್ವವಿತ್ತುಗಳು ವೃಥಾ ಸತ್ತುದ ಕಂಡು
ಮೃತ್ಯುಂಜಯನ ಶರಣರು ನಗುತಿಪ್ಪರು ನೋಡಾ..."
(ಪ. ಸಾ. 422)

ಈ ವಚನದಲ್ಲಿ ಕೇವಲ 'ತತ್ತ್ವವಿತ್' ಎಂದರೆ ತತ್ತ್ವಜ್ಞಾನ ಮಾತ್ರ ಸಾಲದು. ಅದು ಅನುಭಾವದಲ್ಲಿ ಕಂಡಿರಬೇಕು. "ನಹಿ ತರ್ಕೇಣ ಮತಿರಾಪನೇಯಾ""ನಹಿ ತರ್ಕೇಣಾನುಸಂಧತ್ತೇ" ಎಂಬ ಶ್ರುತಿಗಳು ಇಂಥ ವಾಗದ್ವೈತವನ್ನು ನಿರಾಕರಿಸಿವೆ. ನಡೆನುಡಿಯೊಂದಾಗದವರನ್ನು ಶರಣರು ಮೆಚ್ಚರು.

ಶರಣ ಸತಿ – ಲಿಂಗ ಪತಿ

ಶರಣ ಸತಿ – ಲಿಂಗ ಪತಿ ಭಾವ ಶರಣ ಮಾರ್ಗದ ಗುರಿ. ಅದು ಜೀವನ್ಮುಕ್ತಾವಸ್ಥೆಯ ಸಿರಿ. ಇದು ಲಿಂಗಾಂಗ ಸಾಮರಸ್ಯದ ಪೂರ್ವಸ್ಥಿತಿ. ಆನಂದ ಭಕ್ತಿ ಮಗ್ನನಾದ ಶರಣನ ಅನುಭವ ಈ ವಚನದಲ್ಲಿ ಮೂಡಿ ಬಂದಿದೆ:

ಲಿಂಗವೆ ಪತಿಯಾಗಿ ತಾನೆ ಸತಿಯಾಗಿ
ಅನ್ಯವನರಿಯದೆ ಪಂಚೇಂದ್ರಿಯ ರಹಿತನಾಗಿ
ತೆರಹಿಲ್ಲದರುಹು ತಾನಾಗಿ
ನೆರೆ ಅರುಹಿನೊಳು ನಿಬ್ಬೆರಗಾಗಿ
ಹೃದಯಕಮಲ ಮಧ್ಯದಲ್ಲಿ ಪರಮೇಶ್ವರನೊಳಗಣ

ಸಮರಸ ಸ್ನೇಹವೆರಸಿ,
ಅಗಲದಿಪ್ಪುದೀಗ ಶರಣ ಸ್ಥಲವಿದೆಂಬೆನಯ್ಯಾ
ಮ. ಶಿ. ಪ್ರಭುವೆ.
(ಷ. ಸಾ. 443)

ಶರಣಭಾವ ಅಳವಟ್ಟ ಮೇಲೆ ಅವನು ಶುದ್ಧನಾಗಲೇಬೇಕು. ಇಲ್ಲದಿದ್ದರೆ ಅಂಥ ಲಿಂಗಸಂಗದ ಗೊಡವೆ ಏತಕ್ಕೆ ಎನ್ನುತ್ತಾರೆ ಈ ವಚನದಲ್ಲಿ–

ಪರುಷ ಸೋಂಕಿಯೂ ಪಾಷಾಣ ಶುದ್ಧವಾಗದಿದ್ದರೆ
ಆ ಪರುಷದ ಗೊಡವೆ ಏತಕಯ್ಯಾ?
ಅಗ್ನಿ ಸೋಂಕಿಯೂ ಕಾಷ್ಠದ ಗುಣವಳಿಯದಿದ್ದರೆ
ಆ ಅಗ್ನಿಯ ಗೊಡವೆ ಏತಕಯ್ಯಾ?.........
...ಲಿಂಗದ ಮೇಲೆ ಚಿದ್ಘನ ಲಿಂಗವ ಧರಿಸಿದ್ದು
ತನುಮನದ ಅವಗುಣ ಹಿಂಗದಿದ್ದರೆ
ಆ ಲಿಂಗದ ಗೊಡವೆ ಏತಕಯ್ಯಾ? ಮ. ಶಿ. ಪ್ರಭುವೇ
(ಷ. ಸಾ. 459)

ನಿರ್ವಾಣವೆಂದರೇನು ?

ಮಂಡೆ ಬೋಳಾಗಿ, ಮೈಬತ್ತಲೆಯಾಗಿಪ್ಪವರ ಕಂಡರೆ
ನಿರ್ವಾಣಿಗಳೆಂಬೆನೆ? ಎನ್ನೆನಯ್ಯಾ.
ಅಖಂಡಿತವಾಗಿ, ಮನ ಬೋಳಾಗಿ, ಭಾವಬತ್ತಲೆಯಾಗಿರಬಲ್ಲರೆ
ಅದು ನಿರ್ವಾಣವೆಂಬೆ ಕಾಣಾ ಮ. ಶಿ. ಪ್ರಭುವೇ
(ಷ. ಸಾ. 470)

"ಹೆಣ್ಣ ಬಿಟ್ಟೆ, ಮಣ್ಣ ಬಿಟ್ಟೆ, ಹೊನ್ನ ಬಿಟ್ಟೆನೆಂದು
ಜಗದ ಕಣ್ಣ ಕಟ್ಟಿ ಮೆರೆವ
ಕಣ್ಣಬೇನೆಯ ಬಣ್ಣದ ಅಣ್ಣಾಗಳು ನೀವು ಕಾಣಿ ಭೋ.
ಮಾತಿನಲ್ಲಿ ಬಿಟ್ಟರಿಯೊ, ಮನದಲ್ಲಿ ಬಿಟ್ಟರಿಯೊ?"

ಎಂಬ ವಿಡಂಬನವು ಮುಂದೆ ಅವರೇ ಹೇಳುವಂತೆ–

"ಹಿಡಿದು ಸಂಸಾರಿಗಳಲ್ಲದ
ಬಿಟ್ಟು ನಿಸ್ಸಂಸಾರಿಗಳಲ್ಲದ
ಎರಡೂ ಇಲ್ಲದ ಎಡುವರರ"
ಬಗ್ಗೆ ನೇರವಾಗಿ ತಾಗುವಂತಿದೆ.
(ಷ. ಸಾ. 471)

ಭಕ್ತನ ನಿಲುವು

ಅಂತರಂಗದಲ್ಲಿ ಅರುಹು ಪೂರ್ಣವಾಗಿ
ಬಾಹಿರಂಗದಲ್ಲಿ ಸತ್ಕ್ರಿಯಾ ಸಂಪನ್ನನಾದ ಸುಚರಿತ್ರನು ನೋಡಾ ಭಕ್ತನು.
ತನುಮನ ಭಾವದಲ್ಲಿ ಇಷ್ಟ ಪ್ರಾಣ ಭಾವವ ನಿಲಿಸಿ

ತನು ಮನ ಭಾವ ವಿರಹಿತನಾಗಿ ನಿರ್ದೇಹಿ ನೋಡಾ ಭಕ್ತನು.
ಕ್ರಿಯೆಜ್ಞಾನ ಭಾವಲಿಂಗವ ಮುಟ್ಟಿ ಹಿಮ್ಮೆಟ್ಟದ ನಿರ್ಭ್ರಾಂತನಯ್ಯಾ ನಿಮ್ಮ
ಭಕ್ತನು ಮ. ಶಿ. ಪ್ರಭುವೇ
(ಷ. ಸಾ. 505)

ಭಕ್ತಿಯ ಬೆಳೆಗೆ ಸತ್ಯವೇ ಹೊಲ. ಆ ಹೊಲದಲ್ಲಿ ಬೆಳೆಗೆ ಅಡ್ಡಿಯಾಗುವುದು ಕರಣ (ಇಂದ್ರಿಯ)ಗಳ ಕತ್ತಲೆ (ವಿಷಯವಾಸನೆ) ಎಂಬ ಕಳೆ. ಆ ಬಗೆಯ ಕಳೆಯ ಕಿತ್ತು ಭಕ್ತಿಯನ್ನು ಬೆಳೆಸಬೇಕು. ಅಂಥ ಶಕ್ತಿ ಭಕ್ತಿಗಳನ್ನು ಒಳಗೊಂಡ ಮುಕ್ತಿ ಅಂಗನೆಯೇ ಸಚ್ಚಿದಾನಂದ ಸ್ವರೂಪಿಯೆನಿಸುವಳು. ಆಗ ಭಕ್ತ ಅಂಥ ನಿತ್ಯ ನಿಜತತ್ತ್ವದಲ್ಲಿ ಬೆರೆದು ಮುಕ್ತನಾಗುವನು. ಭಕ್ತಿ ಮುಕ್ತಿಯ ಬೀಜವೆಂಬ ಭಾವವು ಈ ವಚನದಲ್ಲಿ ಮೂಡಿಬಂದಿದೆ:

ಸತ್ಯದ ಭಾವಿಯಲ್ಲಿ ಭಕ್ತಿಯ ಬೆಳಸು
ಕರಣದ ಕತ್ತಲೆಯೆಂಬ ಕಳೆಯ ಕಳೆದು
ಶಕ್ತಿ ಭಕ್ತಿಯನೊಳಗೊಂಡು ನಿಂದ ಮುಕ್ತ್ಯಾಂಗನೆ
ಸಚ್ಚಿದಾನಂದ ಸ್ವರೂಪಿ ನೋಡಾ.
ನಿತ್ಯ ನಿಜ ತತ್ತ್ವ ನೆರೆದು
ಉತ್ಪತ್ತಿ ಸ್ಥಿತಿ ಪ್ರಳಯವ ಮೀರಿದ ಶರಣನ
ಪರಮ ಭಕ್ತಿಯನೇನೆಂದುಪಮಿಸುವೆನಯ್ಯಾ
ಮ. ಶಿ. ಪ್ರಭುವೇ!
(ಷ. ಸಾ. 402)

ಎನಗೆ ಆವ ಫಲವೂ ಬೇಡ; ಆವ ಪದವೂ ಬೇಡ:

ಅಂಗಾಲ ಕಣ್ಣವರ ಪದವಿ ಅವರಿಗೇ ಇರಲಿ,
ಮೇಗಾಲ ಕಣ್ಣವರ ಪದವಿ ಅವರಿಗೇ ಇರಲಿ,
ಮೈಯೆಲ್ಲಾ ಕಣ್ಣವರ ಪದವಿ ಅವರಿಗೇ ಇರಲಿ
ಪಂಚಮುಖ ನೊಸಲಕಣ್ಣು ನಂದಿವಾಹನರಪ್ಪ
ಗಂಗೆವಾಳುಕ ಸಮಾರುದ್ರರ ಪದವಿ ಅವರಿಗೇ ಇರಲಿ
ಸಾಲೋಕ್ಯ ಸಾಮೀಪ್ಯ ಸಾರೂಪ್ಯ ಸಾಯುಜ್ಯ ಪದಗಳು ಅವರಿಗೇ ಇರಲಿ
ಎನಗೆ ಆವ ಫಲವೂ ಬೇಡ, ಆವ ಪದವೂ ಬೇಡ
ನಾನು ನಿಮ್ಮ ಪದದೊಳಡಗಿ
ಎನಗೆ ನಿನಗೆ ಭಿನ್ನವಿಲ್ಲದಿಪ್ಪ ಪರಮಭಕ್ತಿ ಸಂಪದವನೆ
ಕೊಡಯ್ಯಾ ಮ. ಶಿ. ಪ್ರಭುವೇ!
(ಷ. ಸಾ. 521)

ಇಲ್ಲಿ ಕೇಳಿರುವ ಸಮರಸ ಭಕ್ತಿಯ ವೈಶಿಷ್ಟ್ಯವು ಎಲ್ಲ ಪದವಿಗಳನ್ನೂ ಮೀರಿದ್ದು ಎಂಬುದಕ್ಕೆ ಕೊಟ್ಟಿರುವ ಓನ್ನೆಲೆ ಶಿವಯೋಗಿಗಳ ದಾರ್ಶನಿಕ ಕವಿಹೃದಯವನ್ನು ನಿಚ್ಚಳಗೊಳಿಸಿದೆ.

ಪ್ರಾಣಲಿಂಗ ಪೂಜಾವೈಭವ

"ದೇಹವೇ ದೇಗುಲ, ಕಾಲೇ ಕಂಭ, ಶಿರಸ್ಸೇ ಶಿಖರ ನೋಡಾ.
ಹೃದಯಕಮಲ ಕರ್ಣಿಕಾವಾಸವೇ ಸಿಂಹಾಸನ.

ಮಹಾಘನ ಪರತತ್ತ್ವವೆಂಬ ಪ್ರಾಣಲಿಂಗವ ಮೂರ್ತಗೊಳಿಸಿ
ಪರಮಾನಂದಾಮೃತ ಜಲದಿಂದ ಮಜ್ಜನಕ್ಕೆರೆದು
ಮಹಾದಳ ಪದ್ಮದ ಪುಷ್ಪದಿಂದ ಪೂಜಿಸಿ
ಪರಮ ಪರಿಣಾಮವೆಂಬ ನೈವೇದ್ಯವ ಗಡಣಿಸಿ,
ಪ್ರಾಣಲಿಂಗಕ್ಕೆ ಪ್ರಾಣಸಂಬಂಧವಾದ ಪೂಜೆಯ ಮಾಡುತ್ತಿರ್ದೆನು ಕಾಣಾ
ಮ. ಶಿ. ಪ್ರಭುವೇ!
(ಷ. ಸಾ. 554)

ಇಲ್ಲಿನ ರೂಪಕಾಲಂಕಾರಗಳ ಸೊಬಗು ಮಾತಿಗೆ ಮೀರಿದ್ದು. 'ತತ್ತ್ವಮಸಿ' 'ಅಹಂ ಬ್ರಹ್ಮಾಸ್ಮಿ' ಎಂಬ ಮಹಾವಾಕ್ಯಗಳು ವೇದಾಂತಶಾಸ್ತ್ರದಲ್ಲಿ ಸುಪ್ರಸಿದ್ಧ. ಗುರುವು ಬ್ರಹ್ಮಾನುಭವವನ್ನು ಶಿಷ್ಯನಿಗೆ ಉಂಟುಮಾಡಲೆಳಸಿ 'ತತ್ತ್ವಮಸಿ' (ಅದು ನೀನೇ ಆಗಿರುವಿ) ಎನ್ನುತ್ತಾನೆ. ಶಿಷ್ಯನು ಅದು ತನಗೆ ಅಳವಟ್ಟುದರ ಕುರುಹಾಗಿ 'ಅಹಂ ಬ್ರಹ್ಮಾಸ್ಮಿ' (ನಾನು ಬ್ರಹ್ಮನಾಗಿರುವೆ) ಎಂದು ಅನುಭವ ಮಾಡುತ್ತಾನೆ. ಈ ಉಪನಿಷದರ್ಥವನ್ನು ಕನ್ನಡತನ ಕೆಡದಂತೆ, ಉಪನಿಷದ್ವಾಣಿಯ ಮಾರ್ಮಿಕ ಭಾವವು ಮನಂಬುಗುವಂತೆ ಮನೋಜ್ಞವಾಗಿ ನಿರೂಪಿಸಿರುವ ಶಿವಯೋಗಿಗಳ ವಚನವಿದು :

"ನಾನೆಂಬುದು ಅಹಂಕಾರ; ನೀನೆಂಬುದು ಮಾಯೆ.
ನಾನು ನೀನೆಂಬ ಉಭಯವಳಿದರೆ ನಾನೆಂಬುವನು ನೀನೆಂಬುವನು
ನೀನೇ ಅಯ್ಯಾ
ಈ ಎರಡರ ಭೇದವೆಲ್ಲಿಯದೊ? ಮ. ಶಿ. ಪ್ರಭುವೇ!
(ಷ. ಸಾ. 567)

ಸಾಮರಸ್ಯ

ಸಾಮರಸ್ಯದ ಸ್ವರೂಪವನ್ನು ಹಿಂದೆ ಅಮರಗಣಂಗಳು ಲಿಂಗದಲ್ಲಿ ಬೆರೆದ ಪರಿಯನ್ನು ಬಣ್ಣಿಸುವಲ್ಲಿ ವಿವರಿಸಲಾಗಿದೆ. ಆದರೂ ಐಕ್ಯಸ್ಥಲ ವಚನದಲ್ಲಿ ಅದರ ನಿಚಳ ಸ್ವರೂಪವನ್ನು ಕಾಣಬಹುದು :

ಘೃತ ಘೃತವ ಬೆರೆಸಿದಂತೆ, ಕ್ಷೀರ ಕ್ಷೀರವ ಬೆರೆಸಿದಂತೆ,
ತೈಲ ತೈಲವ ಬೆರೆಸಿದಂತೆ, ನೀರ ನೀರ ಬೆರೆಸಿದಂತೆ.
ಜ್ಯೋತಿ ಜ್ಯೋತಿಯ ಬೆರೆಸಿದಂತೆ, ಬಯಲು ಬಯಲ ಬೆರೆಸಿದಂತೆ:
ಪ್ರಾಣ ಪ್ರಾಣ ಸಂಯೋಗವಾದ ಶರಣ ಲಿಂಗ ಸಮರಸವ
ನೇನೆಂಬೆನಯ್ಯಾ ಮ. ಶಿ. ಪ್ರಭುವೇ!
(ಷ. ಸಾ. 620)

ಹೀಗೆ ತಾತ್ತ್ವಿಕವಾಗಿ ಸಮರಸನಾದ ಶರಣ ಮತ್ತೆ ಮರ್ತ್ಯನೆಂದಿಗೂ ಆಗಲಾರ. ಅವನ ಅನಿರ್ವಾಚನೀಯ ಸ್ಥಿತಿಯನ್ನು ಈ ವಚನ ಬಿತ್ತರಿಸಿದೆ :

ಅಟ್ಟುದ ಅಡಲುಂಟೆ, ಸುಟ್ಟುದ ಸುಡಲುಂಟೆ ಅಯ್ಯಾ?
ಬೆಂದ ಮಡಕೆ ಮರಳಿ ಧರೆಯ ಕೂಡಬಲ್ಲುದೇ ಅಯ್ಯಾ?
ಕರ್ಪುರವ ಅಗ್ನಿ ನುಂಗಿದ ಬಳಿಕ ಕರಿ ಉಂಟೆ ಅಯ್ಯಾ?
ಶರಣನ ಲಿಂಗ ನುಂಗಿ, ಲಿಂಗನ ಶರಣ ನುಂಗಿ
ನದಿಯೊಳಗೆ ನದಿ ಬೆರೆದಂತೆ ಬೆರೆದು
ಶುದ್ಧ ನಿರ್ಮಲವಾದ ಲಿಂಗೈಕ್ಯಂಗೆ

ಭಿನ್ನಾಭಿನ್ನವ ಕಲ್ಪಿಸುವ ಅಜ್ಞಾನಿಗಳ
ಎನಗೊಮ್ಮೆ ತೋರದಿರಯ್ಯಾ ಮ. ಶಿ. ಪ್ರಭುವೇ!
(ಷ. ಸಾ. 621)

ಲಿಂಗೈಕ್ಯನ ಅನಿರ್ವಚನೀಯ ಸ್ಥಿತಿ

ನರರಂತೆ ನಡೆವುತಿಪ್ಪಿರಿ, ನರರಂತೆ ನುಡಿವುತಿಪ್ಪಿರಿ ಅಯ್ಯಾ
ನರರಂತೆ ಉಣ್ಣುತಿಪ್ಪಿರಿ, ನರರಂತೆ ಉಡುತಿಪ್ಪಿರಿ ಅಯ್ಯಾ.
ನೋಡಿದರೆ ಅವರವರಂತಿಪ್ಪಿರಿ, ವಿವರಿಸಿದರೆ ನೀವು ನಿಮ್ಮಂತೆ ಇಪ್ಪಿರಿ, ಅಯ್ಯಾ.

ಹತ್ತರೊಳಗೆ ಹನ್ನೊಂದಾಗಿಪ್ಪಿರಿ ಅಯ್ಯಾ.
ಕುರುಹಿನ ನಾಮಹಿಡಿದು ಕರೆದರೆ ಓ ಎಂದೆಂಬಿರಿ,
ನಾಮವಿಲ್ಲದ, ಸೀಮೆಯಿಲ್ಲದ ನಿಸ್ಸೀಮ ಲಿಂಗೈಕ್ಯನಯ್ಯಾ
ಮ. ಶಿ. ಪ್ರಭುವೇ
(ಷ. ಸಾ. 622)

ಇಲ್ಲಿರುವ ಉಪಮೆ, ಅನನ್ವಯಾಲಂಕಾರಗಳ ವಿಲಾಸ, ಭಾವ ಸೌಂದರ್ಯಗಳು ರಸಋುಷಿಗಳನ್ನು ಮಾತ್ರವಲ್ಲದೆ ಸಹೃದಯ ಲೋಕವನ್ನೂ ಮುಗ್ಧಗೊಳಿಸುತ್ತವೆ.

ಶಬ್ದಾಲಂಕಾರಗಳು

ಮುಚ್ಚಿದ ಕಣ್ಣು ತೆರೆದುದ ಕಂಡೆ
ಕಿಚ್ಚಿನ ಜ್ವಾಲೆ ಕರವುದ ಕಂಡೆ
ಮೃತ್ಯುಗಳ ಮೊತ್ತ ಕಿತ್ತೋಡುವುದ ಕಂಡೆ;
ಕತ್ತಲೆ ಬೆಳಗಾದುದ ಕಂಡೆ
(ಷ. ಸಾ. 100)

ಮುಂತಾದ ವಚನಗಳಲ್ಲಿ ಅನುಪ್ರಾಸ ಯಮಕಾದಿಗಳು ಹೇರಳವಾಗಿವೆ.

ನೀತಿ – ಶೀಲ

ಶಿವಶರಣ ವಾಙ್ಮಯದಲ್ಲಿ ನೀತಿ – ಶೀಲಗಳಿಗೆ ಹೆಚ್ಚಿನ ಪ್ರಾಧಾನ್ಯ. ನೀತಿಗೆಟ್ಟವನಿಗೆ ಶಿವಶರಣ ಬಳಗದಲ್ಲಿ ಬಳಕೆಯಿಲ್ಲ.

ಶಿವಶರಣರು ಬಳಸಿರುವ 64 ಶೀಲಗಳು ನೀತಿಯ ನೆಲೆಗಟ್ಟಿನ ಮೇಲೆ ರಚಿತವಾದವು. ಅದರ ಸ್ವರೂಪ ಹೀಗಿದೆ–

ಅದೇತರ ಶೀಲ, ಅದೇತರ ವ್ರತ ನುರುಳೆ !

ಚಿಲುಮೆಯ ಅಗ್ಘವಣಿಯ ಕುಡಿದರೇನೋ,
ಜನ್ಮದ ಮೈಲಿಗೆಯ ತೊಳೆಯದನ್ನಕ್ಕರ?
ಕಾಡುಗಟ್ಟೆಯ ನೀರ ಕುಡಿದರೇನೋ,
ತನ್ನ ಕಾಡುವ ಕರಣಾದಿ ಗುಣಂಗಳ ಕಳೆದುಳಿಯದನ್ನಕ್ಕರ?
ಉಳ್ಳಿ ನುಗ್ಗೆಯ ಬಿಟ್ಟರೇನೊ,

ಸಂಸಾರದ ಸೊಕ್ಕಿನುಕ್ಕ ಮುರಿದು
ಮಾಯಾ ದುರ್ವಾಸನೆಯ ವಿಸರ್ಜಿಸದನ್ನಕ್ಕರ?
ಸಪ್ಪೆಯನುಂಡರೇನೋ
ಸ್ತ್ರೀಯರ ಅಪ್ಪುಗೆ ಬಿಡದನ್ನಕ್ಕರ?
ಅದೇತರ ಶೀಲ, ಅದೇತರ ವ್ರತ ಮರುಳೆ?

ಎನ್ನುತ್ತಾರೆ ಶಿವಯೋಗಿಗಳು. ಅವರಿಗೆ

"ಸತ್ಯದಲ್ಲಿ ನಡೆವುದು ಶೀಲ;
ಸತ್ಯದಲ್ಲಿ ನುಡಿವುದು ಶೀಲ;
ಸಜ್ಜನ ಸದಾಚಾರದಲ್ಲಿ ವರ್ತಿಸಿ
ನಿತ್ಯವನರಿವುದೇ ಶೀಲ"

(ಷ. ಸಾ. 308)

5

ಹೀಗೆ ಸಿದ್ಧಲಿಂಗ ಶಿವಯೋಗಿಗಳ ವಚನಗಳು ಕೇವಲ ತಾತ್ತ್ವಿಕ ವಿವೇಚನೆಯಲ್ಲಿ ಮಾತ್ರವಲ್ಲದೆ ಕಾವ್ಯಸತ್ವದ ದೃಷ್ಟಿಯಿಂದಲೂ ಕೂಡ ಮಹತ್ವಸ್ಥಾನ ಪಡೆದಿವೆ. ಇಲ್ಲಿ ನಿರೂಪಿಸಿರುವ ರಸ ಶೃಂಗಾರವಲ್ಲ. ಅದು ರಸಸ್ವರೂಪನಾದ 'ರಸೋ ವೈ ಸಃ' ಎಂಬ ಶ್ರುತ್ಯುಕ್ತವಾದ ಪರಬ್ರಹ್ಮ. ಇಲ್ಲಿಯ ರಸಾನುಭವ ಬ್ರಹ್ಮಾಸ್ವಾದ ಸಹೋದರವಲ್ಲ;ಅದು ಸ್ವಯಂ ಬ್ರಹ್ಮಾನುಭವವೇ! ಅದಕ್ಕೆ ಪೋಷಕವಾಗಿ ಆ ಋಷಿಕವಿಯ ಹೃದಯಾಂತರಾಳದಿಂದ, ರಸಯೋಗದಿಂದ ಅಭಿವ್ಯಕ್ತವಾಗಿರುವ ಕಾವ್ಯದ ಬುಗ್ಗೆ ತಾನೇತಾನಾಗಿ ಚಿಮ್ಮಿದೆ. ಭಕ್ತಿರಸ ಪ್ರವಾಹವಾಗಿ ಹೊಮ್ಮಿದೆ. ಈ ಅಧ್ಯಾತ್ಮರಸ ತರಂಗಿಣಿಯಲ್ಲಿ ಪುನೀತರಾಗುವ ಪುಣ್ಯ ಕನ್ನಡಿಗರಿಗೆ ಲಭಿಸಿದ್ದು ಕನ್ನಾಡಿನ ಸುಕೃತ.

ಮುರಳೀಧರ ಉಪಾಧ್ಯ ಹಿರಿಯಡಕ

ಕನ್ನಡ ಸಾಹಿತ್ಯದಲ್ಲಿ ವ್ಯಕ್ತಿಚಿತ್ರಗಳು

ಹೊಸಗನ್ನಡ ಗದ್ಯಸಾಹಿತ್ಯ ವೈವಿಧ್ಯಪೂರ್ಣವಾಗಿ ಬೆಳೆಯುತ್ತಿದೆ. ಅದರ ನಾನಾ ಪ್ರಕಾರಗಳಲ್ಲಿ 'ವ್ಯಕ್ತಿಚಿತ್ರ'ವೂ ಒಂದು. ವ್ಯಕ್ತಿಚಿತ್ರ ಜೀವನಚರಿತ್ರೆಯಲ್ಲ, ಜೀವನವಿಮರ್ಶೆಯೂ ಅಲ್ಲ. ಅದು ಇತಿಹಾಸದಂತೆ ನೀರಸವಲ್ಲ, ಕಾದಂಬರಿಯಂತೆ ಕಾಲ್ಪನಿಕವಲ್ಲ. ಜೀವನ ಚರಿತ್ರೆ ಕಾದಂಬರಿಯಾದರೆ ವ್ಯಕ್ತಿಚಿತ್ರ ಸಣ್ಣಕತೆ. ಜೀವನ ಚರಿತ್ರೆಯಲ್ಲಿ ದಿನ ಕ್ರಮಾಗತ ವಿವರಗಳಿಗೆ ಪ್ರಾಧಾನ್ಯತೆ. ವ್ಯಕ್ತಿಚಿತ್ರದಲ್ಲಿ ವ್ಯಕ್ತಿಯ ಸ್ವಭಾವಕ್ಕೆ, ವೈಶಿಷ್ಟ್ಯಕ್ಕೆ, ಅಂತರಂಗ – ಬಹಿರಂಗ ಚಿತ್ರಣಕ್ಕೆ ಮಹತ್ವ. ವ್ಯಕ್ತಿಚಿತ್ರಕಾರ ಹೇಳುವುದನ್ನು ಆದಷ್ಟು ಸೂಕ್ಷ್ಮವಾಗಿ ಹೇಳುತ್ತಾನೆ. ವಿದ್ಯಾರ್ಥಿ ತಾನು ವರ್ಷವಿಡೀ ಓದಿದ್ದನ್ನು ಪರೀಕ್ಷಾಭವನದಲ್ಲಿ, ಮೂರುಗಂಟೆಗಳಲ್ಲಿ ಬರೆಯಬೇಕಲ್ಲವೇ? ಹಾಗೆ ಇವನಿಗೂ. ಇಲ್ಲಿ "ನುಡಿದರೆ ಮುತ್ತಿನ ಹಾರದಂತಿರಬೇಕು." ವ್ಯಕ್ತಿಚಿತ್ರ ಲೇಖಕನನ್ನು ರೇಖಾಚಿತ್ರಗಾರನೊಡನೆ ಹೋಲಿಸಬಹುದು. ರೇಖಾಚಿತ್ರಗಾರ ಕೆಲವು ಗೆರೆಗಳಿಂದಲೇ ತನ್ನ ಕೆಲಸ ಮುಗಿಸುತ್ತಾನೆ. ಆದರೆ ಅದು ಯಾರ ಚಿತ್ರವೆಂದು ಎಲ್ಲರಿಗೂ ತಿಳಿಯುತ್ತದೆ.

ಕನ್ನಡದಲ್ಲಿ ವ್ಯಕ್ತಿಚಿತ್ರಸಾಹಿತ್ಯ ನಡೆದು ಬಂದ ದಾರಿಯ ಒಂದು ವಿಹಂಗಮ ನೋಟ ಈ ಲೇಖನದ ಉದ್ದೇಶ. (ಕನ್ನಡದಲ್ಲಿ ಈವರೆಗೆ ಪ್ರಕಟವಾಗಿರುವ ಎಲ್ಲ ವ್ಯಕ್ತಿಚಿತ್ರ ಹೊತ್ತಗೆಗಳ ಕುರಿತು ಇಲ್ಲಿ ವಿವೇಚಿಸಿದೆ ಎಂದು ತಿಳಿಯಬಾರದು. ಲೇಖಕನ ಕಣ್ಣುತಪ್ಪಿಸಿ ಮರೆಯಾದ ಗ್ರಂಥಗಳೂ ಕೆಲವಿರಬಹುದು.)

ಇಂಗ್ಲಿಷ್ ಸಾಹಿತ್ಯದಲ್ಲಿ ವ್ಯಕ್ತಿಚಿತ್ರಲೇಖನ ಸಾಹಿತ್ಯಕಲೆಯಾಗಿ ಬೆಳೆದು ಜನಪ್ರಿಯವಾಗಿದೆ. ಲಿಟ್ಟನ್ ಸ್ಟ್ರ್ಯಾಚೆ, ಎಮಿಲ್ ಲುಡ್ವಿಗ್, ಆಂಡ್ರೆ ಮಾಲ್ರೂಸ್, ಎ. ಜಿ. ಗಾರ್ಡಿನರ್, ಕೇನ್ಸ್ – ಮೊದಲಾದವರು ಉಜ್ವಲವಾದ ಜೀವಂತವಾದ ವ್ಯಕ್ತಿಚಿತ್ರಗಳನ್ನು ನೀಡಿದ್ದಾರೆ.

ಕನ್ನಡದಲ್ಲಿ ವ್ಯಕ್ತಿಚಿತ್ರಲೇಖನ ಪತ್ರಿಕೋದ್ಯಮದ ಒಂದಂಗವಾಗಿ ಪ್ರಾರಂಭವಾಯಿತೆನ್ನಬಹುದು. ಕನ್ನಡದಲ್ಲಿ ವ್ಯಕ್ತಿಚಿತ್ರ ಪ್ರಾರಂಭಿಸಿದ ಕೀರ್ತಿ ದ. ಕೃ. ಭಾರದ್ವಾಜರಿಗೆ ಸಲ್ಲಬೇಕು. ಅವರು ಹಲವಾರು ವ್ಯಕ್ತಿಚಿತ್ರಗಳನ್ನು ಬರೆದು, 'ಕನ್ನಡ ನುಡಿ'ಯಲ್ಲಿ ಪ್ರಕಟಿಸಿದರು.

"ಕನ್ನಡದಲ್ಲಿ ವ್ಯಕ್ತಿಚಿತ್ರ ಕಲೆ ಸಾಹಿತ್ಯವಾದದ್ದು ಶ್ರೀ ಸಿದ್ದವ್ವನಹಳ್ಳಿ ಕೃಷ್ಣಶರ್ಮರ ಲೇಖನ ಕೌಶಲದಿಂದ"1 ಎಂದು ದಿ. ದ. ಬಾ. ಕುಲಕರ್ಣಿಯವರು ತಮ್ಮ 'ಹಕ್ಕಿನೋಟ'ದ 'ನಿವೇದನೆ'ಯಲ್ಲಿ ಹೇಳಿದ್ದಾರೆ. ಈ ಹೇಳಿಕೆಯನ್ನು ನಾವು ಅಲ್ಲಗಳೆಯುವಂತಿಲ್ಲ. ಕೃಷ್ಣಶರ್ಮ ('ಹರಟೆಮಲ್ಲ')ರ ವ್ಯಕ್ತಿಚಿತ್ರಗಳಿರುವ 'ಕನ್ನಡದ ಕಿಡಿಗಳು, 'ದೀಪಮಾಲೆ', 'ಕುಲದೀಪಕರು' 1940 – 42ರಲ್ಲಿ ಪ್ರಕಟವಾದುವು. ಇವುಗಳಲ್ಲಿರುವ, 'ವಿಶ್ವೇಶ್ವರಯ್ಯನವರು', 'ತಾರಾನಾಥರಾಯರು', 'ಬೇಂದ್ರೆ', 'ಅಮಾತ್ಯ ರಾಜಗೋಪಾಲಾಚಾರ್ಯ', 'ಟಿ. ಪಿ. ಕೈಲಾಸಂ', 'ಭಿಕ್ಷು ಉತ್ತಮ' ಮುಂತಾದ ಸುಂದರ ವ್ಯಕ್ತಿಚಿತ್ರಗಳನ್ನು ಸಹೃದಯರು ಬಹಳಕಾಲ ಮರೆಯಲಾರರು. 'ಪರ್ಣಕುಟಿ'ಯಲ್ಲಿರುವ 'ಕಸ್ತೂರ್‌ಬಾ'

1ಕುಲಕರ್ಣಿ, ದ. ಬಾ. –ಹಕ್ಕಿನೋಟ. ಲಲಿತ ಸಾಹಿತ್ಯಮಾಲೆ. ಧಾರವಾಡ.1945.

ಒಂದು ಯಶಸ್ವಿ ವ್ಯಕ್ತಿಚಿತ್ರ. ಕೃಷ್ಣಶರ್ಮರ ಶೈಲಿಯಲ್ಲಿ ಬೆಟ್ಟದಿಂದ ಬಯಲಿಗೆ ಕಲ್ಲುಬಂಡೆಗಳ ನಡುವೆ ಹರಿಯುವ ನದಿಯ ಪ್ರವಾಹದಂತೆ ತನ್ನದೇ ಆದ ಕುಣಿತವಿದೆ. ಚೆಲ್ಲಾಟವಿದೆ. ಕಲರವವಿದೆ. ಸಂಮೋಹಕ ಶಕ್ತಿಯಿದೆ. ಶಬ್ದಸೃಷ್ಟಿಯ ಚಮತ್ಕಾರ ಮಾತ್ರವಲ್ಲದೆ ವೈವಿಧ್ಯದಲ್ಲಿ ಏಕತೆಯನ್ನು ಸಾಧಿಸುವ ಸ್ಥಿತ ಪ್ರಜ್ಞದೃಷ್ಟಿ, ವ್ಯಕ್ತಿಯ ಬಹಿರಂಗವನ್ನು ಬಗ್ಗೆಸುವಷ್ಟೇ ಸಹಜತೆಯಿಂದ ಅಂತರಂಗವನ್ನು ಸ್ಪಂದಿಸುವ ಸಾಮರ್ಥ್ಯ – ಇವು ಕೃಷ್ಣಶರ್ಮರ ಯಶಸ್ಸಿನ ಒಳಗುಟ್ಟಾಗಿವೆ. "ಶರ್ಮರು ಕನ್ನಡ ಸಾಹಿತ್ಯದಲ್ಲಿ ಗದ್ಯದ ನಡೆಯನ್ನು ಇನ್ನೊಂದು ದಜಲು ಮುಂದುವರಿಸಿದ್ದಾರೆ" (ಪ್ರಬುದ್ಧ ಕರ್ಣಾಟಕದಲ್ಲಿ ವಿಮರ್ಶೆ) ಎಂದಿರುವುದನ್ನು ನಾವು ಒಪ್ಪಿಕೊಳ್ಳಬಹುದು.

ದಿ. ದ. ಬಾ ಕುಲಕರ್ಣಿಯವರ 'ನಾನು ಕಂಡ ಗೌರಮ್ಮ' ಮೊದಲು 'ಜಯಂತಿ'ಯಲ್ಲಿ ಬೆಳಕು ಕಂಡಾಗ ಅಪಾರ ಜನಪ್ರಿಯತೆ ಗಳಿಸಿತು. ಬಹುಶಃ, ಬರೆದ ಒಂದೇ ಒಂದು ಲೇಖನಕ್ಕೆ ಈ ಪರಿಯ ಸ್ವಾಗತ, ಯಶಸ್ಸು ಬೇರಾರಿಗೂ ಸಿಕ್ಕಿರಲಿಕ್ಕಿಲ್ಲ. ಅವರ 'ಹಕ್ಕಿನೋಟ' (1945)ದಲ್ಲಿರುವ ಎಲ್ಲಾ ನೋಟಗಳೂ ವ್ಯಕ್ತಿಚಿತ್ರದ ತಂತ್ರಕ್ಕೆ ಒಳಪಟ್ಟಿವೆ ಎನ್ನುವುದು ಕಷ್ಟ. ಉದಾಹರಣೆಗೆ 'ನಾ ಕಂಡ ಗೌರಮ್ಮ' ವ್ಯಕ್ತಿಚಿತ್ರದ ಚೌಕಟ್ಟಿಗೆ ಸೀಮಿತವಾಗಿಲ್ಲ. ಆದರೆ ಶಬ್ದಗಳಲ್ಲಿ ಸೆರೆಹಿಡಿಯಲಾಗದ ಯಾವುದೋ ಒಂದು ಆತ್ಮೀಯತೆ ಅದರಲ್ಲಿ ಹರಿಯುತ್ತಿರುವುದರಿಂದ ಅದೊಂದು ಜೀವಂತ ಚಿತ್ರವಾಗಿದೆ. "ಕನ್ನಡ ಗದ್ಯಪ್ರಪಂಚದಲ್ಲಿ ಅದಕ್ಕಿಂತ ಹೆಚ್ಚು ಸುಂದರವಾದ ಕೃತಿಗಳು ಹಲವಿಲ್ಲ..." (ಮಾ. ವೆಂ. 'ಹಕ್ಕಿನೋಟ'ದ ಮುನ್ನುಡಿಯಲ್ಲಿ) ಎಂಬ ಇಪ್ಪತ್ತೈದು ವರುಷಗಳ ಹಿಂದಿನ ಹೇಳಿಕೆ ಇಂದಿಗೂ ಅವಿರೋಧವಾಗಿ ಉಳಿದಿದೆಯೆನ್ನಲಡ್ಡಿಯಿಲ್ಲ. ದ. ಬಾ. ಕು. ಕಂಡ ಗೌರಮ್ಮ ದಂಪತಿಗಳ ಒಂದು ಚಿತ್ರವಿದು –

"ಎರಡು ನಿಮಿಷಗಳಲ್ಲಿ ಮತ್ತೆ 'ಹೋ' ಎನ್ನುತ್ತ ತಮ್ಮ ಪತಿ ಶ್ರೀ ಗೋಪಾಲಕೃಷ್ಣರ ಕೈ ಹಿಡಿದುಕೊಂಡು ಬರುತ್ತಿರುವುದನ್ನು ಕಂಡೆ. ಎರಡೂ ಒಂದೇ ಬಗೆಯ ಬೆಳಕಿನ ಮುಖ: ಒಂದೇ ನಗೆ. ಎರಡು ದೇಹ. ಒಂದೇ ಗಾತ್ರ. ಇಬ್ಬರೂ ಸಮನಾಗಿ ಹೆಜ್ಜೆಹಾಕಿ ಬರುತ್ತಿದ್ದರು. ಅವರು ನಡೆದು ಬರುತ್ತಿದ್ದ ಆ ನೋಟ. ಅವರಿನ್ನೂ ದೂರದಿಂದ ಬರುತ್ತಿರಬೇಕು. ಇಲ್ಲವೇ ನಾನು ಹಿಂದೆ ಸರಿಯುತ್ತಿರಬೇಕು. ಅವರು ಹಾಗೆ ಬರುತ್ತಲೇ ಇರಬೇಕು. ನಾನು ನೋಡುತ್ತಲೇ ಇರಬೇಕು. ಎನ್ನಿಸಿತು. ಎಂತಹ ಜೋಡಿ ಅದು! ಸರ್ವಜ್ಞ ಕವಿ ಇಂತಹ ಒಂದು ದಾಂಪತ್ಯ ನೋಡಿಯೇ 'ಸ್ವರ್ಗಕ್ಕೆ ಕಿಚ್ಚು ಹಚ್ಚು' ಎಂದಿರಬೇಕು."1

'ಸೀಮಾ ಪುರುಷರು' (1962) ದ. ಬಾ. ಕುಲಕರ್ಣಿಯವರ ಪರಿಪಕ್ವ ಕೃತಿ. ಇದರಲ್ಲಿ 'ಮಧುರ ಚೆನ್ನ', 'ದೇವುಡು', 'ಆಲೂರ ವೆಂಕಟರಾಯರು', 'ಗೋವಿಂದ ಪೈ', 'ಮುಗಳಿ' ಮುಂತಾದ ಸತ್ವಪೂರ್ಣ ವ್ಯಕ್ತಿಚಿತ್ರಗಳಿವೆ. ಈ ಸಂಕಲನದಲ್ಲಿರುವ 'ನಾ ಕಂಡ ಹೊಸ ಕವಿಗಳು' ದ. ಬಾ. ಕು. ಅವರ ವ್ಯಕ್ತಿಚಿತ್ರಣ ಕಲೆಯ ಸಿದ್ಧಿಗೆ ಸಾಕ್ಷಿಯಾಗಿದೆ. ಒಂದೇ ಒಂದು ಲೇಖನದಲ್ಲಿ ಬೇಂದ್ರೆ, ಕುವೆಂಪು, ರಾಜರತ್ನಂ, ಪು.ತಿ.ನ., ವಿ.ಸೀ., ಗೋಪಾಲಕೃಷ್ಣ ಅಡಿಗ, ಪಾಂಡೇಶ್ವರ ಗಣಪತಿರಾಯರು, ವಿ. ಜಿ. ಭಟ್ಟ, ಎಸ್. ವಿ. ಪರಮೇಶ್ವರ ಭಟ್ಟ, ಸು. ರಂ. ಎಕ್ಕುಂಡಿ ಮೊದಲಾದ ಹತ್ತಾರು ಕವಿಗಳ ಕಿರುಪರಿಚಯವನ್ನು ಎಂದೆಂದಿಗೂ ಮರೆಯಲಾಗದಂತೆ ನೀಡಿದ್ದಾರೆ.

'ನನ್ನ ವ್ಯಕ್ತಿಜೀವನದ ಹವ್ಯಾಸಗಳು' ಎಂಬ ಲೇಖನದಲ್ಲಿ ದ. ಬಾ. ಕು. ಅವರು, "ವ್ಯಕ್ತಿಚಿತ್ರದ ಲೇಖಕನಿಗೆ ತನ್ನ ನಾಯಕನನ್ನು ಕೇಳಿ, ಓದಿ, ತಿಳಿದಿರುವ ಅಂಶಗಳಿಗಿಂತ ಪ್ರತ್ಯಕ್ಷವಾಗಿ ಕಂಡು ಸಂಪರ್ಕ ಬೆಳೆಸುವುದರಿಂದ ಹೆಚ್ಚಿನ ಪ್ರಯೋಜನವಿದೆ. ಪ್ರತ್ಯಕ್ಷದರ್ಶನ ಚಿತ್ರಕಾರನ ಮನಸ್ಸಿನಲ್ಲಿ ಯಾವುದೋ ಒಂದು ಅವ್ಯಕ್ತ ಪರಿಣಾಮವನ್ನು ಉಂಟು ಮಾಡಿರುತ್ತದೆ"2 ಎಂದಿದ್ದಾರೆ. ದ. ಬಾ. ಕು. ಅವರ ವ್ಯಕ್ತಿಚಿತ್ರಗಳು ಸತ್ವಪೂರ್ಣವಾಗಿರುವುದಕ್ಕೆ, ಯಶಸ್ವಿಯಾಗಿರುವುದಕ್ಕೆ ಅವರಿಗೆ

---

1. ಕುಲಕರ್ಣಿ, ದ. ಬಾ. – 'ಹಕ್ಕಿನೋಟ', ಲಲಿತ ಸಾಹಿತ್ಯ ಮಾಲೆ, ಧಾರವಾಡ(1945).
2. ಕುಲಕರ್ಣಿ, ದ. ಬಾ.–ಸೀಮಾಪುರುಷರು. (ಲಲಿತ ಸಾಹಿತ್ಯಮಾಲೆ, ಧಾರವಾಡ) 1962. ಪುಟ 119.

ಅನೇಕ ಸಾಹಿತಿಗಳೊಡನಿದ್ದ ನಿಕಟ ಪರಿಚಯವೂ ಒಂದು ಕಾರಣವೆನ್ನಬಹುದು. ಕವಿ ಎಸ್. ವಿ. ಪರಮೇಶ್ವರ ಭಟ್ಟರ ಭಾಷಣ ಕಲಾಸಿದ್ಧಿಯನ್ನು ದ. ಬಾ. ಕು. ಹೀಗೆ ಬಣ್ಣಿಸಿದ್ದಾರೆ.–

> "ತಮ್ಮ ಭಾಷಣಗಳಿಗೆ ಅವರು ತಟ್ಟೆ (ರೆಕಾರ್ಡ್)ಗಳೆನ್ನುತ್ತಾರೆ. ಧಾರವಾಡಕ್ಕೆ ಬಂದಾಗ ಹತ್ತಾರು ಕಡೆ ಭಾಷಣಕ್ಕೆ ಕರೆ ಬಂದವು. ಯಾವ ತಟ್ಟೆ ಇಡಲಿ ಎಂದು ಕೇಳುತ್ತಿದ್ದರು. ಆಗ ಅವರಲ್ಲಿ ನಾಲ್ಕಾರು ರೆಡಿಮೇಡ್ ಭಾಷಣಗಳಿದ್ದವು. ಕಾಲೇಜಿನ ಪಾಠಗಳ ತಟ್ಟೆಗಳು ಹಲವಿದ್ದರೂ ಸಾರ್ವಜನಿಕರಿಗೆಂದು ಅವಕ್ಕೆ ಹಿಂದೆ – ಮುಂದೆ ಅಲಂಕಾರ ಮಾಡಿ ಭಾಷೆಯ ಮೋಡಿಯಿಂದ ಒಪ್ಪಕೊಟ್ಟು ಬಹುಸುಂದರವಾಗಿ ಮಾತಾಡುತ್ತಾರೆ".1

ದ. ಬಾ. ಕು. ಅವರ ವ್ಯಕ್ತಿಚಿತ್ರಗಳಲ್ಲಿರುವ ಹಲವು ವಾಕ್ಯ ಮುಕ್ತಕಗಳನ್ನು –"ಬೇಂದ್ರೆಯವರಿಗೆ ಮಾತು ಸಿಕ್ಕಿದರೆ ಹೊಲ ಸಿಕ್ಕಂತೆ", "ಪುಟ್ಟಪ್ಪನವರ ಬರಹ ಬಹಳ, ಮಾತು ವಿರಳ", "ವಿ. ಸೀ. ನಮ್ಮ ನಯದ ಪತಾಕೆ", "ಗೋವಿಂದ ಪೈ ಮೌನವೆಲ್ಲಿಂದ ತಂದಾರು? ಹುಬ್ಬಿನಿಂದ ನಗುತ್ತಾರವರು." "ಮಾಸ್ತಿ ಮೂರ್ತಿವಂತ ಮಾನವಕಾವ್ಯ", "ವಿಸ್ಕಿಟ್ ಕವಿ ವಿಕ್ಕಂದಿ" – ಕನ್ನಡಿಗರು ಬಹುಕಾಲ ಮರೆಯಲಾರರು. 'ದ. ಬಾ. ಕು. ಬದುಕಿದ ಬಾಳು' ಗ್ರಂಥದಲ್ಲಿರುವ 'ಕೀರ್ತಿನಾಥ ಕುರ್ತಕೋಟಿ' ಒಂದು ಯಶಸ್ವಿ ವ್ಯಕ್ತಿಚಿತ್ರ. "ಕುಲಕರ್ಣಿಯವರ ಬರಹಗಳಲ್ಲಿ ಅಲ್ಲಲ್ಲಿ ಸ್ವಾರಸ್ಯವಿದೆ. ಆದರೆ ಒಟ್ಟಿನಲ್ಲಿ ಜಾಳು"2 ಎಂಬ ಡಾ. ಹಾ. ಮಾ. ನಾಯಕರ ಹೇಳಿಕೆ ನಿರಾಧಾರವಾದುದು.

"ಕನ್ನಡದಲ್ಲಿ ಒಂದು ಗಾದೆ ಇದೆ. 'ಅಡುಮುಟ್ಟದ ಸೊಪ್ಪಿಲ್ಲ' ಎಂದು. ಅದರ ಜೊತೆಗೆ ಕಾರಂತರು ಮಾಡದ ಬದುಕಿಲ್ಲ ಎಂದು ನಿಸ್ಸಂಕೋಚವಾಗಿ ಸೇರಿಸಿಕೊಳ್ಳಬಹುದು."ಶಿವರಾಮ ಕಾರಂತರ ವ್ಯಕ್ತಿಚಿತ್ರವನ್ನು ಅ. ನ. ಕೃ. ಹೀಗೆ ಪ್ರಾರಂಭಿಸುತ್ತಾರೆ. 'ಮೈಗಳ್ಳನ ದಿನಚರಿ'ಯಲ್ಲಿ, 'ಹಳ್ಳಿಯ ಹತ್ತು ಸಮಸ್ತರಲ್ಲಿ' ಕಾರಂತರ ಕಾಲ್ಪನಿಕ ವ್ಯಕ್ತಿಚಿತ್ರಗಳ ಸೊಗಸನ್ನು ನಾವು ಸವಿದಿದ್ದೇವೆ. ಮಂಗಳೂರಿನ 'ಸ್ವದೇಶಾಭಿಮಾನಿ' ಪತ್ರಿಕೆಯ 1933–34ರ ಸುಮಾರು ಹತ್ತು ಸಂಚಿಕೆಗಳಲ್ಲಿ ಕಾರಂತರು ಬರೆದ ಹಲವಾರು ವ್ಯಕ್ತಿಚಿತ್ರಗಳು ಪ್ರಕಟವಾಗಿವೆ (ಕೆ. ವಿ. ಅಯ್ಯರ್,' 'ದ. ರಾ. ಬೇಂದ್ರೆ', 'ಪಂಜೆ ಮಂಗೇಶರಾಯರು', 'ಕೆ. ವಿ. ಪುಟ್ಟಪ್ಪ', 'ವೀ. ಸೀ.' ಮುಂತಾದುವು.). ವ್ಯಕ್ತಿತ್ವದ ವೈಲಕ್ಷಣ್ಯಗಳನ್ನು ಗುರುತಿಸಿ ತನಗೆ ಅನಿಸಿದ್ದನ್ನು ನಿರ್ದಾಕ್ಷಿಣ್ಯವಾಗಿ ಹೇಳಿದ್ದಾರೆ ಕಾರಂತರು. ಈ ಬಿಡಿ ಬರಹಗಳು ಇನ್ನೂ ಪುಸ್ತಕರೂಪದಲ್ಲಿ ಪ್ರಕಟವಾಗದಿರುವುದು ದುರ್ದೈವದ ಸಂಗತಿ. ಕಾರಂತರ 'ಕಲಾವಿದ ಕೃಷ್ಣ ಹೆಬ್ಬಾರರು' ಒಂದು ಚಿಕ್ಕ–ಚೊಕ್ಕ ವ್ಯಕ್ತಿಪರಿಚಯದ ಹೊತ್ತಗೆ.

ಕನ್ನಡದಲ್ಲಿ ವ್ಯಕ್ತಿಚಿತ್ರ ಬರೆಯುವವರಲ್ಲಿ ಎಚ್ಚೆಸ್ಕೆ(ಎಚ್. ಎಸ್. ಕೃಷ್ಣಸ್ವಾಮಿ ಅಯ್ಯಂಗಾರ್)ಯವರಷ್ಟು ಜನಪ್ರಿಯತೆಯನ್ನು ಇನ್ನಾರೂ ಗಳಿಸಿಲ್ಲ. ಜನಪ್ರಿಯತೆಯೇ ಕೃತಿಯ ಮೌಲ್ಯಮಾಪನದ ಮಾನದಂಡವಾಗಲಾರದು. ಆದರೆ 'ಸುಧಾ' ವಾರಪತ್ರಿಕೆಯ ಸ್ಥಿರಶೀರ್ಷಿಕೆ 'ವಾರದ ವ್ಯಕ್ತಿ'ಯಲ್ಲಿ ಪ್ರಕಟವಾಗುತ್ತಿರುವ ಎಚ್ಚೆಸ್ಕೆಯವರ ಹಲವಾರು ವ್ಯಕ್ತಿಚಿತ್ರಗಳು ಸಾಹಿತ್ಯಿಕ ಮೌಲ್ಯವನ್ನು ಪಡೆದಿವೆ ಎಂಬುದರಲ್ಲಿ ಸಂಶಯವಿಲ್ಲ. ಕಾರಂತರಿಂದ ಕುವೆಂಪುವರೆಗೆ, ಕ್ರಾಂತಿವೀರ ಸಾವರ್‌ಕರ್‌ರಿಂದ ಶಾಂತಿವೀರ ಮಾರ್ಟಿನ್ ಲೂಥರ್ ಕಿಂಗ್ ವರೆಗೆ, ವರ್ಜನಾಂಪ್ರಿಯ ಉಥಾಂಟರಿಂದ ಕಲಹಪ್ರಿಯ ಭುಟ್ಟೋರವರೆಗೆ ನೂರಾರು ಸಾಹಿತಿಗಳ, ರಾಜಕಾರಣಿಗಳ, ಕ್ರೀಡಾಪಟುಗಳ, ವಿಜ್ಞಾನಿಗಳ ವ್ಯಕ್ತಿಚಿತ್ರಗಳು ಎಚ್ಚೆಸ್ಕೆಯವರ ಲೇಖನಿಯಿಂದ ಮೂಡಿಬಂದಿವೆ. ವ್ಯಂಗ್ಯಚಿತ್ರಕಲೆಯಲ್ಲಿ ಶಂಕರ್, ಆರ್. ಕೆ. ಲಕ್ಷ್ಮಣ್‌ರಿಗೆ ಸಿಕ್ಕಿರುವ ಯಶಸ್ಸು ವ್ಯಕ್ತಿಚಿತ್ರಣದಲ್ಲಿ ಎಚ್ಚೆಸ್ಕೆಯವರಿಗೆ ಲಭಿಸಿದೆ. ಈ ಕಲೆ ಅವರಿಗೆ ಕರತಲಾಮಲಕವಾಗಿದೆ. ಅಲೆಗಳಂತೆ ಒಂದರ ಮೇಲೊಂದು ತೇಲಿಬರುವ ಪುಟ್ಟ ಪುಟ್ಟ ವಾಕ್ಯಗಳು. ಮನಮೋಹಕ ಹೂವಿನ ಗೊಂಚಲುಗಳಂಥ ವಾಕ್ಯವೃಂದಗಳು, ವಿದ್ಯುತ್ತಿನಂತೆ ಹರಿಯುವ ಶೈಲಿ,

---

1. ಕುಲಕರ್ಣಿ, ದ. ಬಾ.–ಸೀಮಾಪುರುಷರು. (ಲಲಿತಸಾಹಿತ್ಯಮಾಲೆ, ಧಾರವಾಡ) 1962, ಪುಟ111.
2. ನಾಯಕ, ಹಾ. ಮಾ. – ಸಮೀಕ್ಷೆ (ಗೀತಾ ಬುಕ್ ಹೌಸ್, ಮೈಸೂರು)ಪುಟ:116.

ವ್ಯಕ್ತಿಯೊಬ್ಬನ ಗುಣದೋಷಗಳನ್ನು ಪಕ್ಷಪಾತವಿಲ್ಲದೆ ಎತ್ತಿತೋರಿಸುವ ನಿರ್ದಾಕ್ಷಿಣ್ಯ ಮನೋವೃತ್ತಿ, ಸ್ವಪ್ರೋಕ್ತಿ, ನೂರುಮಾತುಗಳ ವಿವರಣೆಯನ್ನು ಮೂರರಲ್ಲಿ ಸಂಗ್ರಹಿಸುವ ಕೌಶಲ-ಇವೆಲ್ಲಾ ಎಚ್ಚೆಸ್ಕೆ ಯವರಿಗೆ ಮಾತ್ರ ಸಾಧ್ಯ. ಎಚ್ಚೆಸ್ಕೆಯವರ ಗದ್ಯಶೈಲಿ ಆಧುನಿಕ ಕನ್ನಡ ಗದ್ಯದಲ್ಲೊಂದು ಹೊಸ ಕ್ರಾಂತಿ ಎನ್ನಬಹುದು. ಸ್ವೋಪಜ್ಞತೆಯಿಂದ ಸಿದ್ಧಿ ಪಡೆದಿರುವ ಎಚ್ಚೆಸ್ಕೆಯವರ 'ಎತ್ತರದ ವ್ಯಕ್ತಿಗಳು' ಕನ್ನಡದ ವ್ಯಕ್ತಿಚಿತ್ರ ಸಾಹಿತ್ಯ ಇತಿಹಾಸದಲ್ಲಿ ಒಂದು ಮೈಲಿಗಲ್ಲು. 'ಸೋಗಾಲ', 'ಕತೆಗಾರ ಆನಂದ', 'ಶರಚ್ಚಂದ್ರ ಬೋಸ್' ಮುಂತಾದ ಸುಂದರ ವ್ಯಕ್ತಿಚಿತ್ರಗಳಿರುವ ಈ ಹೊತ್ತಗೆಯನ್ನು ಡಾ. ಹಾ. ಮಾ ನಾಯಕರು "ಸ್ವರೂಪದಲ್ಲಿ ಪತ್ರಿಕೋದ್ಯಮೀಯ(Journalistic)"[1] ಎಂದು ಕರೆದಿರುವುದು ಆಶ್ಚರ್ಯದ ಸಂಗತಿ. ಕೆಲವೇ ವಾಕ್ಯಗಳಲ್ಲಿ ವ್ಯಕ್ತಿಯ ಚಿತ್ರವನ್ನು ನಮ್ಮ ಕಣ್ಮುಂದೆ ನಿಲ್ಲಿಸುವ ಎಚ್ಚೆಸ್ಕೆಯವರ ಜಾಣ್ಮೆಯನ್ನು ಇಲ್ಲಿ ಕಾಣಬಹುದು–

> "ಸುಮಾರು ಐದೂಮುಕ್ಕಾಲು ಅಡಿ ಎತ್ತರ. ಆ ನಿಲುವಿಗೆ ತಕ್ಕಗಾತ್ರ. ಕೊಳವೆಯ ಷರಾಯಿ. ವಿಚಿತ್ರವಾದ ಬುಷಕೋಟು. ಅದರ ಮುಂಬದಿಯಲ್ಲಿ ಮೇಲೆರಡು ಕೆಳಗೆರಡು ದೊಡ್ಡಜೇಬು. ಅದಕ್ಕೆ ಮುಚ್ಚಳ. ಜೇಬುಗಳ ತುಂಬಾ ಕಾಗದವೇ ಮುಂತಾದ ಸರಕು. ಕೊರಳಿಗೆ ಬಿಗಿದ ತೆಳುವಸ್ತ್ರ. ತಲೆಯ ಮೇಲೆ ದಪ್ಪ ಟೋಪಿ. ಕೈಯಲ್ಲೊಂದು ತುಂಡುದೊಣ್ಣೆ. ಈ ವಿಚಿತ್ರವೇಷದ ವ್ಯಕ್ತಿ ಮೈಸೂರಿನ ಸಾಹಿತ್ಯಪ್ರಿಯರಿಗೆ ಚಿರಪರಿಚಿತ. ಈ ವ್ಯಕ್ತಿಯೇ ಹೆಸರಾಂತ ಕತೆಗಾರ ಆನಂದ".[2]

ಹಾ. ಮಾ. ನಾಯಕರ 'ಸಂಕೀರ್ಣ'ದಲ್ಲಿ ಹಲವು ರಮ್ಯ ವ್ಯಕ್ತಿಚಿತ್ರಗಳಿವೆ. 'ಮಾಸ್ತಿ', 'ಬೇಂದ್ರೆ' 'ಎ. ಆರ್. ಕೃ'. ಇವು ಆತ್ಮೀಯತೆಯ ಅಭಿವ್ಯಕ್ತಿಯಿಂದ, 'ಜೇಬುನ್ನಿಸಾ' 'ಪ್ಯಾಸ್ಟರ್ ನಾಕ್' ಮುಂತಾದುವು ಸಂಕೀರ್ಣ ಚಿತ್ರಣದಿಂದ ಯಶಸ್ವಿಯಾಗಿವೆ. ವಿ. ಸೀ.ಯವರದೇ ಆದ ರುಮಾಲಿನ ವ್ಯಾಖ್ಯಾನದಿಂದ ಆರಂಭವಾಗಿ 'ವೀ. ಸೀ. ಬರೆಯುವುದು ಮಾತ್ರ ಕಲೆಯಲ್ಲ. ಅವರು ಬಾಳುವುದೂ ಕಲೆಯೇ' ಎಂದು ಮುಗಿಯುವ 'ವಿ. ಸೀ.' ಒಂದು ಶಕ್ತಿಯುತ ವ್ಯಕ್ತಿಚಿತ್ರ. 'ಕನ್ನಡ ಪ್ರಭ'ದ ಸ್ಥಿರಶೀರ್ಷಿಕೆ 'ಸಾಹಿತ್ಯ ಸಲ್ಲಾಪ'ದಲ್ಲಿ ಹಾ. ಮಾ. ನಾಯಕರು 'ಕಯ್ಯಾರ ಕಿಞ್ಞಣ್ಣ ರೈ', 'ಇ. ಎಂ. ಫಾರ್ಸ್ಟರ್', 'ಮಾಳವಾಡ ಮಾಸ್ತರ' 'ಪ್ರೊ. ಮರಿಯಪ್ಪ ಭಟ್' –ಮುಂತಾದ ಹಲವು ಚೆಲುವಿನ ವ್ಯಕ್ತಿಕೃತಿ ಪರಿಚಯಗಳನ್ನು ನೀಡಿದ್ದಾರೆ. ವ್ಯಕ್ತಿಚಿತ್ರಕಾರನಲ್ಲಿರಬೇಕಾದ ಕಂಡದ್ದನ್ನು ಕಂಡಂತೆ, ಹಿಂದೆ – ಮುಂದೆ ನೋಡದೆ ಹೇಳುವ ತಾಕತ್ತು ಹಾ. ಮಾ. ನಾ.ರಲ್ಲಿದೆ.

ಕು. ಶಿ. ಹರಿದಾಸ ಭಟ್ಟರ 'ಮನೆಯ ಹೊರಗಿನ ಮಹಾಜೀವಗಳು' 'ನಾಲ್ವರು ಮಹಾನುಭಾವರು' ಗಳಲ್ಲಿ ಆಲ್ಬರ್ಟ್ ಶ್ವೀಟ್ಸರ್', 'ವಿನ್‌ಸ್ಟನ್ ಚರ್ಚಿಲ್', 'ಬರ್ನಾರ್ಡ್ ಷಾ' ಮುಂತಾದ ವ್ಯಕ್ತಿಚಿತ್ರಗಳಿವೆ. ಇತ್ತೀಚೆಗೆ ಕು. ಶಿ. ಹರಿದಾಸಭಟ್ಟರು ಮಣಿಪಾಲದ ದೈನಿಕ 'ಉದಯವಾಣಿ'ಯ ಸ್ಥಿರಶೀರ್ಷಿಕೆ 'ಲೋಕಾಭಿರಾಮ'ದಲ್ಲಿ ಹಲವು ಸತ್ವಪೂರ್ಣ ವ್ಯಕ್ತಿಚಿತ್ರಗಳನ್ನು ಬರೆದಿದ್ದಾರೆ. ಅವರ ಶೈಲಿಯಲ್ಲಿ ಓದುಗರನ್ನು ಸೆರೆಹಿಡಿಯುವ ತನ್ನದೇ ಆದ ಮೋಡಿಯಿದೆ.

ಅ. ನ. ಕೃ. ಅವರ 'ಕನ್ನಡ ಕುಲರಸಿಕರು' ಮೂವತ್ತೆರಡು ಕನ್ನಡ ಸಾಹಿತಿಗಳ ಜೀವನ ಕೃತಿ ಪರಿಚಯವನ್ನೊಳಗೊಂಡಿದೆ. ಹಲವು ವ್ಯಕ್ತಿಚಿತ್ರಗಳು ವೈಯಕ್ತಿಕ ಪರಿಚಯದಿಂದಾಗಿ ಕುತೂಹಲ ಹುಟ್ಟಿಸುತ್ತವೆ. ಆದರೆ ಲೇಖಕರ ಶೈಲಿ ವ್ಯಕ್ತಿಚಿತ್ರಣಕ್ಕೆ ಒಗ್ಗಿಕೊಂಡಿಲ್ಲ. ಎರಡು ಭಾಗಗಳಲ್ಲಿ ಪ್ರಕಟವಾಗಿರುವ ಅ. ನ. ಕೃ. ಅವರ 'ಕರ್ನಾಟಕದ ಕಲಾವಿದರು' ಒಂದು ಅಮೂಲ್ಯ ಕೊಡುಗೆ. ಇದರಲ್ಲಿ ಚಿತ್ರಕಾರರಾದ ಮಿಣಜಗಿ, ಎಲವಟ್ಟಿ, ನರ್ತಕರಾದ ರಾಮಗೋಪಾಲ್, ಮಾಯಾದೇವಿ, ಛಾಯಾಚಿತ್ರಗ್ರಾಹಕ ಬಿ.ಎಲ್. ಸೀತಾರಾಮ್, ವೀಣೆ ದೊರೆಸ್ವಾಮಿ ಅಯ್ಯಂಗಾರ್, ವೀಣೆ ನಾಗರಾಜ ರಾಯರು – ಮುಂತಾದ ಹಲವಾರು ವ್ಯಕ್ತಿಪರಿಚಯಗಳಿವೆ. ವಿವಿಧ ಕಲೆಗಳಲ್ಲಿ ಲೇಖಕರಿಗಿರುವ ಅಭಿ

1, ನಾಯಕ, ಹಾ. ಮಾ. – ಸಮೀಕ್ಷೆ (ಗೀತಾ ಬುಕ್ ಹೌಸ್, ಮೈಸೂರು) ಪುಟ, 116.
2. ಎಚ್ಚೆಸ್ಕೆ – 'ಎತ್ತರದ ವ್ಯಕ್ತಿಗಳು' (ಸುರುಚಿ ಪ್ರಕಾಶನ. ಮೈಸೂರು–5)1966.

ರುಚಿ, ಆಳವಾದ ಅಭ್ಯಾಸ ಇಲ್ಲಿ ವ್ಯಕ್ತವಾಗುತ್ತದೆ. 'ನಟ ಕೆ. ಹಿರಣ್ಣಯ್ಯ'ನವರ ಪರಿಚಯ ಚಿತ್ರ ಅದ್ಭುತವಾಗಿದ್ದು ನಿರೂಪಣೆಯಲ್ಲಿ ಸಾರ್ಥಕವಾಗಿದೆ.

ಬಿ. ಜಿ. ಎಲ್. ಸ್ವಾಮಿಯವರ 'ಪಂಚಕಲಶ ಗೋಪುರ' ಒಂದು ವಿಶಿಷ್ಟ ಕೃತಿ. ಬೆಳ್ಳಾವೆ ವೆಂಕಟನಾರಣಪ್ಪ, ಟಿ. ಎಸ್. ವೆಂಕಣ್ಣಯ್ಯ, ಬಿ. ಎಂ. ಶ್ರೀಕಂಠಯ್ಯ, ಎ. ಆರ್. ಕೃಷ್ಣಶಾಸ್ತ್ರಿ, ವಿ. ಸೀ. ಇವರೆಲ್ಲರನ್ನು ಕುರಿತ ತಮ್ಮ ವೈಯಕ್ತಿಕ ಅನುಭವಗಳನ್ನು ಲೇಖಕರು ಸೊಗಸಾಗಿ ನಿರೂಪಿಸಿದ್ದಾರೆ. ಕತೆಗಾರನಲ್ಲಿರಬೇಕಾದ ಕುತೂಹಲವನ್ನು ಬೆಳೆಸಿಕೊಂಡು ಹೋಗುವ ಜಾಣ್ಮೆಯನ್ನು ಸ್ವಾಮಿಯವರ ಬರಹಗಳಲ್ಲಿ ಕಾಣುತ್ತೇವೆ.

ಟಿ. ಮಹಾಬಲೇಶ್ವರ ಭಟ್ಟರ 'ಸಾಹಿತ್ಯ ಶಿಲ್ಪಿಗಳು' ಹಲವು ಸಾಹಿತಿಗಳ ವ್ಯಕ್ತಿಕೃತಿ ಪರಿಚಯವನ್ನೊಳಗೊಂಡಿದೆ. ಇದೊಂದು ಪ್ರಶಂಸನೀಯ ಪ್ರಯತ್ನ. "ಒಬ್ಬ ವ್ಯಕ್ತಿ ಹಲವಾರು ವ್ಯಕ್ತಿಗಳನ್ನು ಕುರಿತು ಬರೆಯುವಾಗ ಮುಗ್ಗರಿಸುವುದು ಸಹಜವಾಗಿದೆ" ಎಂದು ಲೇಖಕರು ಮುನ್ನುಡಿಯಲ್ಲಿ ಹೇಳಿರುವುದನ್ನು ಎಲ್ಲ ವ್ಯಕ್ತಿಚಿತ್ರಕಾರರಿಗೂ ಅನ್ವಯಿಸಬಹುದು. ಹ. ವೆಂ. ಸೀತಾರಾಮಯ್ಯನವರ 'ರಂಗಭೂಮಿಯ ಕಲಾವಿದರು' ಒಂದು ಉಲ್ಲೇಖನೀಯ ಕೃತಿ. ಇದರಲ್ಲಿ ಎ. ವಿ. ವರದಾಚಾರ್, ಮಹಮದ್‌ಪೀರ್, ಬಾಲಗಂಧರ್ವ ಮೊದಲಾದ ಇಪ್ಪತ್ತೆಂಟು ಮಂದಿ ರಂಗಭೂಮಿಯ ಕಲಾವಿದರ ಪರಿಚಯವಿದೆ, ಆದರೆ, ಹಲವೆಡೆ ಸಂಗ್ರಹಿಸಿದ ಸಂಗತಿಗಳು ತೀರಾ ಕಡಿಮೆಯೆನಿಸುತ್ತವೆ. ಕುವೆಂಪು, ಕೈಲಾಸಂ ವಲ್ಲತ್ತೋಳ್ ಮೊದಲಾದವರ ವ್ಯಕ್ತಿಚಿತ್ರಗಳಿರುವ ವಸುದೇವ ಭೂಪಾಲಂರವರ 'ಗೊಂಚಲ್ ಮಿಂಚು.' ಒಂದು ಯಶಸ್ವಿ ಕೃತಿಯಾಗಿದೆ. ಸಾ. ಶಿ. ಮರುಳಯ್ಯನವರ 'ವಿಭೂತಿ ಪುರುಷರು' ಹಲವು ರಮ್ಯ ವ್ಯಕ್ತಿ ಪರಿಚಯಗಳಿಂದ ಕೂಡಿದೆ.

ಕೆಲವು ಕೃತಿಗಳು ವ್ಯಕ್ತಿಚಿತ್ರದ ಚೌಕಟ್ಟನ್ನು ಮೀರಿದ್ದರೂ ತಮ್ಮದೇ ಆದ ವೈಶಿಷ್ಟ್ಯವನ್ನು ಪಡೆದಿರುತ್ತವೆ. ವ್ಯಕ್ತಿಚಿತ್ರಕಾರನಿಗೆ ತಾನು ಯಾರ ಕುರಿತು ಬರೆಯ ಹೊರಟಿರುವನೋ ಅವರ ನಿಕಟ ಪರಿಚಯವಿದ್ದಾಗ ಆ ಬರಹ ಆತ್ಮೀಯತೆಯ ಅಭಿವ್ಯಕ್ತಿಯಾಗುತ್ತದೆ. ಇವನ್ನು 'ಆತ್ಮೀಯ ಚಿತ್ರ'ಗಳೆನ್ನಬಹುದು. "ಒಬ್ಬ ಮನುಷ್ಯನ ಪರಿಚಯ ನಿಕಟವಾದಷ್ಟು ಅವನ ವ್ಯಕ್ತಿಚಿತ್ರ ಬರೆಯುವದು ಕಷ್ಟಸಾಧ್ಯವಾಗುತ್ತ ಹೋಗುತ್ತದೆ" ಎಂದು ದ. ಬಾ. ಕುಲಕರ್ಣಿಯವರು ಹೇಳುತ್ತಿದ್ದರಂತೆ. ಅತಿ – ಆತ್ಮೀಯತೆಯಿಂದ ಪರಿಚಯದ ಎಲ್ಲ ಅನುಭವಗಳನ್ನೂ ಲೇಖನದಲ್ಲಿ ಪ್ರತಿಬಿಂಬಿಸುವ ಚಪಲ ಉಂಟಾಗುವುದು ಸಹಜ. "Tell me your friends, I will tell you what you are" ಎಂಬ ಮಾತಿನ ಸತ್ಯ ಆತ್ಮೀಯ ಚಿತ್ರಗಳಲ್ಲಿ ವೇದ್ಯವಾಗುತ್ತದೆ. ಇನ್ನು ಕೆಲವು ಹೊತ್ತಗೆಗಳಲ್ಲಿ ವ್ಯಕ್ತಿಚಿತ್ರ ಕೃತಿಪರಿಚಯಗಳು ಹದವಾಗಿ ಬೆರೆತಿರುತ್ತವೆ. ಇವುಗಳನ್ನು 'ವ್ಯಕ್ತಿ–ಕೃತಿ ಪರಿಚಯ'ಗಳೆನ್ನಬಹುದು. ಇಂಥ ಕೃತಿಗಳಲ್ಲಿ ನಾವು ಶುದ್ಧವಾದ ಸಾಹಿತ್ಯ ವಿಮರ್ಶೆಯನ್ನು ನಿರೀಕ್ಷಿಸಬಾರದು.

ದೇ. ಜವರೇ ಗೌಡರು 'ಸಾಹಿತಿಗಳ ಸಂಗದಲ್ಲಿ' ತಾವು ಪಡೆದ ಅನುಭವವನ್ನು ಸಹೃದಯರಿಗೆ ಉಣಬಡಿಸಿದ್ದಾರೆ. 'ಪ್ರೊ. ಹಿರಿಯಣ್ಣನವರು' ಒಂದು ಚಿಕ್ಕ – ಚೊಕ್ಕ ವ್ಯಕ್ತಿಚಿತ್ರ. 'ಋಷಿಕವಿ ಕುವೆಂಪು' 'ಎಂ. ಆರ್. ಶ್ರೀ' 'ಮಾಸ್ತಿಯವರು' 'ತೀ.ನಂ. ಶ್ರೀ' ಈ ಪ್ರಬಂಧಗಳಲ್ಲಿ ಆತ್ಮೀಯತೆ, ಗೌರವ, ಸಹೃದಯ ವಿಮರ್ಶೆಗಳ ತ್ರಿವೇಣೀ ಸಂಗಮವಿದೆ. ಶಬ್ದ ಶ್ರೀಮಂತಿಕೆಯಿಂದ ತುಂಬಿದ ದೇ. ಜ.ಗೌ. ಅವರ ವಿಶಿಷ್ಟ ಗದ್ಯಶೈಲಿಗೆ ತನ್ನದೇ ಆದ ಆಕರ್ಷಣ ಶಕ್ತಿಯಿದೆ. ಪ್ರೊ. ಎಸ್. ವಿ. ಪರಮೇಶ್ವರ ಭಟ್ಟರು ಹೇಳುವಂತೆ "ಭಾಷೆ ಮತ್ತು ಶೈಲಿಗಳ ದೃಷ್ಟಿಯಲ್ಲಿ– ಈ ಬರಹಗಳು ಇಲ್ಲಿ ಭಾವಗೀತೆಯಾಗಿ ಅಲ್ಲಿ ಕಥನ ಕವನವಾಗಿ, ಇಲ್ಲಿ ಮುಕ್ತಕವಾಗಿ ಅಲ್ಲಿ ಪ್ರಗಾಥವಾಗಿ, ಇಲ್ಲಿ ಚಂಪುವಾಗಿ ಅಲ್ಲಿ ರಗಳೆಯಾಗಿ ಇಲ್ಲಿನ ಗದ್ಯಪದ್ಯ ಮುಖೀ ಪ್ರತಿಭೆಯ ಲೀಲಾವಿಲಾಸಗಳಿಂದ ವಾಚಕರ ಹೃದಯಾಪಹಾರಿಯಾಗಿ ಪರಿಣಮಿಸಿವೆ. ಹಳೆಯ ಪದಗಳಿಗೆ ಹೊಸ ಅರ್ಥ, ಹೊಸಪದಗಳಿಗೆ ಹಳೆಯ ಅರ್ಥ, ಹೊಸ ಹೊಸ ಪದಗಳ ಸೃಷ್ಟಿ, ಹೊಸ ಹೊಸ ಧ್ವನಿರಮ್ಯತೆಯ ದೃಷ್ಟಿ-ಇವುಗಳಿಂದ ಇವರ ಬರವಣಿಗೆ ಮೋಹಕವಾಗಿದೆ. ಒಟ್ಟಿನಲ್ಲಿ

ಇವರ ಗದ್ಯ ಓಜೋಮಯವಾದದ್ದು."1 'ಉಪಾಯನ' (ಡಿ. ಎಲ್. ನರಸಿಂಹಾಚಾರ್ಯರಿಗೆ ಅರ್ಪಿಸಿದ ಅಭಿನಂದನ ಗ್ರಂಥ)ದಲ್ಲಿರುವ 'ಶ್ರೀ ಆಚಾರ್ಯರೊಡನೆ' ದೇ. ಜ. ಗೌ. ಅವರ ಒಂದು ಶ್ರೇಷ್ಠ ವ್ಯಕ್ತಿಚಿತ್ರ.

ಡಿ. ವಿ. ಜಿ. ಅವರು ನಮ್ಮ ನಾಡಿನ ಕೆಲವೇ ಮೇಧಾವಿಗಳಲ್ಲೊಬ್ಬರಾಗಿದ್ದಾರೆ. ಅವರ 'ಜ್ಞಾಪಕ ಚಿತ್ರಶಾಲೆ' ಕಲೋಪಾಸಕರು ಮುಂತಾದ ಕೆಲವು ಭಾಗಗಳಲ್ಲಿ ಹೊರ ಬಂದಿದೆ. ಅಪಾರವಾದ ಆಳವಾದ ಇವರ ಅನುಭವದ ನೆನಪಿನ ಗಣಿಯಿಂದ ಇಂಥ ಚಿತ್ರರತ್ನಗಳು ಹೊರ ಬಂದಷ್ಟೂ ಸಹೃದಯರಿಗೆ ಭಾಗ್ಯ. 'ಕಲೋಪಾಸಕರು' ಹೊತ್ತಿಗೆಯ ಮುನ್ನುಡಿಯಲ್ಲಿ ಡಿ. ವಿ. ಜಿ.ಯವರು "ವಿಷಯದ ತುಣುಕು ತುಂಡುಗಳು ನೆನಪಿಗೆ ಬಂದಾಗ ನೆನಪು ಹೇಳಿದಂತೆ ಬರೆಯಿಸಿ ಆಗಿರುವ ಪುಸ್ತಕ. ಆದದ್ದರಿಂದ ಇದರಲ್ಲಿ ಒಂದು ಗೊತ್ತಾದ ವಿಷಯಾನುಕ್ರಮ ಕಾಣಲಾರದು" ಎಂದಿದ್ದಾರೆ. ಇದೇ ಕಾರಣವೋ ಏನೊ ಹಿಂದಿನ ಕೃತಿಗಳಲ್ಲಿ ಕಾಣಿಸುವ ಡಿ. ವಿ. ಜಿ.ಯವರ ಸಮರ್ಥವಾದ ಗದ್ಯಶೈಲಿ ಇಲ್ಲಿ ಸ್ವಲ್ಪ ಸಪ್ಪೆಯಾಗಿದೆ ಅನ್ನಿಸುತ್ತದೆ. ಆದರೂ ಸ್ಪಷ್ಟವಾದ ತಿಳಿಯಾದ ವಿಚಾರಸರಣಿ. ಸುಂದರವಾದ ದೃಷ್ಟಾಂತಗಳಿಂದ ಕಂಗೊಳಿಸುವ ಅವರ ಶೈಲಿ ಸಾಕಷ್ಟು ಸತ್ವಯುತವಾಗಿದೆ. ಡಿ. ವಿ. ಜಿ. ಅವರ 'ಕನ್ನಡ ಪುನರುಜ್ಜೀವನ : ಕೆಲವು ವ್ಯಕ್ತಿಚಿತ್ರಗಳು' 'ಸಾರಸ್ವತೋಪಾಸಕರು–ಧರ್ಮ ಸಂಪ್ರದಾಯಸ್ಥರು ' ಇತ್ತೀಚಿಗೆ 'ಕನ್ನಡ ಪ್ರಭ'ದಲ್ಲಿ ಪ್ರಕಟವಾಗಿವೆ. ಇವು ನಮ್ಮನ್ನು ಇಂದು ಕಾಣಸಿಗದ ಸಾರಸ್ವತ ಸಮಾಜವೊಂದಕ್ಕೆ ಕರೆದೊಯ್ಯುತ್ತವೆ.

'ಅನುಭವವಿರುವಲ್ಲಿ ಅಮೃತವಿದೆ' ಎಂಬುದನ್ನು ಸಿದ್ಧಪಡಿಸುವ ವಾಸುದೇವಾಚಾರ್ಯರ 'ನಾ ಕಂಡ ಕಲಾವಿದರು' ಒಂದು ಅಪೂರ್ವ ಕೃತಿ. 'ವೀಣೆ ಶೇಷಣ್ಣನವರು', 'ವೀಣೆ ಸುಬ್ಬಣ್ಣನವರು', 'ಬಿಡಾರಂ ಕೃಷ್ಣಪ್ಪನವರು' ಮುಂತಾದ ರಮ್ಯ ಚಿತ್ರಗಳನ್ನೋದುವಾಗ ವೀಣೆಯ ಸಂಗೀತದ ಮಧುರನಿನದ ತರಂಗತರಂಗವಾಗಿ ತೇಲಿಬಂದಂತೆ ಭಾಸವಾಗುತ್ತದೆ. ನಾವು ಕಲ್ಪನಾಲೋಕಕ್ಕೆ ಪ್ರಯಾಣಿಸುತ್ತೇವೆ. ಸರಳ ಶೈಲಿಯಲ್ಲಿರುವ ಈ ಚಿತ್ರಗಳನ್ನೋದುವಾಗ ಶೇಕ್ಸ್‌ಪಿಯರ್‌ನ (" When comes such another ?") (ಅಂಥವರನ್ನು ಎಂದು ಕಂಡೇವು) ಎಂಬ ಮಾತು ನೆನಪಿಗೆ ಬರುತ್ತದೆ. ಎಂ. ಜಿ. ಸುಬ್ರಹ್ಮಣ್ಯಶಾಸ್ತ್ರಿಗಳ 'ನೆನಪು' ಒಂದು ಉಲ್ಲೇಖನೀಯ ಕೃತಿ.

ವಿ. ಸೀ. ಅವರು ಕನ್ನಡದ ಕೆಲವೇ ಧೀಮಂತರಲ್ಲೊಬ್ಬರಾಗಿದ್ದಾರೆ. ಇತ್ತೀಚಿಗೆ ಪ್ರಕಟವಾದ ಅವರ 'ಮಹನೀಯರು, ಕನ್ನಡ ವ್ಯಕ್ತಿಚಿತ್ರಸಾಹಿತ್ಯಕ್ಕೊಂದು ವಿಶಿಷ್ಟ ಕೊಡುಗೆ. 'ಎನ್. ಎಸ್. ಸುಬ್ಬರಾವ್', 'ಬಿ. ಎಂ. ಶ್ರೀಕಂಠಯ್ಯ', 'ಪಂಜೆ ಮಂಗೇಶರಾವ್ 'ಗೋವಿಂದ ಪೈ.' 'ಕೆ. ಎಸ್. ಕಾರಂತ' ಮೊದಲಾದ ಮಹನೀಯರ ವ್ಯಕ್ತಿತ್ವದ ಔನ್ನತ್ಯವನ್ನು ವಿ. ಸೀ. ಅವರು ಸೊಗಸಾಗಿ ಚಿತ್ರಿಸಿದ್ದಾರೆ. ನವುರಾದ ಕೃತಿವಿಮರ್ಶೆಯೂ ಸೇರಿರುವ ಈ ವ್ಯಕ್ತಿಚಿತ್ರಗಳು ಕನ್ನಡ ಜನದ ಶ್ರೀಮಂತಿಕೆ ಧೀಮಂತಿಕೆಗಳನ್ನು ಎತ್ತಿ ತೋರಿಸುತ್ತವೆ. ವಿ. ಸೀ. ಅವರು ತಮ್ಮ ಸವಿನೆನಪುಗಳನ್ನು ಗಂಭೀರವಾಗಿ ವಿವರಿಸುತ್ತಾರೆ. ಇದೊಂದು ಗದ್ಯದ ಗಾನಲಹರಿಯಾಗಿದೆ. 'ಸಜ್ಜನರ ಸಂಗ ಹೆಜ್ಜೇನು ಸವಿದಂತೆ'– ಈ ಕೃತಿಯ ಸಂಗ ಕೂಡ ಹಾಗೆಯೇ : ಹಾಲ್ಜೇನು ಸವಿದಂತೆ. ಕನ್ನಡಿಗರು ಬಹಳ ಕಾಲ ಮರೆಯಲಾಗದ ಕಂಡರಣೆಯಿದು. ವಿ. ಸೀ. ಅವರ 'ಶಿವರಾಮ ಕಾರಂತ' ಒಂದು ಚಿಕ್ಕ–ಚೊಕ್ಕ ವ್ಯಕ್ತಿಪರಿಚಯ.

'ನಡೆದು ಬಂದ ದಾರಿ' (ಮನೋಹರ ಗ್ರಂಥಮಾಲೆ, ಧಾರವಾಡ)ಯ ಮೂರನೆಯ ಸಂಪುಟದ 'ಜೀವನ–ಪರಿಚಯ'ದಲ್ಲಿ ವಿವಿಧ ಲೇಖಕರು ಬರೆದ ಹಲವು ವ್ಯಕ್ತಿಚಿತ್ರಗಳಿವೆ. ನಾನಾ ಸಾಹೇಬ ದೇಸಾಯಿಯವರ 'ಕೆ. ಕೆ. ಹೆಬ್ಬಾರ' ಮೊದಲಾದ ಚಿತ್ರಗಳು ನಿರೂಪಣೆಯಲ್ಲಿ ಸಾರ್ಥಕವಾಗಿವೆ. ರಾ. ಶಿ. ಅವರ 'ನಮ್ಮ ಆರ್. ಕೆ. ಲಕ್ಷ್ಮಣ' ಒಂದು ಸುಂದರ ಯಶಸ್ವಿ ವ್ಯಕ್ತಿಚಿತ್ರ. 'ಕನ್ನಡದ ಕಿಡಿ'ಗಳಲ್ಲಿರುವ ಲೀಲಾ ಕಾರಂತರ 'ನಾನು ಕಂಡ ಕಾರಂತ' ಒಂದು ಮನಮೋಹಕ ವ್ಯಕ್ತಿಚಿತ್ರ. ಉಡುಪಿಯ ಮಹಾತ್ಮಾಗಾಂಧಿ ಮೆಮೋರಿಯಲ್ ಕಾಲೇಜಿನ ನವೋದಯ ಪ್ರಚಾರ ಪುಸ್ತಕ ಮಾಲೆಯಲ್ಲಿ ಪ್ರಕಟವಾಗಿರುವ ಕೆ. ಎಸ್.

---

1. ಹಾ.ಮಾ. ನಾಯಕ (ಸಂ): ದೇಜಗೌ–ವ್ಯಕ್ತಿ ಮತ್ತು ಸಾಹಿತ್ಯ ('ಇಬ್ಬರು ಕನ್ನಡ ಸಾಹಿತಿಗಳ ಜೀವನಚಿತ್ರಣ'), 1968..

ನರಸಿಂಹಸ್ವಾಮಿಯವರ 'ವಿ. ಸೀ.', ಎಂ. ರಾಮಚಂದ್ರರ 'ಸೇಡಿಯಾಪು ಕೃಷ್ಣಭಟ್ಟ', ಚೆಲುವಿನ ವ್ಯಕ್ತಿ – ಕೃತಿ ಪರಿಚಯಗಳು. ನೆರಂಗರ 'ಕವಿ ವಿನಾಯಕ' ಒಂದು ಪ್ರಶಂಸನೀಯ ಕೃತಿ.

'ಆತ್ಮೀಯ ಚಿತ್ರ' 'ವ್ಯಕ್ತಿ–ಕೃತಿ ಪರಿಚಯ'ಗಳಿಗೆ ಸೇರದ ಇನ್ನೂ ಕೆಲವು ಹೊತ್ತಗೆಗಳನ್ನು 'ಜೀವನ ಚಿತ್ರ'ವೆಂದು ಕರೆಯಬಹುದು. ಇಲ್ಲಿ ಲೇಖಕ ಇತಿಹಾಸದಲ್ಲಿನ ಮಹಾಪುರುಷರು, ಸಾಹಿತಿಗಳು, ವಿಜ್ಞಾನಿಗಳ ಜೀವನ ಚರಿತ್ರೆಯನ್ನು ಅಭ್ಯಸಿಸಿ, ತನ್ನ ಪ್ರತಿಭಾ ಬಲದಿಂದ ಅವುಗಳಿಗೆ ಜೀವತುಂಬಿ ಸಹೃದಯರಿಗೆ ನೀಡುತ್ತಾನೆ. ಇಂಥ ಜೀವನ ಚಿತ್ರಗಳನ್ನು ಬರೆಯುವುದು, ಬರೆದು ಯಶಸ್ವಿಯಾಗುವು ವುದು ಬಹುಕಷ್ಟದ ಕೆಲಸ.

'ಪಾಶ್ಚಿಮಾತ್ಯ ಮಹಾಪುರುಷರು' ' ಪಶ್ಚಿಮದ ಪ್ರತಿಭೆ' 'ಮಹಾವಿಜ್ಞಾನಿಗಳು' ಎಂಬ ಮೂರು ಸಂಕಲನಗಳನ್ನು ನೀಡಿರುವ ಗೌರೀಶ ಕಾಯ್ಕಿಣಿಯವರು ವ್ಯಕ್ತಿಚಿತ್ರಣಕಲೆಯಲ್ಲಿ ತಮ್ಮದೇ ಆದ ಸ್ವೋಪಜ್ಞತೆಯನ್ನು ಗಳಿಸಿದ್ದಾರೆ. ಅವರ 'ಪಾಶ್ಚಿಮಾತ್ಯ ಮಹಾಪುರುಷರು' 'ಸೊಕ್ರೆಟಿಸ್', 'ಮೈಕೆಲೆಂಜೆಲೊ' 'ರೂಸೊ', 'ಷೆಲ್ಲಿ', 'ನ್ಯೂಟನ್' 'ಕ್ಯಾಪ್ಟನ್ ಕುಕ್' 'ಗ್ಯಾರಿಬಾಲ್ಡಿ' ಮೊದಲಾದ ತತ್ವವಿಜ್ಞಾನಿಗಳ, ಕಲಾವಿದರ, ಕ್ರಾಂತಿಕಾರರ, ಕವಿಗಳ, ವಿಜ್ಞಾನಿಗಳ, ಸಾಹಸಿಗಳ ರಮ್ಯ ಜೀವನ ಚಿತ್ರಗಳನ್ನೊಳಗೊಂಡಿದೆ. 'ಭಾರತೀಯ ವಿಜ್ಞಾನಿಗಳು' – ಸಿ. ವಿ. ರಾಮನ್, ರಾಮಾನುಜಮ್, ಮೊದಲಾದ ಪ್ರಸಿದ್ಧವಿಜ್ಞಾನಿಗಳ ಕುತೂಹಲ ಜೀವನ ಚಿತ್ರಗಳಿಂದ ಕೂಡಿದೆ. ಗೌರೀಶಕಾಯ್ಕಿಣಿ ಅವರ ಬರವಣಿಗೆಯಲ್ಲಿ ಶಕ್ತಿಯಿದೆ, ಕಾಂತಿಯಿದೆ. ಅಲ್ಲಿ ಬುದ್ಧಿಭಾವಗಳ ವಿದ್ಯುದಾಲಿಂಗನದ ಮೋಹಕತೆಯಿದೆ. ವಿ. ಸೀ. ಅವರು ಹೇಳಿರುವಂತೆ "ಒಂದು ಬಗೆಯ ಗಂಡು ಶೈಲಿಗೆ ಅವರು ಪ್ರತಿನಿಧಿಯಾಗಿದ್ದಾರೆ"1

ಎನ್. ಕೆ. ನರಸಿಂಹಮೂರ್ತಿಯವರ 'ಮಹಾವಿಜ್ಞಾನಿಗಳು' ಒಂದು ಮುಖ್ಯಕೃತಿ. ಇದರಲ್ಲಿ ಹಲವಾರು ವಿಜ್ಞಾನಿಗಳ ಜೀವನಚಿತ್ರದೊಡನೆ ಅವರ ಸಂಶೋಧನೆಗಳನ್ನೂ ವಿವರಿಸಿದ್ದಾರೆ. ಲೇಖಕರ ಶೈಲಿ ವಿಜ್ಞಾನದ ವಿವರಣೆಗೆ ಒಗ್ಗಿಕೊಂಡಿದ್ದು ಸತ್ವಯುತವಾಗಿದೆ. ನರಸಿಂಹಮೂರ್ತಿಯವರಿಗೆ'ಮಹಾವಿಜ್ಞಾನಿಗಳ' ಚಿತ್ರಣದಲ್ಲಿ ಸಿಕ್ಕಿರುವ ಯಶಸ್ಸು 'ಮಹಾನಾಯಕರು' ಸಂಕಲನದಲ್ಲಿ ದೊರತಿಲ್ಲ. ಮಹಾನಾಯಕರ ಚಿತ್ರಣಗಳು ಇಸವಿ ಘಟನೆಗಳಿಂದ ಕೂಡಿದ ನೀರಸ ಇತಿಹಾಸವಾಗಿದೆ.

ಆಲೂರ ವೆಂಕಟರಾಯರು ತಮ್ಮ 'ಕರ್ನಾಟಕದ ವೀರರತ್ನಗಳು' ಗ್ರಂಥದಲ್ಲಿ 'ಹೊಯ್ಸಳ' 'ಸತ್ಯಾಶ್ರಯ ಪುಲಿಕೇಶಿ' ಮುಂತಾದ ಅದ್ಭುತ ಚಿತ್ರಗಳನ್ನು ನೀಡಿದ್ದಾರೆ. ಆಲೂರರ ಗದ್ಯ ಸಂಸ್ಕೃತ ಭೂಯಿಷ್ಠವಾಗಿದ್ದರೂ ವೀರರಸಪೂರ್ಣವಾಗಿದೆ. ಅವರ ಶೈಲಿಯಲ್ಲಿ ತನ್ನದೇ ಆದ ಓಘ, ಓಜಸ್ಸು, ಪ್ರಾಸಮಯತೆ, ಗೇಯತೆ ಇದೆ. ಕೆ. ಭುಜಬಲಿ ಶಾಸ್ತ್ರಿಗಳ 'ಆದರ್ಶ ಜೈನವೀರರು' 'ಆದರ್ಶ ಜೈನ ಮಹಿಳೆಯರು' 'ಆದರ್ಶ ಸಾಹಿತಿ'ಗಳಲ್ಲಿ ಹ ಲವು ಸುಂದರ ಜೀವನಚಿತ್ರಗಳಿವೆ. ಶಿವರಾಮು ಅವರ 'ಕನ್ನಡದ ಕಡುಗಲಿಗಳು'–'ಎಚ್ಚಮನಾಯಕ', 'ಒನಕೆಯ ಓಬವ್ವ' 'ಕಿತ್ತೂರ ರಾಣಿ ಚೆನ್ನಮ್ಮ' 'ಸಂಗೊಳ್ಳಿ ರಾಯಣ್ಣ' ಮುಂತಾದವರ ವೀರಗಾಥೆಗಳನ್ನೊಳಗೊಂಡಿದೆ. ಇತಿಹಾಸದ ವಿವರಣೆಗೆ ಆವಶ್ಯಕವಾದ ಸ್ಫೂರ್ತಿಯುತವಾದ ಶೈಲಿ ಲೇಖಕರಿಗೆ ಸಿದ್ಧಿಸಿದೆ. ಸಿದ್ಧಯ್ಯ ಪುರಾಣಿಕರ 'ಶರಣಚರಿತಾಮೃತ' ಒಂದು ಅಪೂರ್ವಗ್ರಂಥ. ಶಾಂತಾದೇವಿ ಮಾಳವಾಡರು ತಮ್ಮ 'ಕನ್ನಡ ತಾಯಿ'ಗ್ರಂಥದಲ್ಲಿ ಹಲವು ರಮ್ಯ ವ್ಯಕ್ತಿಕೃತಿ ಪರಿಚಯಗಳನ್ನು ನೀಡಿದ್ದಾರೆ. ಪ್ರಣವೇಶಾನಂದ ಸ್ವಾಮಿ ಅವರ 'ಬಂಗಾಳದ ಸಂತ ಶ್ರೇಷ್ಠರು', ಸರಸ್ವತಿ ಗೌಡರ ಅವರ 'ಭಾರತದ ವೀರಮಹಿಳೆಯರು', ಹೊಸಕೆರೆ ಚಿದಂಬರಯ್ಯನವರ 'ಭಾರತದ ಜೀವಜ್ಯೋತಿಗಳು', ಮಿರ್ಜಿ ಅಣ್ಣಾರಾಯರ 'ಭಾರತದ ಬೆಳಕು' – ಇವು ಜೀವನ ಚಿತ್ರಗಳಿಗೆ ಸಂಬಂಧಿಸಿದ ಉಲ್ಲೇಖನೀಯ ಹೊತ್ತಿಗೆಗಳು.

ವ್ಯಕ್ತಿಚಿತ್ರಗಳಿಂದ ಕೂಡಿದ ಸಿಂಪಿ ಲಿಂಗಣ್ಣ ಅವರ 'ದಿಟ್ಟಿಸಿ ನೋಡಿದರೆ', ಡಿ. ಆರ್. ರಾಮಯ್ಯನವರ 'ನಮ್ಮ ಹಿರಿಯರು', ತಿಮುಂಜೆ ಪರಾರಿ ಅವರ 'ಹುತಾತ್ಮರು', ಎಂ. ವಿ. ಶರ್ಮರ 'ಸತ್ತಾಂವಾ ಇದ್ದಾಂವಾ' ಗಮನಾರ್ಹ ಕೃತಿಗಳು.

---

1. ಗೌರೀಶ ಕಾಯ್ಕಿಣಿ– ಭಾರತೀಯ ವಿಜ್ಞಾನಿಗಳು (ಮಿಂಚಿನ ಬಳ್ಳಿ, 'ಧಾರವಾಡ) 1964 ಮುನ್ನುಡಿ – ವಿ. ಸೀ.

ವಿವಿಧ ಸಾಹಿತಿಗಳಿಗೆ ಕಲಾವಿದರಿಗೆ ಅರ್ಪಿಸಲಾಗಿರುವ ಅಭಿನಂದನ ಗ್ರಂಥಗಳಲ್ಲಿ ಹಲವಾರು ವ್ಯಕ್ತಿಚಿತ್ರಗಳಿರುತ್ತವೆ. ಆದರೆ ಇವುಗಳಲ್ಲಿ ಹೊಗಳಿಕೆ ಬಣ್ಣನೆಗಳಿಗೆ ಪ್ರಾಶಸ್ತ್ಯ. ಅಲ್ಲೊಂದು ಇಲ್ಲೊಂದು ಆತ್ಮೀಯ ಚಿತ್ರಗಳೂ ಇಲ್ಲದಿಲ್ಲ. ಒಟ್ಟಿನಲ್ಲಿ ಜಾಳು ಹೆಚ್ಚು. ಭಯ, ದಾಕ್ಷಿಣ್ಯ, ಒತ್ತಾಯ ಇವುಗಳಿಂದಾಗಿ ಉತ್ತಮ ವ್ಯಕ್ತಿಚಿತ್ರಗಳು ಬರುವುದು ಅಪರೂಪ. 'ದೀವಿಗೆ', 'ವಿನಾಯಕ ವಾಙ್ಮಯ', 'ಆನಂದ ಕಂದ', 'ರಸಿಕರಂಗದರ್ಶನ', 'ದೇಜಗೌ : ವ್ಯಕ್ತಿ ಮತ್ತು ಸಾಹಿತ್ಯ', 'ರಸಚೇತನ' (ಅ. ನ. ಕೃ ಅಭಿನಂದನ ಗ್ರಂಥ) 'ಕಟ್ಟೀಮನಿ : ಬದುಕು–ಬರಹ', 'ಗಂಗೋತ್ರಿ'(ಕುವೆಂಪು ಅಭಿನಂದನಗ್ರಂಥ) 'ಕಾರಂತ ಪ್ರಪಂಚ' ಮುಂತಾದ ಅಭಿನಂದನ ಗ್ರಂಥಗಳಲ್ಲಿ ಹಲವಾರು ವ್ಯಕ್ತಿಚಿತ್ರಗಳಿವೆ. ಇವುಗಳಲ್ಲಿ ಇದ್ದುದನ್ನು ಇದ್ದಂತೆ ಹೇಳುವ ನಿರ್ದಾಕ್ಷಿಣ್ಯ ಬರವಣಿಗೆಗೆ ಹೆಸರಾದ ಬಸವರಾಜ ಕಟ್ಟೀಮನಿ, ಕೋ. ಚೆನ್ನಬಸಪ್ಪ, ದೇ. ಜ.ಗೌ., ಕು. ಶಿ. ಹರಿದಾಸ ಭಟ್, ಶಿವರಾಮ ಕಾರಂತ ಇವರೆಲ್ಲ ಉತ್ತಮ ವ್ಯಕ್ತಿಚಿತ್ರಗಳನ್ನು ನೀಡಿದ್ದಾರೆ. 'ಕನ್ನಡಪ್ರಭ'ದಲ್ಲಿ ಕೋ. ಚೆನ್ನಬಸಪ್ಪ, 'ಕಸ್ತೂರಿ'ಯಲ್ಲಿ ಪಾವೆಂ, ನಾರಾಯಣ ಬಲ್ಲಾಳ, ವಿ.ಜಿ. ಭಟ್ಟ ಮೊದಲಾದವರ ಹಲವು ಉತ್ತಮ ದರ್ಜೆಯ ವ್ಯಕ್ತಿಚಿತ್ರಗಳು ಪ್ರಕಟವಾಗಿವೆ. 'ಮಯೂರ' ಮಾಸಪತ್ರಿಕೆಯ ಪ್ರತಿಭಾಸಂದರ್ಶನದಲ್ಲಿ ಹಲವು ಮಹತ್ವಪೂರ್ಣ ವ್ಯಕ್ತಿಚಿತ್ರಗಳು ಬಂದಿವೆ. ಪತ್ರಿಕೆಗಳಲ್ಲಿ ಅಲ್ಲೊಮ್ಮೆ, ಇಲ್ಲೊಮ್ಮೆ ಪ್ರಕಟವಾಗಿ ಮೂಲೆ ಸೇರಿರುವ ನೂರಾರು ರಮ್ಯ, ಮನೋಹರ ವ್ಯಕ್ತಿಚಿತ್ರಗಳು ಪುಸ್ತಕರೂಪದಲ್ಲಿ ಪ್ರಕಟವಾದರೆ ಕನ್ನಡ ವ್ಯಕ್ತಿಚಿತ್ರಸಾಹಿತ್ಯದ ಶ್ರೀಮಂತಿಕೆಯ, ಪ್ರಬುದ್ಧತೆಯ ಅರಿವಾದೀತು. ಸಾಕಷ್ಟು ಪಳಗಿದ ಪತ್ರಿಕೋದ್ಯಮಿಯ ವ್ಯಕ್ತಿಚಿತ್ರಕಾರರೂ ನಮ್ಮಲ್ಲಿದ್ದಾರೆ. 'ಪ್ರಪಂಚ'ದಲ್ಲಿ ಪಾಟೀಲ ಪುಟ್ಟಪ್ಪ, 'ಸುಧಾ'ದಲ್ಲಿ ಎಚ್ಚೆಸ್ಕೆ, ಕರ್ಮವೀರದಲ್ಲಿ ಪಿ. ಆರ್.ಪಿ., ಉದಯವಾಣಿ'ಯಲ್ಲಿ ಕೋ. ಮ. ಕಾರಂತ ಸತ್ವಯುತ ವ್ಯಕ್ತಿಚಿತ್ರಗಳನ್ನು, 'ಪಕ್ಕದ ನೋಟ' (Profile) ಗಳನ್ನು ಬರೆದಿದ್ದಾರೆ, ಬರೆಯುತ್ತಿದ್ದಾರೆ.

ಸಿದ್ದವ್ವನಹಳ್ಳಿ ಕೃಷ್ಣಶರ್ಮರು 1940ರಲ್ಲಿ ತಮ್ಮ 'ದೀಪಮಾಲೆ'ಗೆ ಬಿನ್ನಹ ಬರೆಯುತ್ತ "ಈ ಬಗೆಯ ವ್ಯಕ್ತಿ ಪರಿಚಯದ ರೇಖಾಚಿತ್ರಗಳು ನಮ್ಮಲ್ಲಿ ಇನ್ನೂ ಬೆಳೆದಿಲ್ಲ. ಸಾಹಿತಿಗಳೂ ವಿಮರ್ಶಕರೂ ಈ ಬೆಳೆಯುತ್ತಿರುವ ಸಾಹಿತ್ಯಕ್ಕೆ ಸರಿಯಾದ ಲಕ್ಷಣ–ರೂಪಗಳನ್ನು ಏರ್ಪಾಡು ಮಾಡಬೇಕು"1 ಎಂದಿದ್ದರು. ಈಗ, ಇಪ್ಪತ್ತೈದು ವರ್ಷಗಳ ನಂತರ ಹಾ. ಮಾ. ನಾಯಕರು, "ಈ ವಿಭಾಗ ಸಾಹಿತ್ಯ ಕಲೆಯಾಗಿ (Literary Art)ಇನ್ನೂ ಶೈಶವದಲ್ಲಿಯೇ ಇದೆ"2 ಎನ್ನುತ್ತಾರೆ. ಈ ಹೇಳಿಕೆಯನ್ನು ಒಪ್ಪಿಕೊಳ್ಳುವುದು ಕಷ್ಟ. ಸಿದ್ದವ್ವನಹಳ್ಳಿ ಕೃಷ್ಣಶರ್ಮ, ಎಚ್ಚೆಸ್ಕೆ, ಹಾ. ಮಾ. ನಾಯಕ, ಡಿ. ವಿ. ಜಿ., ಗೌರೀಶ ಕಾಯ್ಕಿಣಿ ಮೊದಲಾದ ಸ್ವೋಪಜ್ಞ ವ್ಯಕ್ತಿಚಿತ್ರಕಾರರ ಕೊಡುಗೆಗಳಿಂದಾಗಿ ಕನ್ನಡ ವ್ಯಕ್ತಿಚಿತ್ರ ಸಾಹಿತ್ಯ ವೈವಿಧ್ಯಪೂರ್ಣವಾಗಿ ಬೆಳೆದಿದೆ. ಒಬ್ಬರು ಆರಂಭಿಸುವುದು ಚಂದ. ಇನ್ನೊಬ್ಬರು ಮುಗಿಸುವುದು ಅಂದ. ಒಬ್ಬರ ಶೈಲಿ 'ಕಂಡಾಬಟ್ಟೆ' ಮಳೆಯಂತೆ ಬಿರುಸು, ಇನ್ನೊಬ್ಬರ ಶೈಲಿ ಜಿರಿಜಿರಿ ಮಳೆಯಂತೆ ನಿಧಾನ. ಇಲ್ಲಿ ಕಾಮನಬಿಲ್ಲಿನ ಕಾಂತಿ. ಅಲ್ಲಿ ನೀಲಗಗನದ ಶಾಂತಿ. ಒಬ್ಬೊಬ್ಬರದು ಒಂದೊಂದು ತರಹ, ಒಬ್ಬೊಬ್ಬರಲ್ಲಿ ಒಂದೊಂದು ವೈಶಿಷ್ಟ್ಯ. ಈ ವೈಶಿಷ್ಟ್ಯವೇ ವ್ಯಕ್ತಿಚಿತ್ರಕಲೆಯ ಜೀವಾಳ. ಏಕೆಂದರೆ ವ್ಯಕ್ತಿಚಿತ್ರ ಜೀವಂತ ವ್ಯಕ್ತಿಗಳನ್ನು, ಅವರ ಅಂತರಂಗ ಬಹಿರಂಗಗಳನ್ನು ಶಬ್ದಗಳಲ್ಲಿ ಸೆರೆಹಿಡಿಯುವ ಕಲೆ. ಇಂದು ವ್ಯಕ್ತಿವ್ಯಕ್ತಿಗಳ ನಡುವೆ ಏಳುಸುತ್ತಿನ ಕೋಟೆ. ಹೃದಯ ಹೃದಯದ ನಡುವೆ ಕಡಲು ಕಡಲಿನ ಅಂತರ. ಹೀಗಿರುವಾಗ ವ್ಯಕ್ತಿಚಿತ್ರ ಕಲೆ ಮಹತ್ವ ಪಡೆಯುತ್ತಿರುವುದರಲ್ಲಿ ಆಶ್ಚರ್ಯವೇನಿದೆ?

---

1. ಕೃಷ್ಣಶರ್ಮ ಸಿದ್ದವ್ವನಹಳ್ಳಿ– ದೀಪಮಾಲೆ. (ಮಿಂಚಿನಬಳ್ಳಿ, ಧಾರವಾಡ) 1940
2. ನಾಯಕ, ಹಾ. ಮಾ. – ಸಮೀಕ್ಷೆ (ಗೀತಾ ಬುಕ್ ಹೌಸ್, ಮೈಸೂರು) ಪುಟ, 116.

ಬಿಮಲ್ ಮಿತ್ರ

ಅಪರಾಧ*

ಒಂದು ದಿನ ಪೋಲೀಸ್ ಇನ್‌ಸ್ಪೆಕ್ಟರ್ ಒಬ್ಬರು ರೂಮಿಗೆ ಬಂದವರೇ ಹೀಗೆ ಪ್ರಶ್ನಿಸಿದರು, "ನೀವು ಹರೀಶ್ ಸರ್ಕಾರ್ ಅಲ್ಲವೇ?". "ಅಲ್ಲ ಸಾರ್!" ಆಶ್ಚರ್ಯದ ದನಿಯಲ್ಲಿ ಅವನು ಉಚ್ಚರಿಸಿದ. "ನಾನು ಅಶೇಷ ಮುಜಮ್‌ದಾರ್ ಇರುವಾಗ ನನ್ನ ಹೆಸರು ಹರೀಶ ಸರ್ಕಾರ್ ಏಕಾಗಬೇಕು?"

ಇನ್‌ಸ್ಪೆಕ್ಟರ್ ಮುಗುಳು ನಕ್ಕರು. "ಸರಿ, ನೀವು ಆಗಲೆ ಕಥೆಯನ್ನು ಕಟ್ಟಿದ್ದೀರಿ. ನಿಮ್ಮ ವಿಷಯ ತಿಳಿಯದೆ ನಾನು ನಿಮ್ಮನ್ನು ದಸ್ತಗಿರಿ ಮಾಡಲು ಬಂದಿದ್ದೇನೆಂದು ಭಾವಿಸಿದಿರಾ?"

"ನನ್ನನ್ನು ದಸ್ತಗಿರಿ? ಏಕೆ? ನಾನೇನೂ ಮಾಡಿಲ್ಲವಲ್ಲ!"

"ಅದು ನೀವು ಕೋರ್ಟಿನಲ್ಲಿ ಹೇಳಬೇಕಾದ್ದು. ಈಗ ನೀವು ಪೋಲೀಸ್ ಸ್ಟೇಷನ್‌ಗೆ ಬನ್ನಿ"

× × × × ×

ಅಶೇಷ ಮುಜಮದಾರರು ಆಫೀಸಿನಿಂದ ರೂಮಿಗೆ ಹಿಂದಿರುಗಿ, ತಮ್ಮ ಬ್ಲ್ಯಾಂಕೆಟ್‌ನೊಳಗೆ ನುಸುಳಿ, ಅರ್ಧಕೆಂಪು ಪುಸ್ತಕ ತೆಗೆದು ಸ್ವಲ್ಪ ಓದಿದ್ದರು. ಆ ಮೇಲೆ ಮಾಮೂಲಿನಂತೆ ಮಧುಬಾಬು ಹೋಟೆಲಿಗೆ ಹೋಗಿದ್ದರು. ಹೋಟೆಲು ಮುಚ್ಚಿದ್ದನ್ನು ಕಂಡು ಇಡೀ ದೇಹವೇ ಯಾವುದೋ ಭಯದಿಂದ ಶಕ್ತಿಗುಂದಿದಂತಾಗಿತ್ತು. ಆ ರಾತ್ರಿ ಇನ್ನೆಲ್ಲಿ ಊಟ ಮಾಡಿಯಾರು? ಹತ್ತಿರದಲ್ಲೇ ಒಂದು ಸಿಹಿ ತಿಂಡಿ ಅಂಗಡಿಯನ್ನು ಕಂಡಿದ್ದರು. ಮೊದಲು ಅಲ್ಲಿ ಸಂದೇಶ್ ಮತ್ತು ರಸಗುಲ್ಲಗಳನ್ನು ಮಾರುತ್ತಿದ್ದರು. ಈಗ ಬೇಳೆ ಹಿಟ್ಟಿನಿಂದ ಮಾಡಿದ ಸಿಹಿತಿಂಡಿಗಳು ಮನಮೋಹಕವಾಗಿ ಇಡಲ್ಪಟ್ಟಿದ್ದುವು. ಗುರುತಿನ ವ್ಯಕ್ತಿಯಾದ ಅಂಗಡಿಯ ಮಾಲೀಕ

"ಸ್ವಲ್ಪ ಬೇಕಾಗಿತ್ತೆ, ಸಾರ್?" ಎಂದು ಸ್ವಾಗತಿಸಿದ್ದ.

"ಆ ಹೋಟೆಲು ಈ ದಿನ ಏಕೆ ಮುಚ್ಚಿದೆಯೆಂದು ತಿಳಿಸುತ್ತೀರಾ?"

ಆ ವ್ಯಕ್ತಿ ಅರ್ಥವತ್ತಾಗಿ ನಕ್ಕು, "ಒಂದೆರಡು ದಿನಗಳಲ್ಲಿ ನಾವೂ ಮುಚ್ಚಲಿದ್ದೇವೆ".

"ಏಕೆ, ಏನು, ತೊಂದರೆಯಿದೆಯೆ?"

"ಮಾರುವುದಕ್ಕೆ ನಮಗೆ ಸ್ಟಾಕ್ ಎಲ್ಲಿದೆ?"

ಅಶೇಷರು ಉತ್ತರವನ್ನು ಅರ್ಥಮಾಡಿಕೊಳ್ಳದವರಾಗಿದ್ದರು. ಸ್ಟಾಕ್! ಸ್ಟಾಕ್ ಎಂದರೆ ಅವನ ಅರ್ಥವೇನಿತ್ತು?

"ನೀವು ಎಲ್ಲಿ ಜೀವಿಸುತ್ತಿದ್ದೀರೆಂದು ಸರಿಯಾಗಿ ತಿಳಿದುಕೊಂಡಂತಿಲ್ಲ ಸಾರ್",ಆ ಮನುಷ್ಯ ಇನ್ನೂ ಮುಂದುವರಿಯುತ್ತಿದ್ದ. ಆದರೆ......ತಕ್ಷಣ ಮೌನಿಯಾದ.

ಆ ಮೇಲೆ ಅಶೇಷ ಮುಜಮದಾರರು ತಮ್ಮ ದಾರಿಯನ್ನು ಹಿಡಿದಿದ್ದರು. ಒಂದು ಸಣ್ಣ ಓಣಿ. ಕೆಲವು ದಿನಗಳಿಂದ ಬಹು ಚಳಿಯಾಗುತ್ತಿತ್ತು. ಅವರಿಗೆಲ್ಲಿ ಸ್ವಲ್ಪ ಆಹಾರ ಸಿಕ್ಕೀತು?ಎಲ್ಲಾದರೂ

---

* ಬಂಗಾಳಿ ಮೂಲ ; ಇಂಗ್ಲಿಷಿನ ಮೂಲಕ ಅನುವಾದಿಸಲಾಗಿದೆ.

ಒಂದು ಬೇಕರಿ ಕಂಡಿದ್ದರೆ ಎಷ್ಟು ಉಪಯೋಗವಾಗುತ್ತಿದ್ದಿತು! ಒಂದು ಬಾರಿ "ಇಲ್ಲೊಂದು ಬೇಕರಿ ಇರಲಿಲ್ಲವೇ?" ತಮಗೆ ತಾವೇ ಕೇಳಿಕೊಂಡರು. ಅದನ್ನು ಸಮೀಪಿಸಿ, ಬೋರ್ಡು ಬಾಗಿಲಿನಲ್ಲಿ ಇದ್ದ "ಬ್ರೆಡ್ ಇದೆಯೇ"? ಎಂದು ಕೇಳಿದ್ದರು. ಅವರನ್ನು ನೋಡಿದೆಯೂ ಮಾಲೀಕ "ಇಲ್ಲ" ಎಂದು ಉತ್ತರಿಸಿದ್ದ. "ಒಂದು ಚೂರು ಕೂಡ ಇಲ್ಲವೇ?" ಆಗ ಆ ಮನುಷ್ಯ ಸ್ಪಷ್ಟವಾಗಿ ಪಕ್ಕ ಗಿರಾಕಿಯ ಕಡೆ ನೋಡಿ "ನಾನು ಹೇಳಲಿಲ್ಲವೆ? ನಿಮಗೇಕೆ ತೊಂದರೆ ಕೊಡುತ್ತೀರಿ?" ಅಶೇಷರು ಪ್ರಾರ್ಥಿಸಿಕೊಂಡಿದ್ದರು, "ದಯವಿಟ್ಟು, ಒಂದೇ ಒಂದು ಚೂರು ಕೊಡಿ. ನಾನು ನಿತ್ಯ ತಿನ್ನುತ್ತಿದ್ದ ಹೋಟೆಲು ಅನಿರೀಕ್ಷಿತವಾಗಿ ಮುಚ್ಚಿದೆ".

"ಬ್ರೆಡ್ ಬೇಕೆ? ನಾಳೆ ಬೆಳಗ್ಗೆ ಏಳು ಗಂಟೆಗೆ ಮುಂಚೆ ಬನ್ನಿ. ನಮಸ್ಕಾರ". ಮತ್ತೊಂದು ನಿರಾಶೆ. ಅಷ್ಟು ವೇಳೆಗಾಗಲೇ ಹಸಿವು ಸಹಿಸಲಾರದಂತಾಗಿತ್ತು. ಆದರೂ. ನಿದ್ರೆಯಲ್ಲಿ ತೊಂದರೆ ಕೊಟ್ಟರೆ? ಏನು ಮಾಡುವಂತಿದ್ದರು? ಕೆಲವು ಬಾಳೆಹಣ್ಣುಗಳು ಅದನ್ನು ತಡೆಯುತ್ತಿದ್ದವು. ಬಾಳೆಹಣ್ಣುಗಳು ಮಾರ್ಕೆಟ್‌ನಲ್ಲಿ ಮಾತ್ರ ಸಿಕ್ಕುತ್ತವೆ ಸರಿ. ತಮ್ಮಲ್ಲೇ ಆಲೋಚಿಸಿದರು. ಆ ಪ್ರದೇಶದಲ್ಲಿ ಸ್ವೀಟಿಹಾಗಿದ್ದರೆ. ಅಂತಹವುಗಳೇನೂ ಅಗತ್ಯವಿದ್ದಿರಲಿಲ್ಲ. ಆದರೆ ಅವರಿಗೆ ಎಲ್ಲೂ ದಾರಿಯೂ ಇರಲಿಲ್ಲ.

ಮಾರ್ಕೆಟ್ ಕಡೆಗೆ ಧಾವಿಸುತ್ತಿದ್ದಾಗ ಹಿಂದಿನಿಂದ ಕೂಗುತ್ತ ಬರುತ್ತಿದ್ದ ಮಧುಬಾಬು ಅವರನ್ನು ಸಂಧಿಸಿದ್ದರು. "ಅಶೇಷಬಾಬು. ಅಷ್ಟು ಹೊತ್ತಿನಿಂದ ನಿಮಗಾಗಿಯೇ ಹುಡುಕುತ್ತಿದ್ದೆ."

ಮಧುಬಾಬು ಹಾರ್ದಿಕವಾಗಿ ಬೆಳೆದವರು. ಅಶೋಕದಲ್ಲಿ ಕೆಲಸ. ಕಳೆದ ಹನ್ನೆರಡು ವರ್ಷಗಳಿಂದ ಅಶೇಷಬಾಬು ಇವರ ಹೋಟೆಲಿನಲ್ಲೇ ಊಟಮಾಡುತ್ತಿದ್ದರು. ಆ ವರ್ಷಗಳಲ್ಲಿ ತಿಂಗಳಿಗೆ ಮೂವತ್ತು ರೂಪಾಯಿ. ಅನ್ನ, ಬೇಳೆ, ಪಲ್ಯ, ಮತ್ತು ತರಕಾರಿಗಳ ಎರಡು ಊಟ. ಯಾವಾಗಲೂ ಅದು ಇಷ್ಟಪಟ್ಟು ಆಹಾರವನ್ನು ಸವಿದದ್ದೇ ಇಲ್ಲ. ಬೇರೆ ಗಿರಾಕಿಗಳು ಅನ್ನದಲ್ಲಿ ಒಂದು ಸಣ್ಣ ಕಲ್ಲು ಇದ್ದರೂ ಎಸೆಯುತ್ತಿದ್ದರು; ಕೂಗುತ್ತಿದ್ದರು; ಬೈತ್ತಿರುತ್ತಿದ್ದರು. ಮತ್ತೆ ಕೆಲವರು ಸಹಾಯಕ್ಕೆ ಹಣವನ್ನೇ ಕೊಡುತ್ತಿರಲಿಲ್ಲ. ಆದರೆ ಅಶೇಷರು ಮಧುಬಾಬು ಅವರ ಅಳುಗಳು ಬರೆದಿದ್ದರಿಂದಲೇ ಒಂದು ದಶಕದ ವರೆಗೆ ತೃಪ್ತಿ ಪಟ್ಟಿದ್ದರು. ಮಧ್ಯಾಹ್ನದ ಊಟವಾದ ಮೇಲೆ ಅವರು ನೇರವಾಗಿ ತಮ್ಮ ಆಫೀಸಿಗೆ ಹೋಗುತ್ತಿದ್ದರು. ಸಾಯಂಕಾಲದಲ್ಲಿ ಆಫೀಸಿನಿಂದ ಮನೆಗೆ ಬರುತ್ತಿದ್ದರು. ಹಿಂದಿನ ರಾತ್ರಿ ಮಾತ್ರ, ಇದಕ್ಕೆ ಹೊರತಾಗಿತ್ತು.

ಅಶೇಷರಿಗೆ ಒಬ್ಬರಲ್ಲ ಒಬ್ಬರ ಜೊತೆ ಸಲುಗೆಯುಂದಿರಬೇಕೆಂದು ಆಗಾಗ್ಗೆ ಅನ್ನಿಸಿದೆ. ಬೀದಿಯ ಅನಾಮಧೇಯ ಗುಂಪಿನಲ್ಲಿ, ಬಸ್ಸಿನಲ್ಲಿ, ಟ್ರಾಮಿನಲ್ಲಿ, ತಮಗೆ ತಾವೇ ಒಂಟಿಯಾಗಿ ಬದುಕಿದರು. ಆದರೆ, ಗುಂಪಿನಲ್ಲಿ ಜನರು ಬರಿ ಮುಖಗಳು ಎಂದು ಯಾವಾಗಲೂ ಭಾವಿಸಿ ಸುಮ್ಮನಾಗುತ್ತಿದ್ದರು.

x x x x x

"ಮಧುಬಾಬು, ಹೋಟೆಲು ಮುಚ್ಚಿದುದನ್ನು ಕಂಡು ಈಗತಾನೆ ಹಿಂತಿರುಗುತ್ತಿದ್ದೇನೆ"

"ಆತುರದಿಂದ ನಾನು ನಿಮಗಾಗಿ ನೋಡುತ್ತಿರುವಾಗ......"

"ಏಕೆ?"

"ಸರಿ, ನಮ್ಮ ಬಾಗಿಲಿನಿಂದ ನೀವು ಊಟವಿಲ್ಲದೆ ಬಂದಿರುವಾಗ ನಿಮಗಾಗಿ ಕಾಯುವುದು ನನ್ನ ಕರ್ತವ್ಯವಲ್ಲವೆ?"

"ಆದರೆ, ನೀವು ಹೋಟೆಲನ್ನು ಮುಚ್ಚಿದ್ದು ಏಕೆ?"

"ಮುಚ್ಚುವುದಕ್ಕೆ ನಾನಾರು? ಅದು ಸರಕಾರ......"

'ಸರಕಾರ' ಎಂಬ ಪದವನ್ನು ಕೇಳಿ ಅಶೇಷರು, "ಹಾಗಾದರೆ, ಅದು ಇದಾಗಿದೆ"—

"ಏನನ್ನು ಹೇಳುತ್ತಿರುವಿರಿ?"

"ಹೇಳುವುದಾದರೆ, ನೀವು ಸರಕಾರದ ಇಷ್ಟದ ವಿರುದ್ಧ ಏನು ಮಾಡಿಲ್ಲವೆ?"

"ನಾನು ಹಾಗೆ ಹೇಳಲಿಲ್ಲ. ನೀವು ಎಂದಿನಂತೆ 'ನಿಗೂಢ'ರಾಗಿಯೇ ಇದ್ದೀರಿ"

"ಒಂದು ಕಾಳೂ ಇಲ್ಲ. ಅದನ್ನೇ ಹೇಳಲು ಪ್ರಯತ್ನಿಸುತ್ತಿದ್ದೇನೆ"

"ಬ್ರೆಡ್ಡೂ ಸಿಗುವುದಿಲ್ಲವೇ?"

"ಹಿಟ್ಟಿಲ್ಲದೆ ಬ್ರೆಡ್ಡನ್ನು ಮಾಡಬಲ್ಲಿರಾ? ಯಾವ ಲೋಕದಲ್ಲಿದ್ದೀರಿ. ಚಂದ್ರಲೋಕದಲ್ಲೇ ಸ್ವಾಮಿ?"

"ಹಾಗಾದರೆ, ನಾವು ರಸಗುಲ್ಲ ಮತ್ತು ಸಂದೇಶಗಳನ್ನು ಏಕೆ ತೆಗೆದುಕೊಳ್ಳಬಾರದು?"

ಈಗ ಮಧುಬಾಬುವಿಗೆ ನಿಜವಾಗಿಯೂ ಕೋಪ ಬಂದಂತೆ ಕಾಣುತ್ತಿದ್ದರು. "ಬಂಗಾಲಿಗಳು ಎಲ್ಲಿದ್ದಾರೆಂದು ತಿಳಿಯಿತು! ಈಗ ಅವರು ಹಾಳಾದರು! ನಾನು ಹೇಳ್ತೀನೆ ಕೇಳಿ, ಉತ್ತರ ಪ್ರದೇಶಕ್ಕೆ ಹೋಗಿ. ಮದರಾಸಿಗೆ ಹೋಗಿ. ಬೊಂಬಾಯಿಗೆ ಹೋಗಿ ನೋಡಿ. ಅಲ್ಲಿ ಜನ ಎಷ್ಟು ಗಂಭೀರವಾಗಿ ಇರುತ್ತಾರೆಂದು. ಅದರಿಂದಾನೇ ಅವರು ಹಸಿವಿನಿಂದ ನರಳೋದಿಲ್ಲ. ನಿಮ್ಮಂಥ ಜನರೇ ಇದಕ್ಕೆ ಕಾರಣ. ನಿಮ್ಮಂಥ ಜನ. ಒಟ್ಟಾಗಿ ಸೇರಿ ಆಲೋಚಿಸಿ ಕೆಲಸ ಮಾಡುವುದಿಲ್ಲ. ಹೀಗೆ ಸುಮ್ಮನೇ ನರಳುತ್ತೀರಿ"

ಅಶೋಕರಿಗೆ ಅದರ ತಲೆಬುಡ ತಿಳಿಯಲಾಗಲಿಲ್ಲ.

× × × × ×

ಮಧುಬಾಬು ಅಪ್ರಧ್ವನಿಯಿಂದ ಅಶೋಕರನ್ನು, "ಬನ್ನಿ ಬನ್ನಿ, ನಿಮ್ಮ ರೂಮಿಗೆ ಹೋಗೋಣ. ನಮ್ಮ ಮಾತಿಗೆ ರಸ್ತೆ ಸರಿಯಾದುದಲ್ಲ. ಏಕಾಂತದಲ್ಲಿ ನಾವು ಕುಳಿತು ಮಾತನಾಡಬೇಕು......ಅಕ್ಕಿಯ ವಿಷಯ ಸ್ವಲ್ಪ ಆಲೋಚಿಸಿರಿ!"

"ನನ್ನ ರೂಮು ಬಹಳ ಚಿಕ್ಕದು. ಅಲ್ಲಿ ನೀವು ಕುಳಿತುಕೊಳ್ಳುವಿರಾ?"

"ನಿಮ್ಮ ರೂಮಿನ ವಿಷಯ ಇರಲಿ. ಅಕ್ಕಿ ಸಮಸ್ಯೆಯ ಮೇಲೆ ನಮ್ಮ ಬುದ್ಧಿ ಓಡುತ್ತಿರುವಾಗ ಈ ಸಣ್ಣ ವಿಷಯ ಹೇಳುತ್ತೀರಲ್ಲ? ನನ್ನ ಚಿಕ್ಕಮ್ಮ ನೆನ್ನೆತಾನೆ ಪೂರಿಯಿಂದ ಹಿಂತಿರುಗಿದಳು. ಅವಳು ಹೇಳ್ತಾಳೆ, ಜನ ಐವತ್ತು ಪೈಸೆಗೆ ಒಂದು ಕೆ.ಜಿ. ಅಕ್ಕಿ ಕೊಳ್ತಾರಂತೆ ಅಲ್ಲಿ!"

ಇಷ್ಟು ಹೊತ್ತಿಗೆ ಅವರು ತಮ್ಮಗುರಿಯನ್ನು ಮುಟ್ಟಿದ್ದರು. ಅಶೋಕರು ಬಾಗಿಲು ಬೀಗವನ್ನು ತೆಗೆದರು. ಸ್ವಿಚ್ಚನ್ನು ಹಾಕಿ ಹೇಳಿದರು, "ಇಲ್ಲಿ ನಿಮ್ಮ ಮನಸ್ಸಿಗೆ ನೆಮ್ಮದಿಯಾಗುತ್ತದೆ ಎನ್ನುವ ವಿಷಯದಲ್ಲಿ ನನಗೆ ಸಂಶಯವಿದೆ. ನನ್ನ ಹತ್ತಿರ ಒಂದೇ ಕುರ್ಚಿ ಇರೋದು".

"ಏಕೆ ಕೊರಗುತ್ತೀರಿ? ಎಲ್ಲಿಯಾದರೂ ನಾವು ನೆಮ್ಮದಿಯಾಗಿರುತ್ತೇವೆ. ಇರಲೇಬೇಕು." ಆ ಮೇಲೆ ರೂಮಿನ ಸುತ್ತಾ ಕಣ್ಣಾಡಿಸುತ್ತಾ ಹೇಳಿದರು. "ಇಲ್ಲೇ ತಾನೆ ನೀವು ವಾಸಿಸೋದು? ಅದ್ಭುತವಾದ ರೂಮು! ಇದಕ್ಕೆ ಎಷ್ಟು ಕೊಡುತ್ತೀರಿ?"

"ನೂರು ರೂಪಾಯಿಗಳು".

"ಬಹಳ ಕಡಿಮೆ. ಅದೃಷ್ಟವಶಾತ್ ನೀವು ಇಲ್ಲಿ ಹತ್ತು ವರ್ಷಗಳಿಂದ ವಾಸಿಸ್ತಾ ಇದ್ದೀರಿ. ಈಗ ಆಗಿದ್ದರೆ ಅವರು ನೂರೈವತ್ತು ರೂಪಾಯಿ ಕೇಳ್ತಾ ಇದ್ದರು. ಇರಲಿ. ಅಡಿಗೆ ಮನೆಯಿಲ್ಲವೇ?"

"ಒಂದು ಇದೆ. ನಾನು ಯಾವಾಗಲೂ ಅದನ್ನು ಉಪಯೋಗಿಸುವುದಿಲ್ಲ".

"ಎಲ್ಲಿ, ಎಲ್ಲಿದೆ? ನಾನು ನೋಡಬಹುದೇ ಅದನ್ನ?"

ಅಶೋಕರು ಅವರನ್ನು ಅಲ್ಲಿಗೆ ಕರೆದೊಯ್ದರು. 2 × 3 ಅಡಿಯ ಒಂದು ಪೆಟ್ಟಿಗೆ ಅದು, ಅದೂ ಖಾಲಿ. "ಇದು ನಮಗೆ ಅದ್ಭುತವಾಗಿದೆ, ಸಾಕು"-ಅವರು ಆಶ್ಚರ್ಯಪಟ್ಟರು. ಆ ಮೇಲೆ ಹೊರಗೆ ಇಣುಕಿ ಯಾರನ್ನೋ ಒಳಗೆ ಕರೆದರು. "ಹೆ. ಹೆ. ಈ ಕಡೆ. ಓ!" ಅಶೋಕರು ಸ್ವಲ್ಪ ಹೊತ್ತುಅಪ್ರತಿಭರಾಗಿ ದೃಷ್ಟಿಸಿದರು. ಅವರು ಆಗಂತುಕನ ವಿವರವನ್ನು ತಿಳಿಯುವ ಮೊದಲೇ ಹೊರಗಿನ ಕತ್ತಲೆಯಿಂದ ಕೊಳಕಾದ ಬಟ್ಟೆಯನ್ನು ತೊಟ್ಟ ಒಬ್ಬ ಮುಗ್ಧನಂತೆ ಕಾಣುವ ಮನುಷ್ಯ ಒಳಗೆ ಕಾಲಿಟ್ಟ. ಮತ್ತೊಬ್ಬ ತಲೆಯ ಮೇಲೆ ದಪ್ಪ ಹೊರೆ ಹೊತ್ತು ಅವನನ್ನು ಹಿಂಬಾಲಿಸಿದ. ಚಳಿರಾತ್ರಿಯಾಗಿದ್ದರೂ ಆ ಬಡ ಮನುಷ್ಯ ಬೆವರುತ್ತಿದ್ದ.

"ಕೆಳಗಿಡು, ಈ ಕಡೆ ಇಡು" ಮಧುಬಾಬು ಮೆಲುದನಿಯಲ್ಲಿ ಆಜ್ಞಾಪಿಸಿದರು. "ಶ್, ಶಬ್ದ ಮಾಡಬೇಡ, ಮೆಲ್ಲಗೆ." ಹೊರೆ, ಧೂಳಿನ ಮೋಡವನ್ನು ಎಬ್ಬಿಸಿ ದೊಪ್ಪನೆ ತಳಕ್ಕೆ ಬಿದ್ದಿತು. ಅಶೇಷರು ದಿಗ್ಭ್ರಾಂತರಾಗಿ ಅದನ್ನೇ ನೋಡುತ್ತಿದ್ದರು. ಕೊನೆಗೆ ಅಂಜಿಯೇ ಕೇಳಿದರು,

"ಇದೆಲ್ಲ ಏನು?"

"ಇನ್ನೇನು, ಅಕ್ಕಿ." ಮಧುಬಾಬು ಸಾಮಾನ್ಯ ಧ್ವನಿಯಲ್ಲಿ ಉತ್ತರಿಸಿದರು.

"ಅಕ್ಕಿ? ಆದರೆ ಅದನ್ನು ಇಲ್ಲಿ ಏಕೆ ಇಡುತ್ತಿದ್ದೀರಾ? ಅಷ್ಟು ಅಕ್ಕಿಯನ್ನು ನಾನೇನು ಮಾಡಲಿ?"

"ಹ ಹ್ಹ ಹ್ಹ! ನೋಡಿ! ಅಶೇಷಬಾಬು, ನೀವು ಯಾರನ್ನೂ ಶಾಂತಿಯಲ್ಲಿರುವುದಕ್ಕೆ ಬಿಡುವುದಿಲ್ಲವೆ? ಒಂದೇ ದಿನಕ್ಕೆ ಎಲ್ಲವನ್ನೂ ಮುಕ್ಕುವಂತೆ ಯಾರು ಬಲವಂತ ಮಾಡುತ್ತಾರೆ.? ಸ್ವಲ್ಪ ಸ್ವಲ್ಪ ನಿಧಾನವಾಗಿ ಊಟ ಮಾಡಿರಿ"

"ಆದರೆ, ನಾನು ಅಡಿಗೆ ಮಾಡಲಾರೆ. ಹೇಗೆ ಅದನ್ನು ಅಡಿಗೆ ಮಾಡುವುದು?". ಮಧುಬಾಬು ತಮ್ಮ ಈ ವಿಷಮ ಪರಿಸ್ಥಿತಿಯಲ್ಲೂ ನಗದೆ ಇರದಾದರು. "ನೀವು ಆ ತೊಂದರೆಯನ್ನು ನನ್ನ ಜೊತೆ ಹಂಚಿಕೊಳ್ಳುವಿರಿ: ನಾನು ಅಡಿಗೆ ಮಾಡುತ್ತೇನೆ. ನನ್ನ ಅಡಿಗೆಯವರು ಇದ್ದಾರೆ. ನನಗೆ ಒಂದು ಸ್ಥಳ ಮಾತ್ರ ಇಲ್ಲ. ಅದನ್ನು ನೀವು ನನಗೆ ಒದಗಿಸಿದ್ದೀರಿ. ಈ ಕಾಲದಲ್ಲಿ ಒಂದು ಹಿಡಿ ಅಕ್ಕಿಯ ಬೆಲೆ ತಿಳಿಯದೆ ಸಂತೋಷದಿಂದಿದ್ದೀರಿ. ನೀವು ಒಳ್ಳೆಯ ಕೆಲಸದಲ್ಲಿರುವುದರಿಂದ ನನಗೆ ತಿಂಗಳಿಗೆ ಐವತ್ತು ರೂಪಾಯಿ ಊಟಕ್ಕೆ ಕೊಡಲು ಒಪ್ಪುವಿರಿ, ಅಷ್ಟೆ. ನಿಮಗೆಲ್ಲ ಊಟ ಹಾಕಲು ನಾನೇನು ಮಾಡುತ್ತೇನೆಂದು ನೀವು ಹೇಗೆ ತಿಳಿದೀರಿ?"

ಅಶೇಷರು ಈ ಮಾತುಗಳನ್ನು ತಿಳಿಯಲಾರದೆ ಸುಮ್ಮನಾಗಿ ಬಿಟ್ಟರು.

"ಏಕೆ ಸುಮ್ಮನಾದಿರಿ? ಏನಾದರೂ ಹೇಳುವುದಿದ್ದರೆ ಹೇಳಿ, ಕೇಳೋಣ." ಮಧುಬಾಬು ಒತ್ತಾಯ ಮಾಡಿದರು.

"ಮಧುಬಾಬು, ನೀವು ಹೇಳಿದ್ದರಲ್ಲಿ ಒಂದು ಮಾತೂ ನನಗೆ ಅರ್ಥವಾಗಲಿಲ್ಲ. ನನಗೆ ಶಾಂತಿ ಬೇಕು. ಅದಕ್ಕಾಗಿ ನಿಮ್ಮ ಹೋಟೆಲಿನಲ್ಲಿ ನಾನು ಊಟ ಮಾಡುವುದು."

"ನಿಮ್ಮ ಆ ಶಾಂತಿಗಾಗಿಯೇ ನಾನು ತೊಂದರೆಗಳ ನರಕವನ್ನು ಅನುಭವಿಸುತ್ತಿದ್ದೇನೆ, ನಿಮಗೆ ಗೊತ್ತಿದೆಯೆ? ಅಲ್ಲದಿದ್ದರೆ ಬೇರೆ ಆಸಕ್ತಿ ನನಗೇನಿದೆ?"

ಅಕ್ಕಿಮೂಟೆಯನ್ನು ಹೊತ್ತು ತಂದವರು ಹೊರಟು ಹೋದ ಕೂಡಲೆ ಮಧುಬಾಬು ರೂಮನ್ನು ಬಿಡುವುದರಲ್ಲಿದ್ದರು. ಆದರೆ ಅಶೇಷರೇ ಅವರನ್ನು ತಡೆದು, "ನಾನು ಬಾಗಿಲನ್ನು ಹಾಕಿಕೊಳ್ಳಲೇ?" ಎಂದರು.

"ಓ, ಅಗತ್ಯವಾಗಿ. ಬೇಗ ಹಾಕಿಕೊಳ್ಳಿ. ನಿಮ್ಮ ರೂಮಿಗೆ ಬೇರೆ ಯಾರೂ ಬರುವುದಿಲ್ಲವೆಂದು ನಂಬುತ್ತೇನೆ."

"ನನ್ನ ರೂಮಿಗೆ ಯಾರು ಬರುತ್ತಾರೆಂದು ಚಿಂತಿಸುತ್ತೀರಿ? ಖಂಡಿತ ಯಾರೂ ಇಲ್ಲ."

"ಬಂಧುಗಳಿಲ್ಲವೆ?"

"ಒಬ್ಬರೂ ಇಲ್ಲ. ದೂರದವರು ನಮ್ಮೂರಿನಲ್ಲಿದ್ದಾರೆ"

"ಸ್ನೇಹಿತರು?"

"ಒಬ್ಬನೂ ಇಲ್ಲ. ನಾನು ಶಾಂತಿಯಿಂದ ಬಾಳಲು ಅಪೇಕ್ಷಿಸುವುದರಿಂದ, ಎಂದೂ ನಾನು ಸ್ನೇಹದಲ್ಲಿ ತೊಡಗುವುದಿಲ್ಲ."

"ಆಶ್ಚರ್ಯ! ಅತ್ಯಾಶ್ಚರ್ಯಕರ! ಆದರ್ಶವೆಂದು ಒಪ್ಪಬೇಕು. ಈ ಕಾಲದಲ್ಲಿ ಯಾರೂ ನಂಬಿಕೆಗೆ ಅರ್ಹರಲ್ಲ. ಪ್ರತಿಯೊಬ್ಬರೂ ತಮ್ಮ ಸ್ವಾರ್ಥವನ್ನು ಪೂರೈಸುವುದರಲ್ಲಿಯೇ ನಿರತರಾಗಿರುತ್ತಾರೆ. ಯಾರೂ ನಿಮ್ಮ ಒಳ್ಳೆಯದನ್ನು ಬಯಸುವುದಿಲ್ಲ".

ಮಧುಬಾಬು ಹೊರಟು ಹೋದ ಮೇಲೆ ಅಶೇಷರು ಪರಿಸ್ಥಿತಿಯನ್ನು ಕುರಿತು ಚಿಂತಿಸಲು ಪ್ರಯತ್ನಿಸಿದರು. ಭವಿಷ್ಯದ ಆಹಾರದ ಭರವಸೆಯೇನೋ ಇದ್ದರೂ, ರಾತ್ರಿಗೆ ತಿನ್ನುವುದಕ್ಕೆ ಏನು?

ಹಾಸಿಗೆಯ ಮೇಲೆ ಕುಳಿತು ಈ ವಿಷಯ ಆಲೋಚಿಸುತ್ತಿರುವಾಗ, ನಿದ್ದೆ ಅವರನ್ನು ಆವರಿಸುತ್ತಿದ್ದಾಗ ತಕ್ಷಣ ಯಾರೋ ಬಾಗಿಲನ್ನು ತಟ್ಟುತ್ತಿರುವಂತೆ ಅವರಿಗೆ ಅನ್ನಿಸಿತು.

"ಯಾರು ಅದು?"

× × × × ×

ಆ ದಿನ ಬೆಳಗ್ಗೆ ಪೋಲೀಸ್ ಇನ್‌ಸ್ಪೆಕ್ಟರ ಪ್ರಶ್ನೆಗಳಿಂದ ಎಚ್ಚೆತ್ತವರಾಗಿ ಅಶೇಷರು ಹಿಂದಿನ ರಾತ್ರಿ ನಡೆದುದನ್ನೆಲ್ಲ ಜ್ಞಾಪಿಸಿಕೊಂಡು.

"ನಿಮ್ಮ ಬಾಗಿಲನ್ನು ತಟ್ಟುತ್ತಿದ್ದವರು ಯಾರು?" ಇನ್‌ಸ್ಪೆಕ್ಟರು ಕೇಳಿದರು.

ಅಶೇಷ ಮುಜುಮುದಾರರಿಗೆ ಕಣ್ಣಮುಂದೆ ಗಿರ್ರನೆ ತಿರುಗುವಂತೆ ಕಾಣಿಸಿತು. ಹತ್ತು ದೀರ್ಘ ವರ್ಷಗಳ ಕಾಲ ತಮ್ಮ ಮನೆಯಿಂದ ದೂರವಾಗಿ ಕಲ್ಕತ್ತಾದಲ್ಲಿ ಜೀವಿಸುತ್ತಿದ್ದರು. ಅವರ ಆ ವರ್ಷಗಳ ನೆನಪುಗಳು, ಅನುಭವಗಳು ಕಣ್ಣು ಮುಂದೆ ಮಬ್ಬಾಗಿ ಹೊಳೆದು ಹೋದುವು. ಅವರು ಯಾವಾಗಲೂ ಈ ಕಲ್ಕತ್ತಾ ಪಟ್ಟಣದಿಂದ, ಈ ದೇಶದಿಂದ, ಈ ಜನರ ಜಗತ್ತಿನಿಂದಲೇ ಏಕಾಂಗಿಯಾಗಿದ್ದು ಬಿಟ್ಟಿದ್ದರು. ತಕ್ಷಣವೇ ಏನಾಗಿದ್ದರೆ ಜೀವನದ ಬಗ್ಗೆ ತಮ್ಮ ವರ್ತನೆಯನ್ನು ಸಮರ್ಥಿಸುವ ಸ್ಥಿತಿಯಲ್ಲಿರಲಿಲ್ಲ. ಈಗ ಅವರಿಗೆ ಅದನ್ನು ಯೋಚಿಸಲು ಕಾಲಬೇಕು, ತಮ್ಮಲ್ಲೇ ತಾವು ಆಳಕ್ಕೆ ಇಳಿದು ಚಿಂತಿಸಲು ಕಾಲ ಬೇಕು.

ತಮ್ಮ ಹಿರಿಯ ಸಹೋದ್ಯೋಗಿ ಬನಮಾಲಿಬಾಬು ಅವರು ಹೊಸ ಬಂಗಾಳಿ ಪುಸ್ತಕ ಒಂದನ್ನು ಆಫೀಸಿಗೆ ಆಗಾಗ್ಗೆ ತರುತ್ತಿದ್ದರು. ರಕ್ಷಾಪತ್ರಗಳು ಮಾಸಲು ಕೆಂಪು ಅಥವಾ ಬೂದು ಬಣ್ಣದವು. ಬನಮಾಲಿಬಾಬು ಒಂದು ಸಾರಿ ಆ ಪುಸ್ತಕದ ಆಳಕ್ಕೆ ಧುಮುಕಿದರೆಂದರೆ ತಮ್ಮ ಸುತ್ತಣ ಜಗತ್ತಿನ ಸಂಬಂಧವನ್ನೇ ಕಳಚಿಕೊಳ್ಳುತ್ತಿದ್ದರು. ಅಶೇಷಮುಜುಮುದಾರರು ಆಫೀಸ್‌ನಲ್ಲಿ ಅತ್ಯಂತ ಕಿರಿಯ ಗುಮಾಸ್ತರಾಗಿದ್ದರಿಂದ ಬನಮಾಲಿಬಾಬು ತಮ್ಮ ಕೆಲಸವನ್ನು ಅವರ ಮೇಲೆ ಹಾಕಿ ಪುಸ್ತಕದಲ್ಲಿ ಮಗ್ನರಾಗುತ್ತಿದ್ದರು. ಅವರು ಆಗಾಗ್ಗೆ ಸಂದೇಹದಿಂದ ಸುತ್ತಲೂ ಕಣ್ಣಾಡಿಸಿ, ತಮ್ಮನ್ನು ಯಾರೂ ಪರೀಕ್ಷಿಸುತ್ತಿಲ್ಲವೆಂಬ ಧೈರ್ಯಮಾಡಿಕೊಳ್ಳುತ್ತಿದ್ದರು.

"ಆ ಪುಸ್ತಕದಲ್ಲಿ ಏನು ಓದುತ್ತೀರಿ?" ಅಶೇಷರು ಒಂದುದಿನ ಅವರನ್ನು ಕೇಳಿದ್ದರು.

"ಇವು ಕಾದಂಬರಿಗಳು, ಮಗು, ಕಾದಂಬರಿಗಳು"

"ಕಾದಂಬರಿಗಳಲ್ಲೇನಿದೆ?"

"ಓ ದೇವರೇ! ನೀವು ಕಾದಂಬರಿಗಳನ್ನೇ ಓದಿಲ್ಲವೇ?"

"ನಾನು ಬಾಲಕನಾಗಿದ್ದಾಗ ನಮ್ಮ ತಂದೆ ಕಾದಂಬರಿಯನ್ನು ಓದದಂತೆ ಎಚ್ಚರಿಸುತ್ತಿದ್ದರು."

"ತಂದೆ ಎಚ್ಚರಿಸುತ್ತಿದ್ದರು. ನೀವೂ ಒಳ್ಳೆಯ ಹುಡುಗನಂತೆ ಕಾದಂಬರಿಯನ್ನೇ ಓದಲಿಲ್ಲ?"

"ಕಾದಂಬರಿಯಲ್ಲಿ ನೀವು ಏನು ಕಾಣುತ್ತೀರಿ, ಕೇಳಬಹುದೆ?" ಮತ್ತೆ ಅಶೇಷರು ಕೇಳಿದ್ದರು.

"ಎಷ್ಟು ಶೋಚನೀಯ! ನೀವು ಕಾದಂಬರಿಯನ್ನೇ ಓದಿಲ್ಲ. ನಾನು ಹೇಗೆ ಅದರಲ್ಲಿರುವುದನ್ನು ವಿವರಿಸಲಿ? ಕಾದಂಬರಿಗಳು ನಮ್ಮ ಸುತ್ತಣ ಜನಜೀವನವನ್ನು ಹೇಳುತ್ತವೆ."

"ಆದರೆ. ನಮ್ಮ ತಂದೆ ಹೇಳುತ್ತಿದ್ದರು, ಕಾದಂಬರಿಗಳಲ್ಲಿ ಅರ್ಥರಹಿತಗಳ ಹೊರೆಯೇ ಇರುತ್ತದೆಂದು"

"ಸರಿ, ಪ್ರೇಮವೆನ್ನುವುದು ಅರ್ಥವಿಲ್ಲದ್ದೇ?"

ಅಶೇಷರು ಪ್ರಶ್ನೆಯಿಂದ ಆ ದಿನ ಕಂಗಾಲಾಗಿ ಹೋಗಿದ್ದರು. ಅವರ ದೃಷ್ಟಿಯಲ್ಲಿ ಅದಕ್ಕೆ ಅಸ್ತಿತ್ವವೇ ಇಲ್ಲ. ಅರ್ಥರಹಿತವೋ ಒಳ್ಳೆಯದೋ ಹೇಗೆ ತಾನೆ ನಿರ್ಧರಿಸುವುದು?

ಪ್ರೇಮವನ್ನು ನಾವು ಎಲ್ಲಿ ಕಾಣಬಹುದು?"

ಬನಮಾಲಿಬಾಬುವಿಗೆ ಅದು ನುಂಗಲಾರದ್ದಾಯಿತು. ಚಕಿತರಾಗಿ ಅವರು ಉತ್ತರಿಸಿದರು.

"ಹಾ! ಎಲ್ಲಿಯೇ, ಭೂಮಿಯ ಮೇಲೆ ಪ್ರೇಮವನ್ನು ಕಾಣಲಾರಿರ, ತರುಣರೇ? ಮನೆಯಲ್ಲಿ, ರಸ್ತೆಯಲ್ಲಿ, ಗಂಗಾನದಿಯ ದಡದಲ್ಲಿ, ಪಾರ್ಕುಗಳಲ್ಲಿ, ಸರೋವರಗಳ ಸುತ್ತ, ಹೂತೋಟಗಳಲ್ಲಿ, ಗಾಂಧಿ 'ಘಾಟ್‌ಗಳಲ್ಲಿ, ಎಲ್ಲೆಲ್ಲಿಯೂ! ನೀವು ಯಾವಾಗಲೂ ದೃಷ್ಟಿಸಿಯೇ ಇಲ್ಲವೇ?"

ಅಶೋಕರು ಯಾವುದನ್ನೂ ದೃಷ್ಟಿಸಲು ಯಾವಾಗಲೂ ಆಲೋಚಿಸಲೇ ಇಲ್ಲ.

"ನಿಜವಾಗಿ ನಾನು ಎಲ್ಲಿಗೂ ಹೋಗುವುದೇ ಇಲ್ಲ" ಇನ್ನೂ ವಿವರಿಸಲು ಪ್ರಯತ್ನಿಸಿದರು.

"ಹೋಗುವುದಿಲ್ಲವೆಂದರೇನು? ಆಫೀಸ್‌ಗೆ ಬರುವಾಗ ಬಸ್‌ನ ಒಳಗಡೆ ಏನು ಮಾಡುತ್ತಿರುತ್ತೀರಿ? ಕಣ್ಣು ಮುಚ್ಚಿಕೊಂಡೇ ಚಲಿಸುತ್ತೀರಾ? ಚಲನ ಚಿತ್ರಗಳನ್ನು ನೋಡಿಲ್ಲವೆ? ಒಂದು ಒಳ್ಳೆಯ ಚಿತ್ರವನ್ನು ನೋಡಲು ಜನರು ಗಂಟೆಗಟ್ಟಲೆ ಸಾಲಾಗಿ ನಿಲ್ಲುವುದನ್ನು ನೀವು ನೋಡಿಲ್ಲವೆ?"

ಅಶೋಕರು ಉತ್ತರಿಸಿದ್ದರು, "ನನ್ನ ಮನೆ ಮತ್ತು ಆಫೀಸುಗಳ ಹೊರತು ಎಲ್ಲಿರುವುದಕ್ಕೂ ನನಗೆ ಇಷ್ಟವಿಲ್ಲ."

"ಏಕೆ? ಏಕೆ ಇಲ್ಲ? ನಿಮ್ಮ ತಂದೆ ಅದನ್ನು ನಿಷೇಧಿಸಿದ್ದಾರೊ?"

"ಹಾಗೇನಿಲ್ಲ, ಶಾಂತಿಯಿಂದ ಬಾಳಬೇಕೆಂದು ನಾನು ಇಷ್ಟಪಡುವುದರಿಂದ ಹೋಗುವುದಿಲ್ಲ". ಬನಮಾಲಿಬಾಬು ತಮ್ಮ ತುಟಿಗಳನ್ನು ಮುದುಡಿಕೊಂಡಿದ್ದರು.

"ರಂಗಮಂದಿರ, ಸಿನಿಮಾಗಳಲ್ಲಲ್ಲದೆ ಇನ್ನೆಲ್ಲಿ ಶಾಂತಿಯನ್ನು ಕಾಣಬಲ್ಲಿರಿ? ಅವುಗಳು ಈ ಉದ್ದೇಶಕ್ಕಾಗಿಯೇ ಮಾಡಲ್ಪಟ್ಟಿವೆ. ನೀವು ಜೀವನವನ್ನು ಸವಿಯದಿದ್ದರೆ ಅದು ಇರುವುದರ ಉದ್ದೇಶವೇನು? ದೇವರು ನಿಮ್ಮನ್ನು ಸೃಷ್ಟಿಸಿದ್ದಾನೆ. ನೀವೂ ಕೂಡ ಕೆಲವನ್ನು ನಿಮಗಾಗಿಯೇ ಸೃಷ್ಟಿಸಿಕೊಳ್ಳಬೇಕಾಗುತ್ತದೆ, ತರುಣರೇ! ಮದುವೆಯಾಗಿರಿ, ವೃದ್ಧಿಯಾಗಿರಿ, ಸುಖಾಸನದಲ್ಲಿ ಕುಳಿತು ನಿಮಗೆ ಇಷ್ಟವಿದ್ದಂತೆ ನಿಮ್ಮ ಪ್ರಪಂಚವನ್ನು ನಿರ್ದೇಶಿಸುತ್ತಾ ಹೋಗಿರಿ. ದುಡಿಯಿರಿ, ಬ್ಯಾಂಕ್ ಲೆಕ್ಕವನ್ನು ಹೆಚ್ಚು ಮಾಡಿರಿ, ಆ ಮೇಲೆ ನಿಮಗೆ ಜೀವನದಲ್ಲಿ ಇನ್ನೇನು ಬೇಕು? ನೀವೇ ನೋಡಿ, ಸೃಷ್ಟಿಕರ್ತನಿಗೂ ಸೃಷ್ಟಿಮಾಡುವ ನಿಮಗೂ ಏನೂ ವ್ಯತ್ಯಾಸವೇ ಇರುವುದಿಲ್ಲ! ಈ ಜಗತ್ತಿನಲ್ಲಿ ಜೀವಿಸುವುದು ಎಷ್ಟು ಒಳ್ಳೆಯದೆಂದು, ಆನಂದವೆಂದು ನೀವು ತಿಳಿಯುತ್ತೀರಿ."

× × × × ×

ಅಶೋಕರು ಈ ಮಾತುಗಳನ್ನು ಕುರಿತು ಎಂದೂ ಆಲೋಚಿಸಿಯೇ ಇರಲಿಲ್ಲ. ಆದ್ದರಿಂದಲೇ ಬನಮಾಲಿಬಾಬುವಿನ ಜೊತೆ ಚೆನ್ನಾಗಿರಲಿಲ್ಲ. ನಿಜವಾಗಿ ಯಾರ ಜೊತೆಯೂ ಇಲ್ಲ. ಬನಮಾಲಿಬಾಬುವನ್ನು ಬಿಟ್ಟು ಅಲ್ಲಿ ಅನೇಕ ಜನ ಬಾಬುಗಳು, ಸಾಹೇಬ್‌ಗಳು, ಬುರ್ರಾಸಾಹೇಬ್‌ಗಳು ಇದ್ದರು. ಆಫೀಸು ಒಂದು ರೀತಿಯಲ್ಲಿ ಇಡೀ ಜಗತ್ತಿನ ಒಂದು ಗೋರಿಯಂತಿತ್ತು. ಏಕೆಂದರೆ, ಈ ಜಗತ್ತಿನಲ್ಲಿ ಏನಿದೆ. ಕೆಲವು ಜನ ಸಹೋದ್ಯೋಗಿಗಳು, ಆಳುಗಳು, ಬಂದಿಕಾರರು, ಹಣ ಇಟ್ಟುಕೊಳ್ಳುವವರು, ಮ್ಯಾನೇಜರರು, ಜನರಲ್ ಮ್ಯಾನೇಜರರು ತಾನೆ? ಮೇಲಧಿಕಾರಿಯನ್ನು ಸಾಮಾನ್ಯವಾಗಿ ಆಫೀಸ್‌ನಲ್ಲಿ ಕಾಣುವಂತೆಯೇ ಇಲ್ಲ. ಅವನು ತೆರೆಯ ಹಿಂದೆಯೇ ಎಲ್ಲವನ್ನೂ ಚಲಿಸುತ್ತಾನೆ. ಮುಂದಿನ ದಿನ ಏನಾಗುತ್ತದೆಂದು ಯಾರೂ ತಿಳಿಯರು. ಮೇಲಧಿಕಾರಿ ಕೆಲವರಿಗೆ ದಂಡ ವಿಧಿಸುತ್ತಾನೆ ; ಕೆಲವರಿಗೆ ಬಡ್ತಿಕೊಡುತ್ತಾನೆ. ಮತ್ತೆ ಕೆಲವರನ್ನು ಹಿಂದಕ್ಕೆ ಹಾಕುತ್ತಾನೆ. ಕೆಲವರನ್ನು ನೇಮಿಸಿಕೊಳ್ಳುತ್ತಾನೆ ; ಹಲವರನ್ನು ತೆಗೆದು ಹಾಕುತ್ತಾನೆ.

ಅಶೋಕ ಮುಜುಮದಾರರು ಎಂದೂ ಅಪ್ರಯೋಜಕ ಚಿಂತನೆಗಳಲ್ಲಿ ತೊಡಗುತ್ತಿರಲಿಲ್ಲ. ಅವರು ಯಾವಾಗಲೂ ಗುಂಪಿನಿಂದ, ಜವಾಬ್ದಾರಿಗಳಿಂದ, ಹೆದರಿಕೆ ಮತ್ತು ಎಚ್ಚರಿಕೆಗಳಿಂದ ದೂರವಿರುತ್ತಿದ್ದರು. ಮಧುಬಾಬುವಿನ ಹೋಟೆಲಿನಲ್ಲಿ ನಿರಾತಂಕವಾದ ನೆಮ್ಮದಿಯಿತ್ತು. ಕೆಳಮಹಡಿಯ ಮೂಲೆಯಲ್ಲಿದ್ದ ತನ್ನ ರೂಮಿನ ಮಂದ ಏಕಾಂತದಲ್ಲಿ ಅವರು ತಮ್ಮ ಜೀವನದ ಪೂರ್ಣತೆಯನ್ನು ಕಂಡುಕೊಂಡಿದ್ದರು. ಭಯವೆಂಬುದು ಕೆಡಕೆನಿಸ್ಟೇ ವರವೂ ಹೌದು. ಭಯಕ್ಕೆ ವಂದನೆ! ಅವರು ವ್ಯವಸ್ಥಿತ ಜೀವನದಲ್ಲಿ ಹಗುರವಾಗಿ ತೇಲುತ್ತಿದ್ದರು.

ಮಧುಬಾಬು ತಮ್ಮ ಹೋಟೆಲಿನ ದ್ವಾರದಲ್ಲಿ ಹಣದ ಪೆಟ್ಟಿಗೆಯನ್ನಿಟ್ಟುಕೊಂಡು ಕುಳಿತುಕೊಳ್ಳುತ್ತಿದ್ದರು. ನಾಣ್ಯ, ನೋಟುಗಳನ್ನು ಬಹು ಎಚ್ಚರಿಕೆಯಿಂದ ಎಣಿಸುತ್ತಾ ಕೂತಿರುವ ಅವರನ್ನು ನಾವು ಯಾವಾಗಲೂ ಕಾಣಬಹುದು. -ತಮ್ಮ ಕೆಲಸದಲ್ಲಿ ಮಗ್ನರಾಗಿದ್ದರೂ ತಮ್ಮ ಸುತ್ತ ಏನು ನಡೆಯುತ್ತಿದೆಯೆಂಬುದನ್ನು ಅವರು ತಿಳಿಯಬಲ್ಲರು.

ಆಗಾಗ್ಗೆ ಅವರು ವಿಚಾರಿಸುತ್ತಾರೆ, "ಹೇ, ಬೊಂಚೆ, ಈ ದಿನ ಅಶೇಷಬಾಬು ಮಧ್ಯಾಹ್ನದ ಊಟಕ್ಕೆ ಬರಲಿಲ್ಲವೇ?" ಅವರ ಪ್ರಮುಖ ಅಡಿಗೆಯವನಾದ ಬೊಂಚನು ಉತ್ತರಿಸುತ್ತಾನೆ."ಹೌದು, ಬಾಬು, ಅವರು ಬಂದಿದ್ದರು."

"ನಿಜ ಹೇಳುತ್ತಿದ್ದೀಯಾ ತಾನೆ? ಯಾವಾಗ ಬಂದಿದ್ದರು? ಅವರನ್ನು ನಾನು ಹೇಗೆ ಕಾಣಲಿಲ್ಲ?"

ಅಶೇಷರು ಅಂತಹ ವ್ಯಕ್ತಿಯಾಗಿದ್ದರು. ಎಲ್ಲಿಯೂ ಅವರು ಅಗೋಚರರು. ಸಾಧ್ಯವಾದಷ್ಟು ಮಟ್ಟಿಗೂ ಅವರು ಪ್ರಜ್ಞಾಪೂರ್ವಕವಾಗಿ, ಪ್ರಯತ್ನದಿಂದ ಅಗೋಚರವಾಗಿ ಹೋಗುತ್ತಿದ್ದರು. ಅವರು ಒಂಟಿಯಾಗಿರುವುದನ್ನೇ ಬಯಸುತ್ತಿದ್ದರು. ಕಾಣಿಸಿಕೊಳ್ಳದೆ ಚಲಿಸುವ ಅಂತಹ ಜನರು ಎಷ್ಟು ಮಂದಿಯಿದ್ದಾರೆ? ಅವರ ಹೋಗುವಿಕೆ ಅಥವಾ ಬರುವಿಕೆ ಯಾರಿಗೂ ಗೊತ್ತಿಲ್ಲ – ಹುಳುಗಳು ಬದುಕಿ ಅದೃಶ್ಯವಾಗುವ ರೀತಿಯಲ್ಲಿ. ಎಲ್ಲವೂ ಅದೇ ರೀತಿಯಲ್ಲಿ. ಅಂತಹ ಇರುವಿಕೆಯಲ್ಲಿ ಚಟುವಟಿಕೆಯಿಲ್ಲ; ಉಸಿರಾಡುವಿಕೆಯಿಲ್ಲ. ಸಂಪೂರ್ಣ ಸುರಕ್ಷತತೆ, ಪ್ರತ್ಯೇಕತೆ ಹಾಗೂ ಒಳಸೇರುವಿಕೆ.

ಕೆಲವು ದಿನಗಳಿಂದ ಅಶೇಷರು ಒಂದು ರೀತಿಯಲ್ಲಿ ಕ್ಲೇಶವನ್ನು ಅನುಭವಿಸುತ್ತಿದ್ದರು. ಆಫೀಸಿನಿಂದ ಮನೆಗೆ ಬರುವಾಗ ಬ್ಲ್ಯಾಕ್ – ಔಟ್ ಸಂಜೆಗಳು ಅವರಲ್ಲಿ ಭಯಮಿಶ್ರಿತ ಭಾವನೆಗಳನ್ನು ಹುಟ್ಟಿಸುತ್ತಿದ್ದವು. ಜನರು ಯಾವುದೋ ಯುದ್ಧ ವಿಚಾರ ಮಾತಾಡಿಕೊಳ್ಳುತ್ತಿದ್ದರು. ಅವರ ಆಲೋಚನಾ ಸರಣಿ ಓಡುತ್ತಿತ್ತು. ಪಾಕಿಸ್ತಾನದ ವಿರುದ್ಧ ಯುದ್ಧವಿರಬೇಕೆಂದು ಕಾಣುತ್ತದೆ, ಇರಬಹುದು ………ಏನು ಸಾರ್……ಯಾವುದಾದರೂ ಹೊಸ ಸಮಾಚಾರ?……ಏನೂ ಇಲ್ಲ. ನಾನು ಹೇಗೆ ಯಾವುದಾದರೂ ಅಭಿಪ್ರಾಯ ಹೊಂದಲಿ?……ಏಕೆ, ಸಮಾಚಾರ ಪತ್ರಿಕೆಗಳನ್ನು ನೀವು ಓದುತ್ತಿಲ್ಲವೇ?……ಇಲ್ಲ……ಅಥವಾ ನೀವು ರೇಡಿಯೋ ಕೇಳುವುದಿಲ್ಲವೇ?……ಇಲ್ಲ…… ಸಮಾಚಾರ ಪತ್ರಿಕೆಗಳನ್ನು ಓದುವುದಾಗಲಿ ರೇಡಿಯೋ ಕೇಳುವುದಾಗಲಿ ಕ್ರಾಂತಿಯಿಂದ ನನ್ನನ್ನು ರಕ್ಷಿಸಿಕೊಳ್ಳಲು ಸಹಾಯ ಮಾಡಬಲ್ಲುವೆ? ಏನು ಮಾಡಿದರೂ ಅನಿವಾರ್ಯವಾದುದು ಆಗಲೇ ಬೇಕು. ಪತ್ರಿಕೆಯನ್ನು ಓದಿ ಪಟ್ಟಣ ನಾಶವಾಡುವ ಬಾಂಬನ್ನು ತಡೆಯಬಲ್ಲೆಯಾ?

ಅಶೇಷರಿಗೆ ಮಧುಬಾಬುವಿನ ಹೋಟೆಲು ಕೂಡ ಮುಚ್ಚುವುದೆಂದು ಅರಿವಾಗಲೇ ಇಲ್ಲ. ಯಾವುದೇ ಕಲ್ಪನೆಯ ಕಿಡಿಯಿಂದಲೂ ಮಧುಬಾಬುವಿನ ಹೋಟೆಲಿಗೂ ಮತ್ತು ಪಾಕಿಸ್ತಾನದ ಜೊತೆ ಯುದ್ಧದ ಸಾಧ್ಯತೆಗೂ ಸಕಾರಣ ಸಂಬಂಧವನ್ನು ಸ್ವಲ್ಪವೂ ಕಂಡುಕೊಳ್ಳದವರಾದರು. ಹಿಂದಿನ ರಾತ್ರಿ ಪೇಟೆಯ ಕಡೆಗೆ ಹೋಗುತ್ತಿದ್ದಾಗ ತಾನೂ ಈ ಯುದ್ಧದ ಸನ್ನಿವೇಶದಲ್ಲಿ ಸಿಲುಕುವೆನೆಂದು ಅವರಿಗೆ ಅನ್ನಿಸಲೇ ಇಲ್ಲ. ಬ್ಲ್ಯಾಕ್–ಔಟ್ ಮತ್ತು ಹೊರಗಿನ ಭಯಗಳು ಅವರನ್ನೂ ವೈಯಕ್ತಿಕವಾಗಿ ಒಟ್ಟಾಗಿ ಮುತ್ತಿದವು.

ಅವರೂ ಅವರು ಸ್ವತಂತ್ರ ವ್ಯಕ್ತಿಗಳು. ಜನರ ಮಧ್ಯದಲ್ಲೇ ವಾಸಿಸಿದರೂ ಅವರ ಜೀವನದಲ್ಲಿ ಹೊಂದಿಕೊಳ್ಳದ ಉದ್ದಾಮ ಸ್ವತಂತ್ರ ವ್ಯಕ್ತಿ. ಅವರಿಗೆ ಯಾವ ದಾಕ್ಷಿಣ್ಯಗಳೂ, ಜವಾಬ್ದಾರಿಗಳೂ ಇರಲಿಲ್ಲ. ಅವರ ಮೇಲೆ ಯಾವ ಜವಾಬ್ದಾರಿಯನ್ನೂ ಹಾಕದ ಜೀವನ ಅವರಿಂದ ಯಾವ ಜವಾಬ್ದಾರಿಯನ್ನು ಬಯಸುವಂತಿರಲಿಲ್ಲ. ಸಾಮಾಜಿಕ ಮನುಷ್ಯ ಪ್ರಾರಂಭದಲ್ಲಿ ಶಿಶುವಿನಂತಿರಬೇಕು. ಅದು ಶಿಶುವಿನ ಭವಿಷ್ಯದ ಬಗ್ಗೆ ಊಹೆಗಳಿಗೆ ಮಾರ್ಗ ಮಾಡುತ್ತದೆ. ಆ ಮೇಲೆ ಲಂಚ ಕೊಡುವಿಕೆ, ಪ್ರಭಾವ ಬೀರುವಿಕೆ ಮೊದಲಾದವುಗಳಿಲ್ಲದಿದ್ದರೆ ಸ್ಪರ್ಧಾಗುಂಪಿನಲ್ಲಿ ಶಿಶುವು ನಾಶವಾಗಿ ಹೋಗಬಹುದು. ಮುಂದಿನದು ಪಕ್ಷ ರಾಜಕೀಯ. ಅದಿಲ್ಲದೆ ನೀವು ಜೀವನದಲ್ಲಿ ಅನರ್ಹರಾಗುತ್ತೀರಿ. ಒಂದಲ್ಲ ಒಂದು ಪಕ್ಷಕ್ಕೆ ನೀವು ಸೇರಲೇ ಬೇಕು. ಇಲ್ಲದಿದ್ದರೆ ನೀವು ಹಿಂದುಳಿಯುವಿರಿ. ನಿಮ್ಮ ಕಡೆ ಯಾರೂ ನೋಡುವುದಿಲ್ಲ. ನೀವು ಹೊರಗಿನವರಾಗಿಯೇ ಉಳಿಯುವಿರಿ.

"ಎಂದೂ ಸತ್ಯವನ್ನು ಮುಚ್ಚಿಡಬೇಡ, ಮಗು" ಅವರ ತಂದೆ ಅನೇಕ ಸಾರಿ ಬುದ್ಧಿ ಹೇಳಿದ್ದರು, "ಏಕೆಂದರೆ, ಸತ್ಯವೇ ಯಾವಾಗಲೂ ನಿಲ್ಲುವುದು."

ಅದೃಷ್ಟವಶಾತ್ ತಮ್ಮ ತಂದೆ ತನ್ನ ಬಾಲ್ಯದಲ್ಲಿಯೇ ಸತ್ತರೆಂದು ಅಶೇಷರು ಅನೇಕ ಸಾರಿ ಯೋಚಿಸಿದ್ದಾರೆ. ಅವರ ತಂದೆ ಈ ಕೆಟ್ಟತನಗಳನ್ನೆಲ್ಲಾ ಅದೃಷ್ಟವಶಾತ್ ನೋಡಬೇಕಾಗಲಿಲ್ಲ.

"ನೀನು ದೊಡ್ಡವನಾದ ಮೇಲೆ ಏನಾಗಬೇಕೆಂದು ಬಯಸುತ್ತೀಯ, ಮಗು?" ಅವರ ತಂದೆ ಆಗಾಗ್ಗೆ ಕೇಳುತ್ತಿದ್ದರು.

ಆದರೆ ಅವರು ಆ ಪ್ರಾರಂಭದ ವಯಸ್ಸಿನಲ್ಲಿಯೇ ಅದನ್ನು ನಿರ್ಧರಿಸಲು ಸಮರ್ಥರಾಗಿರಲಿಲ್ಲ. "ನಾನು ಏನಾದರೂ ಆಗಲಿ, ಅದರಿಂದೇನು?" ಅವರು ಅಸ್ಪಷ್ಟವಾಗಿ ಆಲೋಚಿಸಿದ್ದರು. ಏನೋ ಒಂದು ಆಗುವುದರಲ್ಲಿ ಅರ್ಥವಿರಲಿಲ್ಲ. ಅವರು ಏನಾಗುತ್ತಿದ್ದರು, ವೈದ್ಯನೇ? ಎಂಜನಿಯರೇ?, ಗುಮಾಸ್ತನೇ? ಕವಿಯೇ? ಲಂಚಕೊಡದೇ ಏನೂ ಆಗಲಾರರು. ಅವರ ತಂದೆ ಮಗನ ಭವಿಷ್ಯದಲ್ಲಿ ಬಹು ಕುತೂಹಲವುಳ್ಳವರಾಗಿದ್ದರು. ಅವರ ತಂದೆಯ ಎಣಿಕೆಯಲ್ಲಿ ಅಸ್ಪಷ್ಟ ಆಶಾಕಿರಣವೂ ಇತ್ತು. ಅವರ ತಂದೆ ಬಹುಶಃ ತಮ್ಮಲ್ಲೇ ಆಲೋಚಿಸಿರಬೇಕು, "ಬ್ರಿಟಿಷರು ಭಾರತವನ್ನು ಬಿಟ್ಟಿದ್ದಾರೆ. ಭಾರತ ಕೊನೆಗೂ ಸ್ವತಂತ್ರವಾಗಿದೆ. ನೀವೆಲ್ಲರೂ ಸ್ವತಂತ್ರ ದೇಶದ ಪ್ರಜೆಗಳು. ನಾವು ಪರಕೀಯರ ಕೈಯಲ್ಲಿ ಬಹಳ ಕಾಲ ನೊಂದಿದ್ದೇವೆ. ಈಗ ನಿಮ್ಮ ಮುಂದೆ ಸಂತಸದ ದಿನಗಳಿವೆ, ನಮಗೆ ಕೊನೆಯ ಪಕ್ಷ ಅಷ್ಟೇ ತೃಪ್ತಿ. ನಿನ್ನ ನೆಮ್ಮದಿಯ ಕಾಲದಲ್ಲಿ ನಮ್ಮನ್ನು ಮರೆಯಬೇಡ. ನಿನ್ನನ್ನು ಮೇಲೆ ತರುವುದಕ್ಕಾಗಿ ಬಹು ನೊಂದಿದ್ದೇವೆ, ಮಗು. ಅಪಾರ ದುಃಖವನ್ನು ಸಹಿಸಿದ್ದೇವೆ. ನಿನಗೆ ಶಾಂತಿಯಿರಲಿ".

ಅದು ಹದಿನೆಂಟು ವರ್ಷಗಳ ಹಿಂದಿನ ವಿಷಯ, 1947ರಲ್ಲಿ.

× × × × ×

"ಆ ಮೇಲೆ ಏನಾಯಿತು?" ಪೋಲೀಸ್ ಇನ್‌ಸ್ಪೆಕ್ಟರ್ ಕೇಳಿದರು. ಅಶೇಷರು ಉತ್ತರಿಸಿದರು : "ಮಧುಬಾಬು ಹೊರಟು ಹೋದರು, ನಾನು ಸುಮ್ಮನೆ ಕುಳಿತುಕೊಂಡಿದ್ದೆ. ನಾನು ಬಹುವಾಗಿ ಹಸಿದಿದ್ದೆ. ಯಾರೋ ಬಾಗಿಲು ತಟ್ಟುತ್ತಿದ್ದಂತೆ ಅನ್ನಿಸಿತು. 'ಯಾರು ಅದು?' ನಾನು ಪ್ರಶ್ನಿಸಿದೆ. ಬಾಗಿಲು ತೆರೆದ ಮೇಲೆ ನಿಸ್ತೇಜನಾಗಿ ದೃಷ್ಟಿಸುತ್ತಿದ್ದ ಮನುಷ್ಯನೊಬ್ಬನನ್ನು ಕಂಡೆ. ನಾನು ಅವನ ಗುರುತು ಹಿಡಿದೆ. ಅದೇ ಮನುಷ್ಯ ಮಧುಬಾಬುವಿನ ಆಜ್ಞೆಯ ಮೇರೆಗೆ ಅಕ್ಕಿಯ ಚೀಲವನ್ನು ತಂದಿದ್ದವನು".

ಅಶೇಷರು ಮುಂದುವರಿಸಿದರು, "ರೆಪ್ಪೆ ಹೊಯ್ಯುತ್ತಾ ಆ ಮನುಷ್ಯ ಪಿಸುಗುಟ್ಟಿದ. 'ಆ ಅಕ್ಕಿಯ ಚೀಲಕ್ಕೆ ಎಷ್ಟು ಕೊಟ್ಟಿರಿ ಸ್ವಾಮಿ?' ನಾನು ಹೇಳಿದೆ.'ನಾನು ಕೊಂಡಿಲ್ಲ. ಅದು ಮಧುಬಾಬುವಿಗೆ ಸೇರಿದೆ. ಅದನ್ನು ಶೇಖರಿಸಲು ನಾನು ಅವರಿಗೆ ಅವಕಾಶ ಕೊಟ್ಟಿದ್ದೇನೆ' ಆ ಮನುಷ್ಯ ಸೂಚಿಸಿದ, 'ಏನಾದರೂ ಆಗಲಿ, ಅದನ್ನು ಮಾರುತ್ತೀರಾ?' ನಾನು ಸುಮ್ಮನೆ ಮೂಕನಾದೆ. 'ಅದು ಅವರ ಅಕ್ಕಿಯ ಚೀಲ, ಮಾರುವುದಕ್ಕೆ ನಾನಾರು?' ಅವನು ಒತ್ತಾಯ ಪಡಿಸಿದ. 'ನಾನು ಅದಕ್ಕೆ ನೂರೈವತ್ತು ರೂಪಾಯಿಗಳನ್ನು ಕೊಡುತ್ತೇನೆ. ದಯವಿಟ್ಟು ನನ್ನ ಕಾಣಿಕೆಯನ್ನು ಸ್ವೀಕರಿಸಲಾರಿರ?' ನಾನು ಮಾತಿಲ್ಲದವನಾದೆ. ಎಂಥ ಸೂಚನೆ! ಆದರೂ ಮನುಷ್ಯ ನಗುತ್ತಿದ್ದ. ಪುಸಲಾಯಿಸುವ ಧ್ವನಿಯಲ್ಲಿ ಅವನು ಮುಂದುವರಿದ. 'ಸ್ವಾಮಿ, ಅದಕ್ಕೇಕೆ ಭಯಗೊಂಡಂತಿದ್ದೀರಿ? ಈಗ ಇದು ರೂಢಿಯಲ್ಲಿದೆ. ಪ್ರತಿಯೊಬ್ಬರೂ ಮಾಡುತ್ತಾರೆ. ನೀವೊಬ್ಬರು ಹೊರತಾಗಲಾರಿರಿ. ಯೋಚಿಸಿ, ಸಣ್ಣದಕ್ಕೆ ನೀವು ಎಂಥ ಲಾಭ ಪಡೆಯುತ್ತೀರಿ!' ನಿರ್ದಾಕ್ಷಿಣ್ಯವಾಗಿ ನಾನು ಪ್ರತಿಭಟಿಸಿದೆ. 'ಅಂಥ ಲಾಭವನ್ನು ನಾನೇಕೆ ಸ್ವೀಕರಿಸಲಿ?' ಆ ಮನುಷ್ಯ ಅಪ್ರತಿಭನಾದಂತೆ ನಟಿಸಿದ. 'ನೀವು ವಿಚಿತ್ರ ವ್ಯಕ್ತಿಗಳು ಸ್ವಾಮಿ. ಪ್ರತಿಯೊಬ್ಬರೂ ಹಣಕ್ಕೆ ಆಸೆಪಡುವಾಗ, ಅದೇ ನಿಮ್ಮಲ್ಲಿಗೆ ಬರುವಾಗ ನೀವೇಕೆ ಸ್ವೀಕರಿಸಬಾರದು?'ನಾನು ಬಿರುಸಾಗಿ ಕೇಳಿದೆ- 'ಪ್ರತಿಯೊಬ್ಬರು ಎಂದರೆ ಅರ್ಥವೇನು?' ಅವನು ಹೇಳಿದ,-'ಪ್ರತಿಯೊಬ್ಬರೂ ಎಂದರೆ ಪ್ರತಿಯೊಬ್ಬರೂ. ನಾನೇ ಈ ಮಾರ್ಗದಲ್ಲಿ ಕಳೆದ ಹದಿನೆಂಟು ವರ್ಷಗಳಿಂದ ಇದ್ದೇನೆ. ಮತ್ತು ಪ್ರತಿಯೊಬ್ಬರೂ ಅಂಥ ಲಾಭವನ್ನು ಸ್ವೀಕರಿಸುವುದನ್ನು ಸಾಕ್ಷಾತ್ ಕಂಡಿದ್ದೇನೆ. ಸ್ವೀಕರಿಸದಿರುವ ಯಾರಾದರೂ ಒಬ್ಬನ ಹೆಸರನ್ನು ನೀವು ಹೇಳಬಲ್ಲಿರಾ?'

ನನಗೆ ತಾಳಿಕೊಳ್ಳಲು ಆಗಲಿಲ್ಲ. ನಾನು ಅವನನ್ನು ಬೈದೆ, 'ಸಾಕು ನಿನ್ನ ಅಸಂಬದ್ಧತೆ. ಈಗ ನನ್ನನ್ನು ಶಾಂತಿಯಿಂದಿರಲು ಬಿಡು.' ನಾನು ಆ ಮನುಷ್ಯನ ಮೇಲೆ ಕೋಪಗೊಂಡಿದ್ದೆ. ರಾತ್ರಿಯ ಆ ವೇಳೆಯಲ್ಲಿ, ಅದೂ ಊಟವಿಲ್ಲದೆ ಕೋಪವನ್ನು ಸಹಿಸದಾದೆ. ಆದರೆ ಆ ಮನುಷ್ಯ ಒಂದು ಅಂಗುಲವೂ ಅಲುಗಲಿಲ್ಲ. ನನ್ನನ್ನು ತಮಾಷೆ ಮಾಡಲು ಪ್ರಯತ್ನಿಸಿದ, 'ನೀವು ಏಕೆ ದಾರಿ ಬಿಟ್ಟು ಹೋಗುತ್ತೀರಿ.

ಸ್ವಾಮಿ? ಪ್ರತಿಯೊಬ್ಬರೂ ಮಾಡುವುದನ್ನು ನೀವೇಕೆ ಒಪ್ಪುವುದಿಲ್ಲ?' ಮತ್ತೆ ಒದರಿ ಕೇಳಿದೆ.' ಆ ಪ್ರತಿಯೊಬ್ಬನು ಯಾರು, ನಾನು ತಿಳಿಯಬಹುದೆ?' ಆ ಮನುಷ್ಯ ಗಂಭೀರನಾದ. 'ನಿಜವಾಗಿ ನೀವು ಅದನ್ನು ತಿಳಿಯಬಯಸುತ್ತೀರಾ? ಆದರೆ, ಯಾರಿಗೂ ಹೊರಗೆಡಹಬೇಡಿ. ದೇವರ ಆಣೆಗೂ. ಇಲ್ಲದಿದ್ದರೆ ಭಾರತದ ರಕ್ಷಣಾ ಕಾಯಿದೆಯ ಪ್ರಕಾರ ನಾನು ದಸ್ತಗಿರಿಯಾದೇನು'.

'ಈಗ ನಾನು ಮೊದಲ ಬಾರಿಗೆ ಆವೇಶಭರಿತನಾದೆ. ಅಂಥ ಮಧುರ ಇಂಗ್ಲಿಷ್ ಉಚ್ಚಾರಣೆಯನ್ನು ಕೇಳುವುದಕ್ಕಾಗಿ. ಅವನು ಸಾಮಾನ್ಯ ಹೋರುವವನಾಗಿರಲಾರ! ಅವನು ಮುಂದುವರಿದ, 'ನೂರೈವತ್ತು ರೂಪಾಯಿಗಳು ಎಂದರೆ ತಮಾಷೆಯ ವಿಷಯವಲ್ಲ. ಸ್ವಾಮಿ. ಅದೇ ನಿಮ್ಮ ಬಳಿಗೆ ಬಂದಿರುವಾಗ ನೀವೇಕೆ ಸ್ವೀಕರಿಸಬಾರದು?' ನಾನು ಮಧ್ಯದಲ್ಲೇ ತಡೆದೆನು: 'ನನ್ನನ್ನು ಶಾಂತಿಯಲ್ಲಿರಲು ಬಿಡು! ಖಂಡಿತ ಬಿಡುವೆಯಾ? ನಾನೊಬ್ಬನೇ ಇರು ವುದಕ್ಕೆ ಬಿಡು. ನಾನು ಆ 'ಪ್ರತಿಯೊಬ್ಬನೂ' ಅಲ್ಲ. ಮಧುಬಾಬು ನಾನು ಊಟ ಮಾಡುವ ಹೋಟೆಲಿನ ಮಾಲೀಕರಾದ್ದರಿಂದ. ಕೇವಲ ದಾಕ್ಷಿಣ್ಯದಿಂದ ಅಕ್ಕಿ ಇಡಲು ಅವಕಾಶ ಕೊಟ್ಟಿದ್ದೇನೆ. ಈಗ ದಯವಿಟ್ಟು ನಾನು ಶಾಂತಿಯಿಂದಿರಲು ಬಿಡು'.

ಬೇರೇನು ಮಾತುಗಳನ್ನು ನಾವು ವಿನಿಮಯ ಮಾಡಿಕೊಂಡೆವೋ. ಜ್ಞಾಪಿಸಿಕೊಳ್ಳಲಾರೆ. ಆದರೆ ಆ ಮನುಷ್ಯ ಹೊರಗೆ ಹೋಗುವ ಮೊದಲು ನನ್ನನ್ನು ಬಹುವಾಗಿ ನಿಂದಿಸಿದ. 'ನೀವು ಅದನ್ನು ಮಾರುವುದಿಲ್ಲವೆಂಬುದು ಖಂಡಿತ ತಾನೆ?' ನಾನು ಬಾಗಿಲನ್ನು ಅವನ ಮುಖದ ಎದುರು ಬಲವಾಗಿ ಮುಚ್ಚುತ್ತಾ ಉತ್ತರಿಸಿದೆ. 'ಇಲ್ಲ. ಖಂಡಿತ ನಾನು ಮಾರುವುದಿಲ್ಲ'. ಆ ಮನುಷ್ಯ ಹೊರಗಿನಿಂದ ಕೂಗಿ ಹೇಳುತ್ತಿದ್ದ. 'ನೀವು ಅಕ್ಕಿಯನ್ನು ಮಾರುತ್ತೀರೋ ಇಲ್ಲವೋ ನೋಡುತ್ತೇನೆ! ಆಹಾ! ಎಂಥಾ ಸಾಧು! ಇಂಥ ಅನೇಕ ಸಾಧುಗಳನ್ನು ನೋಡಿದ್ದೇನೆ. ನನಗೆ ಚೆನ್ನಾಗಿ ಗೊತ್ತು, ಈ.........ಮಕ್ಕಳು'. ನಾನು ಸ್ವಲ್ಪವೂ ಅವನ ಬೊಗಳಿಕೆಗೆ ಗಮನ ಕೊಡದೆ ಹಾಸಿಗೆಗೆ ಹೋದೆ. ಆ ಮೇಲೆ. ಈಗ ನೀವು ನಿದ್ದೆಯಿಂದ ಎಚ್ಚರಿಸಿದುದನ್ನು ಕಂಡೆ. ನಂಬಿರಿ, ನಾನು ಹರೀಶ್ ಸರ್ಕಾರ್ ಅಲ್ಲ. ನಾನು ಸ್ಯಾಕ್ಸನ್ ಮತ್ತು ಜಕೋಬ್ ಕಂಪೆನಿಯಲ್ಲಿ ಕೆಲಸ ಮಾಡುವ ಒಬ್ಬ ಡಿಸ್ಪ್ಯಾಚ್ ಕ್ಲರ್ಕ್. ಆಫೀಸಿನಲ್ಲಿ ವಿಚಾರಿಸಿಯಾಗಲಿ. ಪ್ರತಿ ತಿಂಗಳೂ ನಮ್ಮ ಮನೆಯ ಮಾಲೀಕ ಕೊಡುವ ರಶೀದಿಗಳನ್ನು ಪರೀಕ್ಷಿಸಿಯಾಗಲಿ. ಮಧುಬಾಬು ಹೋಟೆಲಿನಲ್ಲಿ ನನ್ನ ಲೆಕ್ಕದ ಪುಸ್ತಕವನ್ನು ನೋಡಿಯಾಗಲಿ ನೀವು ದೃಢೀಕರಿಸಿಕೊಳ್ಳಬಹುದು. ಎಲ್ಲ ಕಡೆಯೂ ಅಶೇಷಮುಜಮುದಾರ್ ಎಂದು ನನ್ನ ಹೆಸರನ್ನು ಬರೆದಿರುವುದನ್ನು ಕಾಣಬಹುದು. ನಾನು ಜೀವನದಲ್ಲಿ ಎಂದೂ ಹರೀಶ್ ಸರ್ಕಾರ್ ಆಗಿರಲಿಲ್ಲ.'"

"ಅದನ್ನು ನೀವು ಮ್ಯಾಜಿಸ್ಟ್ರೇಟರ ಮುಂದೆ ಸಾಧಿಸಿರಿ". ಮಧ್ಯೆ ತಡೆದು ಪೋಲೀಸ್ ಇನ್ ಸ್ಪೆಕ್ಟರ್ ಹೇಳಿದರು, "ಈಗ ನೀವು ಲಾಕಪ್ಪಿಗೆ ಬನ್ನಿ."

× × × × ×

ಆ ಮೇಲೆ ಒಂದು ದಿನ ಬೇರೆ ಭೂಮಿಯಲ್ಲಿ, ಬೇರೊಂದು ಲೋಕದಲ್ಲಿ ಪ್ರತಿಸಂಘಟನೆಯಾಯಿತು. ಅದನ್ನು ಸ್ವರ್ಗವೆಂದು ಕರೆದರೆ ಸ್ವರ್ಗ; ನರಕವೆಂದರೆ ನರಕ. ನಾಕ ನರಕಗಳು ಕಲ್ಪನೆಯಲ್ಲಿ ಮಾತ್ರ ಇವೆ ಎಂದು ನೀವು ಭಾವಿಸುವುದಾದರೆ ಅದು ಅಶೇಷ ಮುಜಮುದಾರರಿಗೆ ಏನೂ ಪರಿಣಾಮ ಮಾಡಲಾರದು. ಅಶೇಷ ಮುಜಮುದಾರರು ಈ ಜಗತ್ತಿನಲ್ಲಿ ಮುಗ್ಧ ಪ್ರಜೆ; ಶಾಂತಿಯುತವಾಗಿ ಬದುಕ ಬಯಸಿದವರು – ಭೂಮಿಯ ದೂರದ ಮೂಲೆಯೊಂದರಲ್ಲಿ ಮುದುಡಿ. ಅವರು ಯಾವ ವಿಷಯದಲ್ಲಿಯೂ ಜಗಳವಾಡುವುದಿಲ್ಲ. ಬೆಳಗ್ಗೆ ಅವರು ಕಾಲಕ್ಕೆ ಸರಿಯಾಗಿ ತಮ್ಮ ಆಫೀಸಿಗೆ ಪ್ರವೇಶಿಸುತ್ತಾರೆ; ಸಾಯಂಕಾಲದಲ್ಲಿ ನೇರವಾಗಿ ತಮ್ಮ ಗೂಡಿಗೆ ಹಿಂತಿರುಗುತ್ತಾರೆ. ಎಲ್ಲಾ ಕಣ್ಣುಗಳಿಂದ ಮರೆಯಾಗಿ ಅವರು ಶಾಂತಿಯನ್ನು ಅನುಭವಿಸ ಬಯಸುತ್ತಾರೆ. ಎಲ್ಲಾ ಅಶಾಂತಿ ಮತ್ತು ಗೊಂದಲಗಳಿಗೆ ಹೆದರಿ ಅವರು ಮೌನವಾಗಿ ಬಾಳಲು ಬಯಸುತ್ತಾರೆ. ಅವರು ತಮ್ಮ ತೊಂದರೆಗಳನ್ನು ಸಾರಿ ಹೇಳಿಕೊಳ್ಳುವುದಿಲ್ಲ. ಅವರ ಪ್ರಾರ್ಥನೆಯೆಂದರೆ, "ನಾನು ಬದುಕಿದ್ದೇನೆ, ಸರಿ. ಆದರೆ ನಿನ್ನ ಬದುಕುವಿಕೆಯ ಆಧಾರದ ಮೇಲಲ್ಲ. ನಾನೆಂದಿಗೂ ನಿನ್ನ ಮಾರ್ಗದಲ್ಲಿ ಅಡ್ಡ ನಿಲ್ಲಲಾರೆ. ನಿಮ್ಮ ಯಾರ ಆಸೆಯ ಮಾರ್ಗದಲ್ಲೂ

ಕೂಡ, ದಯವಿಟ್ಟು ಗಮನಿಸಿ. ದಯವಿಟ್ಟು ನೀವೂ ಕೂಡ ಬದುಕಿ, ಆದರೆ ಕರುಣೆಯಿಟ್ಟು ನನ್ನ ಬದುಕಿಗೆ ಅಡ್ಡವಾಗದಿರಿ".

ಆದರೂ ಎಂಥ ಪರಿಳಿತ ಅಶೇಷ ಮುಜಮದಾರರ ಮೃದು ಪ್ರಪಂಚದಲ್ಲಿ! ಅಶೇಷ್ ಇಡೀ ರಾತ್ರಿಯನ್ನು ಒಂದು ಕತ್ತಲೆಯ ಕೋಣೆಯಲ್ಲಿ ಕಳೆದರು. ಹುಟ್ಟು ಸಾವು ಮತ್ತು ಜೀವನ, ಭೂತ, ವರ್ತಮಾನ ಮತ್ತು ಭವಿಷ್ಯತ್ತು ಎಲ್ಲವೂ ತಮ್ಮ ಅರ್ಥಗಳನ್ನು ಕಳೆದುಕೊಂಡಂತೆ ಅವರಿಗೆ ಕಂಡಿತು. ಅವರ ದೃಷ್ಟಿಯಲ್ಲಿ ಎಲ್ಲವೂ ಶೂನ್ಯ; ಸಂತೋಷವೂ ಇಲ್ಲ; ದುಃಖವೂ ಇಲ್ಲ. ಸಾವಿರಾರು ಶತಮಾನ ಗಳಿಂದ ಭೂಮಿಯು ಸುತ್ತುತ್ತಿರುವುದು ಅವರಿಗೆ ಸಾಮಾನ್ಯವಾಗಿ ಕಂಡಿತು. ತಮಗೆ ತಾವೇ ಯೋಚಿಸಿದರು. "ನೀವೆಲ್ಲ ನನಗೆ ಏನನ್ನು ಹೇಳಿಕೊಟ್ಟರೂ ಅದನ್ನು ಚಾಚೂ ತಪ್ಪದೆ ಅನುಸರಿಸುತ್ತಿದ್ದೇನೆ. ನಾನು ಸತ್ಯವಾಗಿ ನಡೆದಿದ್ದೇನೆ; ಸತ್ಯಮಾರ್ಗದಲ್ಲಿ ವರ್ತಿಸಿದ್ದೇನೆ; ಸತ್ಯವಂತ ಬದುಕನ್ನು ಬದುಕಿದ್ದೇನೆ. ಆದರೂ ನನ್ನ ಪಾಡಿಗೆ ನನ್ನನ್ನು ಬಿಡಲಾರಿರಿ. ಇನ್ನೂ ನನ್ನ ಬದುಕನ್ನು ನೀವೆಲ್ಲರೂ ತೊಂದರೆ ಪಡಿಸಬೇಕಾಗಿದೆ, ಏನೂ ಕಾರಣವಿಲ್ಲದೆ. ಏಕೆ? ನಾನು 'ಅಮೃತಸ್ಯ ಪುತ್ರ'ನಾಗಿದ್ದರೆ, – ಆಗಿದೆ, ಸಾಕಷ್ಟು ಆಗಿದೆ, – ಆ ದೇವತೆ ನನ್ನ ಪೂಜೆಗೆ ಅರ್ಹವಲ್ಲ. ಓ, ಏಕೆ ನೀವು ನೋಯಬೇಕು ಜಗತ್ತಿನಲ್ಲಿ?– ನನ್ನನ್ನು ನೋಯಿಸಬೇಕು? ನಾನು ಹರೀಶ್ ಸರ್ಕಾರ್ ಅಲ್ಲವೆಂದು ಎಷ್ಟು ಸಾರಿ ನಿಮಗೆ ಹೇಳಲಿ? ನಾನಲ್ಲವೆಂದು? ನಾನು ಸಾಮಾನ್ಯ ಅಶೇಷ ಮುಜಮದಾರ್. ನಾನು ಹರೀಶ್ ಸರ್ಕಾರ್ ಅವರನ್ನು ಕಾಣೆ. ಆದರೂ ನೀವು ಏಕೆ ನನ್ನನ್ನು ಹಗಲು ರಾತ್ರಿ ಪೀಡಿಸಬೇಕು? ಇಷ್ಟು ದಿನಗಳೂ ನನ್ನನ್ನು ಮರುಳುಗೊಳಿಸುತ್ತಿದ್ದಿರಾ, ಹಾಗಾದರೆ?ಹಾಗಾದರೆ ನೀವು ಕಲಿಸಿದ್ದೆಲ್ಲ ಒಂದು ದೊಡ್ಡ ಸಟೆಯೇ?"

"ಇನ್ನೂ ಬಿಡುಗಡೆಗೆ ಅವಕಾಶವಿದೆ". ಇನ್‌ಸ್ಪೆಕ್ಟರ್ ಎಚ್ಚರಿಸಿದರು,

"ನಿಜವನ್ನು ಹೇಳಿರಿ"

"ನಾನು ಹೇಳುತ್ತಿರುವುದೇ ನಿಜವಾಗಿದೆ".

"ಸರಿ ಹಾಗಾದರೆ, ನಾವು ನಿಸ್ಸಹಾಯಕರು. ನಿಮ್ಮನ್ನು ಬಿಡುಗಡೆ ಮಾಡಲು ಸಾಧ್ಯವಿಲ್ಲ."

"ಆದರೆ, ನನ್ನ ಮೇಲಿನ ಅಪರಾಧವೇನು?"

"ನಾನು ಅದನ್ನು ಹೊರಗೆಡಹುವುದಿಲ್ಲ. ನೀವು ಅದನ್ನು ಮ್ಯಾಜಿಸ್ಟ್ರೇಟರಿಂದ ಕೇಳುವಿರಿ."

× × × × ×

ಹೌದು, ಈ ಪ್ರಪಂಚವೇ ಒಂದು ದೊಡ್ಡ ಸೆರೆಮನೆ. ಈ ವಿಶಾಲವಾದ ಸೆರೆಮನೆಯಲ್ಲಿ ದಿನ ದಿನವೂ, ಗಳಿಗೆಗಳಿಗೆಗೂ ಇನ್‌ಸ್ಪೆಕ್ಟರುಗಳು ಲಕ್ಷಾಂತರ ಮುಗ್ಧ ಅಶೇಷ ಮುಜಮದಾರರುಗಳನ್ನು ಆ ರೀತಿ ಪೀಡಿಸುತ್ತಾರೆ. ಅವರೆಲ್ಲರೂ ತಮ್ಮ ಮೇಲಣ ಅಪರಾಧವನ್ನು ಅರಿಯದೆ ನೋಯುತ್ತಾರೆ.

ಅಶೇಷ ಮುಜಮದಾರರು ಇನ್ನೂ ಪರಮಾವಧಿಯ ಹಿಂಸೆಯಲ್ಲಿ ಸುತ್ತುತ್ತಿದ್ದರು.

"ಓ, ಒಂದು ಹನಿ ನೀರನ್ನು ಕೊಡಿರಿ......ಓ, ಒಂದು ಬೆಳಕಿನ ಕಿರಣವನ್ನು ತೋರಿಸಿ......... ಓ, ಒಂದು ಉಚ್ಛ್ವಾಸದ ಗಾಳಿಯನ್ನು ಕೊಡಿರಿ......ಓ,......ನನಗೆ ಶಾಂತಿಯ ಒಂದು ಕ್ಷಣವನ್ನಾದರೂ ಕರುಣಿಸಿ!......ನ್ಯಾಯವನ್ನೊದಗಿಸಲು ನಿಮ್ಮನ್ನು ನಾನು ಕೇಳುವುದಿಲ್ಲ. ಏಕೆಂದರೆ, ಇಲ್ಲಿ ಅನ್ಯಾಯವೊಂದೇ ಏಕಮಾತ್ರ ನ್ಯಾಯ, ಇಲ್ಲಿ ಹಿಂಸೆಯೊಂದೇ ಏಕಮಾತ್ರ ಶಾಂತಿ; ನಾನು ಅದನ್ನು ಬಹು ತಡವಾಗಿ ಅರಿತೆ. ನಿಮ್ಮ ವೇದ, ಉಪನಿಷತ್ತುಗಳು, ಗೀತೆ ಮಹಾಭಾರತಗಳು ಎಲ್ಲವೂ ದೊಡ್ಡ ಸುಳ್ಳಿನ ಕಂತೆಯೆಂದು ಅರಿತುಕೊಂಡೆ. ಪರಮಕರುಣಾಮಯಿಯೂ ಇಲ್ಲ, ಪರಮಮಂಗಳಕರನೂ ಇಲ್ಲ, ಸರ್ವಶಕ್ತನೂ ಇಲ್ಲ. ಎಲ್ಲವೂ ನೀವೇ ಸೃಷ್ಟಿಸಿದ್ದು! ಎಲ್ಲವೂ ಕಲ್ಪನೆ!"

ಅಪರಿಚಿತ ಸನ್ನಿವೇಶದಲ್ಲಿ ನಿಂತಿರುವಂತೆ ಅವರಿಗೆ ಅನ್ನಿಸಿತು. ಎಲ್ಲಿದ್ದಿರಬೇಕು?, ಅಲ್ಲಿ ಕುಳಿತಿದ್ದವರು ಯಾರಾಗಿದ್ದಿರಬಹುದು?

ನಿಜವಾಗಿ ಅದು ಅನ್ಯ ನೆಲ, ಬೇರೊಂದು ಜಗತ್ತು. ಪ್ರಸರ್ ಸಂಘಟನೆಯೊದಗಿತ್ತು. ಸರಿಯಾಗಿ ನೋಡಲು ಅಶೇಷರು ಮೇಲೆ ತಲೆ ಎತ್ತಿದರು. ದೊಡ್ಡ ಗುಂಪೊಂದು ನಿಶ್ಶಬ್ದವಾಗಿ ನಿಂತಿತ್ತು. ಎಲ್ಲಾ ಕಣ್ಣುಗಳು ಒಂದು ವ್ಯಕ್ತಿಯಲ್ಲಿ ಕೇಂದ್ರೀಕೃತವಾಗಿದ್ದವು. ತಕ್ಷಣವೇ ಒಂದು ಶ್ಲೋಕ ಪ್ರಾರಂಭವಾಯಿತು.

"ಓ ಪರಮ ಕರುಣಾಮಯಿ, ಓ ಪರಮ ಮಂಗಳಕರನೇ, ಓ ಸರ್ವಶಕ್ತನೇ! ನಾವು ಪಾಪಿಗಳು: ಓ ಪಾಪಹರನೇ, ನಮ್ಮ ಪಾಪಗಳನ್ನು ಪರಿಹರಿಸು. ಓ., ನಮ್ಮನ್ನು ಮುಕ್ತನಾಗಿಸು, ಮೋಕ್ಷವನ್ನು ಕರುಣಿಸು!"

"ಯಾರು ಆತ?" ಶ್ಲೋಕವನ್ನು ಮಧ್ಯೆ ತಡೆದು ಸರ್ವಶಕ್ತನು ಕೇಳಿದ.

"ಕರುಣಾಮಯಿ, ಈತ ಪರೀಶ್ ಸರ್ಕಾರ್. ಇವನು ಕಲ್ಕತ್ತಾದ ಕಂಕೂಲಿಯ ರಸ್ತೆಯಿಂದ ಬಂದಿದ್ದಾನೆ".

"ಅವನು ಏನು ಮಾಡಿದ್ದಾನೆ".

ಹಿಂಭಾಗದಲ್ಲಿ ಒಂದು ದೊಡ್ಡ ಗರ್ಜನೆ ಮೊಳಗಿತು. ಬೇರೊಬ್ಬ ಅಪರಾಧಿ ಆಗಮಿಸಿದ. ಪರಿಚಿತವಾದ ಮುಖ. ಆ ಮನುಷ್ಯನನ್ನು ಎಲ್ಲಿ ನೋಡಿದ್ದಿರಬೇಕು? ಕುಳ್ಳ ಆಕಾರ. ಗಾಂಧಿ ಟೋಪಿಯನ್ನು ಹಾಕಿದ್ದಾನೆ. ಓ ಹೌದು, ಅವನೇ ಲಾಲ್‌ಬಹಾದ್ದೂರ್ ಶಾಸ್ತ್ರೀ. ಎಂಥ ಆಶ್ಚರ್ಯ! ಇನ್‌ಸ್ಪೆಕ್ಟರನು ಲಾಲ್‌ಬಹಾದ್ದೂರ್ ಶಾಸ್ತ್ರಿಯನ್ನು ಇಲ್ಲಿಗೇಕೆ ಕರೆತಂದ? ಅವನನ್ನು ಏಕೆ ದಸ್ತಗಿರಿ ಮಾಡಿದ್ದಾರೆ?

ಶಾಸ್ತ್ರೀಜಿಯವರು ಕೈಕಟ್ಟಿ ಮತ್ತೊಂದು ವೇದಿಕೆಯ ಮೇಲೆ ನಿಂತಿದ್ದರು.

"ಮತ್ತೆ, ಈತ ಯಾರು?"

"ಕರುಣಾಮಯಿಯೇ. ಈತನ ಹೆಸರು ಲಾಲ್‌ಬಹಾದ್ದೂರ್ ಶಾಸ್ತ್ರೀ ಎಂದು; ಇವನು ನವದೆಹಲಿಯ ಪತ್ನನೇ ಜನಪತ್‌ದಿಂದ ಬಂದಿದ್ದಾನೆ".

"ಇವನು ಏನು ಮಾಡಿದ್ದಾನೆ?"

"ಇವರಿಬ್ಬರೂ ಕಾನೂನನ್ನು ಮೀರಿದ್ದಾರೆ." ಇನ್‌ಸ್ಪೆಕ್ಟರ್ ಹೇಳಿದ.

"ಯಾವ ಕಾನೂನನ್ನು?"

"ಇಬ್ಬರೂ ಶಾಂತಿಯನ್ನು ಅರಸುತ್ತಿದ್ದರು." ಸರ್ವಶಕ್ತನ ಕಣ್ಣುಗಳು ತಕ್ಷಣ ಕೋಪೋದ್ರೇಕದಿಂದ ಕೆಂಪಾದವು. ಕೋಪವನ್ನು ತಾಳಲಾರದೆ ಇಡೀ ವೇದಿಕೆಯೇ ಅಲ್ಲಾಡುತ್ತಿರುವಂತೆಯೂ, ಇಡೀ ಸೃಷ್ಟಿಯೇ ನಾಶದ ಪ್ರಪಾತಕ್ಕೆ ದುಮುಕುತ್ತಿರುವಂತೆಯೂ ಅಶೇಷ ಮುಜುಮದಾರರು ಭಾವಿಸಿದರು.

"ಶಾಂತಿ! ಶಾಂತಿ ಎಂದು ಹೇಳಿದೆಯಾ?"

"ಹೌದು ಸತ್ಯಪಾಲಕನೆ. ಶಾಂತಿ!"

"ಎಷ್ಟು ವಿಚಿತ್ರವಾಗಿದೆ! ಶಾಂತಿಯನ್ನು ಬಯಸುವುದೆಲ್ಲ ಅಪರಾಧವೆಂದು ನಾನು ನಿಮಗೆಷ್ಟು ಸಾರಿ ಎಚ್ಚರಿಸಬೇಕು?"

"ಇಲ್ಲಿ ನೋಡಿ, ಸಾರ್". ಇನ್‌ಸ್ಪೆಕ್ಟರ್ ಸರ್ವಶಕ್ತನಿಗೆ ಹೇಳಿದ. "ಈ ಪರೀಶ್ ಸರ್ಕಾರ್(ಒಂದನೇ ಅಪರಾಧಿ) ಎಂದೂ ಜಗಳ ಮಾಡುತ್ತಿರಲಿಲ್ಲ. ಅಥವಾ ಯಾರ ಜೊತೆಯೂ ಸ್ನೇಹವನ್ನೂ ಮಾಡುತ್ತಿರಲಿಲ್ಲ–ಇದೆಲ್ಲ ಕೇವಲ ಶಾಂತಿಯನ್ನು ಅನುಭವಿಸುವುದಕ್ಕಾಗಿ. ಇವನು ಕಂಕೂಲಿಯ ರಸ್ತೆಯಲ್ಲಿ ಒಂದು ಮನೆಯ ಕೆಳಮಹಡಿಯ ಬಾಡಿಗೆ ರೂಮಿನಲ್ಲಿ ಏಕಾಂಗಿಯಾಗಿ ವಾಸಿಸುತ್ತಿದ್ದನು. ಹೋಟೆಲಿನಲ್ಲಿ ಊಟ ಮಾಡುತ್ತಾ. ಈ ಲಾಲಬಹಾದ್ದೂರ್ ಶಾಸ್ತ್ರಿ (ಎರಡನೇ ಅಪರಾಧಿ) ಯಾದರೋ ಭಾರತ ಮತ್ತು ವಿಶ್ವದಲ್ಲಿ ಶಾಂತಿಗಾಗಿ ಹೆಣಗುತ್ತಿದ್ದನು. ವಿಶ್ವದ ಶಾಂತಿಗಾಗಿಯೇ ಟಾಷ್ಕೆಂಟ್‌ಗೆ ಹೋಗಿದ್ದನು, ಶಾಂತಿದೂತಿಕೆಯಿಂದ."

"ಎಷ್ಟು ಭಯಂಕರವಾಗಿದೆ! ಆದರೆ. ಆದರೆ, ಅವರು ನನ್ನ ಆಜ್ಞೆಯನ್ನು ಅರಿಯದವರೆಂದು ತಿಳಿಯುತ್ತೀಯ?......ನೀವು ಕಾರನ್ನು ಕೇಳಿದರೆ ಕಾರನ್ನು ಕೊಡಬಲ್ಲೆ. ನೀವು ಮಹಲುಗಳನ್ನು ಕೇಳಿದರೆ ಮಹಲುಗಳನ್ನು ಕೊಡಬಲ್ಲೆ ಎಂದು ನಾನು ಸ್ಪಷ್ಟವಾಗಿ ಘೋಷಿಸಿರಲಿಲ್ಲವೇ? ಮಾನವ ಕೇಳಿದ್ದನ್ನೆಲ್ಲಾ ಕೊಡುವ ಭರವಸೆಯಿತ್ತಿದ್ದೇನೆ. ನೀವು ನಿಮ್ಮ ಅಗತ್ಯಗಳಲ್ಲಿ ನಿಷ್ಠೆಯಿಂದಿದ್ದರೆ ನಾನೆಂದಿಗೂ ನಿಮ್ಮನ್ನು ನಿರಾಶೆಗೊಳಿಸುವುದಿಲ್ಲ. ಆದರೆ, ಶಾಂತಿಯನ್ನು ಮಾತ್ರ ಕೇಳಬೇಡಿರೆಂದು ನಿಮ್ಮನ್ನು ಪ್ರತ್ಯೇಕವಾಗಿ ಎಚ್ಚರಿಸಿದ್ದೇನೆ. ಶಾಂತಿಯನ್ನು ಮಾತ್ರ ನೀವು ಪಡೆಯಲು ಬಿಡುವುದಿಲ್ಲ. ಶಾಂತಿಯನ್ನು ಬಯಸುವುದೂ ಅಪರಾಧ, ಶಾಂತಿಯನ್ನು ನೀಡುವುದೂ ಅಪರಾಧ! ಶಾಂತಿಯನ್ನು ಅರಸುವವನಿಗಿಂತ ಮಹಾಪರಾಧಿ ಬೇರೆಯಿಲ್ಲ."

ಇಷ್ಟರಲ್ಲಿ ಗುಡುಗಿನ ಮೊಳಗು ಮೇಲಿಂದ ಕೆಳಕ್ಕೆ ಬಾರಿಸಿದಂತಾಯಿತು. ಸರ್ವಶಕ್ತ ಕೂಗಿದ, "ಎಲ್ಲರೂ ಮೊರಟು ಹೋಗಿ, ಸೋಮಾರಿ ಅನಿಷ್ಟಗಳೇ ಕಣ್ಮರೆಯಾಗಿ!"

ಸಿಡಿಲು ಹಣೆಯ ಬಲಭಾಗಕ್ಕೆ ತಗುಲಿದಂತೆ ಅಶೇಷ ಮುಜಮದಾರರು ಭಾವಿಸಿದರು.

× × × × ×

ಆ ಮೇಲೆ ಒಂದು ದಿನ ಮುಂಜಾವಿನಲ್ಲಿ ಕಂಕೂಲಿಯ ರಸ್ತೆಯ ಒಂದು ಮನೆಯ ತಳಮಹಡಿಯ ಮೇಲೆ ಮೃತದೇಹವೊಂದು ಕಂಡು ಓಡಿಯಲ್ಪಟ್ಟಿತು. ಅದು ಸ್ಯಾಕ್ಸನ್ ಮತ್ತು ಜಕೋಬ್ ಕಂಪೆನಿಯ ಜೂನಿಯರ್ ಡಿಸ್ಪ್ಯಾಚ್ ಕ್ಲರ್ಕ್ ಅಶೇಷ ಮುಜಮದಾರನದು. ಅವನ ಮರಣದ ಕಾರಣವನ್ನು ಯಾರೂ ಅರಿಯರು. ಮತ್ತೊಂದು ಸಾವು ಟಾಷ್ಕೆಂಟ್‌ನಲ್ಲಿ. ಅದು ನವದೆಹಲಿಯ ಹತ್ತನೇ ಜನಪತ್‌ನ ಲಾಲಬಹಾದ್ದೂರ್ ಶಾಸ್ತ್ರಿಯದು. ಒಬ್ಬ ಶಾಂತಿಯಿಂದ ಬಾಳಲು ಬಯಸಿದ, ಮತ್ತೊಬ್ಬ ಶಾಂತಿಯನ್ನು ಹರಡ ಬಯಸಿದ. ಇಬ್ಬರೂ ಬಡಪಾಯಿಗಳು! ಒಬ್ಬ ಅಪರಿಚಿತ, ಮತ್ತೊಬ್ಬ ಬಡಭಾರತದ ಪ್ರಧಾನಮಂತ್ರಿಯೆಂದು ಸುಪರಿಚಿತ.

ಅನು : 'ವಿಹಂಗಮ'

ವಿ. ಎನ್. ಲಕ್ಷ್ಮೀನಾರಾಯಣ

ಅಸಗ

ಓ! ಇವನು,
ಯಾವ ಗಲ್ಲಿಯ ಹೊಕ್ಕು ಸುತ್ತಿ–ಬಳಸಿ
ಓಡಿದರೂ ಅಲ್ಲೇ – ಎದುರಿಗೇ ಮೈದೋರಿ
ಹಲ್ಲ ತೋರಿಸುತ್ತಾನೆ.
ನಿಲ್ಲಿಸುತ್ತಾನೆ – ಕೆರೆಗೆ ಎಳೆದೊಯ್ಯುತ್ತಾನೆ!
ಇವನ ಮೈಯೆಲ್ಲಾ ಸೋಪು, ಮುಖವೆಲ್ಲ ನೀಲಿ,
ಹೊಟ್ಟೆಯೋ ಜಗಲಿ ಕಟ್ಟೆ – ಒಳಗೆ ವಾಷಿಂಗ್ ಸೋಡ..
ತಲೆ ತುಂಬ ಯಾರದ್ಯಾರದೋ. ಬಟ್ಟೆ!
ಒಳ್ಳೊಳ್ಳೆ ಬಟ್ಟೆ ನಿಜ! ನನ್ನದಲ್ಲ; ಅವನದೂ ಅಲ್ಲ!
ಯಾರದ್ಯಾರದೋ ಬಟ್ಟೆ ತಂದಿಲ್ಲಿ
ನನ್ನ ತಲೆ ಮೇಲೆ ಒಗೆಯುತ್ತಾನೆ
ಕುಕ್ಕುತ್ತಾನೆ ಕಸಗುತ್ತಾನೆ.
ಬಾಯ್ಬಿಟ್ಟರಂತೂ
ಉಬ್ಬೆಯೊಳಗಿನ ಗಬ್ಬುವಾಸನೆ!
ಬರೀ ವಾಷಿಂಗ್ ಸೋಡ,
ಬೇಡಪ್ಪ, ಬೇಡ!
ನನಗೆ ಒಂದೇ ಆದರೂ ನನ್ನದೇ ಬಟ್ಟೆಯಿದೆ
ನನ್ನ ಬಟ್ಟೆಯಲೆ ನಡೆಯುತ್ತೇನೆ,
ಎಡವಿದರೂ ಬಿಡದೆ
ಜಯಭೇರಿ ಹೊಡೆಯುತ್ತೇನೆ.
ಅಗೋ! ಕಾಣಿಸಿಕೊಂಡ ಅಲ್ಲಿ.
ನನಗಿನ್ನೆಲ್ಲಿ ಉಳಿವು?
ನಾ ಓಡಬೇಕು – ಓಡಲೇ ಬೇಕು.
ಇವನ ಕೈಯಿಂದ ಪಾರಾಗಬೇಕು!

ಡಿ. ಎಲ್. ನರಸಿಂಹಾಚಾರ್

ರುದ್ರನಾಟಕೋಪನ್ಯಾಸಗಳು*—೧

ರುದ್ರನಾಟಕಗಳಲ್ಲಿ ಅಡಗಿರುವ ಸಾಮಾನ್ಯ ಲಕ್ಷಣ

ಪಾಶ್ಚಾತ್ಯ ಕಾವ್ಯಮೀಮಾಂಸಾ ಗ್ರಂಥಗಳಲ್ಲಿ ಅರಿಸ್ಟಾಟಲಿನ 'ಪೊಯೆಟಿಕ್ಸ್'ಆದಿಗ್ರಂಥ. ನಮಗೆ ಭರತನ 'ನಾಟ್ಯಶಾಸ್ತ್ರ'ವಿದ್ದಂತೆ ಐರೋಪ್ಯರಿಗೆ ಈ ಗ್ರಂಥ. ಐರೋಪ್ಯ ಸಾಹಿತ್ಯ ವಿಮರ್ಶೆಯ ಸೂಕ್ಷ್ಮ ಸಮಾಲೋಚನೆ ಇಲ್ಲಿ ನಮಗೆ ದೊರೆಯುತ್ತದೆ. ನಾಟಕದ ವಿಚಾರದಲ್ಲಿ ಅರಿಸ್ಟಾಟಲಿನ ಉದ್ದೇಶ ಹೇಗಿತ್ತು ಎನ್ನುವುದು ತಿಳಿಯುತ್ತದೆ. ಗ್ರಂಥರಚನೆಯ ಕಾಲ ಮತ್ತು ಕರ್ತೃಗಳ ವಿಚಾರದಲ್ಲಿ ಭಿನ್ನಾಭಿಪ್ರಾಯಗಳಿವೆ. ಅರಿಸ್ಟಾಟಲ್ ಬರೆದಿರಬೇಕೆಂದು ಕೆಲವರೂ, ತಾನು ವಿದ್ಯಾಭ್ಯಾಸಕಾಲದಲ್ಲಿ ಎಂದರೆ ವಿದ್ಯಾರ್ಥಿಗಳಿಗೆ ಅಭ್ಯಾಸ ಮಾಡಿಸುವ ಕಾಲದಲ್ಲಿ ಮಾಡಿದ ಪ್ರವಚನದ ಲಿಖಿತರೂಪವೆಂದೂ ಅದನ್ನು ಬಹುಶಃ ವಿದ್ಯಾರ್ಥಿಗಳೇ ಅಭ್ಯಾಸಕಾಲದಲ್ಲಿ ಬರೆದುಕೊಂಡರೆಂದು ಇತರರೂ, ಅಭಿಪ್ರಾಯ ಪಡುತ್ತಾರೆ. ವಿಷಯ ಸಂಕಲನದಲ್ಲಿ ಅಲ್ಲಲ್ಲಿ ಬರುವ ವ್ಯತ್ಯಾಸಗಳನ್ನು ಗಮನಿಸಿ, ಅರಿಸ್ಟಾಟಲ್ ನೇರವಾಗಿ ಕುಳಿತು ನಿಯಮಬದ್ಧವಾಗಿ ಬರೆದದ್ದಲ್ಲವೆಂದೂ ಅಭ್ಯಾಸಕಾಲದಲ್ಲಿನ ಟಿಪ್ಪಣಿಗಳ ಸಂಗ್ರಹವೆಂದೂ ಅಭಿಪ್ರಾಯವಿದೆ. ಶಾಸ್ತ್ರದ ತರ್ಕಬದ್ಧವಾದ ಸರಣಿ ಇಲ್ಲಿ ಕಾಣುವಂತಿಲ್ಲ. ಅವನ ಅಭಿಪ್ರಾಯಗಳ ಸಾರವನ್ನು ನಾವು ಗ್ರಹಿಸಬೇಕು.

ಇವನ್ನು ರಚನೆಮಾಡುವಾಗ ಅರಿಸ್ಟಾಟಲಿನ ಉದ್ದೇಶ ಮತ್ತು ಹಿನ್ನೆಲೆ ಏನಿತ್ತು? ಇವನ ಕಾಲಕ್ಕಾಗಲೇ ಗ್ರೀಕ್ ನಾಟಕ ಅತ್ಯುಚ್ಚ ಸ್ಥಿತಿಯನ್ನು ಮುಟ್ಟಿತ್ತು. ಈಗ ನಮಗೆ ನಷ್ಟವಾಗಿರುವ ಎಷ್ಟೋ ನಾಟಕಗಳು ಅವನಿಗೆ ಆ ಕಾಲಕ್ಕೆ ಉಪಲಬ್ಧವಿದ್ದು, ಅವುಗಳಲ್ಲಿ ಅವ್ಯಕ್ತವಾಗಿ ಸಮಾವೇಶಗೊಂಡಿದ್ದ ತತ್ತ್ವಭೂತವಾದ ಅಂಶಗಳನ್ನು ಅವನು ಕಂಡಿದ್ದಾನೆ. ಕವಿಕರ್ಮಕ್ಕೆ ಅನುಸಾರವಾದ ಸಾಮಾನ್ಯ ನಿಯಮಗಳನ್ನು ನಿರೂಪಿಸುವ ಉದ್ದೇಶದಿಂದ ಸಾಮ್ಯಗಳನ್ನು ಕೊಟ್ಟಿದ್ದಾನೆ. ಆ ಕಾಲಕ್ಕಾಗಲೇ ಕಾವ್ಯಮೀಮಾಂಸೆಯಲ್ಲಿ ವಿಪುಲವಾದ ಜಿಜ್ಞಾಸೆ ನಡೆದಿರಬೇಕು.

ಈ ಗ್ರಂಥವನ್ನು ಬರೆಯಲು ಕಾರಣವೇನು? ಅರಿಸ್ಟಾಟಲಿನ ಜೀವಿತಕಾಲ ಕ್ರಿ. ಪೂ. 384–322. ಈತ ಪ್ಲೇಟೋವಿನ ಶಿಷ್ಯನಾಗಿದ್ದನು. ಅವನ ಶಿಷ್ಯವೃತ್ತಿಯಲ್ಲಿ ತತ್ತ್ವಶಾಸ್ತ್ರವನ್ನು ಅಭ್ಯಾಸ ಮಾಡಿದನು. ಪ್ಲೇಟೋವಿಗೆ ಕಾವ್ಯದ ವಿಚಾರದಲ್ಲಿ ಉನ್ನತಾಭಿಪ್ರಾಯವಿಲ್ಲ. ದೇಶದಿಂದ ಕವಿಗಳನ್ನು ಓಡಿಸಬೇಕು, ಬುದ್ಧಿಯ ಅಭ್ಯಾಸಕ್ಕೆ ಇದರಿಂದ ಪ್ರಯೋಜನವಿಲ್ಲ, ಓದುವವರು ಕೆಟ್ಟು ಹೋಗುತ್ತಾರೆ, ಸೋಮಾರಿ

---

* ದಿವಂಗತ ಪ್ರೊ. ಡಿ. ಎಲ್. ನರಸಿಂಹಾಚಾರ್ ಅವರು 1953–54ರಲ್ಲಿ ಕನ್ನಡ ಎಂ. ಎ., ವಿದ್ಯಾರ್ಥಿಗಳಿಗೆ ರುದ್ರನಾಟಕ ಪ್ರಕಾರವನ್ನು ವಿಶೇಷವಿಷಯವನ್ನಾಗಿ ಬೋಧಿಸುತ್ತಿದ್ದಾಗ, ಪಠ್ಯವಿಷಯಕ್ಕೆ ಸಂಬಂಧಿಸಿದಂತೆ ಕೆಲವು ಉಪನ್ಯಾಸಗಳನ್ನು ನೀಡಿದರು. ಆಚಾರ್ಯರ ವೈದುಷ್ಯವೂ ರಸಜ್ಞತೆಯೂ ವಿಶ್ಲೇಷಕಪಟುತ್ವವೂ ಬಲುಮಟ್ಟಿಗೆ ಪ್ರತಿಬಿಂಬಿತವಾಗಿರುವ ಆ ಉಪನ್ಯಾಸಗಳು ನಷ್ಟವಾಗಬಾರದೆಂದು ಇಲ್ಲಿ ಅನುಕ್ರಮವಾಗಿ ಪ್ರಕಟಿಸಲು ಆಲೋಚಿಸಿದೆ—ಲೇ.

ಗಳಿಗೆ ಮೀಸಲಾದ ಕೆಲಸವಿದು – ಎಂದು, 'ಕಾವ್ಯಾಲಾಪಾಂಶ್ಚ ವರ್ಜಯೇತ್' ಮನೋಭಾವವನ್ನು ತಳೆದು ತಳ್ಳಿ ಹಾಕಿಬಿಟ್ಟಿದ್ದನು. ಇಂಥ ತಿರಸ್ಕೃತ ಕಾವ್ಯದ ಸ್ವರೂಪವನ್ನು ಏನೆಂದು ವಿಚಾರಮಾಡಲು ಶಿಷ್ಯ ಎತ್ತಿಕೊಂಡಿದ್ದಾನೆ. ಅದನ್ನು ನೋಡಿದರೆ ಪ್ಲೇಟೋವಿನ ಆಕ್ಷೇಪಣೆಗೆ ಉತ್ತರ ಸಿಗುತ್ತದೆ. ಆದರೆ ಅರಿಸ್ಟಾಟಲ್ ತನ್ನ ಗುರುವಿನ ಹೆಸರನ್ನಾಗಲಿ ಪ್ರಶ್ನೆಗಳನ್ನಾಗಲಿ ತನ್ನ ಗ್ರಂಥದಲ್ಲಿ ಹೆಸರಿಸಲಿಲ್ಲ. ಶಿಷ್ಯನ ಮನಸ್ಸಿನಲ್ಲಿದ್ದ ವ್ಯಾಕುಲದಿಂದ, ಕಾವ್ಯವೆನ್ನುವುದು ತ್ಯಾಜ್ಯವಾದ ವಸ್ತುವಲ್ಲ, ಪರಿಗ್ರಾಹ್ಯವಾದ್ದು ಎಂದು ತಿಳಿಸುವ ಪ್ರಯತ್ನದಿಂದ ಇವರಿಬ್ಬರ ಹಿಂದೆ ಅಡಗಿರುವ ಬೇರೆ ಬೇರೆ ಮನೋಧರ್ಮಗಳನ್ನು ತಿಳಿದುಕೊಳ್ಳುವುದಕ್ಕೆ ಶಕ್ಯವಿದೆ. ಪ್ಲೇಟೋ ಭಾವವಾದಿ. ಚಿಂತನಾಂಶವೇ ಸತ್ಯ. ಹೊರತಾಗಿ ಮೇಲೆ ಕಾಣುವ ವಸ್ತುವಿನ ಸತ್ಯತೆ ಇಲ್ಲ. ಕವಿ ಸತ್ಯಕ್ಕೆ ಎರಡರಷ್ಟೇ ದೂರವಾಗಿದ್ದಾನೆ. ಅವನ 'ರಿಪಬ್ಲಿಕ್'ನಲ್ಲಿ ಕಾವ್ಯ ಬುದ್ಧಿವಂತರಿಗೆ ಹಿಡಿಸುವದಲ್ಲ. ಅರಿಸ್ಟಾಟಲ್. ಇಂದ್ರಿಯ ಗೋಚರವಾದ ಪದಾರ್ಥಗಳು, ಇರತಕ್ಕಂತಹ ಪದಾರ್ಥಗಳು– ಇವುಗಳನ್ನಿಟ್ಟುಕೊಂಡೇ ಹಿಂದುಗಡೆಯ ತತ್ತ್ವದ ಕಡೆಗೆ ಹೋಗುತ್ತಾನೆ; ಪ್ರತ್ಯಕ್ಷದಿಂದ ಪರೋಕ್ಷವಾದ ಜ್ಞಾನದ ಕಡೆಗೆ ಹೊರಡುತ್ತಾನೆ; ವಿಜ್ಞಾನವಾದಿ ಅವನು. ಇವರಿಬ್ಬರ ಕಾವ್ಯಮೀಮಾಂಸಾದೃಷ್ಟಿ ಇವರಿಬ್ಬರ ದೃಷ್ಟಿಭೇದದಿಂದ ಹುಟ್ಟಿದೆ. ಪ್ಲೇಟೋವಿನ ಭಾವವಾದದ ಒಂದು ಅಸಮರ್ಥತೆಯನ್ನು ತೋರಿಸಲು ಅವನ ವಾದ ನಿಲ್ಲುವುದಿಲ್ಲ ಎಂದು ತಿಳಿಯುತ್ತದೆ. ಅರಿಸ್ಟಾಟಲ್‌ನನ್ನು ಅಭ್ಯಾಸ ಮಾಡುವಾಗ ಪ್ಲೇಟೋವನ್ನು ಅರ್ಥಮಾಡಿಕೊಳ್ಳಬೇಕು. 'ಕಾವ್ಯಾಲಾಪಾಂಶ್ಚ ವರ್ಜಯೇತ್' ಮನೋವೃತ್ತಿಗೆ ಕಾರಣಗಳನ್ನು ಪ್ಲೇಟೋ ಕೊಡುತ್ತಾನೆ. ಜನರ ನೀತಿಧರ್ಮಗಳ ಮೇಲೆ ಕೆಟ್ಟ ಪರಿಣಾಮವನ್ನುಂಟುಮಾಡುತ್ತದೆ ಅದು. ಜನಗಳಲ್ಲಿ ಅಡಗಿರುವ ಭಾವಗಳನ್ನು ಉದ್ರೇಕಿಸಿ ಅವರನ್ನು ಕೆಡುವಂತೆ ಮಾಡುತ್ತದೆ. 'ಮಾಘ ಓದಿ ಮಗ ಕೆಟ್ಟ' ಗಾದೆ ನೋಡಿ. ಆದರೆ ಅರಿಸ್ಟಾಟಲ್ ಇದನ್ನು ಪ್ರತಿಪಾದಿಸಿ, ವಿಚಾರಿಸಿ, ತಪ್ಪನ್ನು ಅರಿವು ಮಾಡಿಕೊಟ್ಟು ಗುರುವಿಗೆ ಬುದ್ಧಿಯನ್ನು ಕಲಿಸುವ ಯತ್ನ ಮಾಡಿದ್ದಾನೆ.

ಅರಿಸ್ಟಾಟಲ್ ರುದ್ರನಾಟಕ–ಗಂಭೀರ ನಾಟಕ–ಲಕ್ಷಣವನ್ನು ಹೇಳುತ್ತಾನೆ. ಆರಂಭದಲ್ಲಿ "Tragedy is an imitation of an action, i.e. Serious, Complete, and of a certain magnitude, in the way not of narrative but of action, effecting through pity and fear, the proper purgation (Catharsis) of the emotions*"–ಎಂದು ಹೇಳುತ್ತಾನೆ. ಈ ವಾಕ್ಯದಲ್ಲಿ, ಬಳಸಿರುವ ಪ್ರತಿಪದವನ್ನೂ ಸಾವಧಾನವಾಗಿ ವಿಚಾರಿಸಿ ತಿಳಿದುಕೊಳ್ಳಬೇಕು. ಟ್ರ್ಯಾಜಿಡಿಯ ಸ್ವರೂಪ ಹೇಗೆ? ಅದು ಯಾವುದೋ ಒಂದು ಮಾನವ ಸಂದರ್ಭವನ್ನು ಕುರಿತ ರಚನೆಯಾಗಿರಬೇಕು. Action–ಮಾನವ ಕಾರ್ಯ. ಅದು ಅಲ್ಪವಾದದ್ದಲ್ಲ; ಘನವಾದದ್ದು. ಗಂಭೀರವಾದದ್ದು–Serious. ಅನಂತರ Complete. ಒಂದು ಕಾರ್ಯಕ್ಕೆ ಆದಿ, ಮಧ್ಯ ಹಾಗೂ ಅಂತ್ಯ ದಶೆ ಇರುತ್ತದೆ. ಕ್ರಿಯೆಯ ಆರಂಭ, ಮಧ್ಯ, ಅಂತ್ಯ – ಈ ಮೂರೂ ಇದ್ದರೆ ಸಂಪೂರ್ಣವಾದ ಕ್ರಿಯೆ. ಕಥಾಸಂದರ್ಭ ಪೂರ್ಣವಾದದ್ದಾಗಿರಬೇಕು. ಒಂದು ಕ್ರಿಯೆ ಸ್ವಲ್ಪಮಟ್ಟಿಗೆ ಬೆಳೆದು ಮುಕ್ತಾಯವಾಗಿರಬೇಕು. 'Magnitude' ಈ ಮಾತು ನಾಟಕದ ಗಾತ್ರಕ್ಕೆ ಅನ್ವಯಿಸುವುದೇ? ಬರುವ ಪಾತ್ರಗಳ ಕ್ರಿಯೆಗಳ ಘನತೆಗೆ ಅನ್ವಯಿಸುವುದೇ? ಅರಿಸ್ಟಾಟಲ್ ಈ ಸೂತ್ರ ಲಕ್ಷಣ ಭಾಗದಲ್ಲಿ ರುದ್ರನಾಟಕದ ಸ್ವಭಾವ ಸ್ವರೂಪಗಳನ್ನು ಹೇಳಿದ್ದಾನೆ. ರುದ್ರನಾಟಕವನ್ನು ಕಥನಕಲೆಯ ರೂಪದಿಂದಲ್ಲ, ನಾಟ್ಯದೃಷ್ಟಿಯಿಂದ ಪ್ರತಿಪಾದಿಸಬೇಕೆಂದು ಸೂಚಿಸಿದ್ದಾನೆ. ಅರಿಸ್ಟಾಟಲಿನ ಕಾಲದಲ್ಲಿ ಕಾವ್ಯ, ನಾಟಕ ಎರಡೂ ಚೆನ್ನಾಗಿ ಬೆಳೆದಿದ್ದ ಎರಡು ರೂಪಗಳು. ಆದ್ದರಿಂದ Epic (ವೀರಕಾವ್ಯ) ಮತ್ತು ನಾಟಕಕ್ಕಿರುವ ವ್ಯತ್ಯಾಸಗಳನ್ನು ತೋರಿಸುವುದು ಅವನಿಗೆ ಮುಖ್ಯ ಕಾರ್ಯವಾಗಿತ್ತು. ವೀರಕಾವ್ಯ–ಕಥನ,

---

* ಈ ಇಂಗ್ಲಿಷ್ ವಾಕ್ಯವನ್ನು ಯಾವ ಆಕರದಿಂದ ತೆಗೆದುಕೊಂಡಿದೆಯೆಂಬುದು ತಿಳಿಯದೆ ಹೋದುದರಿಂದ ಸರಿನೋಡುವುದಕ್ಕಾಗಲಿಲ್ಲ.

ನಾಟಕ-ಅಭಿನಯ. ಮುಂದೆ ರುದ್ರನಾಟಕದಿಂದಾಗುವ ಪರಿಣಾಮವನ್ನು ತಿಳಿಸುತ್ತಾನೆ. ಮನಸ್ಸಿನಲ್ಲಿ ಯಾವ ವಿಧವಾದ ಪರಿಣಾಮ ? ಸುಪ್ತವಾದ ಕರುಣೆ ಭಯಗಳನ್ನು ಉತ್ಥಾನಗೊಳಿಸಿ- ಉದ್ಬೋಧಗೊಳಿಸಿ-, ನಮ್ಮ ಮನಸ್ಸಿನ ಭಾವಗಳು ರಾಗಗಳು ದ್ವೇಷಗಳು ಉಕ್ಕಿ ಹೊರಕ್ಕೆ ಬಂದು, ಹೊರಟು ಹೋಗಿ, ಅದು ಪರಿಶುದ್ಧವಾಗುತ್ತದೆ. ಭಾವಸ್ವರೂಪ–ಸ್ವಭಾವ–, ನಿರೂಪಣ ವಿಧಾನ, ಅದರಿಂದ ಮನಸ್ಸಿನ ಮೇಲೆ ಆಗುವ ಪರಿಣಾಮ ಮೂರನ್ನೂ ಅರಿಸ್ಟಾಟಲ್ ಸಮನ್ವಯ ಮಾಡಿದ್ದಾನೆ. Imitation–mimicry ಅನುಕರಣ–ಅಣಕಿಸು (ಗ್ರೀಕ್)–ಈ ಅರ್ಥದ ವ್ಯಾಪ್ತಿ ನಮಗೆ ಸರಿಯಾಗಿ ತಿಳಿಯುವುದಿಲ್ಲ. ಇಲ್ಲಿ ನಮ್ಮ ವಿಚಾರ ಸ್ವಲ್ಪ ಮಸುಕಾದರೆ ಪ್ಲೇಟೋವಿನ ಮತವನ್ನು ಒಪ್ಪಿಕೊಳ್ಳುವ ಸ್ಥಿತಿ ಇದರಲ್ಲಿ ಬರುತ್ತದೆ. Imitation ಎಂದರೆ ಅನುಕರಣವೇ ? ಯಾವುದರ ಅನುಕರಣ? ಅನುಕರಣವು ಎಲ್ಲಿದೆ? ಆಗ ಕ್ಷೇತ್ರ ವಿಸ್ತಾರವಾಗುತ್ತದೆ. ಮನುಷ್ಯ ವ್ಯಾಪಾರಗಳ ಅನುಕರಣ ಎಂದು ಅರಿಸ್ಟಾಟಲ್ ಹೇಳಿರುವುದು ನಾಟಕವನ್ನು ದೃಷ್ಟಿಯಲ್ಲಿಟ್ಟುಕೊಂಡು. ಆದರೆ ಎಲ್ಲ ಕಲೆಗಳಿಗೂ ಇದನ್ನು ಅನ್ವಯಿಸಬಹುದು. ಕಲೆಯನ್ನು ಯಾವುದಾದರೊಂದು ವಾಹನದ ಮೂಲಕ ನಾವು ಬೆಳಗಿಸುತ್ತೇವೆ– ಬಣ್ಣ–ಚಿತ್ರ, ವಾಚಕ–ಕಾವ್ಯ, ಕೆತ್ತನೆ–ಶಿಲ್ಪ ಹೀಗೆ. ಭಾಷೆಯಲ್ಲಿ ಕ್ರಿಯೆಯ ಅನುಕರಣ ಮೂಡುತ್ತದೆ. ಮನುಷ್ಯನು ಮಾಡುವ ವ್ಯಾಪಾರ ಈ ಕ್ರಿಯೆಯ ಅನುಕರಣ ಮಾಡುವುದು (?), ಕ್ರಿಯಾಸಕ್ತ ಮಾನವರನ್ನು ಅನುಕರಣ ಮಾಡುವುದು, ಅವರ ಜೀವನದ ಸಂದರ್ಭಗಳನ್ನು ಅನುಕರಣ ಮಾಡುವುದು, ಮನುಷ್ಯವ್ಯಾಪಾರಗಳನ್ನು ಅನುಕರಣಮಾಡಬೇಕಾದುದು ದುರಂತ ನಾಟಕಗಳ ಉದ್ದೇಶ. ಪ್ರಕೃತಿಯಲ್ಲಿ ಒಂದು ಭಾಗ ಮನುಷ್ಯ. ಪ್ರಕೃತಿಯನ್ನು ಅನುಕರಣ ಮಾಡಿದರೆ ನಾಟಕಕ್ಕೆ ಅದು ವಸ್ತು ಎನ್ನಬಹುದು. ವಸ್ತುವನ್ನು ವಸ್ತುವಿದ್ದಂತೆಯೇ ಅನುಕರಣ ಮಾಡಿದರೆ ಅದು mimicry –ಅಣಕ – ಆಗುತ್ತದೆ. ವಸ್ತು ಹೇಗಿರಬೇಕೆಂದು ಕಲ್ಪಿಸಿಕೊಂಡು ಅನುಕರಣ ಮಾಡಿದರೆ ಅದು ಕೇವಲ ಆದರ್ಶವಸ್ತುವಾಗಿ ನಮಗೆ ಅದರ ಲಾಭವಿಲ್ಲ. ಇರುವುದನ್ನು ಇರುವ ಹಾಗೆಯೇ ಪ್ರತಿಬಿಂಬಿಸಿ ಮಾಡುವ ಅನುಕರಣ ಎಂಬುದರಿಂದಾಗಿ ಪ್ಲೇಟೋವಿನ ತಪ್ಪು ಅಭಿಪ್ರಾಯಕ್ಕೆ ಕಾರಣವಾಯಿತು. ಅರಿಸ್ಟಾಟಲ್ ಹೇಳುವುದು – ಅನುಕರಣಕ್ಕೂ ನಮ್ಮ ಪ್ರತ್ಯಕ್ಷಾನುಭವಕ್ಕೂ ಸಂಬಂಧವಿಲ್ಲ ; ವಾಸ್ತವಿಕ ಜಗತ್ತನ್ನು ಅನುಕರಣ ಮಾಡುವುದು ಎಂದರೆ ಅದಕ್ಕೆ ಅಷ್ಟೇ ಬೆಲೆಯಿರುವುದಿಲ್ಲ. Poetry is the mirror of Nature ಎನ್ನುವಾಗ Nature ಒಂದಿರುವಾಗ, poety ಏಕೆ, mirror ಏಕೆ?–ಈ ದಾರಿಯಲ್ಲಿ ಹೋಗಿ ಪ್ಲೇಟೋ ತಪ್ಪು ಮಾಡಿದ. ಮನುಷ್ಯರು ಈಗ ಇರುವುದಕ್ಕಿಂತ ಉತ್ತಮರಾಗಿ, ನೀಚರಾಗಿ ಇರುವುದು ಹೇಗೆ ಎಂಬುದನ್ನು ಕಾವ್ಯ ನಮಗೆ ತೋರಿಸಿಕೊಡುತ್ತದೆ. ಇವೆರಡೂ ವಾಸ್ತವಿಕವಾಗಿ ಸ್ಥಿತವಾಗಿಲ್ಲವಾದ್ದರಿಂದ, ಭಾವಗೋಚರವಾಗಿರುವುದರಿಂದ, ಪ್ರತ್ಯಕ್ಷಾನುಭವಕ್ಕೆ ಅಲಭ್ಯವಾಗಿರುವುವು. ಉತ್ತಮ ಸ್ಥಿತಿಯಲ್ಲಿ, ಕೀಳ್ದೆಸೆಯಲ್ಲಿದ್ದಂತೆ ಮನುಷ್ಯನನ್ನು ಚಿತ್ರಿಸಿದರೆ ಟ್ರ್ಯಾಜಿಡಿ ಕಾಮಿಡಿಗಳಾಗಿ ಬಿಡುತ್ತವೆ. ವಾಸ್ತವಿಕವಾಗಿ ಪ್ರತಿಪಾದಿಸಿದರೆ ಪ್ರತಿಬಿಂಬವಲ್ಲ. ಹೊರಗಿನ ಇಂದ್ರಿಯಗಳಿಗೆ ಕಾಣುವುದನ್ನು ಕಾವ್ಯ ಹೇಳುವುದಿಲ್ಲ. ಬಾಹ್ಯಪ್ರಪಂಚಕ್ಕೂ ಕಾವ್ಯಪ್ರಪಂಚಕ್ಕೂ ಏನೇನೂ ಸಂಬಂಧ ಕಾಣುವುದಿಲ್ಲ ; ಕವಿಯ ಮನಸ್ಸಿನಲ್ಲಿ ಪ್ರಚೋದನೆಗೊಂಡೇಳುವ ಬೇರೊಂದು ಜಗತ್ತಿನ ದರ್ಶನವಾಗುತ್ತದೆ. ಕವಿಭಾವಗತವಾದ ಲೋಕದ ಅನುಕರಣವೇ ಕಾವ್ಯವೆಂಬ ಸಿದ್ಧಾಂತಕ್ಕೆ ಬರಬೇಕು. ಈ ಸಿದ್ಧಾಂತಕ್ಕೆ ಬಂದ ಮೇಲೆ ಪ್ಲೇಟೋವಿನ ವಾದವನ್ನು ನಿಸ್ಸಾರ ಮಾಡಬಹುದು. ಕಾವ್ಯದಲ್ಲಿ ಪ್ರಯೋಜನವುಂಟು. ಮನುಷ್ಯರು ಈಗಿರುವ ಸ್ಥಿತಿಗಿಂತ ಉತ್ತಮ ಅಧಮ ಸ್ಥಿತಿಯಲ್ಲಿ ಇರಬಹುದಾದ್ದನ್ನು, ಇರುವುದನ್ನು, ಟ್ರ್ಯಾಜಿಡಿ ಕಾಮಿಡಿಗಳಲ್ಲಿ ಕಾಣುತ್ತೇವೆ. ಅಧಮ ರೀತಿಯ ಮನುಷ್ಯನ ವ್ಯವಹಾರವನ್ನು ನಕ್ಕು ಹಾಸ್ಯ ಮಾಡುವುದು ಪ್ರಹಸನದಿಂದ ಸಿಗುವ ಉಪಯೋಗ. ಮನುಷ್ಯ ಮಾಡುವ ಕರ್ಮದ ಪ್ರತಿಬಿಂಬ ಅನುಕರಣವಲ್ಲ. ಪ್ರಕೃತಕ್ಕೆ ಎಷ್ಟು ಬೇಕೋ ಅಷ್ಟನ್ನು ಆರಿಸಿಕೊಂಡು ಅನುಕರಣ ಮಾಡುವ ತತ್ತ್ವ ಅಡಗಿದ್ದುದರಿಂದ, ವಾಸ್ತವಿಕ ಕ್ರಿಯೆ ಆಗದೆ, ಭಾವಗತಲೋಕದ ಅನುಕರಣವೇ ಅವನ ಕಾವ್ಯವೆಂದು ಹೇಳಬಹುದು. ಆದ್ದರಿಂದ 'ಕಾವ್ಯಾಲಾಪಾಂಶ್ಚ ವರ್ಜಯೇತ್' ಎಂಬ ವಾದದಲ್ಲಿ ಹುರುಳಿಲ್ಲ.

ಮುಂದಿನ ಮಾತು 'Serious'. Important ಎಂದೇ? ಅಲ್ಪವಾದ ವಿಷಯವಲ್ಲ,

ಗಹನವಾದ್ದು. ಮನುಷ್ಯ ಮಾಡುವ ನಾನಾ ದಿನಚರಿಯ ಕೆಲಸಕಾರ್ಯಗಳಲ್ಲಿ ಅಲ್ಪವಾದ್ದು, ಇತರರಿಗೆ ತೋರಿಸಲು ಅಮುಖ್ಯವಾದ್ದು, ಸಂದರ್ಭವಿಶೇಷವಿಲ್ಲದ ಘಟನೆಗಳು. ಟ್ರ್ಯಾಜಿಡಿಗೆ ವಸ್ತುಗಳಾಗುವುದಿಲ್ಲ. ಇತರರ ಅನುಭವಕ್ಕಿಂತ ಬೇರೆಯಾದ ಸಂದರ್ಭವಿಶೇಷಗಳು–ಗಂಭೀರ, ಗಹನ, ಉದಾತ್ತ, ಅಪೂರ್ವವಾದ ಸಂದರ್ಭವಿಶೇಷಗಳು – ಮನುಷ್ಯನ ಬಾಳಿನಲ್ಲಿ ಬರುತ್ತವೆ. ಅಂಥವಕ್ಕೆ Serious ಎಂಬ ಹೆಸರನ್ನು ಕೊಡಬಹುದು. ವಸ್ತುವಿನಲ್ಲಿ ಗಹನತೆ, ಉದಾತ್ತತೆ ಇರಬೇಕೆನ್ನುವುದು ಈಚಿನ ತತ್ತ್ವ. ವಿಷಯಾನುಗುಣ್ಯ ನಾಟಕದ ಉದಾತ್ತತೆ. ಸಾಮಾನ್ಯರ ಅನುಭವದಲ್ಲಿ ಇಲ್ಲದೇ ಇರುವಂತಹ ವಿಚಾರವನ್ನು ಪ್ರಸಿದ್ಧ ಪುರುಷರ ಕಥೆಗಳಿಂದ ಅರಿಸಿಕೊಳ್ಳಬೇಕು ಎಂಬ ಅಂಶದಿಂದ ಹೊರಪಡುತ್ತದೆ. ಮಹತ್ತಾದ, ಉದಾತ್ತವಾದ ಘಟನಾವಿಶೇಷಗಳಿರಬೇಕಾದರೆ ರಾಜರು, ಜನನಾಯಕರು, ಅತಿ ತೀವ್ರವೂ ತೀಕ್ಷ್ಣವೂ ಆದ ಭಾವೋದ್ವೇಗಗಳನ್ನು ಪಡೆಯಲು ಸಾಮರ್ಥ್ಯವುಳ್ಳವರು ಇಂಥವರು ಬೇಕು. ಹೀಗಿದ್ದರೆ ಎಲ್ಲರಿಗೂ ಬೇಗ ಹಿಡಿಯುತ್ತದೆ. ಸಾಮಾನ್ಯ ಜೀವನವನ್ನು ಆರಿಸಿಕೊಂಡರೆ ಉತ್ಕೃಷ್ಟವಾದ ನಾಟಕವಾಗುವುದಿಲ್ಲ. ಕಾರಣ, ಭಾವದ ಉದ್ರೇಕ ತೀವ್ರವಾಗುವುದು ದೊಡ್ಡವರ ವಿಚಾರದಲ್ಲಿ. ಸಂದರ್ಭ ಸಾಮಾನ್ಯ ವ್ಯಕ್ತಿಗೆ ಸೇರಿದ್ದರೆ ಅದು ಔದಾಸೀನ್ಯಕ್ಕೆ ಪಕ್ಕಾಗುತ್ತದೆ. ಶಕ್ತಿವಿಶೇಷ ಇದರಲ್ಲಿ ಕಾಣುವುದಿಲ್ಲ. ಹ್ಯಾಮ್ಲೆಟ್‌ಗೆ ಯಾವುದೋ ಒಂದು ಅಜ್ಞಾತವಾದ ಮಾಯೆ ಮುಚ್ಚಿಕೊಂಡಿದೆ. ಅದಕ್ಕೆ ಯಾರು ಕಾರಣ? ಗೊತ್ತಿಲ್ಲ. ತನ್ನ ತಂದೆಗೆ ತನ್ನ ಋಣವನ್ನು ಸಲ್ಲಿಸಬೇಕಾದ್ದು ಕರ್ತವ್ಯ. ನೆನಸಿದ ಉದ್ದೇಶ ಉತ್ಕೃಷ್ಟವಾದ್ದು. ಉದ್ದೇಶದಲ್ಲಿ ಗಹನತೆ ಇಲ್ಲದಿದ್ದರೆ ಟ್ರ್ಯಾಜಿಡಿ ಆಗುವುದಿಲ್ಲ. ಮನುಷ್ಯನ ನಡವಳಿಕೆಯ ಹಿಂದೆ ಅಡಗಿರಬೇಕಾದರೆ ಅದರಲ್ಲಿ ಉದ್ದೇಶದ ಉತ್ಕೃಷ್ಟತೆ ಇರಬೇಕು. ಇಂಥಾದ್ದನ್ನು ಮಹಾಪುರುಷರಲ್ಲಿ ಕಾಣುತ್ತೇವೆ. ನಮ್ಮಲ್ಲಿರುವ ಭಾವಗಳ ಭಂಡಾರವನ್ನು ಹೆಗ್ಗಳಿಸಲು ಇವರ ಜೀವನ ಕಾರಣವಾಗುತ್ತದೆ. 'ನಾಯಕನ್ಯನಾಗೆ ಕೃತಿ ವಿಶ್ರುತಮಾಗದು ಉದಾತ್ತ ರಾಘವಂ ನಾಯಕನಾಗೆ ವಿಶ್ರುತಮೆನಿಪ್ಪುದು ವಿಸ್ಮಯಕಾರಿಯಲ್ತೆ'.

Catharsis ಗ್ರೀಕರ ಧರ್ಮಪ್ರಪಂಚಕ್ಕೆ ಸಂಬಂಧಪಟ್ಟದ್ದು. Purification–ನಿರ್ಮಲೀಕರಣ. ನಮ್ಮ ಭಾವಪ್ರಪಂಚದಲ್ಲಿ ಈ ರುದ್ರನಾಟಕದ ಪ್ರದರ್ಶನ ಬಹು ಪರಿಣಾಮಕಾರಿ. ನಮ್ಮ ಮನಸ್ಸಿನಲ್ಲಿ ದುಷ್ಟವೃತ್ತಿಗಳ ದುರಂತತೆ ಎಷ್ಟೋ ತುಂಬಿರುತ್ತದೆ. ದುರಂತ ನಾಟಕವನ್ನು ನೋಡಿದಾಗ ಇವು ಇನ್ನೂ ತುಂಬಿ, ಪರಿಶುದ್ಧಗೊಳ್ಳುವುದು ಹೇಗೆ ಸಾಧ್ಯ? ಉರಿಯನ್ನು ಆರಿಸಲಿಕ್ಕೆ ಉರಿಯ ಸಹಾಯವನ್ನೇ ಅಪೇಕ್ಷಿಸುತ್ತೇವೆ. ಮನಸ್ಸಿನಲ್ಲಿ ಅಡಗಿರುವ ಭಯ, ಶೋಕ, ಕರುಣ ಆದಿ ಭಾವಗಳನ್ನೇ ರುದ್ರನಾಟಕಗಳಲ್ಲಿ ಬರುವ ದುರಂತ ವ್ಯಕ್ತಿಯ ಜೀವನದಲ್ಲಿ ಹಾಕಿದರೆ, ನಾಟಕ ರುದ್ರನಾಟಕವಾದಾಗ, ಮನಸ್ಸು ಪರಿಶುದ್ಧವಾಗುತ್ತದೆಂದು ಹೇಳುತ್ತಾರೆ–ಹೋಮಿಯೋಪತಿ ವೈದ್ಯದಂತೆ !

ಅರಿಸ್ಟಾಟಲ್ ವೈದ್ಯಶಾಸ್ತ್ರದಿಂದ ಈ ಪದವನ್ನು ತೆಗೆದುಕೊಂಡಿದ್ದಾನೆ–Purgation, ವಿರೇಚನ. ದುರಂತ ನಾಟಕ ಭಯ ಶೋಕಾದಿಗಳನ್ನು ನಮ್ಮ ಮನಸ್ಸಿನೊಳಕ್ಕೆ ತಂದು ತುಂಬಿ, ನಮ್ಮಲ್ಲಿನ ದುಷ್ಟವೃತ್ತಿಗಳೆಲ್ಲ ಆಚೆಗೆ ಹೋಗುವಂತೆ ಮಾಡಿ, ಮನಸ್ಸನ್ನು ಶಾಂತಗೊಳಿಸುತ್ತದೆ. ಕರುಣೆಯಿಂದ ಪ್ಲಾವಿತವಾದ ಹರ್ಷದ ಸೋಂಕು ನಮಗುಂಟಾಗುತ್ತದೆ. ದುಷ್ಟವೃತ್ತಿಗಳನ್ನು ಎಚ್ಚರಗೊಳಿಸಿ, ಉಲ್ಬಣಗೊಳಿಸಿ, ಉಕ್ಕಿ ಹೋಗುವಂತೆ ಮಾಡಿ ಶಾಂತಸ್ಥಿತಿಗೆ ತರುವುದೇ ಇದರ ಪರಿಣಾಮ ಸಿದ್ಧಿ. ಈ ದೃಷ್ಟಿಯಿಂದ ನೋಡಿದರೆ ಮನುಷ್ಯನು ಈಗಿರುವುದಕ್ಕಿಂತ ಒಳ್ಳೆಯವನಾಗಿ ಆಗಬಹುದು. 'ಸ್ಯಾಮ್ಸನ್ ಅಗೊನಿಸ್ಟಸ್' ಓದಿದರೆ ಮನಸ್ಸು ಒಂದು ಸಮಾಧಾನ ಸ್ಥಿತಿಗೆ ಬರುತ್ತದೆ. ರಾಗದ್ವೇಷಗಳೆಲ್ಲ ಹೋಗುತ್ತವೆ.

ಅರಿಸ್ಟಾಟಲಿನ ಲಕ್ಷಣ ರುದ್ರನಾಟಕದ ಸ್ವಭಾವ, ಸ್ವರೂಪ, ವಸ್ತು, ಭಾಷೆ, ಪರಿಣಾಮ ಸಿದ್ಧಿ ಎಲ್ಲವನ್ನೂ ಮನಸ್ಸಿನಲ್ಲಿಟ್ಟುಕೊಂಡು ಮಾಡಿದ ಸಿದ್ಧಾಂತವೆಂದು ಕಾಣುತ್ತದೆ. ಐರೋಪ್ಯ ಸಿದ್ಧಾಂತಿಗಳೆಲ್ಲ ಇದನ್ನು ಅಡಿಗಲ್ಲಾಗಿ ಉಳಿಸಿಕೊಂಡು ಒಪ್ಪಿಕೊಂಡಿದ್ದಾರೆ. ಮಾರ್ಪಾಡನ್ನು ಸೂಚಿಸಿರಬಹುದೇ ಹೊರತು ಇದನ್ನೇ ಮೂಲಾಧಾರ ಸೂತ್ರವನ್ನಾಗಿ ಪರಿಗಣಿಸಿರುವುದು ತಿಳಿಯುತ್ತದೆ.

(ಮುಂದುವರಿಯುವುದು)

ಸಂ: ಟಿ. ವಿ. ವೆಂಕಟಾಚಲ ಶಾಸ್ತ್ರೀ

ಬಿ. ಪಿ. ಚಂದ್ರಾಬಾಯಿ

ಕಬೀರರ ಕೆಲವು ಪದಗಳು

ಬ್ರಹ್ಮಮುಹೂರ್ತ! ಹಾಲು ಚೆಲ್ಲಿದಂತೆ ಶೋಭಿಸುತ್ತಿದ್ದ ಬೆಳ್ದಿಂಗಳು ಮೆಲ್ಲ ಮೆಲ್ಲನೆ ತಿರೋಹಿತವಾಗಿ, ರವಿ ತನ್ನ ಉದಯಕ್ಕಾಗಿ ಸಿದ್ಧವಾಗುತ್ತಿದ್ದನು. ಗಂಗಾನದಿ ಪ್ರಶಾಂತವಾಗಿ ಹರಿಯುತ್ತಿತ್ತು. ಎಲ್ಲೆಡೆಯೂ ನೀರವತೆ! ಪಂಚಗಂಗೆ ಎಂಬ ಘಟ್ಟದಿಂದ ಹೊರಟ ವ್ಯಕ್ತಿಯೊಬ್ಬರು ರಾಮನಾಮವನ್ನು ಮನಸ್ಸಿನಲ್ಲಿ ಪಠಿಸುತ್ತಾ ಗಂಗಾನದಿಯ ಬಳಿಗೆ ಬಂದು ಸ್ನಾನಮಾಡಲು ನದಿಯನ್ನಿಳಿದರು. ಸ್ನಾನ ಮುಗಿಸಿ, ಅಂತರ್ಮುಖಿಯಾಗಿ ಒಂದೊಂದೇ ಮೆಟ್ಟಿಲನ್ನು ಏರುತ್ತಿದ್ದಾರೆ.. ಕೆಲವೇ ಮೆಟ್ಟಿಲುಗಳನ್ನು ಏರಿರಬಹುದು, ಅವರ ಕಾಲಿಗೆ ಏನೋ ತಗುಲಿದಂತಾಯಿತು. ಒಡನೆಯೆ, ಅವರು, "ರಾಮ, ರಾಮ" ಎಂದು ನುಡಿದು, ಚಕಿತರಾಗಿ ಅಲ್ಲೇ ನಿಂತರು!

ವ್ಯಕ್ತಿಯೊಬ್ಬನು ಮೇಲೆದ್ದು, ನಿಂತಿದ್ದ ವ್ಯಕ್ತಿಯ ಎರಡು ಪಾದಗಳನ್ನು ಗಟ್ಟಿಯಾಗಿ ಹಿಡಿದು, "ಕೃತಾರ್ಥನಾದೆ, ತಂದೆ! ನನಗಿಂದು ಗುರುವಿನ ದರ್ಶನವಾಯಿತು. ರಾಮನಾಮದ ಉಪದೇಶವೂ ಲಭಿಸಿತು. ದಾರಿಕಾಣದ, ಧ್ಯೇಯವನ್ನರಿಯದ, ಚಂಚಲ ಮನಸ್ಸಿಗೆ ರಾಮ ಮಂತ್ರೋಪದೇಶವಾಯಿತು, ತಮ್ಮ. ಶಿಷ್ಯನಾದೆ, ಉದ್ಧರಿಸಬೇಕು"—ಎಂದು ನುಡಿಯುತ್ತಾ ಅವರನ್ನು ಭಕ್ತಿಪೂರ್ಣ ದೃಷ್ಟಿಯಿಂದ ವೀಕ್ಷಿಸಿದನು. ನಿಂತಿದ್ದ ವ್ಯಕ್ತಿ ಆಶ್ಚರ್ಯದಿಂದ ಸ್ತಬ್ಧರಾಗಿ ಕ್ಷಣಕಾಲ ನೋಡಿ, ಅನಂತರ, "ನೀನಾರೆಂದು ನಾನು ಬಲ್ಲೆ ಕಂದ! ಮೇಲೇಳು. ವಿಶ್ವವೇ ಭಗವಂತನ ರೂಪವಾಗಿರುವಾಗ, ಏಕೆ ಚಿಂತೆ? ನಿನ್ನ ಮನಸ್ಸಿನ ದುಗುಡವನ್ನು ಬಿಡು. ನೀನು ನನ್ನ ಶಿಷ್ಯನಾದೆ, ತೆರಳು, ರಾಮಮಂತ್ರವನ್ನು ಜಪಿಸು"—ಎಂದರು. ಹೀಗೆ ನುಡಿದವರು ರಾಮಾನಂದರು. ಅವರ ಶಿಷ್ಯರೆ ಕಬೀರರು.

ಜೀವನ ವೃತ್ತಾಂತ

ಕಬೀರದಾಸರ ಜನ್ಮವೃತ್ತಾಂತದ ಬಗ್ಗೆ ಅನೇಕ ಮತಗಳಿವೆ. ಕೆಲವರು ಅವರನ್ನು ಹಿಂದೂ ಎಂದೂ ಮತ್ತೆ ಕೆಲವರು ಮುಸಲ್ಮಾನರೆಂದೂ ಕರೆಯುವ ವಾಡಿಕೆ ಇದೆ. ಇದರ ಸತ್ಯಾಸತ್ಯಗಳನ್ನು ತಿಳಿಯುವುದು ಕಷ್ಟ. ಕಬೀರರು ತಮ್ಮ ವಿಷಯವನ್ನು ಹೆಚ್ಚಾಗಿ ಎಲ್ಲಿಯೂ ಹೇಳಿಲ್ಲ.

ಕಬೀರಪಂಥವನ್ನು ಅವಲಂಬಿಸಿದ ಕೆಲವರಿಂದ ಕಬೀರರ ಜೀವನದ ಬಗ್ಗೆ ಸ್ವಲ್ಪ ಪರಿಚಯ ನಮಗಾಗುತ್ತದೆ. ಅವುಗಳಲ್ಲಿ ಅತಿಶಯೋಕ್ತಿಯೂ ಇರಬಹುದು. ಏಕೆಂದರೆ ಶಿಷ್ಯರು ಗುರುಗಳ ಗುಣ ಗಳನ್ನು ವರ್ಣಿಸುವಾಗ ಮೇರೆ ಮೀರುವುದು ಸಹಜ. ಅವರು ಕಬೀರರ ಜೀವನದ ಬಗ್ಗೆ ಅಸಾಧಾರಣ ವಾದ ವಿಷಯಗಳನ್ನು ಹೇಳಿರುವರೇ ವಿನಾ ಅವರ ಜನ್ಮದ ವಿಷಯವಾಗಿ ಹೆಚ್ಚಾಗಿ ಏನನ್ನೂ ಹೇಳಿಲ್ಲ. ಆದುದರಿಂದ ಕಬೀರರ ಜೀವನ ವೃತ್ತಾಂತದ ಸತ್ಯ ಇನ್ನೂ ಕತ್ತಲಲ್ಲಿಯೆ ಇದೆ.

ಕಬೀರರು ಸುಮಾರು ಕ್ರಿ.ಶ. 1398ರಲ್ಲಿ ಕಾಶಿಯಲ್ಲಿ ಹುಟ್ಟಿದರೆಂದು ಕೆಲವು ವಿದ್ವಾಂಸರ ಅಭಿ ಪ್ರಾಯ. ಮತ್ತೆ ಕೆಲವು ವಿದ್ವಾಂಸರು ಕಬೀರರು ಕ್ರಿ.ಶ. 1455ರಲ್ಲಿ ಜನ್ಮತಾಳಿದರೆಂದು ಅಭಿಪ್ರಾಯ ಪಡುತ್ತಾರೆ. ಅವರನ್ನು ಹಿಂದೂಗಳೆಂದೂ ಮತ್ತೆ ಕೆಲವರು ಅವರನ್ನು ಮುಸಲ್ಮಾನರೆಂದೂ ಕರೆ ದಿದ್ದಾರೆ. ಕಬೀರ ಪಂಥದವರು ಮಾತ್ರ ಅವರನ್ನು ಜಾತಿಗೆ ಅತೀತರೆಂದು ಭಾವಿಸುತ್ತಾರೆ.

ನೀರೂ ಮತ್ತು ನೀಮಾ ಎಂಬ ಮುಸಲ್ಮಾನ ದಂಪತಿಗಳ ಲಾಲನೆ ಪಾಲನೆಯಲ್ಲಿ ಕಬೀರ ಬೆಳೆಯುತ್ತಾ ಬಂದನು. ಮನೆಯಲ್ಲಿ ನಡೆಯುತ್ತಿದ್ದ ನೇಯ್ಗೆಯ ಕೆಲಸವನ್ನು ಅವನು ಚೆನ್ನಾಗಿ ಕಲಿತುಕೊಂಡನು. ಚಿಕ್ಕಂದಿನಲ್ಲಿಯೇ ಅವನಿಗೆ ಆಧ್ಯಾತ್ಮಿಕ ಜೀವನದ ಬಗ್ಗೆ ಹೆಚ್ಚು ಆಸಕ್ತಿ. ಸ್ವಾಮಿ ರಾಮಾನಂದರ ಕೃಪೆಯಿಂದ 'ರಾಮ' ನಾಮದ ಮಹಿಮೆಯನ್ನು ಅವನು ಅರಿತನು. ರಾಮನು ಕಬೀರನಿಗೆ ಪರಬ್ರಹ್ಮ. ಪರಮೇಶ್ವರ ಹಾಗೂ ವಿಶ್ವವ್ಯಾಪಿ.

ಲೋಯಿ ಎಂಬ ಕನ್ಯೆ ಅವರ ಶಿಷ್ಯೆಯಾಗಿ ಕಡೆಗೆ ಅವರ ಪತ್ನಿಯಾದಳೆಂದು ವದಂತಿ. ಕಬೀರರಿಗೆ ಕಮಾಲ್ ಎಂಬ ಪುತ್ರನೂ ಕಮಾಲಿ ಎಂಬ ಪುತ್ರಿಯೂ ಇದ್ದರೆಂದು ಕೆಲವರ ಅಭಿಪ್ರಾಯ. ಇವರೆಲ್ಲ ಇವರ ಶಿಷ್ಯರೆಂದೂ, ಕಬೀರ್ ಮದುವೆಯಾಗಿರಲಿಲ್ಲವೆಂದೂ ಅಭಿಪ್ರಾಯಗಳಿವೆ.

ಕಬೀರರು ದೀರ್ಘಾಯುಗಳು. ಅವರು ಮಘಹರವೆಂಬ ಸ್ಥಳದಲ್ಲಿ ಕ್ರಿ. ಶ. 1494ರಲ್ಲಿ ತಮ್ಮ ಭೌತಿಕ ಶರೀರವನ್ನು ತ್ಯಜಿಸಿದರೆಂದು ಕೆಲವು ವಿದ್ವಾಂಸರ ಅಭಿಪ್ರಾಯ.

ಕಬೀರರು ದೈವಾಧೀನರಾದ ಮೇಲೆ ಅವರ ಹಿಂದೂ ಮತ್ತು ಮುಸಲ್ಮಾನ ಶಿಷ್ಯರಲ್ಲಿ ದೊಡ್ಡ ಜಗಳ ಆರಂಭವಾಯಿತಂತೆ! ಹಿಂದೂಗಳು ಅವರ ದೇಹವನ್ನು ಸುಡಬೇಕೆಂದೂ ಮುಸಲ್ಮಾನರು ಹೂಳಬೇಕೆಂದೂ ಹಠ ಹಿಡಿದರು. ಕಡೆಗೆ ಕಬೀರದಾಸರು ಪ್ರಕಟವಾಗಿ, ಜಗಳಮಾಡುವುದನ್ನು ನಿಲ್ಲಿಸಿ, ತಮ್ಮ ಶವದ ಮೇಲೆ ಹೊದಿಸಿದ್ದ ಬಟ್ಟೆಯನ್ನು ತೆಗೆಯಲು ಭಕ್ತರಿಗೆ ಹೇಳಿದರಂತೆ! ಅವರ ಮಾತಿನಂತೆ ಶಿಷ್ಯರು ಬಟ್ಟೆಯನ್ನು ತೆಗೆದಾಗ ಕಂಡುದು ಶವವಲ್ಲ, ಹೂವಿನ ರಾಶಿ! ಆ ರಾಶಿಯನ್ನು ಹಿಂದೂ ಮತ್ತು ಮುಸಲ್ಮಾನ ಶಿಷ್ಯರಿಬ್ಬರೂ ಸಮವಾಗಿ ಹಂಚಿಕೊಂಡು ತಮ್ಮ ತಮ್ಮ ಪದ್ಧತಿಯಂತೆ ಅದಕ್ಕೆ ಅಂತ್ಯ ಸಂಸ್ಕಾರವನ್ನೆಸಗಿದರಂತೆ!

ಕಬೀರರ ವಿಚಾರಧಾರೆ

ಕಬೀರರು ತಮ್ಮ ಜೀವನದ ಬಹು ಕಾಲವನ್ನು ಕಾಶಿಯಲ್ಲಿಯೆ ಕಳೆದಿದ್ದರು. ರಾಮಾನಂದರ ಶಿಷ್ಯರಾಗಿದ್ದ ಅವರ ಮೇಲೆ ಹಿಂದೂ ಹಾಗೂ ವೈಷ್ಣವ ತತ್ತ್ವದ ಪ್ರಭಾವವಾಗಿತ್ತು. ಆದುದರಿಂದಲೇ ತಮ್ಮ ಇಷ್ಟ ದೇವರನ್ನು 'ರಾಮ', 'ಹರಿ', 'ಮುಕುಂದ', ಮುಂತಾದ ಹೆಸರಿಂದ ಕರೆದುದು. ಕಬೀರರು ಹಿಂದೂ ಮುಸಲ್ಮಾನ ಧರ್ಮಗಳ ಸಾರವನ್ನು ಗ್ರಹಿಸಿ ತಮ್ಮ ಜೀವನ ದೃಷ್ಟಿಯನ್ನು ರೂಪಿಸಿಕೊಂಡರು. ಅದ್ವೈತವನ್ನಾಗಲಿ, ವಿಶಿಷ್ಟಾದ್ವೈತವನ್ನಾಗಲಿ, ದ್ವೈತವನ್ನಾಗಲಿ ಅವರು ಅನುಸರಿಸಲಿಲ್ಲ. ರಾಮಾನಂದರಿಂದ 'ರಾಮನಾಮ'ದ ದೀಕ್ಷೆಯನ್ನು ಪಡೆದರೂ ಅವರ ರಾಮ ಕೇವಲ ದಶರಥ ಪುತ್ರ ರಾಮನಾಗಿರಲಿಲ್ಲ. ಅವರ ರಾಮ ಸಾಕ್ಷಾತ್ ಪರಬ್ರಹ್ಮ. ಅವನು ನಿರ್ಗುಣ, ನಿರಾಕಾರ!

ಕಬೀರರು ಯಾವ ದಾರ್ಶನಿಕ ಗ್ರಂಥಗಳ ಅಧ್ಯಯನವನ್ನೂ ಮಾಡಿರಲಿಲ್ಲ. ಅವರೇ ತಿಳಿಸಿದಂತೆ ಅವರು ವಿದ್ಯಾವಂತರಲ್ಲ. ಓದು ಬರಹ ಅವರಿಂದ ಬಹು ದೂರವಾಗಿತ್ತು. ತಮ್ಮ ಅನುಭವವನ್ನು ಮಾತ್ರ ಅವರು ವ್ಯಕ್ತಪಡಿಸುತ್ತಿದ್ದರು. ಇದರಿಂದಾಗಿ ಅವರಿಗೆ ರಾಮ ರಹೀಮ ಮತ್ತು ಬ್ರಹ್ಮರಲ್ಲಿ ಯಾವ ಅಂತರವೂ ಕಾಣಿಸುತ್ತಿರಲಿಲ್ಲ. ಎಲ್ಲರೂ ಒಂದೇ ಎನ್ನುವ ಭಾವ ಅವರಲ್ಲಿ ಮೂಡಿತ್ತು. ಜಗತ್ತಿನಲ್ಲಿ ಅವರಿಗೆ ಎಲ್ಲೆಲ್ಲೂ ಬ್ರಹ್ಮವೊಂದೇ ಗೋಚರಿಸುತ್ತಿತ್ತು.

"ಪಾಣೀ ಹೀ ತೈ ಹಿಮ ಭಯಾ. ಹಿಮ ಹಿಮ ಹ್ವೈ ಗಯಾ ಬಿಲಾಇ।
ಜೋ ಕುಛ್ ಥಾ ಸೋಈ ಭಯಾ, ಅಬ್ ಕಛು ಕಹ್ಯಾ ನ ಜಾಇ॥"

"ನೀರಿನಿಂದಲೇ ಹಿಮವಾಗುತ್ತದೆ. ಹಿಮ ಕರಗಿ ಪುನಃ ನೀರಾಗುತ್ತದೆ. ಅಂತೆಯೇ ಜೀವಾತ್ಮ, ಬ್ರಹ್ಮನ ಒಂದು ಅಂಶ. ಮೃತ್ಯುವೆಂದರೆ ಜೀವಾತ್ಮನು ಬ್ರಹ್ಮದಲ್ಲಿ ಲೀನವಾಗುವುದು."

ಒಂದು ಸಣ್ಣ ಬೀಜದಲ್ಲಿ ವಿಶಾಲ ವೃಕ್ಷವು ಅಡಗಿರುತ್ತದೆ. ಅಂತೆಯೆ ಬೀಜರೂಪನಾದ ಬ್ರಹ್ಮದಲ್ಲಿ, ನಾಮರೂಪಾತ್ಮಕ ಜಗತ್ತು ಲೀನವಾಗಿರುತ್ತದೆ. ಅಂತೆಯೇ ಬ್ರಹ್ಮ ತಾನು ಇಚ್ಛಿಸಿದಾಗ ವಿಶಾಲವಾಗುತ್ತಾನೆ ಮತ್ತು ತನ್ನಲ್ಲೇ ತಾನು ಐಕ್ಯನಾಗುತ್ತಾನೆ.

ಕಬೀರರು ಕೇವಲ ಬ್ರಹ್ಮವನ್ನು ಮಾತ್ರ ಸತ್ಯವೆಂದೂ ಮತ್ತೆಲ್ಲವೂ ಅಸತ್ಯವೆಂದೂ ಹೇಳಿದ್ದಾರೆ. ಸಂಸಾರವನ್ನು ಸತ್ಯವೆಂದು ತಿಳಿಯುವವರು ಮಾಯೆಯ ಭ್ರಮೆಯಲ್ಲಿ ಸಿಕ್ಕಿ ಅನುಭವಿಸುವುದು ದುಃಖ ವನ್ನು. ಮಾಯೆಯೇ ವಿಷಯ ವಾಸನೆಗಳಿಗೆ ಕಾರಣ. ಕಾಮ, ಕ್ರೋಧ, ಮದ, ಲೋಭ ಮತ್ತು ಮಾತ್ಸರ್ಯಗಳೇ ಮನುಷ್ಯನ ಅಧಃಪತನಕ್ಕೆ ಕಾರಣ.

"ವಿಚಾರದ ಬಳಿಕ ನಿರ್ಮಲ ಜಲ ನನಗೆ ಕಾಣಿಸಿತು. ಆ ಜಲವೆ 'ರಾಮಜಲ'. ಅದನ್ನು ಕುಡಿದು ನಾನು ತೃಪ್ತನಾಗಿದ್ದೇನೆ. ಆದರೆ ಅದರ ವರ್ಣನೆಯನ್ನು ಮಾತ್ರ ನಾನು ಮಾಡಲಾರೆ. 'ರಾಮ'ನನ್ನು ವರ್ಣಿಸುವುದು ಅಸದಳ." ಕೆಲವು ಕಡೆ ಸೃಷ್ಟಿಕರ್ತನ ಕಲ್ಪನೆಯನ್ನು ಕಬೀರರು ಮಾಡಿದ್ದಾರೆ. ಸೃಷ್ಟಿಕರ್ತ ಕುಂಬಾರನಂತೆ! ವಿವಿಧ ಪ್ರಕಾರದ ರಚನೆಯನ್ನು ಸೃಷ್ಟಿಸಿದ್ದಾನೆ. ಅದರಲ್ಲಿ ತಾನು ಪ್ರತಿಬಿಂಬಿತನಾಗಿ ಸೃಷ್ಟಿಯ ಪಾಲನೆಯಲ್ಲಿ ತೊಡಗಿದ್ದಾನೆ. ಸೃಷ್ಟಿಕರ್ತನು ಸಂರಕ್ಷಕ ಮತ್ತು ನಾಶಕ. ಬ್ರಹ್ಮನ ವಿರಾಟ್ ರೂಪವನ್ನು ವರ್ಣಿಸುತ್ತಾ 'ಕೋಟಿ ಸೂರ್ಯರ ಪ್ರಕಾಶ ಅಲ್ಲಿದೆ, ಕೋಟಿ ಮಹಾದೇವರು ಅಲ್ಲಿ ವಿರಾಜಿಸು ತ್ತಾರೆ. ಕೋಟಿ ದುರ್ಗೆಯರು ಅವರ ಸೇವೆಯಲ್ಲಿ ನಿರತರಾಗಿದ್ದಾರೆ. ಕೋಟಿ ಬ್ರಹ್ಮರು ವೇದೋಚ್ಚಾರ ಮಾಡುತ್ತಿದ್ದಾರೆ. ಕೋಟಿ ನವಗ್ರಹಗಳು ಅಲ್ಲಿದ್ದಾರೆ. ಆದರೂ ಬ್ರಹ್ಮನ ಅಂತ್ಯವನ್ನು ತಿಳಿಯುವುದು ಕಷ್ಟ' ಎಂದಿದ್ದಾರೆ ಕಬೀರರು. ಈ ವರ್ಣನೆಯಿಂದ ಕಬೀರರು ಸಗುಣೋಪಾಸಕರೆಂದು ತಿಳಿಯಬಾರದು. ಬ್ರಹ್ಮಸ್ವರೂಪವನ್ನು ವಿವರಿಸಲು ಮಾಡಿದ ಅವರ ಕಲ್ಪನಾ ವೈಖರಿ ಇದು.

ನಿರ್ಗುಣ ಬ್ರಹ್ಮನ ಉಪಾಸಕರಾದ ಕಬೀರರು ಜ್ಞಾನ ಮತ್ತು ಧರ್ಮ ಎರಡನ್ನೂ ಒಟ್ಟು ಗೂಡಿಸಿದರು. ಸತ್ಯಶೋಧನೆಗೆ ಹೆದ್ದಾರಿ ಜ್ಞಾನವೆಂದರು. ಭ್ರಮೆ, ಅಂಧವಿಶ್ವಾಸ ಮತ್ತು ನಿರರ್ಥಕ ಕರ್ಮಗಳು ನಶಿಸಿಹೋಗುವುದು ಜ್ಞಾನದಿಂದಲೇ ಎಂಬುದು ಅವರ ದೃಷ್ಟಿ. ಪುಸ್ತಕಗಳಿಂದ ಸಿಗುವ ವಸ್ತುವಲ್ಲ ಜ್ಞಾನ. ಅದು ಅನುಭವ, ಸಾಧನೆ ಹಾಗೂ ಆಚರಣೆಗಳಿಂದ ಲಭಿಸುತ್ತದೆ. ಕೇವಲ ಪಾಂಡಿತ್ಯ ದಿಂದಲೇ ಪ್ರಯೋಜನವಿಲ್ಲವೆಂಬುದು ಅವರ ಅಭಿಪ್ರಾಯ.

ಕಬೀರರು ತಮ್ಮ ರಾಮ, ಅವತಾರ ಪುರುಷನಾದ ರಾಮನಲ್ಲ, ದಶರಥ ಪುತ್ರನೂ ಅಲ್ಲ, ಆದರೆ ಪ್ರತಿಯೊಬ್ಬ ಮಾನವನ ಹೃದಯದಲ್ಲೂ ಸ್ಥಿತನಾದ ಪರಬ್ರಹ್ಮ ಸ್ವರೂಪಿ ಎಂದಿದ್ದಾರೆ. ರಾಮನನ್ನು ಹರಿ, ಗೋವಿಂದ, ರಾಮ, ಕೇಶವ, ಮಾಧವ ಇತ್ಯಾದಿ ಹೆಸರುಗಳಿಂದ ಕರೆದರೂ ಅವನು ನಾಮಕ್ಕೆ ಅತೀತ; ಅವನನ್ನು ಕೇವಲ ಅಂತಃಚಕ್ಷುಗಳಿಂದ ಕಾಣಬಹುದು; ಬಾಹ್ಯ ಚಕ್ಷುವಿಗೆ ಅವನು ಕಾಣು ವವನಲ್ಲ—ಎಂದು ಕಬೀರರು ಸ್ಪಷ್ಟಪಡಿಸಿದ್ದಾರೆ.

ನಿರ್ಗುಣ ರಾಮನು ಕೇವಲ ತರ್ಕ, ಜಪ, ತಪ, ಯೋಗ, ವೇದ ಪುರಾಣಗಳಿಗೆ ಸಿಗುವವನಲ್ಲ. ಅವನು ಭಕ್ತಿಗೆ ಮಾತ್ರ ಒಲಿಯುವವನು. ನಿರ್ಗುಣ ರಾಮನ ಸ್ವರೂಪವನ್ನು ಹೀಗೆ ವರ್ಣಿಸಿದ್ದಾರೆ:–

ಅವನು ನಿರಂಜನ. ಸಾಧಾರಣ ಚಕ್ಷುವಿಗೆ ಅಗೋಚರನಾದುದರಿಂದ ಅವನು ಅಲಖ್ ನಿರಂಜನ. ಅವನಿಗೆ ರೂಪ, ಆಕಾರ, ಮುಖ, ಮುದ್ರೆ ಯಾವುದೂ ಇಲ್ಲ. ಮಾಯೆ ಅವನಿಂದ ಬಹು ದೂರ. ಸಮುದ್ರ, ಪರ್ವತ ಶಿಖರ, ಪೃಥ್ವಿ, ಸೂರ್ಯ, ಚಂದ್ರ, ವಾಯು ಇವುಗಳಿಗೆ ಅವನು ಅತೀತ. ಅವನಿಗೆ ಶರೀರವಾಗಲಿ, ನಾದವಾಗಲಿ, ಮೃತ್ಯುಭಯವಾಗಲಿ ಇಲ್ಲ. ಸೃಷ್ಟಿಯ ಆದಿ ಅವನು. ಜಪ, ತಪ, ಧ್ಯಾನ, ಯೋಗಗಳಿಗೆ ಅವನು ಸಿಲುಕುವವನಲ್ಲ. ಶಿವಶಕ್ತಿಯೂ ಅವನಲ್ಲ. ಋಗ್, ಯಜುರ್, ಅಥರ್ವ, ಸಾಮವೇದ, ವ್ಯಾಕರಣಗಳಿಗೆ ಅವನು ವಿಭು. ಅವನನ್ನು ಅರಿತಿರುವವನು ಅವನೇ. ಕಬೀರನಾದರೋ ಕೇವಲ ಅವನ ಸೇವಕ, ದಾಸ.

ಮುಕ್ತಿಗೆ ಮಾರ್ಗ ರಾಮನ ಪ್ರೀತಿಯೊಂದೇ. ಇದು ಕಬೀರರ ದೃಢ ವಿಶ್ವಾಸ. ತಮ್ಮ ತಮ್ಮ ಹೃದಯವನ್ನು ಹೊಕ್ಕು ಅದರಲ್ಲಿ ನೋಡಿದಾಗ ಮಾತ್ರ ರಾಮನ ಪ್ರತಿಬಿಂಬವನ್ನು ನೋಡಬಹುದು. ಬೇರೆ ಉಪಾಯಗಳಿಂದ ಅಸಾಧ್ಯ. ಸಾಧಕನ ಘೋರ ಶತ್ರುವೆಂದರೆ ಕಲುಷಿತ ಮನಸ್ಸು. ಮನಸ್ಸನ್ನು ವಶದಲ್ಲಿಡುವುದು ಕಷ್ಟಕರ. ಅಹಂಕಾರ ಮತ್ತು ಶರೀರದ ಮೋಹವನ್ನು ಬಿಟ್ಟಾಗಲೇ ಮನಸ್ಸು ನಿರ್ಮಲವಾಗುವುದು. ವೀರನಾದವನೇ ಮೋಹವನ್ನು ಗೆಲ್ಲುವುದು. ಕಾಮ, ಕ್ರೋಧಗಳನ್ನು ತ್ಯಜಿಸಿದಾಗಲೇ ಭಗವಂತನ ಪ್ರಾಪ್ತಿ.

ಕಬೀರರ ಕಾಲದಲ್ಲಿ ಪ್ರಚಾರದಲ್ಲಿದ್ದ ಸೂಫಿ 'ಪ್ರೇಮತತ್ತ್ವ' ಕಬೀರರ ಮೇಲೂ ಪ್ರಭಾವ ಬೀರಿತು.

ಸೂಫಿಗಳು ಮುಸಲ್ಮಾನರ ಒಂದು ಪಂಗಡದವರಾದರೂ ಅವರಲ್ಲಿ ಉದಾರ ಮನೋಭಾವ ಮತ್ತು ಸಹಿಷ್ಣುತೆ ಇತ್ತು. ಭಗವಂತನ ಮಿಲನ, ಪ್ರತೀಕ್ಷೆ ಮತ್ತು ವಿರಹಗಳ ಅತ್ಯಂತ ಮಾರ್ಮಿಕ ವರ್ಣನೆಗಳನ್ನು ಕಬೀರರು ಮಾಡಿದ್ದಾರೆ.

ಕಬೀರರ ರಹಸ್ಯವಾದ

ಜೀವಾತ್ಮ ಆಧ್ಯಾತ್ಮಿಕ ಶಕ್ತಿಯೊಡನೆ ಸಮರಸವಾಗುವುದೇ ರಹಸ್ಯವಾದ (Mysticism). ಈ ಭಾವನೆ ವೇದದಲ್ಲಿಯೂ ಉಲ್ಲೇಖವಾಗಿದೆ. ಜೀವಾತ್ಮ ದಿವ್ಯ ಶಕ್ತಿಯಲ್ಲಿ ಒಂದಾಗಿ ತನ್ನ ಪ್ರತ್ಯೇಕತೆಯನ್ನು ಹೋಗಲಾಡಿಸುತ್ತದೆ. ಇದಕ್ಕೆ 'ದಿವ್ಯ ಸಂಯೋಗ' ಎಂದು ಹೆಸರು. ಈ ಸಂಯೋಗದಿಂದಲೇ ಜೀವಾತ್ಮ ಪರಮಾತ್ಮರಲ್ಲಿ ಗಾಢವಾದ ಪ್ರೇಮ ಬೆಳೆಯುವುದು. ಆ ಪ್ರೇಮದಲ್ಲಿ ಚಾಂಚಲ್ಯವಿಲ್ಲ. ಅದು ಅಜರ, ಅಮರ, ಪೂರ್ಣ. ಪ್ರೇಮದಿಂದ ಕೂಡಿದ ಜೀವಾತ್ಮನ ಇಂದ್ರಿಯಗಳೆಲ್ಲಾ ಅತ್ಯಂತ ಸೂಕ್ಷ್ಮವಾಗುತ್ತವೆ. ಜೀವಾತ್ಮ 'ತಾನು', 'ತನ್ನದು' ಎನ್ನುವ ಭಾವನೆಯನ್ನು ಮರೆತು ಪೂರ್ಣವಾಗಿ ತನ್ನನ್ನು ಅರ್ಪಿಸಿಕೊಳ್ಳುತ್ತದೆ. ಆಗ ಸ್ವಾರ್ಥವಿಲ್ಲ. ವಾಸನೆಗಳಿಲ್ಲ. ಸಿದ್ಧಿ ಪ್ರಾಪ್ತಿಯ ಆಸೆಯೂ ಇಲ್ಲ. ಕೇವಲ ಪ್ರೇಮದಿಂದ ಪೂರ್ಣ ಅನುಭವ. ಏಕತ್ವ ಭಾವನೆಯನ್ನು ಪಡೆಯಲು ಜೀವಾತ್ಮ ಮಾಡುವ ಕಾರ್ಯವೇ 'ಸಾಧನೆ' ಎನಿಸುತ್ತದೆ. ಸಾಧಕನ ಕೆಲವು ಮಜಲುಗಳನ್ನು ಹೀಗೆ ಚಿತ್ರಿಸಬಹುದು:

ಸಾಧಕನಿಗೆ ಮೊದಲು ಈಶ್ವರನ ಅನಂತ ಶಕ್ತಿಯನ್ನು ನೋಡಿ ಆಶ್ಚರ್ಯವಾಗುತ್ತದೆ. ಅದನ್ನು ಅವನು ಮೌನವಾಗಿ ವೀಕ್ಷಿಸುತ್ತಾನೆ. ಕ್ರಮೇಣ ಅವನು ಅನಂತ ಶಕ್ತಿಪುಂಜನಾದ ಭಗವಂತನನ್ನು ಪ್ರೇಮಿಸಲು ಪ್ರಾರಂಭಿಸುತ್ತಾನೆ. ಆ ಪ್ರೇಮದ ಪ್ರವಾಹದಲ್ಲಿ ತನ್ನನ್ನೆ ಅರ್ಪಿಸುತ್ತಾನೆ. ಇದು ಸಾಧಕನ ದ್ವಿತೀಯ ಸ್ಥಿತಿ. ಅನಂತರ ಅವನು ಜೀವಾತ್ಮ ಮತ್ತು ಪರಮಾತ್ಮರನ್ನು ಏಕರೂಪವಾಗಿ ಕಾಣುತ್ತಾನೆ. ಮೊದಲು ಮಾಯೆಯು ಇಬ್ಬರನ್ನು ಭಿನ್ನಪಡಿಸಿದರೂ ಸಾಧಕನ ಸಾಧನೆಯಿಂದ ಮಾಯೆಯ ಪರದೆ ಹರಿದು ಇಬ್ಬರೂ ಅತ್ಯಂತ ಹತ್ತಿರ ಬಂದು ಕಡೆಗೆ ಐಕ್ಯರಾಗುತ್ತಾರೆ.

ಇಂಥ ಅನುಭವಗಳು ವ್ಯಕ್ತಿಗತವಾದುವು. ಜೀವಾತ್ಮನು ತನ್ನದೇ ಆದ ಸಾಧನೆಯಿಂದ ಈ ಸ್ಥಿತಿಯನ್ನು ಪಡೆಯುವುದು. ಅದರಿಂದಾಗುವ ಅನುಭವಗಳು ಅವನಿಗೆ ಸೇರಿದುದು. ತನಗಾದ ಅನುಭವಗಳನ್ನು ಅವನು ವರ್ಣಿಸಲಾರ. ವರ್ಣಿಸದಿರಲಾರ. ಆ ಅನುಭವಗಳನ್ನು ವರ್ಣಿಸುವಾಗ ಅವನ ಅಸ್ಪಷ್ಟ ಮಾತುಗಳನ್ನು ಕೇಳಿದರೆ ಅವನು ಹುಚ್ಚನಂತೆ ಕಾಣಬಹುದು.

ಕಬೀರರ ಪದಗಳಲ್ಲಿ ಈ ರಹಸ್ಯವಾದದ ರೂಪರೇಖೆಗಳು ಪ್ರಕಟವಾಗುತ್ತವೆ. ಹಿಂದೂಗಳ ಅದ್ವೈತ, ಸೂಫಿಗಳ ಪ್ರೇಮವಾದ, ಇವೆರಡರ ಸಮ್ಮಿಳನವಾಗಿದೆ ಕಬೀರರ ವಿಚಾರಧಾರೆಯಲ್ಲಿ.

ಕಬೀರರ ಕೆಲವು ಪದಗಳ ಭಾವಾರ್ಥಗಳನ್ನು ಮುಂದೆ ಕೊಟ್ಟಿದೆ. ಅವರ ಮನೋಧರ್ಮವನ್ನು ಅರಿಯಲು ಅವುಗಳಿಂದ ಸಹಾಯವಾಗಬಹುದು :

ಓ ಸಾಧು, ನೀನು ನನ್ನನ್ನು ಅರಸುವುದೆಲ್ಲಿ?
ನಾನಾದರೊ ನಿನ್ನ ಬಳಿಯೆ ಇರುವೆ.
ಮಂದಿರ ಮಸೀದಿ ಕಾಬಾ ಕೈಲಾಸಗಳಲ್ಲಿ ನಾನಿಲ್ಲ.
ಕ್ರಿಯೆ ಕರ್ಮಗಳಲ್ಲಿ ನಾನಿಲ್ಲ. ಯೋಗ ವೈರಾಗ್ಯಗಳಲ್ಲಿ ನಾನಿಲ್ಲ.
ನೀನು ನಿಶ್ಚಲ ಮನಸ್ಸಿನಿಂದ ಹುಡುಕಿದರೆ ಕ್ಷಣದಲ್ಲಿ ನನ್ನನ್ನು ಕಾಣುವೆ.
ಬಹುಬೇಗನೆ ನೀನು ನನ್ನನ್ನು ಸೇರುವೆ.
ಕಬೀರ ಹೇಳುತ್ತಾನೆ: ಓ ಸಾಧು ಕೇಳು, ಉಸಿರುಗಳ ಉಸಿರು ಭಗವಂತ[1]

●

---

1 ಕಬೀರರ ಹಿಂದಿ ಪದಗಳ ಮೂಲಕ್ಕೆ ಕೆಳಗಿನ ಪುಸ್ತಕವನ್ನು ನೋಡಿ:
ಡಾ. ಹಜಾರಿ ಪ್ರಸಾದ್ ದ್ವಿವೇದಿ, ಕಬೀರ. ಪು. 230; ಕ್ರ. ಸಂ. 1–13.

ಹೋಗದಿರು ಪುಷ್ಪೋದ್ಯಾನಕ್ಕೆ!
ಸ್ನೇಹಿತನೆ, ಹೋಗದಿರಲ್ಲಿ.
ನಿನ್ನ ಶರೀರದಲ್ಲಿದೆ ಪುಷ್ಪವನ.
ಸಹಸ್ರದಳ ಕಮಲದಲ್ಲಿ ಪದ್ಮಾಸನ ಸ್ಥಿತನಾಗಿ
ದಿವ್ಯ ಸೌಂದರ್ಯವನ್ನು ನೋಡು!2

●

ಶರೀರದಲ್ಲಿದೆ ನನ್ನ ಚಂದ್ರೋದಯ. ಆದರೆ ಕಾಣಲಾರದು ನನ್ನ ಅಂಧನಯನ.
ರವಿ ಶಶಿಯರು ನನ್ನಲ್ಲಿದ್ದಾರೆ.
ನನ್ನಲಿದೆ ಅನಾಹತ ನಾದ; ಹುಡುಕುವ ನನ್ನ ಕಿವುಡು ಕಿವಿ ಕೇಳಲಾರದು.
ತಾನು ತನ್ನದು ಎಂದರಸುವ ಮನುಷ್ಯನ ಕಾರ್ಯವೆಲ್ಲ ಶೂನ್ಯ.
ನಾನು ನನ್ನದೆನ್ನುವ ಮೋಹ ದೂರವಾದಾಗ ಭಗವಂತನ ಕಾರ್ಯದಾರಂಭ.
ಕಾರ್ಯದ ಗುರಿ ಜ್ಞಾನಾರ್ಜನೆ.
ಜ್ಞಾನೋದಯವಾದೊಡನೆ ಕರ್ಮ ನಶಿಸುತ್ತದೆ.
ಹಣ್ಣುಗಳಿಗಾಗಿ ಅರಳುತ್ತವೆ ಹೂವು.
ಹಣ್ಣು ಮೂಡಿದಾಗ ಹೂವಿನ ನಾಶ.
ಜಿಂಕೆಯಲ್ಲಿದೆ ಕಸ್ತೂರಿ.
ತನ್ನಲ್ಲಿ ಅದನ್ನು ಅರಸದೆ ಹುಲ್ಲಿನಲ್ಲಿ ಹುಡುಕುತ್ತದೆ!3

●

ಓ ಹಂಸವೆ, ನಿನ್ನ ಹಿಂದಿನ ಕತೆಯನ್ನು ಹೇಳು.
ಯಾವ ದೇಶದಿಂದ ಬಂದೆ ನೀನು ಓ ಹಂಸ?
ಯಾವ ತೀರಕ್ಕೆ ಹಾರುವೆ ಹಂಸ?
ನಿನ್ನ ವಿಶ್ರಾಂತಿ ಗೃಹವೆಲ್ಲಿ ಓ ಹಂಸ?
ನೀನು ಅರಸುವುದಾದರೂ ಏನನ್ನು?
ಈ ಮುಂಜಾನೆಯಲ್ಲಿ ಎಚ್ಚತ್ತು ನನ್ನನ್ನೊಡಗೂಡಿ ನಡೆ, ಓ, ಹಂಸ!
ಸಂದೇಹ ಕ್ಲೇಶಗಳಿಲ್ಲದ ತಾಣವೊಂದಿದೆ.
ಅಲ್ಲಿ ಮೃತ್ಯು ಭಯವಿಲ್ಲ.
ವನಗಳೆಲ್ಲಾ ವಸಂತ ಪುಷ್ಪಗಳಿಂದ ಬಿರಿದಿವೆ.
ವಾಯು ಮಂಡಲ 'ಸೋಹಂ' ಸುಗಂಧದಿಂದ ತುಂಬಿದೆ.
ಅಲ್ಲಿ ಸ್ಥಿತವಾಗಿರುವ ಹೃದಯ ಭ್ರಮರ, ಸುಖದ ಅಭಿಲಾಷೆಗಳೆಲ್ಲ
ವನ್ನು ತೊರೆದು, ತನ್ನಲ್ಲಿಯೇ ತಾನು ಲೀನವಾಗಿದೆ.4

●

ಓ ನನ್ನ ಪ್ರಿಯನೆ, ಬಾ ನನ್ನ ಮನೆಗೆ.
ನೀನಿಲ್ಲದೆ ತನುಮನಗಳಿಗೆ ದುಃಖ.
ಜನರೆಲ್ಲ ನಾನು ನಿನ್ನ ವಧುವೆಂದು ಕರೆದಾಗ
ಲಜ್ಜಿತಳಾಗುತ್ತೇನೆ.

---

2 ಅದೇ. ಪು. 233;ಕ್ರ. ಸಂ. 1–58.
3 ಅದೇ. ಪು. 235; ಕ್ರ. ಸಂ. 1–83.
4 ಅದೇ. ಪು. 240; ಕ್ರ ಸಂ. 2–24.

ನಮ್ಮಿಬ್ಬರ ಹೃದಯ ಮಿಲನವಿಲ್ಲದಿರುವಾಗ ಈ ನನ್ನ ಪ್ರೇಮ
ಎಂತಹದು?

ಊಟ ರುಚಿಸದು, ನಿದ್ದೆ ಬಾರದು,
ಅಂತರಂಗ ಬಹಿರಂಗಗಳಲ್ಲಿ ಹೃದಯದ ಹೋರಾಟವಾಗುತ್ತದೆ.
ಬಾಯಾರಿದವಗೆ ಜಲವಿರುವಂತೆ, ಪ್ರಿಯಳಿಗೆ ತನ್ನ ಇನಿಯ.
ನನ್ನ ಪ್ರಿಯನಲ್ಲಿ ನನ್ನ ಈ ಸಂದೇಶವನ್ನು ಸಾಗಿಸುವವರಾರು?
ಪರಮಾತ್ಮನ ಪ್ರಿಯ ದರ್ಶನಕ್ಕಾಗಿ ಕಬೀರ ಕಾತರಗೊಂಡಿದ್ದಾನೆ.5

ನಮ್ಮಿಬ್ಬರ ಪ್ರೇಮಕ್ಕೆ ಅಗಲಿಕೆ ಹೇಗೆ?
ಪದ್ಮಪತ್ರಕ್ಕೆ ಜಲವೇ ನಿರಂತರ ವಾಸಸ್ಥಾನ.
ಹೀಗೆ, ನೀನು ನನ್ನೊಡೆಯ; ನಾನು ನಿನ್ನ ಸೇವಕ.
ಚಕೋರಕ್ಕೆ ಚಂದ್ರಮನದೇ ಸದಾ ಚಿಂತೆ.
ಹೀಗೆ, ನೀನು ನನ್ನ ಒಡೆಯ, ನಾನು ನಿನ್ನ ದಾಸ.
ಆದಿಯಿಂದ ಅಂತ್ಯ ಕಾಲದವರೆಗಿನ ನಮ್ಮ ಈ ಪ್ರೇಮಕ್ಕೆ
ಚ್ಯುತಿಯುಂಟೆ?

ಕಬೀರ ಹೇಳುತ್ತಾನೆ: ನದಿ ಸಮುದ್ರವನ್ನು ಸೇರುವಂತೆ ನನ್ನ ಹೃದಯ ನಿನ್ನಲ್ಲಿ ಐಕ್ಯ.6

●

ಓ ನನ್ನ ಹೃದಯ, ಪರಮಗುರು ಪರಮಾತ್ಮ ನಿನ್ನ ಬಳಿಯೆ
ಇದ್ದಾನೆ. ಏಳು, ಮೇಲೇಳು.
ನಿನ್ನ ಸ್ವಾಮಿ ನಿನ್ನ ಶಿರದತ್ತಲೇ ನಿಂತಿದ್ದಾನೆ
ಅವನ ಪಾದ ಕಮಲಗಳೆಡೆ ಓಡು.
ಯುಗ ಯುಗಗಳ ನಿದ್ದೆ ಸಾಕು.
ಇಂದಿನ ಈ ಮುಂಜಾನೆಯಲ್ಲಾದರೂ ಏಳಲಾರೆಯಾ?7

ಮನೆ ಮನೆಯಲ್ಲಿ ದೀಪೋತ್ಸವ!
ಅದನ್ನು ನೀನು ಕಾಣಲಾರೆಯಾ ಓ ಅಂಧ!
ಒಂದು ದಿನ ನಿನ್ನ ಕಣ್ಣುಗಳು ತಟಕ್ಕನೆ ತೆರೆಯುತ್ತವೆ.
ಮರಣಭಯ ಜಾರುತ್ತದೆ. ಅದನ್ನು ನೀನು ಕಾಣುವೆ.
ಆಗ ಹೇಳುವುದೂ ಏನಿಲ್ಲ; ಕೇಳುವುದೂ ಏನಿಲ್ಲ;
ಮಾಡುವುದೂ ಏನಿಲ್ಲ. ಇರುವವನೂ ಅವನೆ,
ಸತ್ತು ಸಾಯಲಾರದವನೂ ಅವನೆ.
ಏಕಾಂತದಲ್ಲಿರುವವನೂ ಅವನೆ.
ಅದಕ್ಕಾಗಿ ಅವನ ನೆಲೆ ದೂರವಿದೆಯೆಂದು ಹೇಳುತ್ತಾನೆ ಯೋಗಿ.
ಭಗವಂತ ನಿನ್ನ ಬಳಿಯೆ ಇದ್ದಾನೆ.
ಅವನನ್ನು ಕಾಣಲು ತೆಂಗಿನಮರವನ್ನು ಹತ್ತುತ್ತಿರುವೆ.
ವಿಪ್ರರು ಮನೆ ಮನೆಗೆ ತಿರುಗಿ ಜನರಲ್ಲಿ ನಂಬಿಕೆ ಮೂಡಿಸುತ್ತಿದ್ದಾರೆ.

---

5 ಅದೇ. ಪು. 258; ಕ್ರ ಸಂ. 2–113
6 ಅದೇ. ಪು. 258; ಕ್ರ. ಸಂ. 2–110.
7 ಅದೇ. ಪು. 250; ಕ್ರ. ಸಂ 2–20

ಆಹಾ! ಜೀವನದ ಚಿಲುಮೆ ನಿನ್ನಲ್ಲಿಯೇ ಇದೆ.
ಆದರೆ ನೀನು ಪೂಜಿಸಲು ಕಲ್ಲನ್ನು ಸ್ಥಾಪಿಸಿರುವೆ.
ಕಬೀರ ಹೇಳುತ್ತಾನೆ: ಪ್ರಭುವನ್ನು ಬಣ್ಣಿಸಲಾರೆ.
ಯೋಗ, ಜಪ, ಧ್ಯಾನ, ಶೀಲ ಎಲ್ಲವೂ ಅವನಿಗೆ ಶೂನ್ಯ.8

●

ಓ ಮನವೆ, ಹೀಗೇಕೆ ಅಧೀರವಾದೆ?
ಪಶು, ಪಕ್ಷಿ, ಜೀವ ಕೀಟ ಪತಂಗಗಳನ್ನು ರಕ್ಷಿಸಿದವ,
ಮಾತೃಗರ್ಭದಲ್ಲಿ ಸಲಹಿದವ, ಇಂದು ನಿನ್ನನ್ನು ಸಲಹಲಾರನೆ?
ಓ ಮನವೆ, ಪರಮಾತ್ಮನ ಪ್ರೇಮದಿಂದ
ವಿಮುಖನಾಗಿ ಎಲ್ಲಿ ಅಲೆದಾಡುವೆ?
ಪ್ರಿಯತಮನನ್ನು ಬಿಟ್ಟು ಅನ್ಯರನ್ನು ಏಕೆ ಚಿಂತಿಸುವೆ?
ಅದರಿಂದ ನಿನ್ನ ಕಾರ್ಯಗಳೆಲ್ಲ ನಶಿಸುತ್ತವೆ.9

●

ಬೇರುಗಳಿಲ್ಲದ ವೃಕ್ಷ ಒಂದಿದೆ, ಹೂವಿಲ್ಲದೆ ಫಲ ಬಿಡುವುದು.
ಅದಕ್ಕೆ ಎಲೆ ಕೊಂಬೆಗಳಿಲ್ಲ, ಎಲ್ಲೆಲ್ಲೂ ಕಮಲಗಳೆ ಅದಕ್ಕೆ.
ವೃಕ್ಷದ ಮೇಲೆ ಹಕ್ಕಿಗಳೆರಡಿವೆ, ಒಂದು ಗುರು,ಮತ್ತೊಂದು ಶಿಷ್ಯ.
ಜೀವನಫಲ ರಸಾಸ್ವಾದನೆಯಲ್ಲಿ ಶಿಷ್ಯ ನಿರತ.
ಭಗವಂತನ ಲೀಲೆಯಲ್ಲಿ ಗುರು ಮಗ್ನ.
ಗಹನ ವಿಚಾರವನ್ನು ಕುರಿತು ಕಬೀರ ಹೇಳುತ್ತಾನೆ:
ಪಕ್ಷಿಯ ಅನ್ವೇಷಣೆ ಅಗಮ್ಯ, ಆದರೂ ಪ್ರಕಟ.
ಎಲ್ಲಾ ಆಕಾರಗಳ ಮೂಲ ನಿರಾಕಾರ.
ಎಲ್ಲಾ ಆಕಾರಕ್ಕೆ ನಮನ.10

●

ಓ ನನ್ನ ಹೃದಯವೆ, ಪ್ರೇಮ ನಗರದ ಅಂತರಂಗವನ್ನು
ಅರಿಯದಿರುವೆ,
ಹೇಗೆ ಬಂದೆಯೋ ಹಾಗೆಯೇ ಹಿಂತಿರುಗುವೆ.
ಪ್ರಾಣ ಪ್ರಿಯನೆ, ಸಖನೆ, ಕೇಳು, ಜೀವನದಲ್ಲಿ ಏನನ್ನು ಸಾಧಿಸಿದೆ?
ತಲೆಯ ಮೇಲೆ ಬಂಡೆಗಳ ಭಾರವನ್ನು ಹೊತ್ತಿರುವೆ, ಅದನ್ನು
ಇಳಿಸುವವರಾರು?
ಕಡಲಿನಾಚೆಯ ತೀರದಲ್ಲಿ ನಿನ್ನ ಸ್ನೇಹಿತ ನಿನಗಾಗಿ ಕಾದು ನಿಂತಿದ್ದಾನೆ.
ಆದರೆ ಅವನನ್ನು ಕಾಣುವ ಆಕಾಂಕ್ಷೆಯಿಂದ ನೀನು ದೂರವಿರುವೆ.
ನಾವೆ ಮುರಿದಿದೆ, ಆದರೂ ನೀನು ಅದರ ಮೇಲೆ ಕುಳಿತಿರುವೆ.
ಇನ್ನೇನು ಮುಳುಗಲಿರುವೆ ಎಚ್ಚರಿಕೆ!
ದಾಸ ಕಬೀರನು ಎಚ್ಚರಿಸುತ್ತಿದ್ದಾನೆ: ಕೇಳು, ಅಂತ್ಯ ಕಾಲದಲ್ಲಿ
ನಿನ್ನ ಸಹಾಯಕರಾರು?

---

8. ಅದೇ. ಪು. 251; ಕ್ರ. ಸಂ. 2–33
9 ಅದೇ. ಪು. 270; ಕ್ರ. ಸಂ. 1–39.
10 ಅದೇ. ಪು. 264; 264; ಕ್ರ. ಸಂ. 1–102.

ನೀನು ಒಬ್ಬೊಂಟಿಗ, ನಿನ್ನ ಕರ್ಮ ಫಲವನ್ನು ನೀನೇ
ಅನುಭವಿಸಬೇಕು11

●

ಓ ನನ್ನ ಗುರುವೆ, ನೀನು ನನ್ನ ಪ್ರೇಮದ ದಾರಿ ದೀಪವಾದೆ.
ಮನೆಯಲ್ಲಿ ನಿದ್ರಿಸುತ್ತಿದ್ದ ನನ್ನನ್ನು ನಿನ್ನ ಪ್ರೇಮವಾಣಿಯಿಂದ
ಎಚ್ಚರಿಸಿದೆ!
ಸಂಸಾರ ಸಾಗರದಲ್ಲಿ ಮುಳುಗಿದ್ದ ನನ್ನನ್ನು ಕೈಹಿಡಿದೆತ್ತಿ
ಜ್ಞಾನ ನೀಡಿದ ಗುರು ನೀನು.
ಒಂದೇ ವಚನದಿಂದ ನನ್ನನ್ನು ಬಂಧಮುಕ್ತನನ್ನಾಗಿ ಮಾಡಿದೆ
ಗುರುವೆ!
ಕಬೀರ ಹೇಳುತ್ತಾನೆ: ಕೇಳು ಸಾಧು. ಗುರು ತನ್ನ ಹೃದಯವನ್ನು
ನನ್ನ ಹೃದಯದೊಡನೆ ಐಕ್ಯಗೊಳಿಸಿದ್ದಾನೆ.12

ಓ ಸಾಧು. ಆ ಸದ್ಗುರುವಿಗಾಗಿ ನನ್ನ ಹೃದಯ ತವಕಿಸುತ್ತಿದೆ.
ಆ ಗುರು ಸತ್ಯ ಪ್ರೇಮದ ಪಾತ್ರೆಯನ್ನು ತುಂಬಿ ತಾನೂ
ಕುಡಿದು ನನಗೂ ಕುಡಿಸುತ್ತಾನೆ.
ಕಣ್ಣ ಮುಂದಿನ ತೆರೆಯನ್ನು ದೂರ ಸರಿಸಿ, ಬ್ರಹ್ಮಜ್ಞಾನದ
ಜ್ಯೋತಿಯನ್ನು ನೀಡುತ್ತಾನೆ;
ತನ್ನಲ್ಲಿರುವ ಬ್ರಹ್ಮಾಂಡದ ದರ್ಶನವಿತ್ತು, ಅನಾಹತ
ನಾದವನ್ನು ಕೇಳಿಸುತ್ತಾನೆ;
ಸುಖದುಃಖಗಳಲ್ಲಿ ಅದ್ವೈತವನ್ನು ತೋರಿಸುವುದಲ್ಲದೆ.
ತನ್ನ ವಾಣಿಯಲ್ಲಿ ಪ್ರೇಮವನ್ನು ಹರಿಸುತ್ತಾನೆ.
ಕಬೀರ ಹೇಳುತ್ತಾನೆ: ಸತ್ಯಪಥವನ್ನು ತೋರುವ ಸದ್ಗುರು
ಲಭಿಸಿದವನಿಗೆ ಭಯವೆಲ್ಲಿ?13

●

ಮಸೀದಿಯಲ್ಲಿ ಮಾತ್ರ ಭಗವಂತನಿದ್ದರೆ ಈ ಪ್ರಪಂಚ ಯಾರಿಗೆ
ಸೇರಿದ್ದು?
ಪುಣ್ಯಕ್ಷೇತ್ರದಲ್ಲಿ ಹಾಗೂ ಮೂರ್ತಿಯಲ್ಲಿ ರಾಮನಿದ್ದರೆ
ಉಳಿದೆಡೆಗಳಲ್ಲಿ ಇರುವವರಾರು?
ಪೂರ್ವದಿಕ್ಕಿನಲ್ಲಿ ಹರಿಯ ವಾಸ! ಪಶ್ಚಿಮ ದಿಕ್ಕಿನಲ್ಲಿ ಅಲ್ಲಾನ
ನಿವಾಸ!
ಅಂತರಂಗವನ್ನು ಶೋಧಿಸಿ ನೋಡು, ರಾಮ ಕರೀಮರು
ಅಲ್ಲಿ ಕಾಣುತ್ತಾರೆ.
ವಿಶ್ವದ ಸ್ತ್ರೀ ಪುರುಷರೆಲ್ಲರೂ ಭಗವಂತನ ಜೀವಂತ ರೂಪ.

---

11 ಅದೇ. ಪು. 274; ಕ್ರ. ಸಂ. 3–30.
12 ಅದೇ. ಪು. 228; ಕ್ರ. ಸಂ. 1–121.
13 ಅದೇ ಪು. 252, ಕ್ರ. ಸಂ 2–38.

ಅಲ್ಲಾ ಮತ್ತು ರಾಮರ ಕಂದ ಕಬೀರ. ಅಲ್ಲಾ ನನ್ನ ಗುರು,
ರಾಮು ನನ್ನ ಪೀರ್.14

●

ಪರಮಾತ್ಮನ ಮಂಜುಳ ಮುರಲೀನಾದವನ್ನು ಕೇಳಿ ನಾನಿನ್ನು
ಸುಮ್ಮನಿರಲಾರೆ.
ಇದು ವಸಂತ ಋತುವಲ್ಲ. ಆದರೂ ಹೂ ಒಂದು ಅರಳಿದೆ,
ಅದು ದುಂಬಿಗಳನ್ನು ಸದಾ ಆಹ್ವಾನಿಸುತ್ತಿದೆ,
ಗಗನ ಗರ್ಜಿಸುತ್ತಿದೆ, ಮಿಂಚು ಮಿಂಚುತ್ತಿದೆ,
ನನ್ನ ಹೃದಯದಲ್ಲಿ ಭಾವನಾ ತರಂಗಗಳು ಏಳುತ್ತಿವೆ;
ಕಮಲಗಳು ಅರಳುತ್ತಿವೆ, ಮಳೆ ಬೀಳುತ್ತಿದೆ, ನನ್ನ ಮನಸ್ಸು
ಪ್ರಭುವಿನತ್ತ ಸಾಗುತ್ತಿದೆ.
ಜಗತ್ತಿನ ಲಯದ ಉಬ್ಬರಳಿವಿಳಿತ ಎಲ್ಲಿರುವುದೋ ಅಲ್ಲಿದೆ
ನನ್ನ ಹೃದಯ.
ಕಾಣದ ಧ್ವಜಗಳು ಅಲ್ಲಿ ಹಾರಾಡುತ್ತಿವೆ.
ಕಬೀರ ಹೇಳುತ್ತಾನೆ: ನನ್ನ ಪ್ರಾಣ ಇಂದು ಬದುಕಿದ್ದರೂ
ಸಾಯುತ್ತಿದೆ15.

●

ಓ ನನ್ನ ಸೋದರ, ನಾನು ಮೈ ಮರೆತಿದ್ದಾಗ, ನನ್ನ ಸದ್ಗುರು
ಸತ್ಪಥವನ್ನು ತೋರಿಸಿದ.
ನಾನು ಕರ್ಮ ಆಚಾರಗಳನ್ನು ತೊರೆದೆ, ತೀರ್ಥ ಸ್ನಾನವನ್ನು
ತ್ಯಜಿಸಿದೆ.
ನಾನೊಬ್ಬನೇ ಹುಚ್ಚನೆಂದೂ, ನನ್ನನ್ನು ಬಿಟ್ಟು ಉಳಿದವರೆಲ್ಲಾ
ಜಾಣರೆಂದೂ ಅವರನ್ನು ನಾನು ತೊಂದರೆಗೀಡು
ಮಾಡಿದೆನೆಂದೂ ತಿಳಿದೆ.
ಅಂದಿನಿಂದ ನಾನು ಪೂಜೆ ಅರ್ಚನೆಗಳನ್ನು ಬಿಟ್ಟೆ. ದೇವಾಲಯದ
ಘಂಟೆಗಳನ್ನು ಬಾರಿಸಲಿಲ್ಲ.
ಮೂರ್ತಿಯನ್ನು ಪೀಠದಲ್ಲಿ ಸ್ಥಾಪಿಸಲಿಲ್ಲ, ಪುಷ್ಪಗಳನ್ನು
ಅರ್ಪಿಸಲಿಲ್ಲ.
ಜಪತಪಗಳಿಂದ, ದಂಡನೆಯಿಂದ, ಭಗವಂತನು ಒಲಿಯುವವನಲ್ಲ.
ಉಡುಪುಗಳನ್ನು ತೊರೆದು ಪಂಚೇಂದ್ರಿಯಗಳ ದಮನದಿಂದ
ಒಲಿಯುವವನಲ್ಲ ಭಗವಂತ.
ದಯಾಧರ್ಮಪರನಾಗಿ ಜಗತ್ತಿನಿಂದ ನಿರ್ಲಿಪ್ತನಾಗಿ,
ಎಲ್ಲರನ್ನೂ ತನ್ನಂತೆ ಭಾವಿಸುವವನೆ ಬ್ರಹ್ಮತ್ವವನ್ನು ಪಡೆದು
ಪರಮಾತ್ಮನಲ್ಲಿ ಲೀನವಾಗುವವನು!
ಕಬೀರ ಹೇಳುತ್ತಾನೆ: ಕಟುವಚನವನ್ನು ಸಹಿಸಿ,

---

14 ಅದೇ. ಪು. 273; ಕ್ರ. ಸಂ. 3–2
15 ಅದೇ. ಪು. 272; ಕ್ರ. ಸಂ. 3–102

ವಾದಗಳನ್ನು ಬಿಟ್ಟು, ಅನುಮಾನ ಅಹಂಕಾರಗಳನ್ನು
ತ್ಯಜಿಸಿದರೆ, ಭಗವಂತನ ಸಾಕ್ಷಾತ್ಕಾರ.16

•

ಪರಮಾತ್ಮನ ಮಿಲನ ಅದೆಷ್ಟು ಕಠಿಣ!
ಚಾತಕ ಪಕ್ಷಿ ಮಳೆಯ ನೀರಿಗಾಗಿ ಬಾಯಾರಿ 'ಪಿವೂ, ಪಿವೂ'
ಎಂದು ಕೂಗುತ್ತಾ ಅಸು ನೀಗಿದರೂ, ಅದು ಬೇರೆ ನೀರನ್ನು
ಸ್ಪರ್ಶಿಸುವುದಿಲ್ಲ.
ಸಂಗೀತಪ್ರೇಮದಿಂದ ಆಕರ್ಷಿತವಾದ ಮೃಗ, ಅದನ್ನು
ಆಲಿಸುತ್ತಾ ಅತ್ತ ಕಡೆಗೇ ಓಡುತ್ತದೆ.
ಸಂಗೀತದ ಸವಿಗೆ ಪ್ರಾಣ ತೆತ್ತರೂ ಅದು ಭಯಗೊಂಡು
ವಿಮುಖವಾಗುವುದಿಲ್ಲ.
ಸಾಧ್ವಿಯು ಪತಿಯೊಡನೆ ಚಿತೆ ಏರುತ್ತಾಳೆ, ಅವನನ್ನೇ
ಅನುಸರಿಸುತ್ತಾಳೆ.
ಅವಳಿಗೆ ಅಗ್ನಿಭಯವಿಲ್ಲ. ಅವಳು ಪ್ರಸನ್ನಚಿತ್ತಳಾಗಿರುತ್ತಾಳೆ.
ಕಬೀರ ಹೇಳುತ್ತಾನೆ: ಸಹೋದರ ಕೇಳು, ತನುವಿನ
ಆಸೆಯನ್ನು ತ್ಯಜಿಸಿ,
ನಿರ್ಭೀತನಾಗಿ ಪರಮಾತ್ಮನ ಗುಣಗಳನ್ನು ಹಾಡಿ, ಜನ್ಮವನ್ನು
ಸಾರ್ಥಕಪಡಿಸು.17

•

ಜೋಗಿ ತನ್ನ ಮನಸ್ಸಿಗೆ ವರ್ಣವನ್ನೀಯದೆ ತನ್ನ ಬಟ್ಟೆಗೆ
ಮಾತ್ರ ಬಣ್ಣ ಬಳಿದಿದ್ದಾನೆ.
ಮಂದಿರದೊಳಗೆ ಪದ್ಮಾಸನ ಸ್ಥಿತನಾಗಿ ಕುಳಿತು, ಬ್ರಹ್ಮವನ್ನು
ಪೂಜಿಸದೆ ಕಲ್ಲನ್ನು ಪೂಜಿಸಲಾರಂಭಿಸಿದ್ದಾನೆ.
ಕಿವಿಯನ್ನು ಛಿದ್ರಿಸಿ ಗಡ್ಡ ಜಟೆಗಳನ್ನು ಬೆಳೆಸಿ ಮೇಕೆಯಂತೆ
ಕಾಣುತ್ತಾನೆ.
ತನ್ನ ಆಸೆಗಳೆಲ್ಲವನ್ನೂ ತುಳಿದು ಅಡವಿಯನ್ನು ಹೊಕ್ಕು
ಷಂಡನಾಗಿದ್ದಾನೆ.
ಶಿರವನ್ನು ಮುಂಡನ ಮಾಡಿ ವಸ್ತ್ರಗಳಿಗೆ ಬಣ್ಣ ಹಾಕಿ
ಗೀತೆಯನ್ನು ಪಠಿಸುತ್ತಾ ಮಹಾ ವಾಚಾಳಿಯಾಗಿದ್ದಾನೆ.
ಕಬೀರ ಹೇಳುತ್ತಾನೆ: ಕೇಳು ಸಹೋದರ, ನೀನು ಕೈಕಾಲುಗಳನ್ನು
ಕಟ್ಟಿಕೊಂಡು ಮೃತ್ಯುವಿನೆಡೆಗೆ ಸಾಗುತ್ತಿರುವೆ.18

•

ಭಗವಂತ ಹೇಗಿರುವನೋ ನಾ ಕಾಣೆ!
ಮುಲ್ಲಾ ಮುಂಜಾನೆಯಲ್ಲಿ ಅವನನ್ನು ಕೂಗಿ ಎಚ್ಚರಿಸುತ್ತಾನೆ.
ಪರಮಾತ್ಮ ಕಿವುಡನೆ?

---

16 ಅದೇ. ಪು. 271; ಕ್ರ. ಸಂ. 1–22
17 ಅದೇ. ಪು. 270: ಕ್ರ. ಸಂ. 1–117
18 ಅದೇ. ಪು. 271; ಕ್ರ. ಸಂ. 1–20

ಕೀಟದ ಕಾಲ ಕಿರುಗೆಜ್ಜೆಯ ಧ್ವನಿಯನ್ನೂ ಅವನು ಕೇಳಬಲ್ಲ.
ತಿಲಕವಿಟ್ಟು, ನೀಳ ಜಟೆಯನ್ನು ಬೆಳೆಸಿ,
ಜಪಮಾಲೆಯನ್ನು ಎಣಿಸಿದರಾಯಿತೆ?
ಅಂತರಂಗದಲ್ಲಿ ಕಪಟ ಮತ್ಸರ ತುಂಬಿದ್ದರೆ
ಭಗವಂತನ ಸಾಕ್ಷಾತ್ಕಾರ ಸಿದ್ಧಿಸುವುದೆ?19

ಓ ಸಾಧು, ಚಿಂತೆ ಇಲ್ಲದ ಊರು ನನ್ನದು.
ಚಕ್ರವರ್ತಿ, ಫಕೀರ, ದೊರೆ, ದರಿದ್ರರೆಲ್ಲರಿಗೂ ಕೂಗಿ ಹೇಳುತ್ತೇನೆ.
ಪರಮಪದವನ್ನರಸುವವರೆಲ್ಲ ನನ್ನೂರಿಗೆ ಬಂದು ಶ್ರಮಿಸಿ.
ದುಃಖಕ್ಲೇಶಗಳ ಹೊತ್ತು ಬಂದವರು ಇಲ್ಲಿ ಹೊರೆಗಳನ್ನಿಳಿಸಿ.
ನನ್ನೂರಿನಲ್ಲಿ ಧರಣಿ, ಆಕಾಶ, ಗಗನಗಳಿಲ್ಲ, ಚಂದ್ರತಾರೆಗಳಿಲ್ಲ.
ಸತ್ಯಧರ್ಮಗಳ ನೆಲೆವೀಡು ನನ್ನೊಡೆಯನ ಆಸ್ಥಾನ.
ಕಬೀರ ಹೇಳುತ್ತಾನೆ: ಕೇಳು ಸಾಧು, ಸತ್ಯಧರ್ಮಗಳೇ
ಎಲ್ಲದರ ಸಾರ.20

●

ಧರ್ಮವನ್ನೂ ಅರಿಯೆ, ಅಧರ್ಮವನ್ನೂ ಅರಿಯೆ.
ಯತಿಯು ನಾನಲ್ಲ, ಕಾಮಿಯು ನಾನಲ್ಲ.
ಬಂಧಿತನಲ್ಲ, ಮುಕ್ತನೂ ಅಲ್ಲ. ಸೇವಕನಲ್ಲ, ಒಡೆಯನೂ ಅಲ್ಲ.
ಹೇಳುವವನೂ ಅಲ್ಲ, ಕೇಳುವವನೂ ಅಲ್ಲ.
ಯಾರಿಂದಲೂ ದೂರವಿಲ್ಲ, ಯಾರ ಸಾಮೀಪ್ಯವೂ ಇಲ್ಲ.
ಸ್ವರ್ಗ ನರಕಗಳಿಗೆ ಹೋಗುವವನು ನಾನಲ್ಲ.
ಎಲ್ಲ ಕರ್ಮಗಳ ಕರ್ತ ನಾನು, ಆದರೆ ಕರ್ಮವಿದೂರ.
ನನ್ನರ್ಥವನ್ನು ಗ್ರಹಿಸುವವರು ವಿರಳ, ಗ್ರಹಿಸಿದವರು
ಅಚಲರಾಗಿದ್ದಾರೆ.
ಕಬೀರ ಮತ ಸ್ಥಾಪಕನಲ್ಲ, ಮತ ನಾಶಕನೂ ಅಲ್ಲ.21

●

ಬೇರೆ ನಾಮಗಳಂತಲ್ಲ ಸತ್ಯದಾ ನಾಮ!
ನಿರ್ಗುಣ ಸಗುಣಗಳೆಲ್ಲ ಶಬ್ದ ಪ್ರಚಾರ.
ಬೀಜ ನಿರ್ಗುಣ, ಫಲಪುಷ್ಪ ಸಗುಣ.
ಜ್ಞಾನವೇ ಶಾಖೆ, ಮೂಲವೇ ನಾಮ.
ಮೂಲವನರಸು, ಮೂಲದಲ್ಲಿದೆ ಸುಖಪ್ರಾಪ್ತಿ.
ಮೂಲದಿಂದಲೆ ಕೊಂಬೆ, ಶಾಖೆ, ಎಲೆ, ಪುಷ್ಪ, ಫಲಗಳ ಪ್ರಾಪ್ತಿ.

---

19 ಅದೇ. ಪು. 272; ಕ್ರ. ಸಂ. 1–9
20 ಅದೇ. ಪು. 285; ಕ್ರ. ಸಂ: 1–92.
21 ಅದೇ. ಪು. 279; ಕ್ರ. ಸಂ. 3–66.

ಆ ದಿವ್ಯ ಸತ್ಯನಾಮವು ಭಗವಂತನನ್ನು ತೋರುತ್ತದೆ,
ಸುಖವನ್ನು ಕೊಡುತ್ತದೆ,
ನಿರ್ಗುಣ ಸಗುಣಗಳ ಭೇದವನ್ನು ಹೋಗಲಾಡಿಸುತ್ತದೆ.22

●

ರತ್ನವೊಂದು ಕೆಸರಿನಲ್ಲಿ ಕಳೆದು ಹೋಯಿತು.
ಅದನ್ನು ಎಲ್ಲರೂ ಹುಡುಕುತ್ತಿದ್ದಾರೆ.
ಕೆಲವರು ಪೂರ್ವದಿಕ್ಕಿನಲ್ಲಿ ಹುಡುಕಿದರೆ,
ಕೆಲವರು ಪಶ್ಚಿಮದಲ್ಲಿ ಹುಡುಕುತ್ತಿದ್ದಾರೆ.
ಮತ್ತೆ ಕೆಲವರು ಕಲ್ಲು ಬಂಡೆ ಜಲಗಳಲ್ಲಿ ಹುಡುಕುತ್ತಿದ್ದಾರೆ.
ದಾಸ ಕಬೀರನು ಅದರ ಮೌಲ್ಯವನ್ನು ತಿಳಿದು,
ತನ್ನ ಹೃದಯದ ಬಳಿ ಇರುವ ನಿಲುವಂಗಿಯ ಸೆರಗಿನಲ್ಲಿ
ಅದನ್ನು ಭದ್ರವಾಗಿ ಕಟ್ಟಿದ್ದಾನೆ.23

●

ಭಗವತ್ಪ್ರೇಮದಿಂದ ತುಂಬಿದ ಮನಸ್ಸಿಗೆ ಮಾತೇಕೆ?
ವಜ್ರವನ್ನು ಗಂಟಿಕ್ಕಿ ಭದ್ರಪಡಿಸಿದ ಬಳಿಕ ಪುನಃ ಪುನಃ
ಬಿಚ್ಚುವುದೇಕೆ?
ಹಗುರವಾದಾಗ ತಕ್ಕಡಿ ಮೇಲೇಳುತ್ತದೆ, ಭಾರದಿಂದ ಈಗ
ಅದು ತುಂಬಿದೆ.
ಈಗ ತೂಕದ ಆವಶ್ಯಕತೆ ಇದೆಯೆ?
ಮಾನಸ ಸರೋವರವನ್ನು ಹೊಕ್ಕ ಹಂಸ, ಕೆರೆ ಹೊಂಡಗಳನ್ನು
ಬಯಸುವುದೆ?
ಅಂತರಂಗದಲ್ಲಿ ಭಗವಂತ ನೆಲಸಿದ ಬಳಿಕ, ಬಾಹ್ಯ ಚಕ್ಷುಗಳನ್ನು
ತೆರೆಯಬೇಕೆ?
ಕಬೀರ ಹೇಳುತ್ತಾನೆ: ಕೇಳು ಸಹೋದರ, ನಯನಗಳನ್ನು
ಸೂರೆಗೊಂಡ ಪರಮಾತ್ಮನೂ ನಾನು ಒಂದಾಗಿದ್ದೇವೆ.24
ಬೀಜದಲ್ಲಿ ಪ್ರಾಣವಿರುವಂತೆ, ಭಗವಂತ ನನ್ನಲ್ಲಿಯೂ
ನಿಮ್ಮಲ್ಲಿಯೂ ನೆಲೆಸಿದ್ದಾನೆ.
ದಾಸನೆ, ಶಂಕೆಯನ್ನು ತೊರೆದು ಅವನನ್ನು ನಿನ್ನಲ್ಲಿಯೇ ಹುಡುಕು.
ಕೋಟಿ ಸೂರ್ಯರು ಪ್ರಕಾಶಿಸುತ್ತಿದ್ದಾರೆ, ನೀಲ ಸಿಂಧುವಿನಂತೆ
ಗಗನ ರಾರಾಜಿಸುತ್ತಿದೆ.
ಆ ಜಗತ್ತಿನಲ್ಲಿ ನೆಲಸಿದಾಗ, ಸಕಲ ತಾಪಗಳೂ ದೂರವಾಗಿ
ಮನಸ್ಸು ನಿರ್ಮಲವಾಗುತ್ತದೆ.
ಘಂಟೆ ಮೃದಂಗಗಳ ಅನಾಹತ ಶಬ್ದವನ್ನು ಕೇಳು.
ಪ್ರೇಮಾಮೃತವನ್ನುಂಡು ತನುವ ತಣಿಸು.

---

22 ಅದೇ. ಪು. 279; ಕ್ರ. ಸಂ. 3–69.
23 ಅದೇ. ಪು. 274; ಕ್ರ. ಸಂ. 3–26
24 ಅದೇ. ಪು. 257; ಕ್ರ. ಸಂ. 2–105

ನೀರಿಲ್ಲದ ಜಲವರ್ಷ, ನದಿಯೆಲ್ಲ ದಿವ್ಯ ಜ್ಯೋತಿ!
ಬ್ರಹ್ಮಾಂಡವೆಲ್ಲ ಪ್ರೇಮದಿಂದ ತುಂಬಿದೆ, ಅದನ್ನುತಿಳಿದವರು ವಿರಳ.25

ಮಹಾಭವನಕ್ಕೆ ಭ್ರಮೆಯ ಬೀಗ ಹಾಕಿದೆ.
ಪ್ರೇಮದ ಬೀಗದ ಕೈಯಿಂದ ಅದನ್ನು ತೆರೆ.
ಬಾಗಿಲನ್ನು ತೆರೆದು ಸ್ವಾಮಿಯನ್ನು ಎಬ್ಬಿಸು.
ಕಬೀರ ಹೇಳುತ್ತಾನೆ: ಕೇಳು ಸಹೋದರ,
ಮುಂದೆಂದೂ ಬಾರದ ಈ ಸುಸಂಧಿಯನ್ನು ಅಲಕ್ಷಿಸಬೇಡ.26

●

ಸ್ನೇಹಿತನೆ, ತಂಬೂರಿಯಂತೆ ಈ ದೇಹ.
ತಂತಿಗಳನ್ನೆಳೆದು ಬಿರಡೆಯನ್ನು ಬಿಗಿದಾಗ ಮಧುರ ಸಂಗೀತ ಚಿಮ್ಮುತ್ತದೆ.
ತಂತಿ ಕಿತ್ತು ಬಿರಡೆ ಒಡೆದಾಗ ಮಣ್ಣಿನ ವಾದ್ಯ ಮಣ್ಣಿನಲ್ಲಿ ಸೇರುತ್ತದೆ.
ಕಬೀರ ಹೇಳುತ್ತಾನೆ: ಕೇಳು ಸಾಧು ಸಹೋದರ, ನಾದಬ್ರಹ್ಮದ ಮಾರ್ಗ ಅಗಮ್ಯ ಹಾಗೂ ಅಗೋಚರ.27

●

ಓ ಸಾಧು, ಸಹಜ ಸಮಾಧಿ ಶ್ರೇಷ್ಠ.
ಪರಮಾತ್ಮನನ್ನು ಕಂಡ ಕ್ಷಣದಿಂದ ನಮ್ಮಿಬ್ಬರ ಪ್ರೇಮಕ್ಕೆ ತಡೆಯಿಲ್ಲ.
ಅಂದಿನಿಂದ ನನ್ನ ಕಿವಿಕಣ್ಣುಗಳನ್ನು ಮುಚ್ಚಲಿಲ್ಲ;
ಶರೀರವನ್ನು ಕ್ಷಯಿಸಲಿಲ್ಲ;
ತೆರೆದ ಕಣ್ಣುಗಳಿಂದ ಎಲ್ಲೆಲ್ಲೂ ಪರಮಾತ್ಮನ ಸೌಂದರ್ಯವನ್ನು ನೋಡುತ್ತಿದ್ದೇನೆ.
ನುಡಿದುದೆಲ್ಲ ಅವನ ನಾಮಸ್ಮರಣೆ, ಕೇಳಿದುದೆಲ್ಲ ಅವನದೇ ಸ್ಮೃತಿ, ಕರ್ಮವೆಲ್ಲ ಅವನ ಆರಾಧನೆ.
ಉದಯಾಸ್ತಗಳೆಲ್ಲ ಒಂದೇ, ಅದರಲ್ಲಿ ದ್ವೈತ ಭಾವವಿಲ್ಲ.
ನಡೆದುದೆಲ್ಲ ಅವನ ಪ್ರದಕ್ಷಿಣೆ, ಮಾಡುವ ಕರ್ಮವೆಲ್ಲ ಅವನ ಸೇವೆ.
ಮಲಗಿದಾಗ ಅದು ಅವನಿಗೆ ದಂಡವತ್ ಪ್ರಣಾಮ.
ಪೂಜಿಸಲು ಅವನೊಬ್ಬನೇ ದೇವ, ಬೇರೊಬ್ಬರಿಲ್ಲ.
ಮಲಿನ ವಚನವನ್ನು ತ್ಯಜಿಸಿ ಜಿಹ್ವೆ ಹಾಡುವುದು ಅವನದೇ ಭವ್ಯನಾಮ.
ಎದ್ದಾಗ ಕುಳಿತಾಗ ಅವನನ್ನು ಮರೆಯಲಾರೆ.
ಅವನ ನಾಮ ಸಂಕೀರ್ತನೆ ನನ್ನ ಕಿವಿಗಳಲ್ಲಿ ಪ್ರತಿಧ್ವನಿಸುತ್ತದೆ.

---

25 ಅದೇ. ಪು. 286; ಕ್ರ. ಸಂ. 2–90
26 ಅದೇ. ಪು. 261; ಕ್ರ ಸಂ. 1–50
27 ಅದೇ. ಪು. 261; ಕ್ರ. ಸಂ. 1–59.

ಕಬೀರ ಹೇಳುತ್ತಾನೆ: ನನ್ನ ಮನಸ್ಸು ಹುಚ್ಚಾಗಿದೆ, ಅವ್ಯಕ್ತ
ಆತ್ಮದ ದರ್ಶನವಾಗಿದೆ,
ಸುಖ ದುಃಖಗಳಿಲ್ಲದ ಪರಮಾನಂದದಲ್ಲಿ ಮುಳುಗಿದ್ದೇನೆ.[28]

●

ತೀರ್ಥ ಸ್ಥಾನಗಳಲ್ಲಿರುವುದು ಕೇವಲ ಜಲ.
ಅದರಲ್ಲಿ ಸ್ನಾನಮಾಡಿ ಅದು ನಿಷ್ಪ್ರಯೋಜನವೆಂದು ತಿಳಿದಿದ್ದೇನೆ.
ಸಹೋದರ, ಪ್ರತಿಮೆಗಳೆಲ್ಲ ಜಡ. ಅವುಗಳನ್ನು ಕೂಗಿ ಕರೆದೆ,
ಅವು ಮಾತಾಡಲಿಲ್ಲ.
ಪುರಾಣ ಕೊರಾನ್‌ಗಳೆಲ್ಲ ಕೇವಲ ಶಬ್ದಗಳು. ತೆರೆಯನ್ನು ಸರಿಸಿ
ಅದನ್ನು ಕಂಡೆ.
ಅನುಭವದ ನುಡಿಗಳನ್ನು ಕಬೀರ ಹೇಳುತ್ತಾನೆ:
ಅನುಭಾವಕ್ಕೆ ಹೊರತಾದುದೆಲ್ಲ ಅಸತ್ಯ![29]

●

ನೀರಿನೊಳಗಿರುವ ಮೀನಿಗೆ ಬಾಯಾರಿಕೆ ಎಂದು ಕೇಳಿದಾಗ
ನನಗೆ ನಗು ಬರುತ್ತದೆ.
ನಿನ್ನ ಮನೆಯಲ್ಲಿರುವ ಸತ್ಯವನ್ನು ಅರಿಯದೆ
ವನದೊಳಗೆ ಸುಮ್ಮನೆ ಖಿನ್ನನಾಗಿ ಏಕೆ ಅಲೆಯುತ್ತಿರುವೆ?
ಕಾಶಿ ಮಥುರಾಗಳಿಗೆ ಹೋದರೇನಂತೆ?
ಆತ್ಮಜ್ಞಾನವಿಲ್ಲದಿದ್ದರೆ ಜಗತ್ತೆಲ್ಲ ಅನಿತ್ಯ![30]

●

ಯಾವ ಮುರಲಿಯ ನಾದ ನನ್ನ ಮನಸ್ಸನ್ನು ಹರ್ಷಗೊಳಿಸಿದೆ?
ಬತ್ತಿ ಇಲ್ಲದ ಜ್ಯೋತಿ ಬೆಳಗುತ್ತಿದೆ!
ಮೂಲವಿಲ್ಲದ ಕಮಲ ಪ್ರಕಟವಾಗಿದೆ!
ವಿವಿಧ ರೀತಿಯ ಪುಷ್ಪಗಳರಳಿವೆ!
ಚಕೋರ ಚಂದ್ರಮನನ್ನು ಕುರಿತು ಚಿಂತಿಸುವಂತೆ,
ಚಾತಕಪಕ್ಷಿ ಸ್ವಾತಿ ಮಳೆಗಾಗಿ ಹಂಬಲಿಸುವಂತೆ,
ಸಂತನು ಆನಂದ ಪರವಶನಾಗಿ ಪರಮಾತ್ಮನ ಸಂಗಾತಿಯಾಗಿದ್ದಾನೆ.[31]

●

ಕಾಣುವುದಾವುದೋ ಅದು ಅಲ್ಲ, ನಿಜರೂಪವನ್ನು
ವರ್ಣಿಸುವುದು ಸಲ್ಲ.
ಕಂಡಲ್ಲದೆ ನಂಬಲಾರೆ, ಹೇಳಿದುದನ್ನು ನಂಬಲಾರೆ.
ಸುಜ್ಞಾನಿ ಶಬ್ದದ ಮೂಲಕ ತಿಳಿಯುತ್ತಾನೆ: ಆಶ್ಚರ್ಯದಿಂದ
ಅಜ್ಞಾನಿ ಚಕಿತನಾಗುತ್ತಾನೆ.

---

28 ಅದೇ. ಪು. 262; ಕ್ರ. ಸಂ. 1–76
29 ಅದೇ. ಪು. 262; ಕ್ರ. ಸಂ. 1–79
30 ಅದೇ. ಪು. 263; ಕ್ರ. ಸಂ. 1–82
31 ಅದೇ. ಪು. 266; ಕ್ರ. ಸಂ. 1–122

ನಿರ್ಗುಣವನ್ನು ಕೆಲವರು ಧ್ಯಾನಿಸುತ್ತಾರೆ, ಮತ್ತೆ ಕೆಲವರು
ಸಗುಣವನ್ನು ಧ್ಯಾನಿಸುತ್ತಾರೆ.
ಬ್ರಹ್ಮವು ಇವೆರಡಕ್ಕೂ ಅತೀತವೆಂದು ಜ್ಞಾನಿ ತಿಳಿಯುತ್ತಾನೆ.
ಕಣ್ಣಿಗೆ ಕಾಣಲಾರದ ಸೌಂದರ್ಯ ಅವನದು.
ಅವನ ಸುಮಧುರ ಸಂಗೀತ ಕಿವಿಗೆ ಕೇಳಿಸದು.
ಕಬೀರ ಹೇಳುತ್ತಾನೆ: ಪ್ರೇಮ ಮತ್ತು ಸಾಕ್ಷಾತ್ಕಾರಗಳನ್ನು
ಪಡೆದವನಿಗೆ ಮೃತ್ಯು ಭಯವಿಲ್ಲ.32

ಸ್ನೇಹಿತರೆ, ನನ್ನ ಪ್ರಿಯತಮನಿಗಾಗಿ ಕಾತರಳಾಗಿದ್ದೇನೆ.
ಯೌವನ ತುಂಬಿದೆ, ವಿರಹ ವೇದನೆಯನ್ನು ಸಹಿಸಲಾರೆ.
ಜ್ಞಾನದ ಬೀದಿ ಬೀದಿಯಲ್ಲಿ ದಿಕ್ಕಿಲ್ಲದೆ ಅಲೆಯುತ್ತಿದ್ದೇ.
ಜ್ಞಾನ ಮಾರ್ಗದಲ್ಲಿ ಪ್ರಿಯನ ಪತ್ರ ದೊರಕಿದೆ, ಸಂದೇಶ ಸಿಕ್ಕಿದೆ.
ಪತ್ರದಲ್ಲಿ ಅಗಮ್ಯ ಸಂದೇಶವನ್ನು ಕಂಡು ಮರಣಭಯ
ದೂರವಾಗಿದೆ.

ಕಬೀರ ಹೇಳುತ್ತಾನೆ: ಕೇಳು ಪ್ರಿಯ ಸಹೋದರ,
ನಾನಿಂದು ಅವಿನಾಶಿಯನ್ನು ವರವಾಗಿ ಪಡೆದಿದ್ದೇನೆ.33

●

ಭಕ್ತಿಯ ಮಾರ್ಗ ಅತಿ ಸೂಕ್ಷ್ಮ.
ಅಲ್ಲಿ ಅಪೇಕ್ಷೆ ನಿರಪೇಕ್ಷೆಗಳಿಲ್ಲದೆ ಅವನ ಚರಣದಲ್ಲಿ ಶರಣಾಗುತ್ತಾರೆನೆ.
ಸಾಧನೆಯ ರಸಧಾರೆಯಲ್ಲಿ ದಿವಾರಾತ್ರಿ ಮಗ್ನರಾಗುತ್ತಾರೆ.
ಜಲದೊಳಗೆ ಮೀನಿರುವಂತೆ, ಪರಮಾತ್ಮನ ಪ್ರೇಮದಾಳದಲ್ಲಿ
ಮುಳುಗುತ್ತಾರೆ.
ಪರಮಾತ್ಮನ ಸೇವೆಗಾಗಿ, ಪ್ರೇಮಿ ತನ್ನ ಶಿರವನ್ನರ್ಪಿಸಲು
ಹಿಂಜರಿಯುವುದಿಲ್ಲ.
ಕಬೀರ ಹೇಳುತ್ತಾನೆ: ಭಗವತ್‌ಪ್ರೇಮದ ರಹಸ್ಯವನ್ನು
ಪ್ರಕಟ ಮಾಡಿದ್ದೇನೆ.34

ಓ ಉನ್ಮತ್ತ, ಪರಮಾತ್ಮನ ಅಮೃತನಾಮದ ಬಟ್ಟಲನ್ನು
ಬರಿದು ಮಾಡು.
ಕಬೀರ ಹೇಳುತ್ತಾನೆ: ಕೇಳು ಸ್ನೇಹಿತ,
ನಖದಿಂದ ಶಿಖದವರೆಗೆ ಈ ಮನುಜ ಶರೀರ ವಿಷದಿಂದ
ತುಂಬಿದೆ.35

●

ಸುಖಸಾಗರದ ಬಳಿ ಬಂದು, ಬಾಯಾರಿ ಹಿಂತಿರುಗಬೇಡ.
ಎದ್ದೇಳು ಮೂರ್ಖ, ಮೃತ್ಯು ನಿನ್ನನ್ನರಸುತ್ತಿದೆ.

---

32 ಅದೇ. ಪು. 265; ಕ್ರ. ಸಂ. 1–105
33 ಅದೇ. ಪು. 266; ಕ್ರ. ಸಂ. 1–129
34 ಅದೇ. ಪು. 267; ಕ್ರ. ಸ್ಥ. 1–73
35 ಅದೇ. ಪು. 268; ಕ್ರ. ಸಂ. 1–63.

ನಿರ್ಮಲ ಜಲ ನಿನ್ನ ಮುಂದಿದೆ. ಅದನ್ನು ಒಂದೇ ಉಸಿರಿನಲ್ಲಿ
ಅವಿಚ್ಛಿನ್ನವಾಗಿ ಪಾನಮಾಡು.
ಮೃಗಜಲದ ಆಸೆಯನ್ನು ತೊರೆ ಮೂರ್ಖ. ಸುಧಾರಸದ
ಆಸೆಯನ್ನು ತಾಳು.
ಆ ರಸವನ್ನು ಧ್ರುವ, ಪ್ರಹ್ಲಾದ, ಶುಕದೇವ., ರೈದಾಸ–
ಇವರು ಪಾನಮಾಡಿದ್ದಾರೆ.
ಸಂತರೆಲ್ಲರೂ ಪ್ರೇಮಾಮೃತದಲ್ಲಿ ಮತ್ತರಾದರು, ಪ್ರೇಮವೊಂದೇ
ಅವರ ದಾಹ.
ಕಬೀರ ಹೇಳುತ್ತಾನೆ: ಕೇಳು ಸಹೋದರ, ಭಯದ ಬಲೆ
ಕತ್ತರಿಸಿ ಹೋಗಿದೆ.[36]

●

ಓ ನನ್ನ ಮನವೆ. ನಡೆ ನನ್ನ ಹೃದಯವನ್ನು ತೃಪ್ತಗೊಳಿಸುವ
ನನ್ನ ಪ್ರಿಯತಮನ ಊರಿಗೆ.
ಅಲ್ಲಿ ಪ್ರೇಮ ತನ್ನ ಕೊಡವನ್ನು ತುಂಬುತ್ತಿದ್ದಾಳೆ.
ನೀರನ್ನು ಎಳೆಯಲು ಅವಳ ಬಳಿಯಲ್ಲಿ ಹಗ್ಗವಿಲ್ಲ.
ಮೋಡವಿಲ್ಲದ ಆಕಾಶ, ಆದರೂ ತುಂತುರು ಮಳೆ.
ಓ ನಿರಾಕಾರವೆ. ಹೊಸ್ತಿಲ ಮೇಲೆ ಕುಳಿತುಕೊಳ್ಳಬೇಡ.
ಆ ಮಳೆಯಲ್ಲಿ ಸ್ನಾನ ಮಾಡು,
ಆ ಊರಲ್ಲಿ ನಿತ್ಯ ಪೂರ್ಣಿಮೆ, ಕತ್ತಲೇ ಇಲ್ಲ.
ಒಬ್ಬ ಸೂರ್ಯನೆಂಬ ಮಾತು ಅಲ್ಲಿಲ್ಲ.
ಅಲ್ಲಿ ಕೋಟಿ ಸೂರ್ಯರ ಪ್ರಕಾಶ![37]

●

ಪ್ರಥಮದಲ್ಲಿ ತಾನೊಬ್ಬನೇ! ತನ್ನಲ್ಲಿಯೇ ತಾನಾದವನು!
ಅವನು ನಿರಾಕಾರ, ನಿರ್ಗುಣ, ಬಂಧರಹಿತ.
ಆಗ ಆದಿ ಮಧ್ಯ ಅಂತ್ಯಗಳಿರಲಿಲ್ಲ. ಕತ್ತಲು ಬೆಳಕೂ ಇರಲಿಲ್ಲ.
ಭೂಮಿ. ಗಾಳಿ. ಆಕಾಶಗಳಿರಲಿಲ್ಲ. ಅಗ್ನಿ ಜಲರಾಶಿಗಳಿರಲಿಲ್ಲ.
ಗಂಗಾ ಯಮುನಾ ನದಿಗಳೂ ಇರಲಿಲ್ಲ. ಸಾಗರ ಸಮುದ್ರ
ತರಂಗಗಳೂ ಇರಲಿಲ್ಲ.
ಪಾಪ, ಪುಣ್ಯ, ವೇದ. ಪುರಾಣಗಳಿರಲಿಲ್ಲ: ಕೊರಾನಿನಂತಹ
ಪುಣ್ಯ ಗ್ರಂಥಗಳೂ ಇರಲಿಲ್ಲ.
ಕಬೀರ ತನ್ನಂತರಂಗದಲ್ಲಿ ವಿಚಾರ ಮಾಡಿ ಹೇಳುತ್ತಾನೆ:
ಅಂದು ಯಾವ ಕಾರ್ಯವೂ ಇರಲಿಲ್ಲ.
ಪರಮ ಪುರುಷನು ಅಗಮ್ಯ ಅಗೋಚರನಾಗಿ ತನ್ನಲ್ಲಿಯೇ
ಲೀನವಾಗಿದ್ದನು.
ಅವನು ತಿನ್ನುತ್ತಿರಲಿಲ್ಲ, ಕುಡಿಯುತ್ತಿರಲಿಲ್ಲ.
ಅವನು ಹುಟ್ಟುತ್ತಿರಲಿಲ್ಲ, ಸಾಯುತ್ತಿರಲಿಲ್ಲ.

---

36 ಅದೇ. ಪು. 269; ಕ್ರ. ಸಂ. 1–48
37 ಅದೇ. ಪು. 277 ; ಕ್ರ. ಸಂ. 3–60

ಅವನಿಗೆ ರೂಪವಿರಲಿಲ್ಲ, ರೇಖೆ ಇರಲಿಲ್ಲ.
ಅವನಿಗೆ ವರ್ಣವಿರಲಿಲ್ಲ, ಉಡುಪು ಇರಲಿಲ್ಲ.
ಜಾತಿ ಗೋತ್ರಗಳಾವುವೂ ಇರಲಿಲ್ಲ, ಅವನ ಮಹಿಮೆಯನ್ನು
ವರ್ಣಿಸಲಸದಳ!
ಅವನಿಗೆ ರೂಪ ಅರೂಪ ನಾಮಗಳಿಲ್ಲ, ವರ್ಣ ಅವರ್ಣಗಳಿಲ್ಲ.
ಅವನಿಗೆ ಮನೆಯೇ ಇಲ್ಲ.38

●

ವಿಚಾರ ಮಾಡಿ ಕಬೀರ ಹೇಳುತ್ತಾನೆ; ವರ್ಣದೇಶಗಳಿಲ್ಲದ
ನಿರಾಕಾರ ನಿರ್ಗುಣನು ಎಲ್ಲೆಡೆಯೂ ತುಂಬಿದ್ದಾನೆ.
ಆನಂದದ ಆಟವನ್ನು ತಂದವನು ಅವನು, ಆ ಆಟ ಓಂಕಾರದಿಂದಲೆ
ಸೃಷ್ಟಿಯಾಯಿತು.
ಅವನ ಆನಂದದಿಂದಲೆ ಭೂಮಿ ಆಕಾಶ ಸೂರ್ಯಚಂದ್ರರು
ಬೆಳಗುತ್ತಿದ್ದಾರೆ.
ಅವನ ಆನಂದವೆ ಆದಿ ಮಧ್ಯ ಅಂತ್ಯ, ಅವನ ಆನಂದವೇ
ಕತ್ತಲು ಮತ್ತು ಬೆಳಕು.
ಸಾಗರ ಸಮುದ್ರ ತರಂಗಗಳೆಲ್ಲ ಅವನ ಆನಂದ. ಅವನ
ಆನಂದವೇ ಸರಸ್ವತಿ, ಯಮುನಾ ಮತ್ತು ಗಂಗಾ.
ಗುರು ಒಬ್ಬನೇ. ಜನ್ಮ, ಮರಣ, ವಿರಹಗಳೆಲ್ಲವೂ ಅವನಾಟ.
ಜಲ, ಸ್ಥಲ ಮತ್ತು ಸಕಲ ವಿಶ್ವ ಅವನ ಆಟ. ಅವನ ಆಟವೆ
ಪೃಥ್ವಿ ಆಕಾಶಗಳು.
ಈ ಸೃಷ್ಟಿಯ ವಿಸ್ತಾರವೆಲ್ಲಾ ಅವನ ಆಟ. ಆ ಆಟದಲ್ಲಿಯೇ
ನೆಲಸಿದೆ ಈ ಜಗತ್ತು.
ಕಬೀರ ಹೇಳುತ್ತಾನೆ: ವಿಶ್ವವೆಲ್ಲ ಅವನ ಆಟ, ಆದರೆ ಆ ಆಟಗಾರ
ಮಾತ್ರ ಅಗೋಚರ.39

●

ಭಿಕ್ಷುಕನೊಬ್ಬ ಯಾಚಿಸುತ್ತಾ ಹೊರಟ. ಅವನನ್ನು ನಾನು
ನೋಡಲಿಲ್ಲ.
ಭಿಕ್ಷುಕನಿಂದ ನಾನು ಏನನ್ನು ಬೇಡಲಿ? ಕೇಳದೆ ಅವನು
ಕೊಡುತ್ತಾನೆ
ಕಬೀರ ಹೇಳುತ್ತಾನೆ: ನಾನು ಅವನ ಸರ್ವಸ್ವ. ಈಗ
ಆಗಬೇಕಾದುದೆಲ್ಲ ಆಗಲಿ.40

●

ಓ ನನ್ನ ಸಹೋದರ, ಮಾಯೆಯನ್ನು ಹೇಗೆ ಕಡಿದು ಹಾಕಲಿ?
ಮನೆಯನ್ನು ತ್ಯಜಿಸಿ, ಕಾವಿಯನ್ನು ಧರಿಸಿದೆ. ವಸ್ತ್ರವನ್ನು
ತ್ಯಜಿಸಿ ಸಂಚಾರ ಹೊರಟೆ.

---

38 ಅದೇ. ಪು. 280 ; ಕ್ರ. ಸಂ. 3–74
39 ಅದೇ. ಪು. 280 ಕ್ರ. ಸಂ. 3–76
40 ಅದೇ. ಪು. 281; ಕ್ರ. ಸಂ. 3–89

ಕಾಮವನ್ನು ತ್ಯಜಿಸಿದೆ. ಕ್ರೋಧ ಹೋಗಲಿಲ್ಲ; ಕ್ರೋಧ
ಬಿಟ್ಟರೂ ಲೋಭ ಹೋಗಲಿಲ್ಲ.
ಲೋಭ ನೀಗಿದಾಗಲೂ ಅಹಂಕಾರ ಹೋಗಲಿಲ್ಲ. ಮತ್ತೆ
ಹಮ್ಮುಗಳು ಇನ್ನೂ ಉಳಿದಿವೆ
ಮಾಯೆಯನ್ನು ತ್ಯಜಿಸಿ, ವೈರಾಗಿಯಾದರೂ ಮನಸ್ಸು ಶ್ರುತಿ
ಸ್ಮೃತಿಗಳನ್ನು ಬಿಡಲಿಲ್ಲ.
ಕಬೀರ ಹೇಳುತ್ತಾನೆ: ಕೇಳು ಸಾಧು. ಸತ್ಯ ಮಾರ್ಗ ಸಿಗುವುದು
ಅತಿ ವಿರಳ.41

•

ಮಾಯೆ ಮಹಾ ಮೋಸಗಾತಿ ಎಂಬುದನ್ನು ಅರಿತಿದ್ದೇವೆ.
ಅವಳು ಮೂರು ಲೋಕಗಳನ್ನು ವ್ಯಾಪಿಸಿ, ಅಸ್ತ್ರಗಳನ್ನು
ಕೈಯಲ್ಲಿಟ್ಟು ಸಿಹಿ ಮಾತನ್ನು ಆಡುತ್ತಾಳೆ.
ಅವಳು ಕೇಶವನ ಕಮಲೆ. ಶಿವಭವನದಲ್ಲಿ ಭವಾನಿ.
ಪೂಜಾರಿಯ ಮೂರ್ತಿ ಅವಳು. ತೀರ್ಥಕ್ಷೇತ್ರಗಳಲ್ಲಿ ಜಲ ಅವಳು.
ಯೋಗಿಯ ಯೋಗಿನಿ ಅವಳು, ಅರಮನೆಯಲ್ಲಿರುವ
ರಾಣಿ ಅವಳು.
ಕೆಲವರಲ್ಲಿ ವಜ್ರರೂಪವಾಗಿ ಕಾಣಿಸುತ್ತಾಳೆ. ಮತ್ತೆ ಕೆಲವರಲ್ಲಿ
ಒಡಕು ಕವಡೆಯಾಗಿ ನೆಲಸುತ್ತಾಳೆ.
ಭಕ್ತನ ಭಕ್ತಿಯೂ ಅವಳೇ. ಅವಳು ಬ್ರಹ್ಮನ ರಾಣಿ.
ಕಬೀರ ಹೇಳುತ್ತಾನೆ: ಕೇಳು ಸಾಧು ಸಹೋದರ, ಇವೆಲ್ಲಾ
ಅವರ್ಣನೀಯ ಕಥೆಗಳು!42

•

ಸಾಧು ಸ್ನೇಹಿತನೆ. ಬದುಕಿರುವಾಗಲೇ ಅಭೀಪ್ಸೆಯನ್ನಿಡು.
ಬದುಕಿರುವಾಗಲೇ ಅರಿಯುವುದನ್ನು ಅರಿ, ಬದುಕಿನಲ್ಲಿಯೆ
ಇದೆ ಮುಕ್ತಿಯ ನಿವಾಸ
ಕರ್ಮ ಬಂಧನದಿಂದ ಬಿಡುಗಡೆಯಾಗದೆ ಮುಕ್ತಿಯನ್ನು ಏಕೆ
ಆಶಿಸುವೆ?
ದೇಹವನ್ನು ತ್ಯಜಿಸಿ ಬ್ರಹ್ಮವನ್ನು ಸೇರುವ ಆಸೆ ಬರಿ ಮಿಥ್ಯೆ!
ಈ ಬದುಕಿನಲ್ಲೇ ಬ್ರಹ್ಮ ಸಾಕ್ಷಾತ್ಕಾರ! ಸತ್ತ ಬಳಿಕ ಸಿಗುವುದು
ಯಮಪುರಿಯ ವಾಸ!
ಸತ್ಯವನ್ನು ತಿಳಿಸುವ ಸದ್ಗುರುವನ್ನು ಗುರುತಿಸು. ಸತ್ಯ
ನಾಮದಲ್ಲಿ ವಿಶ್ವಾಸವಿಡು. ಸಾಧನೆ ಹಿತಕರ.
ಕಬೀರ ಹೇಳುತ್ತಾನೆ: ನಾನು ಸಾಧನೆಯ ದಾಸ! 43

•

---

41 ಅದೇ. ಪು. 234; ಕ್ರ. ಸಂ. 1–63
42 ಅದೇ. ಪು. 311
43 ಅದೇ. ಪು. 232; ಕ್ರ. ಸಂ. 1–57.

[illegible]
[illegible]
[illegible]
[illegible]
[illegible]
[illegible]
ಕಬೀರ ಹೇಳುತ್ತಾನೆ: [illegible]
[illegible].44

●

ಓ ಸಾಧು, ನಿನ್ನ ದೇಹವನ್ನು [illegible]
ಆಲದ ಮರದಲ್ಲಿ ಬೀಜವೂ, ಬೀಜದಲ್ಲಿ ಹೂವು, ಹಣ್ಣು
ಮತ್ತು ನೆರಳೂ ಇರುವಂತೆ.
ದೇಹದಲ್ಲಿ ಬೀಜವಿದೆ. ಆ ಬೀಜದೊಳಗೆ ಈ ದೇಹ.
ಬೆಂಕಿ, ಗಾಳಿ, ನೀರು, ನೆಲ, ಆಕಾಶ—ಇವೆಲ್ಲವೂ ಅವನಿಂದ
ಹೊರತಲ್ಲ.
ಓ ಕಾಜಿ, ಪಂಡಿತ, [illegible] ಭಗವಂತನನ್ನು
ಬಿಟ್ಟು ಬೇರೆ ಇರುವುದಾದರೂ ಯಾವುದು?
ನೀರಿನಿಂದ ತುಂಬಿದ ಕೊಡ ನೀರಿನೊಳಗಿದೆ. ಅದರ ಹೊರಗಡೆ
ಮತ್ತು ಒಳಗಡೆ ನೀರಿದೆ.
ಅದು ನಾಮರಹಿತ, ನಾಮದಿಂದ ದ್ವಂದ್ವತೆಯ ದೋಷ.
ಕಬೀರ ಹೇಳುತ್ತಾನೆ: ಕೇಳು ಸಹೋದರ, [illegible]
[illegible].
ಭಗವಂತ ತನ್ನಲ್ಲಿಯೇ [illegible]. ಸೃಷ್ಟಿಕರ್ತನೂ ಅವನೇ.45

●

ಹರಿಯು ತನ್ನಲ್ಲಿ ತಾನೇ ಅದೃಶ್ಯನಾಗುತ್ತಾನೆ.
ಸುಂದರ ರೂಪದಲ್ಲಿ ಅವನು ಪ್ರಕಟವಾಗುತ್ತಾನೆ
ತನ್ನನ್ನು ಕಣ್ಣುಗಳಲ್ಲಿ [illegible] ಅವನು.
ಅವುಗಳಿಂದ [illegible] ಅವನೇ!
[illegible] ಕಾರಣ ಕರ್ತನೂ ಅವನೇ. ಅವನೇ [illegible]
[illegible].
ಅವನಿಗೆ ನನ್ನ ತನು ಮನಗಳ ಅರ್ಪಣೆ. ಪ್ರಾಣ ಹೋದರೂ
ಅವನನ್ನು ಮರೆಯಲಾರೆ.46

●

44 ಅದೇ ಪು. 265: ಕ್ರ. ಸಂ. 1-107
45 ಅದೇ ಪು. 264: ಕ್ರ. ಸಂ. 1-98
46 ಅದೇ. ಪು. 253: ಕ್ರ. ಸಂ. 2-45.

ಸದ್ಗುರುವಿನ ದಯೆ ಅಗೋಚರನನ್ನು ತಿಳಿಯುವಂತೆ ಮಾಡಿತು.
ಕಾಲಿಲ್ಲದೆ ನಡೆಯಲು, ರೆಕ್ಕೆಗಳಿಲ್ಲದೆ ಹಾರಲು, ಕೊಕ್ಕಿಲ್ಲದೆ
ಆಹಾರ ಸ್ವೀಕರಿಸಲು,
ಕಣ್ಣಿಲ್ಲದೆ ಕಾಣಲು, ಕಿವಿಯಿಲ್ಲದೆ ಕೇಳಲು ಶಕ್ತಿ ನೀಡಿದವನು ಅವನು.
ಸೂರ್ಯ ಚಂದ್ರರಿಲ್ಲದ, ದಿವಾ ರಾತ್ರಿಗಳಿಲ್ಲದ ಲೋಕದಲ್ಲಿ
ನನ್ನನ್ನು ಅಂತರ್ಮುಖಿಯನ್ನಾಗಿ ಮಾಡಿದವನೂ ಅವನೆ.
ಉಣ್ಣದೆ ಅಮೃತದ ಸವಿಯನ್ನು ಸವಿದೆ; ನೀರಿಲ್ಲದೆ ದಾಹವನ್ನು
ಇಂಗಿಸಿದೆ.
ಎಲ್ಲಿ ಹರ್ಷವಿದೆಯೋ ಅಲ್ಲಿ ಪೂರ್ಣ ಸುಖ. ಆ ಸುಖವನ್ನು
ಹೇಗೆ ವರ್ಣಿಸಲಿ?
ಕಬೀರನು ಹೇಳುತ್ತಾನೆ: ಸದ್ಗುರುವಿನ ಮಹಿಮೆ ವರ್ಣನಾತೀತ,
ಶಿಷ್ಯ ಧನ್ಯ!47

●

ಶೀಲ, ಸಂತೋಷ ಹಾಗೂ ಸಮದೃಷ್ಟಿಯುಳ್ಳವನಿಗೆ,
ಪೂರ್ಣವಾಗಿ ಸಮರ್ಪಿಸಿಕೊಂಡವನಿಗೆ
ಭಗವಂತನ ಪರಮ ದರ್ಶನವನ್ನು ಕಂಡು ಭಯಕ್ಲೇಶಗಳನ್ನು
ನಿವಾರಿಸಿಕೊಂಡವನಿಗೆ,
ಭಗವಂತನ ಸ್ಮರಣೆ ಎಂಬುದು ಶ್ರೀಗಂಧ ಲೇಪವಿದ್ದಂತೆ!
ಇನ್ನಾವುದೂ ಅವನಿಗೆ ರುಚಿಸದು.
ಅವನ ಕರ್ಮ, ಅವನ ವಿಶ್ರಾಂತಿ – ಎಲ್ಲವೂ ದಿವ್ಯ ಸಂಗೀತದಿಂದ
ತುಂಬಿ ಹೋಗುತ್ತದೆ.
ಅವನಿಂದ ಹೊರಹೊಮ್ಮುವುದು ದಿವ್ಯ ಪ್ರೇಮ ಜ್ಯೋತಿ.
ಕಬೀರ ಹೇಳುತ್ತಾನೆ: ಪ್ರೇಮ ಸ್ವರೂಪನೂ, ಅಖಂಡನೂ,
ಅವಿಚಲನೂ, ನಿರ್ಭಯನೂ,
ನಿರಾಮಯನೂ, ಕ್ಷಣ ಕ್ಷಣಕ್ಕೆ ಸುಖವನ್ನು ನೀಡುವವನೂ
ಆದ ಅವನ ಪಾದಕ್ಕೆ ನಮಿಸು.48

●

ಈ ಮರದ ಮೇಲೆ ಒಂದು ಹಕ್ಕಿ ಇದೆ–ಅದು ಆನಂದದಲ್ಲಿ
ಓಲಾಡುತ್ತಿದೆ.
ಅದರ ಜೊತೆಗಾರರಾರೂ ಕಾಣರು, ಅದರ ಭಾವನೆಯನ್ನು
ಯಾರೂ ತಿಳಿಯರು.
ಮರದ ನಿಬಿಡ ಛಾಯೆ ಇರುವೆಡೆಯಲ್ಲಿ ಅದರ ಗೂಡು.
ಸಂಜೆ ಬಂದು ಬೆಳಗ್ಗೆ ಹಾರಿಹೋಗುತ್ತದೆ.
ಅದರ ರಹಸ್ಯವನ್ನು ಯಾರೂ ಅರಿಯರು.
ನನ್ನೊಳಗೆ ಹಾಡುವ ಈ ಹಕ್ಕಿಯನ್ನು ಕುರಿತು ತಿಳಿಸುವವರಾರೂ
ಇಲ್ಲ

---

47 ಅದೇ. ಪು. 254; ಕ್ರ. ಸಂ. 2–81
48 ಅದೇ. ಪು. 273; ಕ್ರ. ಸಂ. 3–9

ಅದಕ್ಕೆ ವರ್ಣವೂ ಇಲ್ಲ, ಅವರ್ಣವೂ ಇಲ್ಲ; ಅದಕ್ಕೆ ರೂಪವೂ
ಇಲ್ಲ, ರೇಖೆಯೂ ಇಲ್ಲ.
ಅದು ಪ್ರೇಮದ ನೆರಳಲ್ಲಿ ಕುಳಿತಿರುತ್ತದೆ.
ಅಗಮ್ಯ ಅಪಾರದಲ್ಲಿ ಅದರ ನಿರಂತರ ವಾಸ; ಅದರ ಆಗಮ
ಗಮನಗಳು ಕಾಣುವುದಿಲ್ಲ.
ಕಬೀರನು ಹೇಳುತ್ತಾನೆ: ಕೇಳು ಸಾಧು ಸಹೋದರ,
ಈ ರಹಸ್ಯ ಅಗಮ್ಯ. ಪಂಡಿತರು ಆ ಹಕ್ಕಿಯ ನಿವಾಸವನ್ನು
ತಿಳಿಯಲಿ!49

●

ಹೇ ಭಗವಂತ, ನೀನು ನಿರಂಜನ.
ರೂಪ ರೇಖೆ ಮುದ್ರೆ ಮಾಯೆ ಇಲ್ಲದವನು ನೀನು.
ಸಮುದ್ರ, ಪರ್ವತ, ಪೃಥ್ವಿ, ಆಕಾಶ ಯಾವುದೂ ನೀನಲ್ಲ.
ಸೂರ್ಯ ಚಂದ್ರ ಎರಡೂ ನೀನಲ್ಲ, ನೀನು ಗಾಳಿಯಲ್ಲ.
ನಾದವಲ್ಲ, ವ್ಯಾಧಿಯಲ್ಲ, ಮೃತ್ಯುವಲ್ಲ, ಶರೀರವೂ ಅಲ್ಲ.
ಸೃಷ್ಟಿಯ ಆದಿಯಲ್ಲಿ ಜಲ ಮೊದಲಾದವುಗಳ ಅಸ್ತಿತ್ವವಿಲ್ಲದಾಗ,
ಹೇ ಪ್ರಭು, ನೀನು ನೀನಾಗಿದ್ದೆ!
ನೀನು ಜಪ ತಪ ಯೋಗ ಧ್ಯಾನ ಪೂಜೆಗಳಿಗೆ ಸಿಲುಕುವವನಲ್ಲ.
ಶಿವ ಶಕ್ತಿ ನೀನಲ್ಲ, ಆದರಿಂದ ಅನ್ಯನೂ ಅಲ್ಲ.
ನೀನು ಋಗ್, ಯಜುರ್, ಅಥರ್ವ, ಸಾಮ–ಈ ವೇದಗಳು
ಹಾಗೂ ವ್ಯಾಕರಣಗಳಿಂದ ಉತ್ಪನ್ನನಲ್ಲ.
ಹೇ ಪ್ರಭು, ನಿನ್ನ ಸ್ಥಿತಿಗತಿಗಳನ್ನು ಬಲ್ಲವ ನೀನೆ! ದಾಸ
ಕಬೀರನು ಕೇವಲ ನಿನ್ನ ಶರಣ.50

---

49 ಅದೇ. ಪು. 256; ಕ್ರ. ಸಂ. 2–95
50 ಪ್ರೊ. ಪುಷ್ಪಪಾಲಸಿಂಹ. ಕಬೀರ್ ಗ್ರಂಥಾವಲಿ ಸಟೀಕಾ. ಪು.421. ಕ್ರ. ಸಂ. 219

ಗುಂಡ್ಮಿ, ಚಂದ್ರಶೇಖರ ಐತಾಳ

ತಿಂಗಳ ಮುಡಿದವನ ತಿರುಳು

ಹಳೆಯದು ಉಳಿಯಬಾರದೆಂಬರು
ಚಿಗುರು ಮೂಡಬಾರದೇ?
ಹಳೆಯ ಬಳ್ಳಿ ಹಳತೆಂಬರು
ಹೂವು ಅರಳಬಾರದೇ?
ಗಾಳಿ ಹಳತು, ಮಣ್ಣು ಹಳತು
ಕಂಪು, ಬಣ್ಣ ಬಾರದೇ?
ಕಡಲು ಹಳತು, ಒಡಲು ಹಳತು
ತೆರೆ, ನಗೆ ಬರಬಾರದೇ?
ಬಾನು ಹಳತು, ಭಾನು ಹಳತು
ಬೆಳಕು ಆಗಬಾರದೇ?
ಮನುಜ ಹಳಬ, ದನುಜ ಹಳಬ
ಮಕ್ಕಳು ಇರಬಾರದೇ?
ಮರವು ಹಳತು, ತಂತಿ ಹಳತು
ಸ್ವರವು ಇಮಿರಬಾರದೇ?
ಹಳತಿರದಿರೆ ಹೊಸತೆಲ್ಲಿ
ನೀರಿರದಿರೆ ಮುಗಿಲೆಲ್ಲಿ
ಮುಗಿಲಿರದಿರೆ ಹನಿಯೆಲ್ಲಿ
ಹನಿಯಿರದಿರೆ ಹಸುರೆಲ್ಲಿ
ಹಸುರಿರದಿರೆ ತಿಂಗಳ ಮುಡಿದವನೇ
ಎನ್ನುವ ಉಸಿರೆಲ್ಲಿ!

ಪಿ. ವಿ. ಕಾಣೆ

ಎರಡು ಮಹಾಕಾವ್ಯಗಳು

ಭಾರತದ ಎರಡು ಮಹಾಕಾವ್ಯಗಳಾದ ಮಹಾಭಾರತ ಮತ್ತು ರಾಮಾಯಣಗಳಲ್ಲಿ ಧರ್ಮಶಾಸ್ತ್ರಕ್ಕೆ ಸಂಬಂಧಿಸಿದ ಅನೇಕ ಉಕ್ತಿಗಳನ್ನು (ಅದರಲ್ಲೂ ಮೊದಲ ಕಾವ್ಯದಲ್ಲಿ), ಮಧ್ಯಕಾಲದ ಮತ್ತು ಅನಂತರದ ಕೃತಿಗಳು ಇವುಗಳನ್ನು ಪ್ರಮಾಣಭೂತವೆಂದು ಅಂಗೀಕರಿಸಿವೆ. ವ್ಯಾಸ ಋಷಿಯು ಮಹಾಭಾರತವನ್ನು ಧರ್ಮಶಾಸ್ತ್ರ, ಅರ್ಥಶಾಸ್ತ್ರ(ರಾಜನೀತಿ ಮತ್ತು ಸರ್ಕಾರಕ್ಕೆ ಸಂಬಂಧಿಸಿದ್ದು),ಮೋಕ್ಷಶಾಸ್ತ್ರ ಹಾಗೂ ಕಾಮಶಾಸ್ತ್ರಗಳಿಂದ ಕೂಡಿದಂತೆ ರಚಿಸಿರುವನೆಂದು ಮಹಾಭಾರತವೇ ಸಾರಿ ಹೇಳುತ್ತದೆ.1 (ಆದಿಪರ್ವ, 2.83). ತಾನು ಹೇಳಿರುವುದೆಲ್ಲಾ ಬೇರೆಡೆಯಲ್ಲಿ ಕಾಣಸಿಗುತ್ತದೆ. ತಾನು ಹೇಳದೆ ಬಿಟ್ಟಿರುವುದು ಬೇರೆಡೆಯಲ್ಲಿ ಕಾಣಸಿಗುವುದಿಲ್ಲ ಎಂದು ಮಹಾಭಾರತ ತನ್ನ ಕೊನೆಯ ಪರ್ವದಲ್ಲಿ ತಿಳಿಸುತ್ತದೆ. ಅಂದರೆ ಅದೊಂದು ವಿಶ್ವಕೋಶವಾದಂತಾಯಿತು. ಹಾಗಾಗಿ ಅನಂತರದ ವಿದ್ವಾಂಸರು ಇದಕ್ಕೆ ಮತ್ತಷ್ಟು ಹೊಸ ವಿಷಯವನ್ನು ಸೇರಿಸುವಂತಾಯಿತು. ಉದ್ಯೋಗಪರ್ವ (130.18) ಹಾಗೂ ಆದಿಪರ್ವ (62.20)ದಲ್ಲಿ ಮಹಾಭಾರತವನ್ನು ಜಯ ಎಂದು ಕರೆಯಲಾಗಿದೆ (ಜಯೋ ನಾಮೇತಿಹಾಸೋಽಯಂ ಶ್ರೋತವ್ಯೋ ವಿಜಿಗೀಷುಣಾ). ಕೊನೆಯ ಪರ್ವ (ಸ್ವರ್ಗಾರೋಹಣಪರ್ವ)ದಲ್ಲಿ(5.51) ಈ ಮಹಾಕಾವ್ಯವನ್ನು ಸಂಹಿತಾ (1. 16 63.90), ಪುರಾಣ (1.17), ಆಖ್ಯಾನ (2.388–389), ಇತಿಹಾಸ (1.19 ಮತ್ತು 26 ಮತ್ತು 2.36, 41 ಮತ್ತು 62, 18), ಇತಿಹಾಸೋತ್ತಮ (2.385ರಲ್ಲಿ), ಕಾವ್ಯ (1. 61 ಮತ್ತು 73, 2. 390), ಕಾರ್ಷ್ಣವೇದ (1.268 ಮತ್ತು62. 18) ಎಂದು ಕರೆಯಲಾಗಿದೆ. ಮಹತ್ತಿನಿಂದ ಮತ್ತು ಬೃಹತ್ತಿನಿಂದ2 (ಅದರ ಒಳತಿರುಳಿನಿಂದ) ಮಹಾಕಾವ್ಯವೆಂದು ತನ್ನನ್ನು ಕರೆದುಕೊಂಡಿದೆ. ಇದು (ಮಹತ್ವದಿಂದ) ಹದಿನೆಂಟು ಪುರಾಣಗಳಿಗೆ ಸಮನಾಗಿದೆ. ಅಷ್ಟೇ ಅಲ್ಲ, ಎಲ್ಲ ಧರ್ಮಶಾಸ್ತ್ರಗಳಿಗೂ ಮತ್ತು ವೇದ ವೇದಾಂಗಗಳಿಗೂ ಸಮನಾಗಿದೆ (ಅಧ್ಯಾಯ 5.45–46). ಇದೇ ಕೃತಿ

---

1 ಅರ್ಥಶಾಸ್ತ್ರಮಿದಂ ಪ್ರೋಕ್ತಂ ಧರ್ಮಶಾಸ್ತ್ರಮಿದಂ ಮಹತ್।ಕಾಮಶಾಸ್ತ್ರಮಿದಂ ಪ್ರೋಕ್ತಂ ವ್ಯಾಸೇನಾಮಿತಬುದ್ಧಿನಾ॥

(ಆದಿ 2.83 ಮತ್ತು 62. 23;) ಆಚಖ್ಯುಃ ಕವಯಃ ಕೇಚಿತ್ಸಂಪ್ರತ್ಯಾಚಕ್ಷತೇ ಪರೇ।
ಆಖ್ಯಾಸ್ಯಂತಿ ತಥೈವಾನ್ಯೇ ಇತಿಹಾಸಮಿಮಂ ಭುವಿ (ಆದಿ 1. 26)
ಧರ್ಮೇ ಚಾರ್ಥೇ ಚ ಕಾಮೇ ಚ ಮೋಕ್ಷೇ ಚ ಭರತರ್ಷಭ। ಯದಿಹಾಸ್ತಿ ತದನ್ಯತ್ರ ಯನ್ನೇಹಾಸ್ತಿ ನ ಕುತ್ರಚಿತ್ ॥(ಸ್ವರ್ಗ)

2 ಮಹತ್ವಾದ್ಭಾರವತ್ವಾಚ್ಚ ಮಹಾಭಾರತಮುಚ್ಯತೇ। ನಿರುಕ್ತಮಸ್ಯ ಯೋ ವೇದ ಸರ್ವಪಾಪೈಃ ಪ್ರಮುಚ್ಯತೇ॥
ಅಷ್ಟಾದಶ ಪುರಾಣಾನಿ ಧರ್ಮಶಾಸ್ತ್ರಾಣಿ ಸರ್ವಶಃ। ವೇದಾಃ ಸಾಂಗಾಸ್ತಥೈಕತ್ರ ಭಾರತಂ ಚೈಕತಃ ಸ್ಥಿತಮ್॥ (ಸ್ವರ್ಗ)
5. 45–46: ಮಹತ್ವಾ...ಮುಚ್ಯತೇ ಪದಗಳು ಆದಿ(1. 274)ಯಲ್ಲೂ ಬರುತ್ತವೆ.

ಯಲ್ಲಿ 8800 ಶ್ಲೋಕಗಳಿವೆಯೆಂಬುದಾಗಿ ಆದಿಪರ್ವ (1.81)ವು ತಿಳಿಸುತ್ತದೆ.3 ಅದರ ಪ್ರಾಮುಖ್ಯ ವನ್ನು ಕೇವಲ ವ್ಯಾಸರು ಮತ್ತು ಶುಕರು ಬಲ್ಲರು; ಸಂಜಯನಿಗೆ ಇದು ತಿಳಿದಿದ್ದಿರಬಹುದು ಇಲ್ಲವೆ ತಿಳಿಯದೇ ಇದ್ದರೂ ಇರಬಹುದು.4 ಭಾರತವೆಂದರೆ ಉಪಾಖ್ಯಾನಗಳಿಲ್ಲದ ಮಹಾಕಾವ್ಯವೆಂದು ಹೇಳಲಾಗಿದೆ. ಅದರಲ್ಲಿ 24000 ಶ್ಲೋಕಗಳಿವೆ. ಉಪಾಖ್ಯಾನಗಳನ್ನೂ ಒಳಗೊಂಡ ಮಹಾ ಭಾರತ ಕೃತಿಯಲ್ಲಿ ಒಂದು ಲಕ್ಷ ಶ್ಲೋಕಗಳಿವೆ (ಆದಿ 1. 101–2). ವ್ಯಾಸರು ನಾಲ್ಕು ವೇದಗಳ ಜೊತೆಗೆ ಮಹಾಭಾರತವನ್ನು ಐದನೆಯ ವೇದವೆಂಬುದಾಗಿ ತನ್ನ ನಾಲ್ವರು ಶಿಷ್ಯರಾದ ಸುಮಂತು, ಜೈಮಿನಿ, ಪೈಲ, ವೈಶಂಪಾಯನರಿಗೂ ಮತ್ತು ತನ್ನ ಮಗನಾದ ಶುಕನಿಗೂ ಬೋಧಿಸಿದರೆಂದು ಆದಿ ಪರ್ವವು (63.89–90) ತಿಳಿಸುತ್ತದೆ.5 ಈ ಐವರು ಕಥೆಯ ಪ್ರತ್ಯೇಕವಾದ ಐದು ಪಾಠಾಂತರ

---

3 ಅಷ್ಟೌ ಶ್ಲೋಕ ಸಹಸ್ರಾಣಿ ಅಷ್ಟೌ ಶ್ಲೋಕ ಶತಾನಿ ಚ। ಅಹಂ ವೇದ್ಮಿ ಶುಕೋ ವೇತ್ತಿ ಸಂಜಯೋ ವೇತ್ತಿ ವಾ ನ ವಾ

ಇದಂ ಶತಸಹಸ್ರಂ ತು ಶ್ಲೋಕಾನಾಂ ಪುಣ್ಯಕರ್ಮಣಾಂ। ಉಪಾಖ್ಯಾನೈಃ ಸಹ ಜ್ಞೇಯ ಮಾದ್ಯಂ ಭಾರತಮುತ್ತಮಂ॥

ಚತುರ್ವಿಂಶತಿ ಸಾಹಸ್ರೀಂ ಚಕ್ರೇ ಭಾರತಸಂಹಿತಾಮ್॥ ಉಪಾಖ್ಯಾನೈರ್ವಿನಾ ತಾವದ್ಭಾರತಂ ಪ್ರೋಚ್ಯತೇ ಬುಧೈಃ (ಆದಿ 1. 81, 102–103.)

4 ಈ 8800 ಶ್ಲೋಕಗಳು ಕೂಟವೆಂದು ಪ್ರಸಿದ್ಧವಾಗಿವೆ. ಆದರೆ 8800 ಎನ್ನುವ ಸಂಖ್ಯೆ ನಿಜಕ್ಕೂ ಉತ್ಪ್ರೇಕ್ಷೆಯಿಂದ ಕೂಡಿದೆ. ಒಂದು ವೇಳೆ ಈ ಸಂಖ್ಯೆ ನಿಜವಾಗಿದ್ದಲ್ಲಿ ಮಹಾಭಾರತದಲ್ಲಿ ಹನ್ನೆರಡು ಶ್ಲೋಕಗಳಿಗೆ ಒಂದು ಶ್ಲೋಕ ಕೂಟವೆಂದಾಯಿತು. ವೈದ್ಯರು 'ಮಹಾಭಾರತ, ಒಂದು ವಿಮರ್ಶೆ' ಎನ್ನುವ ಕೃತಿಯಲ್ಲಿ (ಪರಿಶಿಷ್ಟ, III. ಪುಟ 190–193) ಕೂಟಶ್ಲೋಕಗಳ 27 ಉದಾಹರಣೆಗಳನ್ನು ನೀಡಿದ್ದಾರೆ. ಉದ್ಯೋಗ ಪರ್ವದ ಒಂದು ಶ್ಲೋಕವನ್ನು ಅವುಗಳಿಂದ ಉದಾಹರಣೆಯಾಗಿ ತೆಗೆದುಕೊಳ್ಳಬಹುದು ; 'ಏಕಯಾ ದ್ವೇ ವಿನಿಶ್ಚಿತ್ಯ ತ್ರೀನ್ ಚತುರ್ಭಿರ್ವಶಂ ಕುರು। ಪಂಚ ಜಿತ್ವಾ ಷಡ್ ವಿದಿತ್ವಾ ಸಪ್ತ ಹಿತ್ವಾ ಸುಖೀ ಭವ॥ ಉದ್ಯೋಗಪರ್ವ 33.44. ಈ ಏಳರಲ್ಲಿ ಬಹುಪಾಲು ಎರಡು ಅರ್ಥಗಳಿಂದ ಕೂಡಿದ್ದು ಒಂದು ರಾಜನೀತಿಗೂ ಮತ್ತೊಂದು ಅಧ್ಯಾತ್ಮಕ್ಕೂ ಅನ್ವಯವಾಗುತ್ತದೆ. ಸಂಗ್ರಹವಾಗಿ ಹೀಗೆ ಹೇಳಬಹುದು : ಏಕಯಾ...ಬುಧ್ಯಾ (ಒಬ್ಬನ ಪ್ರತಿಭೆ ಯಿಂದ); ದ್ವೇ ಎಂದರೆ ಕಾರ್ಯ (ಯಾವುದನ್ನು ಮಾಡಬೇಕಾಗುವುದೋ ಅದು) ಹಾಗೂ ಅಕಾರ್ಯ (ರಾಜನೀತಿಯಲ್ಲಿ) ಮತ್ತು ನಿತ್ಯ (ಶಾಶ್ವತ) ಹಾಗೂ ಅನಿತ್ಯ (ಅಶಾಶ್ವತ) (ಅಧ್ಯಾತ್ಮದಲ್ಲಿ): ತ್ರೀನ್ (ಮೂರು ಎಂದರೆ ಮಿತ್ರ (ಸ್ನೇಹಿತ), ಉದಾಸೀನ (ತಾಟಸ್ಥ್ಯ), ಶತ್ರು (ವೈರಿ): ಇಲ್ಲವೆ 'ಕಾಮ' (ಆಸೆ), ಕ್ರೋಧ (ಕೋಪ), ಲೋಭ (ದುರಾಶೆ); ಚತುರ್ಭಿಃ (ನಾಲ್ಕು) ಎಂದರೆ ಸಾಮ, ದಾನ, ಭೇದ, ದಂಡ (ರಾಜನೀತಿಯಲ್ಲಿ) ಹಾಗೂ ಶಮ, ದಮ, ಉಪರಮ, ಶ್ರದ್ಧಾ (ಅಧ್ಯಾತ್ಮದಲ್ಲಿ): ಪಂಚ (ಪಂಚೇಂದ್ರಿಯಗಳು, ರಾಜನೀತಿ ಮತ್ತು ಅಧ್ಯಾತ್ಮಗಳೆರಡರಲ್ಲಿಯೂ); ಷಡ್ (ಆರು) ಎಂದರೆ ಮನು vi .160 ರಲ್ಲಿ ಉಕ್ತವಾಗಿರುವ ಸಂಧಿ ಮತ್ತಿತರವು. ವೇದಾಂತದಲ್ಲಿಯ ವು 'ಅಶನಾಯಾ, ಪಿಪಾಸಾ, ಶೋಕ, ಮೋಹ, ಜರಾ, ಮೃತ್ಯು'; ಸಪ್ತ (ಏಳು) ಎಂದರೆ ವ್ಯಸನಗಳು – ಸ್ತ್ರೀ, ಜೂಜು, ಬೇಟೆ, ಕುಡಿತ, ವಾಕ್‌ಪಾರುಷ್ಯ, ದಂಡಪಾರುಷ್ಯ, ಅರ್ಥದೂಷಣ (ರಾಜನೀತಿಯಲ್ಲಿ) ಹಾಗೂ ಪಂಚೇಂದ್ರಿಯಗಳು ಮತ್ತು ಮನಸ್ಸು, ಬುದ್ಧಿಗಳು ಅಧ್ಯಾತ್ಮದಲ್ಲಿ. ಕೊನೆಯದಕ್ಕೆ ಮೈತ್ರಾಯಣಿ ಉಪನಿಷತ್ತನ್ನು ಹೋಲಿಸಿ ನೋಡಿ. v 30 (ಯದಾ ಪಂಚಾವತಿಷ್ಠಂತೇ ತೇ ಜ್ಞಾನಾನಿ ಮನಸಾ ಸಹ। ಬುದ್ಧಿಶ್ಚ ನ ವಿಚೇಷ್ಟತೇ ತಾಮಾಹುಃ ಪರಮಾಂ ಗತಿಂ)

5. ವೇದಾನಧ್ಯಾಪಯಾಮಾಸ ಮಹಾಭಾರತ ಪಂಚಮಾನ್। ಸುಮಂತುಂ ಜೈಮಿನಿಂ ಪೈಲಂ ಶುಕಂ ಚೈವ ಸ್ವಮಾತ್ಮಜಮ್ ॥

ಪ್ರಭುರ್ವರಿಷ್ಠೋ ವರದೋ ವೈಶಮ್ಪಾಯನಮೇವ ಚ।ಸಂಹಿತಾಸ್ತೈಃ ಪೃಥಕ್ತ್ವೇನ ಭಾರತಸ್ಯ ಪ್ರಕಾಶಿತಾಃ॥ ಆದಿ 63. 89–90.

ಗಳನ್ನು ಪ್ರಸಾರ ಮಾಡಿದ್ದಾರೆ. ಶಾಂತಿಪರ್ವ ಕೂಡ (ಅಧ್ಯಾಯ 327. 26–33 ಮತ್ತು 349. 10-12) ವ್ಯಾಸರು ಐವರು ಶಿಷ್ಯರನ್ನು ಕುರಿತ ಕಥೆಯನ್ನೇ ಪುನರುಚ್ಚರಿಸುತ್ತದೆ. ಈಗ ಪ್ರಚಾರದಲ್ಲಿ ರುವ ಮಹಾಭಾರತವನ್ನು ಪರೀಕ್ಷಿತನ ಮಗನಾದ ಜನಮೇಜಯನಿಗೆ ವೈಶಂಪಾಯನನು ನಿರೂಪಿಸಿದ ನೆಂದು ಉಪಟಿಸಲಾಗಿದೆ. ಪರೀಕ್ಷಿತನು ಅರ್ಜುನನ ಮೊಮ್ಮಗನೂ, ಅಭಿಮನ್ಯುವಿನ ಮಗನೂ ಆಗಿದ್ದನು. ಸೌತಿಯು ಜನಮೇಜಯರಾಯನಿಗೆ ನಿರೂಪಿಸಿದ ಕಥೆಯನ್ನು ಕೇಳಿ ಅದನ್ನು ಶೌನಕಾದಿ ಮುನಿಗಳಿಗೆ ವಿವರಿಸಿದನೆಂದು ಆದಿಪರ್ವ (1.9–10)ದಲ್ಲಿ ಹೇಳಲಾಗಿದೆ. ಹಾಗಾಗಿ (ಮಹಾಕಾವ್ಯದ ಹೇಳಿಕೆ ಯಂತೆಯೇ) ಮೂರು ಘಟ್ಟಗಳಿವೆ. ಅವೇ (1) ವ್ಯಾಸರು ಮಹಾಕಾವ್ಯವನ್ನು ಮೊದಲಿಗೆ ಐವರು ಶಿಷ್ಯರಿಗೆ ನಿರೂಪಿಸಿದ್ದು. (2) ವೈಶಂಪಾಯನನ್ನೂ ಒಳಗೊಂಡ ಈ ಐವರು ಪ್ರತ್ಯೇಕ ಕೃತಿಗಳನ್ನು ರಚಿಸಿದರು. ವೈಶಂಪಾಯನ ಅದನ್ನು ಜನಮೇಜಯನಿಗೆ ನಿರೂಪಿಸಿದನು. ಹಾಗೂ (3) ವೈಶಂಪಾಯನನು ಶೌನಕಾದಿಗಳಿಗೆ ನಿರೂಪಿಸಿದ್ದನ್ನು ಸೌತಿಯು ಕೇಳಿದ್ದು. ಹಾಗಾಗಿ ಪ್ರಚಲಿತ ಮಹಾಭಾರತದ ಕರ್ತೃ ಸೌತಿ ಮತ್ತು ಕೇವಲ ವ್ಯಾಸರ ಹೆಸರು ಇದರೊಂದಿಗೆ ಸೇರಿಕೊಂಡಿದೆ. ಈ ವಿಷಯದಲ್ಲಿ ಇದು ರಾಮಾಯಣದಿಂದ ಬೇರೆಯಾಗುತ್ತದೆ. ರಾಮಾಯಣದ ಕರ್ತೃ ಎಲ್ಲರ ಅಭಿಪ್ರಾಯದಂತೆ ವಾಲ್ಮೀಕಿ. ಭಾರತದ ಪ್ರಾಚೀನ ಪರಂಪರೆಯಲ್ಲಿ ಜನಮೇಜಯ ಪರೀಕ್ಷಿತನ ಹೆಸರು ಬಹುಪ್ರಸಿದ್ಧ ವಾದುದು. ಇಡೀ ವಿಶ್ವವನ್ನೇ ಗೆದ್ದು ಅಶ್ವಮೇಧಯಾಗವನ್ನು ಮಾಡಿದ ಜನಮೇಜಯ ಪರೀಕ್ಷಿತ ನಿಗೋಸ್ಕರ ಐಂದ್ರ ಮಹಾಭಿಷೇಕವನ್ನು ತುರಾ ಕಾವಷೇಯನು ಕೈಗೊಂಡನೆಂದು ಐತರೇಯ ಬ್ರಾಹ್ಮಣ ದಲ್ಲಿ ಹೇಳಲಾಗಿದೆ. (viii. 21). ಆ ಅಶ್ವಮೇಧಯಾಗದಲ್ಲಿ ಅದಕ್ಕೆ ಸಂಬಂಧಿಸಿದಂತೆ ಯಜ್ಞಗಾಥಾ ವನ್ನು ಹೇಳಿದನೆಂದೂ ಸಹ ವರ್ಣಿತವಾಗಿದೆ.[6] ಈತನ ವಿಷಯ ಶತಪಥ ಬ್ರಾಹ್ಮಣದಲ್ಲೂ ಬಂದಿದೆ. (xiii. 5.4 .1). ವ್ಯಾಸನ ಇತರ ಶಿಷ್ಯರು ರಚಿಸಿರಬಹುದಾದ ಸಂಹಿತೆಗಳ ವಿಷಯವೇನೆಂಬುದು ತಿಳಿದು ಬಂದಿಲ್ಲ.

ಆಶ್ವಲಾಯನ ಗೃಹ್ಯಸೂತ್ರದಲ್ಲಿ (iii.4) ವಿಧಿಸಿರುವಂತೆ ದೈನಂದಿನ ತರ್ಪಣವಿಧಿಯಲ್ಲಿ[7] ವ್ಯಾಸರ ನಾಲ್ವರು ಶಿಷ್ಯರ (ಶುಕನನ್ನು ಬಿಟ್ಟು) "ಸುಮಂತು – ಜೈಮಿನಿ – ವೈಶಂಪಾಯನ – ಪೈಲ– ಸೂತ್ರ – ಭಾಷ್ಯ – ಭಾರತ – ಮಹಾಭಾರತ – ಧರ್ಮಾಚಾರ್ಯಸ್–ತೃಪ್ಯಂತು" ಎಂಬ ಮಾತು ಆದಿ ಪರ್ವದ ಮರುದನಿಯಂತಿದೆ. ಭಾರತಕ್ಕೂ ಮಹಾಭಾರತಕ್ಕೂ ಮಾಡಿದ ವ್ಯತ್ಯಾಸವನ್ನು ಬಹುಶಃ ಆಶ್ವಲಾಯನ ಮನಗಂಡಿರಬೇಕು. ಶಾಂಖಾಯನ ಗೃಹ್ಯವು 'ಭಾರತ... ಧರ್ಮಾಚಾರ್ಯಾಃ' ಎನ್ನುತ್ತದೆ.

ಪ್ರಸಕ್ತ ಗ್ರಂಥದಲ್ಲಿ ವ್ಯಾಖ್ಯಾನದಿಂದ ಕೂಡಿದ ಮಹಾಭಾರತದ ಚಿತ್ರಶಾಲಾ ಮುದ್ರಣವನ್ನೂ, ನೀಲಕಂಠ ಚತುರ್ಧರನ ಭಾರತ ಭಾವದೀಪವನ್ನೂ ಉಪಯೋಗಿಸಿಕೊಳ್ಳಲಾಗಿದೆ. ಅದು ಸಾಮಾನ್ಯ ವಾಗಿ ಬೊಂಬಾಯಿಯ ಅಬ್ಬಾಂಗ್ ಮುದ್ರಣದೊಂದಿಗೆ ಸರಿಹೊಂದುತ್ತದೆ; ಕೆಲವು ವೇಳೆ ಒಂದು ಅಧ್ಯಾಯದ ಇಲ್ಲವೆ ಒಂದೆರಡು ಶ್ಲೋಕಗಳ ವ್ಯತ್ಯಾಸವಿರುತ್ತದೆ. ಭಂಡಾರ್ಕರ್ ಸಂಸ್ಥೆಯ ಮುದ್ರಣವನ್ನು ಬಳಸಿಕೊಂಡಿಲ್ಲ. ಏಕೆಂದರೆ ನಾನು ಇದನ್ನು ಬರೆಯಲು ಸಾಮಗ್ರಿಯನ್ನು ಸಿದ್ಧಮಾಡಿ ಕೊಳ್ಳುತ್ತಿದ್ದಾಗ ಆಗ ತಾನೇ ಪರಿಷ್ಕರಣದ ಕಾರ್ಯ ಆರಂಭವಾಗಿತ್ತು. ಈಗಲೂ ಕೂಡ ಅದು ಪೂರ್ಣ ಗೊಂಡಿಲ್ಲವಾದರೂ ಪೂರ್ಣಗೊಳ್ಳುವ ಹಂತದಲ್ಲಿದೆ.*

---

6 ಯಜ್ಞಗಾಥಾ : ಆಸಂದೀವತಿ ಧಾನ್ಯಾದಂ ರುಕ್ಮಿಣಂ ಹರಿತಸ್ರಜಂ। ಅಶ್ವಂ ಬಬಂಧ ಸಾರಂಗಂ ದೇವೇಭ್ಯೋ ಜನಮೇಜಯಃ॥ ಐತರೇಯ ಬ್ರಾಹ್ಮಣ viii 7.

7 ಸುಮಂತು – ಜೈಮಿನಿ – ವೈಶಂಪಾಯನ – ಪೈಲ – ಸೂತ್ರ – ಭಾಷ್ಯ – ಭಾರತ – ಮಹಾಭಾರತ – ಧರ್ಮಾಚಾರ್ಯಾಃ (ತೃಪ್ಯಂತು)।
ಆಶ್ವ. ಗೃ. ಸೂ. iii. 4.4. ಶಾಂಖಾಯನ ಗೃಹ್ಯವು 'ಭಾರತ ಮಹಾಭಾರತಧರ್ಮಾಚಾರ್ಯಾ' ಎನ್ನುವುದನ್ನು ಬಿಟ್ಟು ಭಾಷ್ಯ ಶಬ್ದದ ತರುವಾಯ 'ಗಾರ್ಗ್ಯ – ಬಭ್ರು – ಬಾಭ್ರವ್ಯ – ಮಂಡು ಮಾಂಡವ್ಯಾಃ' ಎನ್ನುವುದನ್ನು ಸೇರಿಸುತ್ತದೆ. ಸಂ. ಡಾ. ಎಸ್. ಸೆಹಗಾಲ್ (1960)

* ಈಗ ಪೂರ್ಣಗೊಂಡಿದೆ.

ಈ ಕೆಳಗಂಡ ಪಟ್ಟಿಯಲ್ಲಿ ಮಹಾಭಾರತದಲ್ಲಿ ಎಲ್ಲಿ ಧರ್ಮಶಾಸ್ತ್ರದ ಅಧ್ಯಾಯಗಳಿಗೆ ಸಂಬಂಧಿಸಿದಂತೆ ವಿಷಯವನ್ನು ನಿರೂಪಿಸಲಾಗಿದೆ ಎಂಬುದನ್ನು ಕುರಿತ ಒಂದು ಪ್ರಯತ್ನವನ್ನು (ಆಮೂಲಾಗ್ರವೆಂದು ಅರ್ಥವಲ್ಲ) ಕೈಗೊಳ್ಳಲಾಗಿದೆ.

ಅಭಿಷೇಕ (ಪಟ್ಟಾಭಿಷೇಕ)–ಶಾಂತಿ 40
(ಅರಾಜಕ) ಅನಾಯಕತ್ವದ ದುಷ್ಪರಿಣಾಮಗಳು ಶಾಂತಿ 67
ಅಹಿಂಸಾ – ಆದಿ. 11, ಅನುಶಾಸನ 115. 1 ಮುಂ. ಆಶ್ವಮೇಧಿಕ, ಅಧ್ಯಾಯ 28 ಮತ್ತು 43. ಶಾಂತಿ 330.
ಆಶ್ರಮ– ಧರ್ಮಗಳು – ಶಾಂತಿ 61, 212–15.
ಆಚಾರ – ಅನುಶಾಸನ 104
ಆಶ್ವಮೇಧಿಕ 45
ಆಪದ್ಧರ್ಮ – ಶಾಂತಿ 131 ಮುಂ.
ಉಪವಾಸ – ಅನುಶಾಸನ 106–107.
ತೀರ್ಥಗಳು – ವನಪರ್ವ 82, ಮುಂ. ಅನುಶಾಸನ 25–26, ಶಲ್ಯ 35–54.
ದಾನ – ವನಪರ್ವ 186, ಶಾಂತಿ 234, ಅನುಶಾಸನ 57–99
ದಂಡಸ್ತುತಿ – ಶಾಂತಿ 15, 121.
ದಾಯಭಾಗ – ಅನುಶಾಸನ 45–47
ಪುತ್ರರು (ಅನೇಕ ಬಗೆಯ)–ಅನುಶಾಸನ 48.49
ಪ್ರಾಯಶ್ಚಿತ್ತ-ಶಾಂತಿ 34, 35, 165.34 ಮುಂ.
ರಾಜನೀತಿ – ಸಭಾ 5, ವನಪರ್ವ 150, ಉದ್ಯೋಗ 33–34, ಶಾಂತಿ 59–130, ಆಶ್ರಮವಾಸಿಕ 5–7.
ವರ್ಣಧರ್ಮ–ಶಾಂತಿ 60, (ಮಿಶ್ರಜಾತಿಗಳು) ಶಾಂತಿ65, 297; ಅನುಶಾಸನ 48–49
ವಿವಾಹ – ಅನುಶಾಸನ 44–46.
ಶ್ರಾದ್ಧ – ಸ್ತ್ರೀಪರ್ವ 26–27 ಅನುಶಾಸನ 87–92.

ಎರಡು ಮಹಾಕಾವ್ಯಗಳ ಬೆಳವಣಿಗೆ ಮತ್ತು ವಿಕಾಸ, ಅವುಗಳ ನಡುವಣ ಸಂಬಂಧ, ಎರಡು ಮಹಾಕಾವ್ಯಗಳ ಕಾಲ; ಅವುಗಳಲ್ಲಿರಬಹುದಾದ ನಾನಾ ದರ್ಜೆಗಳು; ಅವುಗಳಿಗೆ ಪರಿಚಿತವಾಗಿದ್ದ ಸಾಹಿತ್ಯ ಹಾಗೂ ಅವುಗಳ ಛಂದೋರೂಪಗಳು; ಪ್ರಾಚೀನ ಹಾಗೂ ಅನಂತರದ ಧರ್ಮಶಾಸ್ತ್ರ ಕೃತಿಗಳ ಮೇಲೆ ಇವುಗಳ ಪ್ರಭಾವ; ಅತ್ಯಂತ ಪ್ರಾಚೀನ ಕಾಲದಲ್ಲಿ ಭಾರತವಾಸಿಯ ಜನತೆಯ ಮೇಲೆ ಇವುಗಳ ಪ್ರಭಾವ - ಮುಂತಾದ ಅನೇಕ ಕಠಿಣ ಸಮಸ್ಯೆಗಳು (ನಮಗೆ ವಿವಿಧ ಪರಿಷ್ಕರಣಗಳಿಂದ ಬಂದಿರುವ) ಈ ಎರಡು ಮಹಾಕಾವ್ಯಗಳ ಬಗ್ಗೆ ಉದ್ಭವಿಸುತ್ತವೆ. ಒಂದು ಶತಮಾನಕ್ಕೂ ಮೇಲ್ಪಟ್ಟು ಈ ವಿಷಯಗಳ ಬಗ್ಗೆ ಭಾರತೀಯ ಹಾಗೂ ಪಾಶ್ಚಾತ್ಯ ವಿದ್ವಾಂಸರು ಬೇಕಾದಷ್ಟು ಬರೆದಿಟ್ಟಿದ್ದಾರೆ. ಮೇಲೆ ಎತ್ತಿರುವ ಪ್ರಶ್ನೆಗಳ ಬಗ್ಗೆ ವಿವರಣಾತ್ಮಕವಾಗಿ ಚರ್ಚೆಯನ್ನು ನಡೆಸಲು ಸ್ಥಳಾವಕಾಶವಿಲ್ಲದ್ದರಿಂದ ಇಲ್ಲಿ ಸಾಧ್ಯವಾಗುತ್ತಿಲ್ಲ. ಆದಾಗ್ಯೂ ಕೂಡ ವಿದ್ವಾಂಸರು ಚರ್ಚಿಸಿರುವ ಹಲವಾರು ಅಧ್ಯಾಯಗಳ ಬಗ್ಗೆ ಕೆಲವು ಟೀಕೆಗಳನ್ನು ಮಾಡಬೇಕಾಗುತ್ತದೆ. ಈ ಕೆಳಗೆ ಉಲ್ಲೇಖಿಸಿರುವ ಕೃತಿಗಳು ಮತ್ತು ಲೇಖನಗಳು ಭಾರತೀಯ ಪ್ರಾಚೀನತೆಯ ಈ ಎರಡು ಅನುವಂಶಿಕ ಲಕ್ಷಣಗಳಿಗೆ ಸಂಬಂಧಿಸಿದ ಸಮಸ್ಯೆಗಳ ಬಗ್ಗೆ ಸ್ವಲ್ಪ ಮಟ್ಟಿಗೆ ಸೂಚನೆಯನ್ನು ನೀಡುತ್ತವೆ: "Zur Geschichte and Critik des Mahābhārata"–Holtzmann (kiel, 1892–94); "Das Ramayana, Geschichte und Inhalt"–Dr. Jacobi (Bonn. 1893), 'The Great Epic of India'–Prcf E. W. Hopkins (1901); Das Mahabharata &c by Dahlmann (Berlin 1895), Mahabharata, a criticism–C. V. Vaidya (1903); The riddle of Ramayana–C. V. Vaidya (1906), 'Das Mahabharata, Seine Eustehung, Sein Inhalt, Seine Form'–by Oldenberg (Gottingen, 1922);

M. Winternitz's 'History of Indian Literature' Vol. 1 (Calcutta, 1927) pp. 475–517; Dr. V. S. Sukthankar's Epic Studies, JBBRAS (New Series) vol IV, 185–202, Vol XI 165–191, 259–283, Vol XVI 70–113, Vol XVII 185–202, Vol XVIII 1–76, Vol XIX 20–262 ಹಾಗೂ Kane Festschrift ನಲ್ಲಿ (ಪುಟಗಳು 472–487) 'Ramopakhyana and the Ramayana'ದ ಮೇಲೆ ಲೇಖನ. ಡಾ. ವಿ. ಎಸ್. ಸುಕ್ತ್ಥಂಕರ್‌ರವರು 'ಮಹಾಭಾರತದ ಅರ್ಥ' (1942) ಎನ್ನುವ ನಾಲ್ಕು ಉಪನ್ಯಾಸಗಳ ಪೈಕಿ ಮೂರು ಉಪನ್ಯಾಸಗಳನ್ನು ನೀಡಿದರು. ಆದರೆ ನಾಲ್ಕನೇ ಉಪನ್ಯಾಸವನ್ನು ನೀಡುವ ಮೊದಲೇ ಇದ್ದಕ್ಕಿದ್ದಂತೆ ತೀರಿಕೊಂಡರು; ಈ ಕೊನೆಯದು ಬೊಂಬಾಯಿಯ ಏಷ್ಯಾಟಿಕ್ ಸೊಸೈಟಿಯ Monograph ಸಂ. 4; 'State and Government in ancient India'–A. S. Altekar (Benaras); 'History of Indian Political Ideas'–V.N. Ghoshal (1959); 'Polilical Theory of Ancient India'–I. W. Spellman (oxford 1964); Rev. C. Bulcke's 'Ramakatha, Utpatti aur Vikasa' (Allahabad, 1950) ಹಾಗೂ ಕೊನೆಯದಾಗಿ 'Ramayana, its history and character' (Poona Orientalist Vol. XXV pp. 36–60) ಮತ್ತು 'Three Ramayana Recensions' (J.O.R., Madras, Vol. 17, pp. 1–32).

ಎರಡು ಮಹಾಕಾವ್ಯಗಳಿಗೆ ಸಂಬಂಧಿಸಿದ ಕ್ಲೇಶದಾಯಕವೂ ಅತಿ ಮಹತ್ವಪೂರ್ಣವೂ ಆದ ಪ್ರಶ್ನೆಗಳ ಬಗ್ಗೆ ಇಲ್ಲಿ ಏನನ್ನೂ ಹೇಳದೇ ಹೋದಲ್ಲಿ ಅದು ಅನ್ಯಾಯವಾದಂತಾಗುತ್ತದೆ. ಎರಡು ಮಹಾಕಾವ್ಯಗಳ ಅಂದಾಜು ಕಾಲ, ಎರಡಕ್ಕೂ ಇರುವ ಪರಸ್ಪರ ಸಂಬಂಧ, ಅವುಗಳಲ್ಲಿ ಇರಬಹುದಾದ ವಿವಿಧ ಹಂತಗಳ ಪ್ರಶ್ನೆ – ಇವೇ ಮೊದಲಾದವು ಮುಖ್ಯವಾದವುಗಳು. ಈ ಪ್ರಶ್ನೆಗಳು ಪ್ರತ್ಯೇಕಿಸಲು ಬಾರದೆ ಒಂದರೊಡನೊಂದು ಹೆಣೆದುಕೊಂಡಿವೆ. ಅಷ್ಟೇ ಅಲ್ಲ, ಅವುಗಳನ್ನು ಬೇರೆ ಮಾಡಲೂ ಸಾಧ್ಯವಿಲ್ಲ. ಮೊದಲು ಹಲವಾರು ಅಂಶಗಳನ್ನು ಮುಂದಿಟ್ಟು ಸಂಕ್ಷಿಪ್ತವಾಗಿ ಚರ್ಚಿಸಿ ಅನಂತರ ಈ ಲೇಖನದ ಕರ್ತೃ ತನ್ನ ಅಭಿಪ್ರಾಯಗಳನ್ನು – ಅವು ಹೇಗಾದರೂ ಇರಲಿ– ಮುಂದಿರಿಸುತ್ತಾನೆ. ವಿಂಟರ್‌ನಿಟ್ಸ್ (ಭಾರತೀಯ ಸಾಹಿತ್ಯ ಇತಿಹಾಸ, ಕಲ್ಕತ್ತ. 1927)'ಮಹಾಭಾರತದ ಪ್ರತಿಯೊಂದು ಶ್ಲೋಕವನ್ನೂ ನಿರ್ಣಯಿಸಿ ಅವುಗಳಿಗೆ ಬೆಲೆಕಟ್ಟಬೇಕೆನ್ನುವಷ್ಟರವರೆಗೂ ಹೋಗಿದ್ದಾರೆ. "ಚರಿತ್ರೆಗೆ ಸಂಬಂಧಿಸಿದಂತೆ ಹಾಗೂ ತುಲನಾತ್ಮಕ ಉದ್ದೇಶಗಳಿಗೆ ಸಂಬಂಧಿಸಿದ್ದಂತೆ" ಹೀಗೆ ಮಾಡಬಹುದೆಂದು ಸುಕ್ತಂಕರ್ ಆತನ ಹೇಳಿಕೆಯನ್ನು ಟೀಕಿಸಿದ್ದಾರೆ. ಅವರು (Kane Festschrift)ನ 475ನೇ ಪುಟದಲ್ಲಿ) ಓಲ್ಡೆನ್‌ಬರ್ಗ್‌ನಂತಹ ಪಂಡಿತರೂ ಕೂಡ ಮಹಾಭಾರತದ ಭಾಗಗಳನ್ನು ಕುರಿತು ಬೆಲೆಕಟ್ಟುವಲ್ಲಿ, ಕಾಲ ನಿರ್ಣಯ ಮಾಡುವಲ್ಲಿ, ಅಗಾಧವಾದ ತಪ್ಪುಗಳನ್ನು ಮಾಡಿದ್ದಾರೆಂದು ನಮ್ಮ ಗಮನವನ್ನು ಸೆಳೆದಿದ್ದಾರೆ.

ಕ್ರಿ. ಶ. 7ನೆಯ ಶತಮಾನಕ್ಕಿಂತಲೂ ಪೂರ್ವದಲ್ಲಿ ಮಹಾಭಾರತವು ಜನಪ್ರಿಯವಾದ ಶಿಕ್ಷಣ ಗ್ರಂಥವಾಗಿತ್ತಲ್ಲದೆ 19ನೆಯ ಶತಮಾನದಂತೆಯೇ ಆಗಲೂ ಕೂಡ ಸಾರ್ವಜನಿಕರ ಮುಂದೆ – ಸ್ತ್ರೀ ಪುರುಷರಾದಿಯಾಗಿ – ವಾಚಿಸಲಾಗುತ್ತಿತ್ತೆಂಬುದು ಸ್ಪಷ್ಟವಾಗಿದೆ. ಉದಾಹರಣೆಗೆ ಪೀಟರ್‌ಸನ್ ಸಂಸ್ಕರಣದ 'ಕಾದಂಬರಿ' ಯಲ್ಲಿ (ಪು. 61)[8] "ಮಹಾಕಾವ್ಯವನ್ನು ವಾಚಿಸಿದಾಗ ಪುತ್ರನು ತನ್ನ ತಂದೆ

---

8 ಮಹಾಭಾರತೇ ವಾಚ್ಯಮಾನೇ ಶ್ರುತಂ ಪುನ್ನಾಮೋ ನರಕಾತ್ತ್ರಾಯತ ಇತಿ ಪುತ್ರ ಇತಿ ಕಾದಂಬರೀ, ಪುಟ 61 ಪ್ಯಾರ 14. ಇದು ಆದಿಪರ್ವದ 74.39, ಆದಿಪರ್ವ 229, ಹಾಗೆಯೇ ಮನು ix .138, ವಿಷ್ಣುಧರ್ಮಸೂತ್ರ 15. 44: ಆಪಸ್ತಂಬ ಪತ್ಯಮಾನ ನಾರಾಯಣ ನಾಮಸಹಸ್ರಂ.

ಯನ್ನು ಪುತ್ ನರಕದಿಂದ ಪಾರುಮಾಡಿದನು ಎಂಬ ವಿಷಯವನ್ನು ರಾಣಿ ವಿಲಾಸವತಿಯು ಅರಿತಳು" ಎಂದು ಹೇಳಲಾಗಿದೆ. ಅದೇ ರೀತಿ ಕಾದಂಬರಿಯಲ್ಲಿ (ಪುಟ 71) ನಾರಾಯಣನ ಸಹಸ್ರನಾಮವನ್ನು ಎಡೆಬಿಡದೆ ಉಚ್ಚರಿಸಲಾಗುತ್ತಿತ್ತೆಂದು ಹೇಳಲಾಗಿದೆ. ಕೃಷ್ಣನ ಹೆಸರುಗಳಲ್ಲಿ ಒಂದಾದ ಅನಂತನೆಂಬ ಹೆಸರಿನಿಂದ ಶ್ರೀಕೃಷ್ಣನು ಗೀತೆಯನ್ನು ಉಪದೇಶಿಸಿದ ಎಂದು ಕಾದಂಬರಿಯು (ಪುಟ90) ತಿಳಿಸುತ್ತದೆ. ಮತ್ತಷ್ಟು ಹಿಂದಕ್ಕೆ ಹೋದಲ್ಲಿ, ಕ್ರಿ. ಪೂ. 2ನೇ ಶತಮಾನದ ಹೆಲಿಯೊಡರಸ್‌ನ ಬೆಸ್ ನಗರ ಸ್ತಂಭ ಶಾಸನದಲ್ಲಿ9 (ನೋಡಿ JRAS. 1909. ಪುಟ 1055)ವಾಸುದೇವನ ಭಕ್ತ ಮತ್ತು ಯೋನ (ಯವನ) ರಾಯಭಾರಿಯೊಬ್ಬನು ಗ್ರೀಕ್ ದೊರೆ ಅಂತಲಿಕಿತನ ಆಸ್ಥಾನದಿಂದ ದೊರೆ ಭಾಗಭದ್ರನ ಆಸ್ಥಾನಕ್ಕೆ ಬಂದಂತೆ ಕಾಣಿಸುತ್ತದೆ.1 ಕೊನೆಯ ಭಾಗದಲ್ಲಿರುವ ಪ್ರಾಕೃತ ಶಬ್ದಗಳಾದ 'ದಮ, ಚಾಗ, ಅಪ್ರಮಾದ' (ದಮ, ತ್ಯಾಗ,ಮತ್ತು ಅಪ್ರಮಾದ.)ಗಳು ಉದ್ಯೋಗಪರ್ವದಲ್ಲಿ (43. 22) ಹಾಗೂ ಸ್ತ್ರೀ ಪರ್ವದಲ್ಲಿ (7. 23) ಬರುತ್ತವೆ.

ವೈದಿಕ ಸಾಹಿತ್ಯದ ಕೊನೆಯ ಹಂತವಾದ ಅಶ್ವಲಾಯನ ಗೃಹ್ಯಸೂತ್ರವು ಭಾರತ. ಮಹಾಭಾರತ ಮತ್ತು ಧರ್ಮಗಳ ಆಚಾರ್ಯರನ್ನು ದೈನಂದಿನ ತರ್ಪಣದಲ್ಲಿ ಸೇರಿಸುವುದೆಂಬುದನ್ನು ಮೇಲೆ ತೋರಿಸಲಾಗಿದೆ. ಭಾರತವನ್ನು ಕುರಿತು ತನಗೆ ನಾಲ್ಕು ಸಂದೇಹಗಳಿವೆಯೆಂದು ಮಾರ್ಕಂಡೇಯ ಪುರಾಣ ತಿಳಿಸುತ್ತದೆ. (ನೋಡಿ. H. of Dh. Vol. V, 901)ಮೃಚ್ಛಕಟಿಕವು ಸೌಪ್ತಿಕಪರ್ವವನ್ನು ಕುರಿತು ಹೇಳುತ್ತದೆ (III.12). [ಮಾರ್ಗೋಹ್ಯೇಷ ನರೇಂದ್ರ – ಸೌಪ್ತಿಕವಧೇ ಪೂರ್ವಂ ಕೃತೋ

ಕಾದಂ. ಪು. 71 ಪ್ಯಾರ 64. ನಾರಾಯಣನಾಮ ಸಹಸ್ರ ವಿಷ್ಣುಪುರಾಣ ಅನುಶಾಸನಪರ್ವದಲ್ಲಿ ಬರುತ್ತದೆ, ಅಧ್ಯಾಯ 149. 14–120: 'ಮಹಾಭಾರತಮಿವಾನಂತಗೀತಾ ಕರ್ಣಾನಂದಿತನರಂ'. ಇಲ್ಲಿ ಶ್ಲೇಷಾರ್ಥವಿದೆ. ನರ ಎಂದರೆ ಅರ್ಜುನ, ಹಾಗೆಯೇ ಮನುಷ್ಯ ಕೂಡ. ಅನಂತಗೀತಾ ಎಂದರೆ ಮಹಾಕಾವ್ಯದಲ್ಲಿರುವ ಜಗತ್ಪ್ರಸಿದ್ಧ ಗ್ರಂಥವೆಂದರ್ಥ (ಭೀಷ್ಮಪರ್ವ) ಹಾಗೆಯೇ ಅನಂತಗೀತ ಎಂದರೆ ಅನೇಕ ಹಾಡುಗಳು ಎಂದೂ ಸಹ ಅರ್ಥವಾಗುತ್ತದೆ.

9. 'ಇಂಡೋಗ್ರೀಕ್ಸ್'ನಲ್ಲಿ (ಆಕ್ಸ್‌ಫರ್ಡ್, 1957) ಡಾ ಎ.ಕೆ. ನಾರಾಯಣ್‌ರವರು ಒಂದು ಶಾಸನವನ್ನು ಪ್ರಕಟಿಸಿದ್ದಾರೆ. ಆ ಶಾಸನ (vi)ದಕೊನೆಯಲ್ಲಿ ಈ ಕೆಳಗೆ ಕಂಡಂತೆ ಬೆಸ್‌ನಗರ ಸ್ತಂಭ ಶಾಸನದ ಹೆಲಿಯೋದೋರಸ್‌ನ ಶಾಸನವನ್ನು ಒಂಬತ್ತು ಸಾಲುಗಳಲ್ಲಿ ವಿಂಗಡಿಸಿದ್ದಾರೆ. (ಬ್ರಾಹ್ಮೀ ಅಕ್ಷರಗಳು).

1. (ದೇ)ವದೇವಸ ವಾಸು(ದೇ)ವಸ ಗರುಡಧ್ವಜೇ ಅಯಂ
2. ಕಾರಿತೇ ಇ(ಅ)ಹೇಲಿ ಓಡೇರೇಣ ಭಾಗ–
3. ವತೇನ ದಿಯಸ ಪುತ್ರೇಣ ತಕ್ಖ ಸಿಲಾಕೇನ
4. ಯೋನ – ದತೇನ (ಆ)ಗತೇನ ಮಹಾರಾಜಸ
5. ಅಂತಲಿಕಿತಸ ಉಪಂ ತಾ ಸಕಾಸಂ ರಞೋ
6.(ಕೋ) ಸಿಪು(ತ್ರ) ಸ(ಭಾ)ಗ ಭದ್ರಸ ತ್ರಾತಾರಸ
7. ವಸೇನ ಚ (ತು) ದಸೇಂನ ರಾಜೇನ ವಧಮಾನಸ
8. ತ್ರಿನಿ ಅಮುತಪದಾನಿ ಇಅ(ಸು) ಅನುಠಿತ್ತಾನಿ
9. ನೇಯತಿ (ಸ್ವಗಂ) ದಮ ಚಾಗ ಅಪ್ರಮಾದ.

ಅಲ್ಲದೆ JRAS 1909. ಪುಟ 1053 –6 ಮತ್ತು 1087 – 92 ಮತ್ತು JBBRAS. Vol 23, ಪುಟ 164–66ಗಳನ್ನು ಈ ಅತ್ಯಂತ ಮುಖ್ಯವಾದ ಶಾಸನವನ್ನು ಮೊದಲು ಹೇಗೆ ಓದಲಾಯಿತು ಎಂಬುದಕ್ಕೆ ಮುಂಚೆ ನೋಡಿ. ದಮಸ್ತ್ಯಾಗೋ ಪ್ರಮಾದಶ್ಚ ಏತೇಷ್ವಮೃತಮಾಹಿತಮ್। ತಾನಿ ಸತ್ಯಮುಖಾ ನ್ಯಾಹುಃ ಬ್ರಾಹ್ಮಣಾ ಯೇ ಮನೀಷಿಣಃ॥ ಉದ್ಯೋಗಪರ್ವ 43–22: ದಮಸ್ತ್ಯಾಗೋಪ್ರಮಾದಶ್ಚ ತೇ ತ್ರಯೋ ಬ್ರಹ್ಮಣೋ ಹಯಾಃ। ಸ್ತ್ರೀಪರ್ವ 7. 23. ಗ್ವಾಲಿಯರ್ ಸಂಸ್ಥಾನದಲ್ಲಿರುವ ಭಿಲ್ಸಾದವಾಯವ್ಯಕ್ಕೆ ಸುಮಾರು ಎರಡು ಮೈಲಿ ದೂರದಲ್ಲಿ ಬೆಸ್‌ನಗರ ಇದೆ.

ದ್ರೌಣಿನಾ]. ಹಲವು ಕಡೆ ವೇದಾಂತ ಸೂತ್ರ ಎಲ್ಲಿ ಸ್ಮೃತಿಯನ್ನೇ ಅವಲಂಬಿಸಿರುವುದೋ ಅಂತಹ ಕಡೆಯಲ್ಲಿ ಶಂಕರಾಚಾರ್ಯರು ಕೇವಲ ಮಹಾಭಾರತದಿಂದಲೇ ಶ್ಲೋಕಗಳನ್ನು ಉದಾಹರಿಸುತ್ತಾರೆ.10 ಉದಾಹರಣೆಗೆ (ವೇದಾಂತ ಸೂತ್ರದಲ್ಲಿ [ii. 3. 47]ಆಚಾರ್ಯರು ಮಹಾಭಾರತದ ಎರಡು ಶ್ಲೋಕಗಳನ್ನು ಮಾತ್ರವೇ ಉದಾಹರಿಸುತ್ತಾರೆ. ಇದನ್ನು ಕೆಳಗೆ ತೋರಿಸಲಾಗಿದೆ. ಇದರಿಂದಾಗಿ ಶಾಂತಿಪರ್ವವನ್ನೂ ಒಳಗೊಂಡ ಮಹಾಭಾರತವು (ಶಾಂತಿಪರ್ವ ಅನಂತರ ಪ್ರಕ್ಷೇಪವಾಯಿತೆಂದು ಆಧುನಿಕ ವಿಮರ್ಶಕರು ಅಭಿಪ್ರಾಯ ಪಡುತ್ತಾರೆ.) ವೇದಾಂತ ಸೂತ್ರಕ್ಕಿಂತಲೂ ಮುಂಚಿನದು ಎಂಬ ಭಾವನೆ ಶಂಕರಾಚಾರ್ಯರಿಗಿತ್ತು. ಗೀತೆಯು (13.4ರಲ್ಲಿ) ಬ್ರಹ್ಮಸೂತ್ರ ಪದಗಳನ್ನು ಕುರಿತು ಹೇಳುವಲ್ಲಿ ಅದು ಬಾದರಾಯಣನ ಬ್ರಹ್ಮಸೂತ್ರವನ್ನು ಕುರಿತು ಹೇಳದೆ ಬಾದರಿ, ಔಡುಲೋಮಿ ಮತ್ತು ಆಶ್ಮರಥ್ಯರೇ (ನೋಡಿ H. of Dh. Vol 5. pp 1173-74) ಮೊದಲಾದವರ ಬ್ರಹ್ಮಸೂತ್ರಗಳನ್ನು ವಿವರಿಸುತ್ತದೆ ಎನ್ನುವುದನ್ನು ತೋರಿಸಿಕೊಡುವ ಪ್ರಯತ್ನವನ್ನು ಈ ಲೇಖಕ ಕೈಗೊಂಡಿದ್ದಾನೆ. ಪೂರ್ವಮೀಮಾಂಸಾ ಸೂತ್ರವನ್ನು ಕುರಿತ ತನ್ನ ಭಾಷ್ಯದಲ್ಲಿ ಶಬರನು ಈಗಿನ ಮಹಾಭಾರತ ಗ್ರಂಥದ ಭಾಗಗಳನ್ನು ಉಲ್ಲೇಖಿಸುತ್ತಾನೆ; ಈ ಸಂದರ್ಭದಲ್ಲಿ ಸುಕ್ತಂಕರ್ ಸಂಪುಟದಲ್ಲಿ ಪ್ರೊ. ವಿ. ಎಂ. ಆಪ್ಟೆಯವರೂ ಮತ್ತು ಡಿ. ವಿ. ಗರ್ಗೆಯವರೂ ಬರೆದಿರುವ ಲೇಖನವನ್ನು ನೋಡಿ (ಪುಟಗಳು 221–229).

ನಾವು ಮುಂದಿನ ವಿಷಯಕ್ಕೆ ಬರುವ ಮುಂಚೆ ಮೇಲೆ ಹೇಳಿದಂತೆ ಮಹಾಭಾರತ ಇತಿಹಾಸ ಎನ್ನುವುದನ್ನು ನಾವು ಒತ್ತಿಹೇಳಬೇಕಾಗುತ್ತದೆ. ರಾಮಾಯಣವಾದರೋ ಕಾವ್ಯ; ಹಾಗೆಂದೇ ರಾಮಾಯಣದಲ್ಲಿ ಹಲವಾರು ಬಾರಿ ಹೇಳಲಾಗಿದೆ. ಕಾಳಿದಾಸನಂತಹ ಕವಿಗಳೂ ಕೂಡ ಆಗಾಗ್ಗೆ ಇನರ ವಿಷಯವಾಗಿ ಹೇಳುತ್ತಾರೆ.11 ಆದ್ದರಿಂದ ವಾಲ್ಮೀಕಿಯು ತನ್ನ ಕಲ್ಪನಾವಿಲಾಸವನ್ನು ಹೆಚ್ಚು ಬಳಸಿಕೊಂಡಿರಬಹುದು. ಇತಿಹಾಸವೆಂದು ಅದು ನಿರೂಪಿತವಾಗಿರುವುದರಿಂದ ಮಹಾಭಾರತದಲ್ಲಿ ಸ್ವಲ್ಪ ಮಟ್ಟಿನ ಸಂಯಮವಿರಬಹುದು.

---

10. ಸ್ಮರಂತಿ ಚ। ವೇ. ಸೂ. ii 3. 47; ಶಂಕರಾಚಾರ್ಯರು ಹೀಗೆ ಟೀಕಿಸುತ್ತಾರೆ – ಸ್ಮರಂತಿ ಚ ವ್ಯಾಸಾದಯೋ ಯಥಾ ಜೈವೇನ ದುಃಖೇನ ನ ಪರಮಾತ್ಮಾ ದುಃಖಾಯತ ಇತಿ। ತತ್ರ ಯಃ ಪರಮಾತ್ಮಾ... ಸ ಸಪ್ತದಶಕೇನಾಪಿ ರಾಶಿನಾ ಯುಜ್ಯತೇ ಪುನಃ॥ ಈ ಶ್ಲೋಕಗಳು ಶಾಂತಿಪರ್ವದಲ್ಲಿ 351. 14–16; ಈ ಸೂತ್ರ ಹಾಗೂ ಇಲ್ಲಿ ಉಲ್ಲೇಖಿಸಲಾಗಿರುವ ಮುಂದಿನ ಸೂತ್ರಕ್ಕೆ ಸಂಬಂಧಿಸಿದಂತೆ ಯಾವ ಇತರ ಸ್ಮೃತಿ ಭಾಗಗಳನ್ನೂ ಅವರು ಉಲ್ಲೇಖಿಸಿಲ್ಲ. (2)ಅಪಿ ಚ ಸಂರಾಧನೇ ಪ್ರತ್ಯಕ್ಷಾನುಮಾನಾಭ್ಯಾಮ್ ವೇ. ಸೂ. iii 2.24; ಶಂಕರಾಚಾರ್ಯರು 'ಪ್ರತ್ಯಕ್ಷಾನುಮಾನಾಭ್ಯಾಂ ಶ್ರುತಿಸ್ಮೃತಿಭ್ಯಾಮಿತ್ಯರ್ಥಃ' ವಿವರಿಸಿ, ಒಂದೂವರೆ ಶ್ಲೋಕವನ್ನು ಉದಾಹರಿಸಿದ್ದಾರೆ; ಮೊದಲನೆಯದು ಶಾಂತಿಪರ್ವದ 47.54 ಮತ್ತು 284. 69ರಲ್ಲಿ ಬರುತ್ತದೆ; (3) ಸ್ಮರ್ಯತೇ ಚ। ವೇ. ಸೂ. 2. 14 ಶಂಕರಾಚಾರ್ಯರು ವಿವರಣೆ ನೀಡುತ್ತಾರೆ:'ಸ್ಮರ್ಯತೇಪಿ ಚ ಮಹಾಭಾರತೇ ಗತ್ಯುತ್ಕ್ರಾಂತ್ಯೋರಭಾವಃ – ಸರ್ವಭೂತಾತ್ಮಭೂತಸ್ಯ ಸಮ್ಯಗ್ಭೂತಾನಿ ಪಶ್ಯತಃ। ದೇವಾ ಅಪಿ ಮಾರ್ಗೇ ಮುಹ್ಯನ್ತ್ಯಪದಸ್ಯ ಪದೈಷಿಣಃ। ಇತಿ...ತಥಾಚ ತತ್ರೈವೋಪಸಂಹೃತಮ್. ಶುಕಸ್ತು ಮಾರುತಾಚ್ಛೀಘ್ರಾಂ ಗತಿಂ ಕೃತ್ವಾಂತರಿಕ್ಷಗಃ। ದರ್ಶಯಿತ್ವಾ ಪ್ರಭಾವಂ ಸ್ವಂ ಸರ್ವಭೂಗತೋ ಭವತ್. ಇತಿ. ಪದ್ಯಗಳು ಶಾಂತಿಪರ್ವಗಳ ವು. 262. 32 (ಹಾಗೂ 269. 22 ಮತ್ತು 33. 19.–20)

11. ನ ತೇ ವಾಗನೃತಾ ಕಾವ್ಯೇ ಕಾಚಿದತ್ರ ಭವಿಷ್ಯತಿ. ತಸ್ಯ ಬುದ್ಧಿರಿಯಂ ಜಾತಾ ವಾಲ್ಮೀಕೇರ್ಭಾವಿತಾತ್ಮನಃ। ಕೃತ್ಸ್ನಂ ರಾಮಾಯಣಂ ಕಾವ್ಯಮೀದೃಶೈಃ ಕರವಾಣ್ಯಹಂ... ಸಮಾಕ್ಷರೈಃ ಶ್ಲೋಕಶತೈರ್ಯಶಸ್ವಿನೋ ಯಶಸ್ಕರಂ ಕಾವ್ಯಮುದಾರಧೀರ್ಮುನಿಃ ॥ಬಾಲಕಾಂಡ 2.35, 41;ಆದಿಕಾವ್ಯಮಿದಂ ತ್ವಾರ್ಷಂ ಪುರಾ ವಾಲ್ಮೀಕಿನಾ ಕೃತಂ। ಯುದ್ಧಕಾಂಡ 131.107; ಕವಿಃ ಕುಶಲವಾವೇವ ಚಕಾರ ಕಿಲ ನಾಮತಃ।...ಸ್ವಕೃತಿಂ ಗಾಪಯಾಮಾಸ- ಕವಿಪ್ರಥಮಪದ್ಧತಿಂ। ....ಕವೇರಾದ್ಯಸ್ಯ ಶಾಸನಾತ್। ರಘುವಂಶ 15. 32, 33, 41.

ಋಗ್ವೇದದಲ್ಲಿ ಗಾಥಾ ಮತ್ತು ಶ್ಲೋಕಗಳೆಂಬ ಶಬ್ದಗಳು ಬರುತ್ತವೆ. ಗಾಥಾ ಎಂದರೆ ಹಾಡು ಇಲ್ಲವೆ ಪದ್ಯವೆಂದರ್ಥ. ('ಗಾಯ್'-ಹಾಡು ಎಂಬ ಧಾತುವಿನ ಮೂಲದಿಂದ ತೆಗೆದುಕೊಳ್ಳಲಾಗಿದೆ). ಗಾಥಾ ಎನ್ನುವುದಕ್ಕೆ ಋಗ್ವೇದದ viii 32 1, viii 71, 14 viii 98.9, x .85.6 ಭಾಗಗಳನ್ನು ನೋಡಿ. ಗಾಥಾ ಎಂಬ ಪದಕ್ಕಿಂತಲೂ ಹೆಚ್ಚಾಗಿ ಶ್ಲೋಕ ಎನ್ನುವ ಪದ ಋಗ್ವೇದದಲ್ಲಿ ಆಗಾಗ್ಗೆ ಕಾಣಿಸಿಕೊಳ್ಳುತ್ತದೆ. ಮಹಾಭಾರತದಲ್ಲಿ ಗಾಥಾಗಳನ್ನು ಪಿತೃಗಳೂ (ಅನುಶಾಸನ, 88.11-14), ಯಮ (ಅನು 45.17 ಮತ್ತು 104. 72) ಇಲ್ಲವೆ ಜನಕ (ಶಾಂತಿ17. 18–20), ಕಶ್ಯಪರೂ (ಕ್ಷಮಾದ ವಿಷಯವಾಗಿ. ವನಪರ್ವ 29.35–44) ಹಾಡಿರುವರಲ್ಲದೆ ಪೌರವನ ವಿಷಯವಾಗಿ ಬರುವ ಗಾಥಾ (ದ್ರೋಣಪರ್ವ 57.11) ಹಾಗೂ ಭಗೀರಥ (ದ್ರೋಣ 60. 8), ಯಯಾತಿ (ಶಾಂತಿ 26.13 ಮತ್ತು ದ್ರೋಣ 63.8–9)ಗಳ ಗಾಥಾಗಳನ್ನೂ ಕಾಣಬಹುದು. ಅಲ್ಲದೆ ಅಂಬರೀಷ ಮತ್ತು ಅಲರ್ಕರು, (ಆಶ್ವಮೇಧಿಕ 31. 12 ಮುಂ. ಮತ್ತು 30.30–31), ಬೃಹಸ್ಪತಿ (ಶಾಂತಿ 23. 14–15), ಬ್ರಹ್ಮನ್ (ಶಾಂತಿ 136. ರಾಜನ ಕೋಶದ ವಿಷಯವಾಗಿ)ಗಳು ಹಾಡಿರುವ ಗಾಥಾಗಳು ಮತ್ತು ಅಪ ಸಂಚಿಕೆಯ ವಿಷಯವಾಗಿ ಉಶನಸ್‌ಗಳು ಹಾಡಿರುವ ಗಾಥಾಗಳೂ ಇನ್ನೂ ಅನೇಕವು ಕಾಣಬರುತ್ತವೆ. 'ಶ್ಲೋಕೌ ಚಾತ್ರ ಭವತಃ'(ವನಪರ್ವ 192. 27–29) ಎಂಬ ಇಲ್ಲವೆ 'ಭವಂತಿ ಚಾತ್ರ ಶ್ಲೋಕಾಃ' (ವನಪರ್ವದಂತೆ 199. 13 – 15) ಎಂದು ಆರಂಭವಾಗುವ ಶಬ್ದಗಳೊಂದಿಗೆ ಶ್ಲೋಕಗಳನ್ನು ಉಲ್ಲೇಖಿಸುವುದುಂಟು. ಹಾಗಾದರೆ ಅನೇಕ ಶ್ಲೋಕಗಳು ಮತ್ತು ಗಾಥಾಗಳನ್ನು ಅನುವಂಶ ಇಲ್ಲವೆ ಸರಳವಾಗಿ ಹೇಳುವುದಾದಲ್ಲಿ ಅನುವಂಶಂ ಎಂದು ಉಲ್ಲೇಖಿಸಲಾಗಿದೆ. ಉದಾಹರಣೆಗೆ ವನ ಪರ್ವವು (129.8) 'ಅತ್ರಾನುವಂಶಂ ಪಠತಃ ಶೃಣು ಮೇ ಕುರುನಂದನ' ಎಂದು ಹೇಳಿ ಅನಂತರ ಎರಡು ಶ್ಲೋಕಗಳನ್ನು ಉಲ್ಲೇಖಿಸುತ್ತದೆ. ಅನುವಂಶಂ ಪದವನ್ನು ವನಪರ್ವದ 87. 16–17ರಲ್ಲೂ ಕಾಣ ಬಹುದು. (ಯತ್ರಾನುವಂಶಂ ಭಗವಾನ್ ಜಾಮದಗ್ನ್ಯಸ್ತಥಾ ಜಗೌ). ಅನುವಂಶದ ಶ್ಲೋಕ ಗಳಿಗೆ ಆದಿಪರ್ವ (95.8)ವನ್ನು ನೋಡಬಹುದು. (ದೇವಯಾನಿ ಮತ್ತು ಶರ್ಮಿಷ್ಠಾ ಇವರ ಮಕ್ಕಳಿಗೆ12)

ಇತರ ಅನುವಂಶ ಶ್ಲೋಕಗಳಿಗೆ ಆದಿಪರ್ವದ 95.27, 95.30–31, 95.46 (ಶಂತನು ವಿಷಯವಾಗಿ) ಶ್ಲೋಕಗಳನ್ನು ಗಮನಿಸಬಹುದು. ವನಪರ್ವ 88. 5ರಲ್ಲಿ ನೃಗನ ವಿಷಯವಾಗಿ ಅನು ವಂಶ್ಯ ಗಾಥಾ ಉಂಟು. ಎಷ್ಟೋ ವೇಳೆ ಇತಿಹಾಸವನ್ನೂ ಗೀತ ಎಂದು ಕರೆದಿರುವುದುಂಟು. ಇತಿಹಾಸ ಎನ್ನುವ ಶಬ್ದ ಪ್ರಾಚೀನವಾದುದು. ಅಥರ್ವವೇದ13, ಶತಪಥ ಬ್ರಾಹ್ಮಣ(x I.1.6.9), ಬೃಹದಾ ರಣ್ಯಕ ಹಾಗೂ ಛಾಂದೋಗ್ಯ ಉಪನಿಷತ್‌ಗಳಲ್ಲಿ (ಕ್ರಮವಾಗಿ II1. 4.2, vii 2.1) ಇದು ಬರುತ್ತದೆ.

---

12 ವನಪರ್ವದ ವ್ಯಾಖ್ಯಾನ (129.8)ವು 'ಅನುವಂಶಂ ಪರಂಪರಾಗತಮಾಖ್ಯಾನಶ್ಲೋಕಂ' ಎಂದು ವಿವರಿಸುತ್ತದೆ.

13 ಎರಡು ಶ್ಲೋಕಗಳು ಕುತೂಹಲಕರವಾಗಿವೆ: ಅತ್ರಾನುವಂಶ ಶ್ಲೋಕೌ ಭವತಃ। ಭಸ್ತ್ರಾ ಮಾತಾ ಪಿತುಃ ಪುತ್ರೋ ಯೇನ ಜಾತಃ ಸ ಏವ ಸಃ॥ ಭರಸ್ವ ಪುತ್ರಂ ದುಷ್ಯಂತ ಮಾವಮಂಸ್ಥಾಃ ಶಕುಂತಲಾಮ್। ರೇತೋಧಾ ಪುತ್ರ ಉನ್ನಯತಿ ನರದೇವ ಯಮಕ್ಷಯಾತ್। ತ್ವಂ ಚಾಸ್ಯ ಧಾತಾ ಗರ್ಭಸ್ಯ ಸತ್ಯಮಾಹ ಶಕುಂತಲಾ॥ ಆದಿ. 95. 30. ಉದ್ಯೋಗ ಪರ್ವ ನೋಡಿ 33. 103. ಅತ್ರೈವೋ ದಾಹರಂತೀಮಮಿತಿಹಾಸಂ ಪುರಾತನಂ। ಪುತ್ರಾರ್ಥಮಸುರೇಂದ್ರೇಣ ಗೀತಂ ಚೈವ ಸುಧನ್ವನಾ॥: ಇದಾದ ಮೇಲೆ ಇಪ್ಪತ್ತು ಶ್ಲೋಕಗಳು ಬರುತ್ತವೆ: ತಮಿತಿಹಾಸಃ ಪುರಾಣಂ ಚ ಗಾಥಾಶ್ಚ ನಾರಾಶಂ ಸೀಶ್ಚಾನುವ್ಯಚಲನ್। ಅಥರ್ವವೇದ xv. 6.11; ಅರೇ ಅಸ್ಯಮಹತೋ ಭೂತಸ್ಯ ನಿಶ್ವಸಿತಮೇತ ದ್ಯದೃಗ್ವೇದೋ ಯಜುರ್ವೇದಃ ಸಾಮವೇದೋಥರ್ವಾಂಗಿರಸಮಿತಿಹಾಸಃ ಪುರಾಣಂ ವಿದ್ಯಾ ಉಪ ನಿಷದಃ. ಬೃಹದಾ. ಉಪ. ii 4. 10. iv 1. 2. iv 5.11; ಪಾಣಿನಿಯನ್ನು ಕುರಿತ ಮಹಾ ಭಾಷ್ಯ iv 2.60 ಮತ್ತು ವಾರ್ತಿಕೆಯು 'ಆಖ್ಯಾನಾಖ್ಯಾಯಿಕೇತಿಹಾಸ ಪುರಾಣೇಭ್ಯಶ್ಚ ಠಗ್ವಕ್ತವ್ಯಃ' ಎಂಬುದು 'ಐತಿಹಾಸಿಕ' ಎನ್ನುವುದನ್ನು ವಿವರಿಸುತ್ತದೆ. (ಇತಿಹಾಸಮಧೀತೇ ವೇತ್ತಿ ವಾ ಇತಿ ಐತಿಹಾಸಿಕಃ)

ಮಹಾಭಾರತ ರಚಿತವಾಗುವುದಕ್ಕೆ ಮೊದಲೇ ಅನೇಕ ಪದ್ಯಗಳು ಅನೇಕ ಕುಟುಂಬಗಳಲ್ಲಿ ಮನೆಮಾಡಿದ್ದು, ಮಹಾಭಾರತವು ಆಗಿನ ಕಾಲದಲ್ಲಿ ಪ್ರಮುಖ ಕುಟುಂಬಗಳಲ್ಲಿ ರೂಢಿಯಲ್ಲಿದ್ದ ಲಾವಣಿಗಳು ಮತ್ತು ಆಶುಕವನಗಳನ್ನು ಅಧಿಕಸಂಖ್ಯೆಯಲ್ಲಿ ಬಳಸಿಕೊಂಡಿದೆ ಎಂಬುದನ್ನು ಮೇಲೆ ವಿವರಿಸಲಾಗಿರುವ ಸಂಕ್ಷಿಪ್ತ ವಾಕ್ಯಗಳು ತೋರಿಸಿಕೊಡಲು ಸಮರ್ಥವಾಗಿವೆ. ಆದರೆ ರಾಮಾಯಣವು ಕಾವ್ಯವೇ ವಿನಾ ಇತಿಹಾಸವಲ್ಲ. ಅದು ರಾಮನ, ಆತನ ಸಹೋದರರ ಜೀವನಕ್ಕೆ ಮಾತ್ರ ಸೀಮಿತವಾಗಿದೆ. ಮಹಾಕಾವ್ಯಗಳ ಮೇಲೆ ಉಪಯುಕ್ತವಾಗಿ ಬೆಳಕು ಚೆಲ್ಲುವ ಇನ್ನೊಂದು ಮೂಲವುಂಟು.ಪಾಣಿನಿಯ ಸೂತ್ರಗಳು, ವಾರ್ತಿಕಗಳು ಮತ್ತು ಪತಂಜಲಿಯ ಮಹಾಭಾಷ್ಯಗಳಿಂದ ಮಹಾಭಾರತದ ಪ್ರಮುಖ ವ್ಯಕ್ತಿಗಳು, ಅವರ ಸಹಾನುಯಾಯಿಗಳು, ವೈರಿಗಳು ಹಾಗೂ ಅವರ ಕಾರ್ಯಕಲಾಪಗಳನ್ನು ತಿಳಿದುಕೊಳ್ಳಬಹುದಾಗಿದೆ.

ರಾಮಾಯಣದಲ್ಲಿ ದಶರಥನಿಗಾಗಲಿ ಇಲ್ಲವೆ ರಾಮನಿಗಾಗಲಿ ಅನ್ವಯವಾಗುವಂತಹ ಆನುವಂಶಿಕ ಶ್ಲೋಕಗಳು ಇಲ್ಲವೆಂದೇ ಹೇಳಬಹುದು. ಸರ್ವಾನುಕ್ರಮಣಿಯ ಪ್ರಕಾರ ಜಮದಗ್ನಿಯ ಮಗನಾದ ರಾಮನು ಋಗ್ವೇದದ ಋಷಿ. (x· 110). ರಾಮನು ಋಗ್ವೇದದಲ್ಲಿ ಉಕ್ತವಾಗಿರುವ ಯಾವುದೋ ವ್ಯಕ್ತಿಯ ಹೆಸರು (× .93.14) ಐತರೇಯ ಬ್ರಾಹ್ಮಣ (vii 5. 1)ದಲ್ಲಿ ಬರುವ ರಾಮ ಮಾರ್ಗವೇಯನು ಶ್ಯಾಪರ್ಣ ಪುರೋಹಿತ ಕುಟುಂಬಕ್ಕೆ ಸೇರಿದ ವ್ಯಕ್ತಿಯೆಂದು ಗೊತ್ತಾಗುತ್ತದೆ.

ಪಾಣಿನಿ iv 3.98ರಲ್ಲಿ ವಸುದೇವನ ಭಕ್ತನಾದ ವಾಸುದೇವಕನು14 ಮತ್ತು ಅರ್ಜುನಕರು (ಅರ್ಜುನನ ಭಕ್ತ) 'ಭಕ್ತಿ'ಯ ಪ್ರತೀಕಗಳಾಗಿದ್ದಾರೆ.(iv 3.95). viii 3.95ರಲ್ಲಿ '('ಗವಿ ಯುಧಿಭ್ಯಾಂ 15 ಸ್ಥಿರಃ) ಮಹಾಭಾರತದ ಮುಖ್ಯ ಪಾತ್ರಗಳಲ್ಲೊಬ್ಬನಾದ ಯುಧಿಷ್ಠಿರನ ಹೆಸರನ್ನು ಉಲ್ಲೇಖಿಸಲಾಗಿದೆ. ಪಾಣಿನಿಯ ii 2. 34ರ ಸೂತ್ರವನ್ನು ('ಅಲ್ಪಾಚ್ತರಂ') ಕುರಿತ ಏಳನೆಯ ವಾರ್ತಿಕ (ಭ್ರಾತುರ್ಜ್ಯ ಜ್ಯಾಯಾಸಹ)ದಲ್ಲಿ ಪತಂಜಲಿಯು 'ಯುಧಿಷ್ಠಿರಾರ್ಜುನೌ'ಎಂಬ ಉದಾಹರಣೆಯನ್ನು ಕೊಡುತ್ತಾ, ಯುಧಿಷ್ಠಿರನು ಅಣ್ಣನಾದ್ದರಿಂದ ಆತನ ಹೆಸರು ನಾಲ್ಕು ಸ್ವರಗಳಿಂದ ಕೂಡಿದ್ದರೂ ಅದನ್ನು ಅರ್ಜುನನ ಹೆಸರಿನ ಮುಂದೆ ಇಟ್ಟಿದ್ದಾನೆ. vi 2.38ರಲ್ಲಿ ಸಮಸ್ತಭಾರತದಲ್ಲಿ ಇತರ (ಒಂಬತ್ತು ಪದಗಳೊಂದಿಗೆ) ಬರುವ 'ಮಹಾನ್'ಎಂಬ ಶಬ್ದಕ್ಕೆ ಸ್ವರವನ್ನು ಪಾಣಿನಿ ಹಾಕಿಕೊಟ್ಟಿದ್ದಾನೆ. ಪಾಣಿನಿಯ iv 1.85ರ ಮೇಲಿನ ಏಳನೆಯ ವಾರ್ತಿಕವು 'ಅಶ್ವತ್ಥಾಮಃ' ಎಂಬ ಹೆಸರನ್ನು ಸೂಚಿಸುತ್ತದೆ. ಮಹಾಭಾಷ್ಯದಲ್ಲಿ ಪತಂಜಲಿಯು ಉಲ್ಲೇಖಿಸಿರುವ ಎಲ್ಲ ಬಗೆಯ ಪದ್ಯ ಉಲ್ಲೇಖಗಳನ್ನೂ (ಇಡೀ ಪದ್ಯಗಳಾಗಲಿ ಇಲ್ಲವೆ ಅರ್ಧವಾಗಲಿ ಇಲ್ಲವೆ ಪಾದಗಳಾಗಲಿ) ಕೀಲ್‌ಹಾರ್ನ್ ಒಟ್ಟುಗೂಡಿಸಿದ್ದಾನೆ. (I A. ಸಂ. xiv ಪುಟಗಳು 326–27) ಪಾಣಿನಿಯ iv 1.97 ಸೂತ್ರ (ಸುಧಾತುರ್–ಅಕಂಚ)ದ ಮೇಲಿನ ಮೊದಲನೆ ವಾರ್ತಿಕವೇ 'ಸುಧಾತೃ – ವ್ಯಾಸಯೋಃ'. ಹೀಗಾಗಿ 'ವೈಯಾಸಕಿಃ' (ವ್ಯಾಸನ ಮಗ) ಎಂಬುದು ನಮಗೆ ಗೋಚರಿಸುತ್ತದೆ. ಅಂದರೆ ಶುಕ ಮತ್ತು ಮಹಾಭಾಷ್ಯವು ಅದನ್ನು ಕುರಿತು 'ವೈಯಾಸಕಿಃ ಶುಕಃ' ಎಂದು ಹೇಳುತ್ತವೆ. ಮಹಾಭಾರತದ ವೀರರನ್ನು ಕುರಿತ ಹಲವು ಪದ್ಯಗಳು ಇಲ್ಲವೆ ಪದ್ಯಭಾಗಗಳು ಮಹತ್ವಪೂರ್ಣವೂ, ಕುತೂಹಲಕಾರಿಯೂ ಆಗಿವೆ. ಪಾಣಿನಿಯ ii 2.24 ಸೂತ್ರವನ್ನು ಕುರಿತ 22ನೇ ವಾರ್ತಿಕದಲ್ಲಿ 'ಅಸಿದ್ವಿತೀಯೋಽನುಸಸಾರ ಪಾಂಡವಂ'(ಒಂದೇ ಒಂದು ಕತ್ತಿಯುಳ್ಳವನಾಗಿ ಪಾಂಡು ವೀರರನ್ನು ಹಿಂಬಾಲಿಸಿದ) ಮತ್ತು 'ಸಂಕರ್ಷಣ ದ್ವಿತೀಯಸ್ಯ ಬಲಂ ಕೃಷ್ಣಸ್ಯ ವರ್ಧತಾಂ'(ಇಲ್ಲಿ ಕೃಷ್ಣ ಮತ್ತು ಆತನ ಸೋದರ ಸಂಕರ್ಷಣರನ್ನು ಉಲ್ಲೇಖಿಸಲಾಗಿದೆ) ಎಂಬ ಎರಡು ಉಲ್ಲೇಖಗಳನ್ನು ಕಾಣುತ್ತೇವೆ. ಮೊದಲನೆ ಉಲ್ಲೇಖವು (ii 2.24)

---

14. ಭಕ್ತಿಃ। ವಾಸುದೇವಾರ್ಜುನಾಭ್ಯಾಂ ವುನ್। ಪಾ. iv 3.95 ಮತ್ತು 98; ಭಜ್ಯತೇ ಸೇವ್ಯತೇ ಇತಿ ಭಕ್ತಿಃ। ಸಿ. ಕೌ. ವಾಸುದೇವ ಎಂಬ ಹೆಸರು ಕೇವಲ ಕ್ಷತ್ರಿಯ ಎಂಬ ಹೆಸರಾಗಿರದೆ ದೈವಿಕ ಹೆಸರೂ ಆಗಿದೆ ಎಂಬುದನ್ನು ಮಹಾಭಾಷ್ಯ ವಿವರಿಸುತ್ತದೆ.

15 ಗವಿ – ಯುಧಿಭ್ಯಾಂ ಸ್ಥಿರಃ। ಪಾ. viii 3.95 (ಗವಿಷ್ಠಿರಃ ಯುಧಿಷ್ಠಿರಃ-ಉದಾ.) ಪೂಜೆ ಎಂಬ ಅರ್ಥವನ್ನು ಕೊಡುವ ಶಬ್ದ 'ಭಕ್ತಿ' ಶ್ವೇತಾಶ್ವತರೋಪನಿಷದ್‌ನಲ್ಲಿ ಬರುತ್ತದೆ (vi 23)

ಪಾಂಡವರ ಹೆಸರನ್ನು ಕುರಿತ ಯುಧಿಷ್ಠಿರ ಶ್ರುತಿಯಿಂದ ಪತ್ನಿಕೂಡಿರುವುದು ಎಂಬುದು ಸ್ಪಷ್ಟವಾಗಿ ಗೋಚರವಾಗುತ್ತದೆ. ಪಾಣಿನಿಯು iii 3.58ನೇ ಸೂತ್ರದ ಟೀಕೆಯ ಮೇರೆಗೆ ಪಾತಂಜಲ ಮಹಾಭಾಷ್ಯದ ಉದಾಹರಣೆಯಾದ ಉಲ್ಲೇಖವು 'ಧಾರ್ತರಾಷ್ಟ್ರ ಜಯೇ ರಾಜ' ಎನ್ನುವುದೇ ಆಗಿದೆ. ಅದರಂತೆಯೇ ಧಾರ್ತರಾಷ್ಟ್ರ ಎಂಬ ಹೆಸರಿನ ಸಂಗತಿ ಸ್ಪಷ್ಟವಾಗಿದೆ(ಭಗವದ್ಗೀತೆಯ ಒಂದನೇ ಅಧ್ಯಾಯದ 37ನೇ ಶ್ಲೋಕ ನೋಡಿ : 'ಸ್ವಬಾಂಧವಾನ್ ಧಾರ್ತರಾಷ್ಟ್ರಾನ್').

ಪಾಣಿನಿಯು iv 2.104ನೇ ಸೂತ್ರವನ್ನು ಕುರಿತ 11ನೇ ವಾರ್ತಿಕದಲ್ಲಿ ಪತಂಜಲಿಯು 'ಅಕ್ರೂರ - ವರ್ಗ್ಯಃ' ಮತ್ತು 'ಅಕ್ರೂರವರ್ಗೀಣಃ' ಎಂಬ ಪದಗಳನ್ನು ಜೊತೆಗೆ ವಾಸುದೇವ ವರ್ಗ್ಯಃ ಮತ್ತು ವಾಸುದೇವವರ್ಗೀಣಃ ಎಂಬ ಪದಗಳನ್ನು ಉಲ್ಲೇಖಿಸಿದ್ದಾನೆ. ಇದು ಶಾಂತಿಪರ್ವದ 81ನೇ ಅಧ್ಯಾಯದ ಕೃಷ್ಣ ಮತ್ತು ನಾರದರ ಸಂವಾದವನ್ನು ನೆನಪಿಗೆ ತರುತ್ತದೆ. ಯಾದವರಲ್ಲಿ ಪರಸ್ಪರ ಹೊಟ್ಟೆಕಿಚ್ಚು ಇದ್ದಿತೆಂಬುದು ಆ ಅಧ್ಯಾಯದಿಂದ ತಿಳಿದು ಬರುತ್ತದೆ.16 ಅಂಧಕವೃಷ್ಣಿ (ಪದ್ಯ8)ಗಳಲ್ಲಿ ಅಕ್ರೂರ ಮತ್ತು ಆಹುಕರೇ ಪ್ರಮುಖರು. ಕೃಷ್ಣನು ಆ ಸಂಘದ ಮುಖ್ಯಸ್ಥನಾಗಿದ್ದನು. ಅಂತಃಕಲಹಗಳಿಂದಾಗಿ ಸಂಘ ಒಡೆದು ಹೋಗಬಹುದೆಂದು ನಾರದನು ಕೃಷ್ಣನಿಗೆ ಉಪದೇಶಿಸಿದನು (ಪದ್ಯ 25). ಸಂಘ ನಾಶವಾಗದಂತೆ ಕೃಷ್ಣನು ಕಾರ್ಯವನ್ನು ಕೈಗೊಳ್ಳಬೇಕೆಂದು ತಿಳಿಸಿದನು. ಪಾಣಿನಿ(iv 1.114)ಗೆ ಅಂಧಕವೃಷ್ಣಿ ಮತ್ತು ಕುರುವಂಶಗಳ ಪರಿಚಯವಿತ್ತು. ಪತಂಜಲಿಯು ಬರೆದ ವಾರ್ತಿಕದಲ್ಲಿ ಔಗ್ರಸೇನ್ಯ (ಅಂಧಕವಂಶದ ಉಗ್ರಸೇನನಿಂದ ಬಂದ), ವಾಸುದೇವ ಮತ್ತು ಬಾಲದೇವ (ವೃಷ್ಣಿಗಳಲ್ಲಿ) ಮತ್ತು ಕ್ರಮವಾಗಿ ನಕುಲ, ಸಹದೇವ, ಭೀಮಸೇನರಿಂದ ನಾಕುಲ, ಸಾಹದೇವ ಮತ್ತು ಭೈಮಸೇನ್ಯ (ಕುರುವಂಶದಲ್ಲಿ) ಪದಗಳನ್ನು ವಿವರಿಸುತ್ತಾನೆ. ಅಲ್ಲದೆ ಪಾಣಿನಿಯು ಸೂತ್ರ vi 2.34 'ರಾಜನ್ಯ ಬಹುವಚನ ದ್ವಂದ್ವೇಽಂಧಕವೃಷ್ಣಿಷು' ಎಂಬುದು ಅಂಧಕವೃಷ್ಣಿಗಳಲ್ಲಿರುವ ಅನೇಕ ರಾಜನ್ಯರನ್ನು ಉಲ್ಲೇಖಿಸುತ್ತದೆ.

ಮೇಲಿನ ಪಾಣಿನಿ ಮತ್ತು ಪತಂಜಲಿಯರ ಸಂಕ್ಷಿಪ್ತ ಉಲ್ಲೇಖಗಳಿಂದ ಮಹಾಭಾರತದ ಮುಖ್ಯ ಕಥೆಯು ರಾಮಾಯಣದ ಕಥೆಗಿಂತಲೂ ಶತಮಾನಗಳಷ್ಟು ಹಳೆಯದೆಂದು ಯಾರಾದರೂ ದೃಢ ಪಡಿಸಬಹುದು. ವನಪರ್ವದಲ್ಲಿ (ಅಧ್ಯಾಯ 273–292, ಸುಮಾರು 750 ಪದ್ಯಗಳು) ದಲ್ಲಿ ಬರುವ ರಾಮೋಪಾಖ್ಯಾನದ ಬಗ್ಗೆ ಉಲ್ಲೇಖಿಸಲಾಗಿದೆ. ಅದು ಪ್ರಸ್ತುತ ರಾಮಾಯಣದ ಕಥೆಯೊಂದಿಗೆ ಸಂಪೂರ್ಣವಾಗಿ ಹೊಂದಿಕೊಳ್ಳುವುದಿಲ್ಲ. ಇದರಲ್ಲಿ ಕುಂಭಕರ್ಣನು ರಾಮನಿಂದ ಹತನಾಗುತ್ತಾನೆ ಎಂದು ಹೇಳಲಾಗಿದೆ (ಯುದ್ಧ 67. 180–181). ಆದರೆ ರಾಮೋಪಾಖ್ಯಾನದಲ್ಲಿ ಇವನನ್ನು ಲಕ್ಷ್ಮಣನು ನಿರ್ನಾಮಿಸುತ್ತಾನೆ (ವನಪರ್ವ 287.18-19). ಇದರ ಜೊತೆಗೆ, ಶಾಂತಿಪರ್ವದಲ್ಲಿ (ಅಧ್ಯಾಯ29) ರಾಮನು 11000ವರ್ಷಗಳ ಕಾಲ ರಾಜ್ಯಭಾರ ಮಾಡಿದರ ಬಗ್ಗೆ ಹಾಗೂ ಅವನ ಆಳ್ವಿಕೆಯಲ್ಲಿ ಜನತೆ ಆದರ್ಶ ಸುಖವನ್ನು ಅನುಭವಿಸಿದುದರ ಬಗ್ಗೆ ಸಂಕ್ಷಿಪ್ತ ವಿವರಣೆ ಇದೆ. ದ್ರೋಣಪರ್ವದಲ್ಲೂ ಕೂಡ ರಾಮನ ವಿಷಯವನ್ನು ಕುರಿತು ಸಂಕ್ಷೇಪವಾಗಿ ಷೋಡಶ ರಾಜಕೀಯ ವಿಭಾಗದಲ್ಲಿ (ಅಧ್ಯಾಯ 55–71.ರಾಮನಿಗೆ ಸಂಬಂಧಿಸಿದ ಅಧ್ಯಾಯ 59) ವಿವರಿಸಲಾಗಿದೆ. ರಾಮ ಕಥೆಯು ಇತರ ಹಲವಾರು

---

16. ಅದೇ (2.21.29) ಪರ್ವದಲ್ಲಿ ಅಕ್ರೂರನು ವೃಷ್ಣಿಗಳ ಸೇನಾಪತಿಯಾಗಿದ್ದನೆಂದೂ ಅತನನ್ನು 'ದಾನಪತಿ' ಎಂದು ಕರೆಯಲಾಗುತ್ತಿತ್ತೆಂದೂ ತಿಳಿಸುತ್ತದೆ. ಶಾಂತಿಪರ್ವದಲ್ಲಿ (81.9–10) ಕೃಷ್ಣನು ಹೇಳುವ ಮಾತು. 'ಯಸ್ಯ ನ ಸ್ಯುರ್ನ ವೈ ಸ ಸ್ಯಾದ್ಯಸ್ಯ ಸ್ಯುಃ ಕೃತ್ಸ್ನಮೇವ ತತ್। ದ್ವಾಭ್ಯಾಂ ನಿವಾರಿತೋ ನಿತ್ಯಂ ವೃಣೋಮ್ಯೇಕತರಂ ನ ಚ॥ ಸ್ಯಾತಾಂ ಯಸ್ಯಾಹುಕಾಕ್ರೂರೌ ಕಿಂ ನು ದುಃಖತರಂ ತತಃ। ಯಸ್ಯ ಚಾಪಿ ನ ತೌ ಸ್ಯಾತಾಂ ಕಿಂ ನು ದುಃಖತರಂ ತತಃ' ವ್ಯಾಖ್ಯಾಕಾರನು ಇದನ್ನು ಸ್ಪಷ್ಟಪಡಿಸಿದ್ದಾನೆ: 'ದ್ವಯೋರ್ಮಲ್ಲಯೋರಿವ ಯುಧ್ಯತೋರ್ವಾ ರಣೇ ಮಧ್ಯಸ್ಥಸ್ಯ ಮಮ ಮಹದ್ದುಃಖಂ ತಥಾ ದ್ವಯೋಃ ಸುಹೃದೋಸ್ತ್ಯಾಗೋಽಪಿ ಇತ್ಯಾಹ ಸ್ಯಾತಾಮಿತಿ. 11ನೇ ಪದ್ಯ ಸಮಂಜಸವಾಗಿದೆ: ಸೋಽಹಂ ಕಿತವಮಾತೇವ ದ್ವಯೋರಪಿ ಮಹಾಮುನೇ। ಏಕಸ್ಯ ಜಯಮಾಶಂಸೇ ದ್ವಿತೀಯಸ್ಯ ಪರಾಜಯಮ್.

[illegible] ಉಲ್ಲೇಖಿಸುತ್ತದೆ. (361.15)17.

ಮಹಾಭಾರತದಲ್ಲಿ [illegible] ಸಭಾ. 7. 16, [illegible] 89.119, ಉದ್ಯೋಗ 93.27, ಶಾಂತಿ 207.4([illegible]) [illegible] 13.8 ([illegible]) [illegible] (ನೋಡಿ 'ದಿ ಗ್ರೇಟ್ ಎಪಿಕ್ ಆಫ್ ಇಂಡಿಯ' ಪುಟ. 61).

[illegible] 148.16ರಲ್ಲಿ [illegible] (17.21) [illegible] 25 ಅಧ್ಯಾಯಗಳಲ್ಲಿ [illegible] 98ನೇ [illegible] 74ನೇ ಅಧ್ಯಾಯದಲ್ಲಿ [illegible]

---

17 [illegible] ಸಭಾ. 76.5; [illegible] ಶಾಂತಿ 153.67; [illegible] 39–9–10.

ಪ್ರಶಂಸಿಸಲಾಗಿದೆ. ಈ ಅಧ್ಯಾಯವನ್ನು ಮುಗಿಸುತ್ತಾ (ಪದ್ಯ 11–14) ಭೀಷ್ಮನು ಈ ಕಥೆಯನ್ನು ತನ್ನ ಉಪಾಧ್ಯಾಯರಿಂದಲೂ ಅವರು ಅದನ್ನು ಋಷಿಗಳಿಂದಲೂ, ಋಷಿಗಳು ಕಾಡಿನಲ್ಲಿ ಲಕ್ಷ್ಮಣನಿಂದಲೂ ತಿಳಿದುಕೊಂಡರೆಂದೂ, ರಾಮನು ಇದನ್ನು ತನ್ನ ತಂದೆಯಾದ ದಶರಥನಿಂದಲೂ, ಅವನು ಇದನ್ನು ಇಂದ್ರನಿಂದಲೂ ತಿಳಿದುಕೊಂಡನೆಂದೂ ತಿಳಿಸುತ್ತಾನೆ. ಅದೇ ಪರ್ವದ 137ನೇ ಅಧ್ಯಾಯದಲ್ಲಿ ಅಂಥದೇ ಮತ್ತೊಂದು ಉದಾಹರಣೆ ಬರುತ್ತದೆ. ಅದು ಅನೇಕ ಬಗೆಯ ದಾನಧರ್ಮಗಳನ್ನು ಮಾಡಿ ಸ್ವರ್ಗವನ್ನು ಪಡೆದುಕೊಂಡ ಹಿಂದಿನ ಅನೇಕ ಮಹಾಪುರುಷರನ್ನು ಹೆಸರಿಸುತ್ತದೆ. ಅವರಲ್ಲಿ ದಶರಥನ ಮಗನಾದ ರಾಮನು (14ನೇ ಪದ್ಯದಲ್ಲಿ) ಯಜ್ಞಯಾಗಾದಿಗಳನ್ನು ಮಾಡಿ ಅಕ್ಷಯವಾದ ಸ್ವರ್ಗವನ್ನು ತಲುಪಿದನೆಂದು ತಿಳಿಸುತ್ತದೆ.

ಕೇವಲ ಕಥೆಗಳು ಮಾತ್ರ ಪ್ರಕ್ಷೇಪವಾಗಿಲ್ಲ. ಅವುಗಳ ಜೊತೆಯಲ್ಲೇ ಅನೇಕ ಪುನರುಕ್ತಿಗಳು ಮಹಾಭಾರತದಲ್ಲಿ ಬಂದಿವೆ. ಹಲವಾರು ಉದಾಹರಣೆಗಳನ್ನು ಗಮನಿಸಬಹುದು. 223ನೇ ಅಧ್ಯಾಯದಲ್ಲಿ ಇಂದ್ರನಿಗೂ ಮತ್ತು ಬಲಿಗೂ ನಡೆದ ಸಂಕ್ಷೇಪ ಸಂವಾದವೇ ಶಾಂತಿಪರ್ವ(227 ಅಧ್ಯಾಯ) ದಲ್ಲಿ ವಿಸ್ತೃತವಾಗಿ ಬಂದಿದೆ; 175ನೇ ಅಧ್ಯಾಯದ ವಿಷಯವು (ತಂದೆ ಮಕ್ಕಳ ಸಂವಾದ) 277ನೇ ಅಧ್ಯಾಯದ ವಿಷಯವೇ ಆಗಿದೆ. ಶಲ್ಯಪರ್ವದ 38-39–45 ಭಾಗಗಳು ವನಪರ್ವದ 83.116–121ರಲ್ಲಿ ಬರುವ ವಿಷಯವಲ್ಲದೆ ಬೇರಲ್ಲ. ಷೋಡಶರಾಜಕೀಯವು ಎರಡು ಕಡೆಗಳಲ್ಲಿ, ಒಂದೆಡೆ ದ್ರೋಣಪರ್ವದಲ್ಲೂ (55.71 ಅಧ್ಯಾಯ) ಪುನಃ ಶಾಂತಿಪರ್ವದ 29ನೇ ಅಧ್ಯಾಯದಲ್ಲೂ ಬರುತ್ತದೆ. ಆಸ್ತೀಕನ ಕಥೆ ಎರಡು ಕಡೆಗಳಲ್ಲಿ, ಆದಿಪರ್ವದ 13 ಮತ್ತು 48ನೇ ಅಧ್ಯಾಯಗಳಲ್ಲಿ, ಬರುತ್ತದೆ.

ಮಹಾಭಾರತಕಾರನಿಗೆ ಗೊತ್ತಿದ್ದ ಸಾಹಿತ್ಯದಿಂದ ಈಗ ಪ್ರಚಲಿತವಾಗಿರುವ ಮಹಾಕಾವ್ಯದ ಸಂಭಾವ್ಯ ಕಾಲವನ್ನು ಗೊತ್ತುಪಡಿಸಲು ಸ್ವಲ್ಪಮಟ್ಟಿಗೆ ಸಾಧ್ಯವಾಗುತ್ತದೆ. ಆದರೆ ಬೇರೆ ಬೇರೆ ಕಾಲದಲ್ಲಿ ಪ್ರಕ್ಷೇಪಗಳುಂಟಾಗಿ ಪ್ರಸ್ತುತ ಗ್ರಂಥವು ಬಹು ಹೊರೆಯಾಗಿ ಪರಿಣಮಿಸಿರುವುದರಿಂದ, ಸರಿಯಾದ ಕಾಲ ನಿರ್ಣಯವನ್ನು ಗೊತ್ತುಪಡಿಸುವುದು ಸಾಧ್ಯವಾಗಿಲ್ಲ. ಅಲ್ಲದೆ ವೇದಗಳು ಮತ್ತು ಬ್ರಾಹ್ಮಣಗಳಿಗೆ ಸಂಬಂಧಿಸಿದಂತೆ ಉಲ್ಲೇಖಗಳನ್ನು ನೀಡುವ ಅಗತ್ಯ ಕಂಡುಬರುವುದಿಲ್ಲ. ಆದಿಪರ್ವದ 170.75ರಲ್ಲಿ ಆರು ಅಂಗಗಳನ್ನು ಸೂಚಿಸಲಾಗಿದೆ. ಶಾಂತಿಪರ್ವದ 342.38ರಲ್ಲಿ ನೈಘಂಟುಕ ಪದಗಳನ್ನು ಸೂಚಿಸಲಾಗಿದ್ದು ಅವುಗಳಲ್ಲಿ ವೃಷ ಎಂಬ ಪದವೂ ಸೇರಿದೆ. ಯಾಸ್ಕನ ನಿರುಕ್ತ ಮತ್ತು 'ಶಿಪಿವಿಷ್ಟ' (vii 100.6–7 ಋಗ್ವೇದ) ಪದದ ನಿರೂಪಣೆಯು ಶಾಂತಿಪರ್ವದಲ್ಲಿ[18] ಬಂದಿದೆ. ಔಪಮನ್ಯವು ಅನುಚಿತ (ವಿಷ್ಣುವಿಗೆ) ಎಂಬ ಅರ್ಥವನ್ನು ನೀಡುವ ಪದವನ್ನೇ ತೆಗೆದುಕೊಂಡು ನಿರುಕ್ತವು ವಿವರಣೆ ನೀಡುತ್ತಿರುವಾಗ, ಯಾಸ್ಕನು ಆ ಅರ್ಥವನ್ನು ಶ್ಲಾಘನೆಗೆ ಬಳಸಿಕೊಳ್ಳಲು ಇಚ್ಛಿಸಿದನೆಂದು ತೋರಿ ಬರುತ್ತದೆ. ಆತನು ಆ ಪದವನ್ನು ವಿಷ್ಣುವಿಗೆ (ಸೂರ್ಯನೆಂದು) ಅನ್ವಯಿಸುತ್ತಾನೆ. (ಎಂದರೆ ಸೂರ್ಯ ಕಿರಣಗಳು ಎಲ್ಲೆಡೆಗಳಲ್ಲೂ ಪ್ರವೇಶಿಸುತ್ತವೆ ಎಂದರ್ಥ). ವೇದಾಂಗಗಳು ಭಾರ್ಗವ ನೀತಿಶಾಸ್ತ್ರ(ರಾಜ್ಯಶಾಸ್ತ್ರ), ನಾರದ ಸಂಗೀತ (ಗಾಂಧರ್ವ), ಭಾರದ್ವಾಜ ಧನುರ್ವಿದ್ಯೆ, ದೇವರ್ಷಿಗಳ ಕಾರ್ಯವಾದ ಗಾರ್ಗ್ಯ, ಕೃಷ್ಣಾತ್ರೇಯ ಔಷಧಶಾಸ್ತ್ರ, ಕೆಲವು ವಾದಗಳು (ರಚಿತ)ಮತ್ತು ತರ್ಕದ (ತಾರ್ಕಿಕ, ವೈಶೇಷಿಕ ಮತ್ತು ಕಾಪಿಲದೇ ಮೊದಲಾದ) ಆಧಾರದ ಮೇಲೆ ರಚಿತವಾದ ಹಲವಾರು ಸಿದ್ಧಾಂತಗಳು ಬೃಹಸ್ಪತಿಗೆ ತಿಳಿದಿದ್ದವೆಂಬುದಾಗಿ (ರಚಿಸಿರಬಹುದಾಗಿ?) ಶಾಂತಿಪರ್ವವು (310.21–22) ಉಲ್ಲೇಖಿಸುತ್ತದೆ. ಮಹಾಭಾರತಕ್ಕೂ ಮತ್ತು ಮನುಸ್ಮೃತಿಗೂ ನಡುವೆ ಹೇಗೆ ನೂರಾರು ಶ್ಲೋಕಗಳು ಸಮಾನ್ಯವಾಗಿ ಕಂಡುಬಂದಿವೆ ಎಂಬ ಅಂಶವನ್ನು ಮನುಸ್ಮೃತಿಯನ್ನು ಕುರಿತು ಹೇಳುವಲ್ಲಿ ತೋರಿಸಿಕೊಡಲಾಗುವುದು. ಮನು ಹೇಳಿರುವಂತಹ ಶಾಸ್ತ್ರವನ್ನು ಅನುಶಾಸನ (47.35ರಲ್ಲಿ) ದಲ್ಲಿ ನಾವು ಕಾಣುತ್ತೇವೆ. ಛಾಂದೋಗ್ಯ ಉಪನಿಷತ್ತಿನ (vii 1.2–4) ಕಾಲಕ್ಕಾಗಲೇ ಇತಿಹಾಸ ಮತ್ತು ಪುರಾಣಗಳನ್ನು ಪಂಚಮವೇದವೆಂದು ಕರೆಯಲಾಗಿದೆ. ಪಾರಿಪ್ಲವದಲ್ಲಿ, ಕ್ರಮವಾಗಿ ಎಂಟು

---

18. ಸ್ತುತ್ವಾ ಮಾಂ ಶಿಪಿವಿಷ್ಟೇತಿ ಯಾಸ್ಕ ಋಷಿರುದಾರಧೀಃ। ಮತ್ಪ್ರಸಾದಾದಧೋ ನಷ್ಟಂ ನಿರುಕ್ತಮಭಿಜಗ್ಮಿವಾನ್॥ ಶಾಂತಿ. 342–73.

ಮತ್ತು ಬಹುತ್ತನೆಯ ದಿನಗಳಲ್ಲಿ, ಯಾವುದಾದರೂ ಪುರಾಣ ಅಥವಾ ಇತಿಹಾಸದ ಭಾಗವನ್ನು ಪಠಿಸಬೇಕೆಂದು ಶತಪಥ ಬ್ರಾಹ್ಮಣ ವಿಧಿಸುತ್ತದೆ. ಹಾಗಾಗಿ ಪುರಾಣಕ್ಕೆ ಸಂಬಂಧಿಸಿದಂತೆ ಮಹಾಕಾವ್ಯದಲ್ಲಿ ಬರುವ ನೂರಾರು ಉಲ್ಲೇಖಗಳನ್ನು ಇಲ್ಲಿ ಹೇಳಿಲ್ಲ. ವಾಯುವಿನಿಂದ ಉಕ್ತವಾದ ಪುರಾಣದ ಹೆಸರು ವನಪರ್ವದಲ್ಲಿ (191.16) ಉಕ್ತವಾಗಿರುವುದು ಬಹುಮುಖ್ಯ ಸಂಗತಿ. ಕೃಷ್ಣದ್ವೈಪಾಯನರು ಹದಿನೆಂಟು ಪುರಾಣಗಳನ್ನು ರಚಿಸಿದ್ದರೆಂದು ಸ್ವರ್ಗಾರೋಹಣಪರ್ವ ತಿಳಿಸುತ್ತದೆ. (5.46–47).

ದ್ರೋಣಪರ್ವದಲ್ಲಿ ಉಪವೇದಗಳ ಉಲ್ಲೇಖ ಬಂದಿದೆ(202.75). ಶಾಂತಿಪರ್ವದಲ್ಲಿ (49.32, 50. 233 ಮತ್ತು 167.31) ಧನುರ್ವೇದವನ್ನು ಹೆಸರಿಸಿದೆ.

ಮೇಲೆ ಉಲ್ಲೇಖಿಸಿದಂತೆ 'ಧರ್ಮ ಶಾಸ್ತ್ರೇಷು' ಎಂಬ ಪದ ಆಗಾಗ ಕಾಣಿಸಿಕೊಳ್ಳುತ್ತದೆ (ನೋಡಿ, ಪುಟಗಳು 13. 300–1). ಧರ್ಮಶಾಸ್ತ್ರವನ್ನು ಕುರಿತು ಪ್ರತ್ಯೇಕವಾಗಿ ಗ್ರಂಥರಚನೆ ಮಾಡಿದವರನ್ನೂ (ಮನುವನ್ನು ಬಿಟ್ಟು) – ಉದಾಹರಣೆಗೆ ಶಾಂತಿಪರ್ವದ 82.31ರಲ್ಲಿ ಯಮನನ್ನೂ, ಶಾಂತಿಪರ್ವದ 69. 71–73ರಲ್ಲಿ (ಎರಡು ಶ್ಲೋಕಗಳಲ್ಲಿ) ಅಂಗಿರಸನನ್ನೂ ಉಲ್ಲೇಖಿಸಲಾಗಿದೆ; ಆತತಾಯಿ ಒಬ್ಬನನ್ನು (ಬೆಂಕಿ ಹಚ್ಚುವ ಇಲ್ಲವೆ ವಿಷವಿಕ್ಕುವ ಕೆಲಸಕ್ಕೂ ಹಿಂಜರಿಯದಂತಹ ವ್ಯಕ್ತಿ) ಉಶನಸ್ ತನ್ನ ರಕ್ಷಣೆಗಾಗಿ ಕೊಂದಿರಬಹುದು.19.

ಅನುಶಾಸನ 18.38ರಲ್ಲಿ ಗಾರ್ಗ್ಯನು ಅರವತ್ತುನಾಲ್ಕು ಕಲೆಗಳನ್ನೂ ಬಲ್ಲವನಾಗಿದ್ದನೆಂದು ಹೇಳಲಾಗಿದೆ. ಶಲ್ಯಪರ್ವದಲ್ಲಿ (37.145) ಗಾರ್ಗ್ಯನಿಗೆ ಸರಸ್ವತಿ ನದೀ ತೀರದಲ್ಲಿರುವಾಗ ಕಾಲಜ್ಞಾನ ಮತ್ತು ಸ್ವರ್ಗೀಯ ವಸ್ತುಗಳ ಚಲನೆಯನ್ನು ಕುರಿತಾದ ಜ್ಞಾನ ಲಭಿಸಿತೆಂದೂ ತಿಳಿಯಬರುತ್ತದೆ. ಕೆರ್ನ್ ಅವರು (ಬೃಹತ್ ಸಂಹಿತಾ, ಪುಟ 50, ಮುನ್ನುಡಿ) ಖಗೋಳ ವಿಜ್ಞಾನಿ ಗಾರ್ಗ್ಯನ ಕಾಲ ಕ್ರಿ.ಪೂ. 50 ಎಂಬುದಾಗಿ ಹೇಳುತ್ತಾರೆ (ನೋಡಿ. ಧರ್ಮಶಾಸ್ತ್ರದ ಇತಿಹಾಸ, ಸಂಪುಟ 5 ಪುಟಗಳು 79 ಮತ್ತು 592, 878).

ಮಹಾಭಾರತ ಈ ಆಕಾರವನ್ನು ತಳೆಯುವಷ್ಟರಲ್ಲಿಯೇ ಬೌದ್ಧ ಮತ್ತು ಜೈನ ವಿಚಾರಧಾರೆಗಳು ಜನತೆಯ ಮೇಲೆ ಪ್ರಭಾವ ಬೀರಿದ್ದಂತೆ ಕಾಣಬರುತ್ತದೆ. ಉದಾಹರಣೆಗೆ ವನಪರ್ವದಲ್ಲಿ20 (181.42–43)'ಸತ್ಯ, ಆತ್ಮನಿಗ್ರಹ, ತಪಸ್ಸು, ದಾನ, ಅಹಿಂಸಾ, ಧರ್ಮನಿತ್ಯತೆ – ಇವುಗಳೇ ಮಾನವರಲ್ಲಿರಬೇಕಾದ ಸಾಧನಗಳು, ಜಾತಿಯಲ್ಲ. ಕುಲವಲ್ಲ' ಎಂಬುದಾಗಿ ಹೇಳಿದೆ. ಶಾಂತಿಪರ್ವವು (188.10) 'ನಾಲ್ಕು ವರ್ಣಗಳಲ್ಲಿ ಯಾವುದೇ ರೀತಿಯ ವ್ಯತ್ಯಾಸವಿಲ್ಲ ; ಈ ವಿಶ್ವವೇ ಬ್ರಹ್ಮ(ಬ್ರಹ್ಮನಿಗೆ ಸೇರಿದ್ದು), ಏಕೆಂದರೆ ಇದು ಈ ಮೊದಲೇ ಬ್ರಹ್ಮನಿಂದ ನಿರ್ಮಿತವಾಗಿದ್ದು ಅನಂತರ ಆಯಾ ವೃತ್ತಿಗಳಿಗನು

---

19. ಶ್ಲೋಕೌ ಚೋಶನಸಾ ಗೀತೌ ಪುರಾ ತಾತ ಮಹರ್ಷಿಣಾ।... ಉದ್ಯಮ್ಯ ಶಾಸ್ತ್ರಮಾಯಾಂತಮಪಿ ವೇದಾಂತಗಂ ರಣೇ॥ ನಿಗೃಹ್ಣೀಯಾತ್ಸ್ವಧರ್ಮೇಣ ಧರ್ಮಾಪೇಕ್ಷೀ ನರಾಧಿಪಃ।... ನ ತೇನ ಧರ್ಮಹಾ ಸ ಸ್ಯಾನ್ಮನ್ಯುಸ್ತಂ ಮನ್ಯುಮೃಚ್ಛತಿ॥ ಶಾಂತಿ 56. 28–30.

ಹೋಲಿಸಿ ಮನುಸ್ಮೃತಿ 8.348–351 (ಮನ್ಯುಸ್ತಂ ಮನ್ಯುಮೃಚ್ಛತಿ –ವ 351)

20 ಸತ್ಯಂ ದಮಸ್ತಪೋ ದಾನಮಹಿಂಸಾ ಧರ್ಮನಿತ್ಯತಾ। ಸಾಧಕಾನಿ ಸದಾ ಪುಂಸಾಂ ನಜಾತಿರ್ನ ಕುಲಂ ನೃಪ॥ ವನಪರ್ವ 181. 42–43; ನ ವಿಶೇಷೋಸ್ತಿ ವರ್ಣಾನಾಂ ಸರ್ವಂ ಬ್ರಾಹ್ಮಮಿದಂ ಜಗತ್। ಬ್ರಹ್ಮಣಾ ಪೂರ್ವಸೃಷ್ಟಂ ಹಿ ಕರ್ಮಭಿರ್ವರ್ಣತಾಂ ಗತಮ್॥ ಶಾಂತಿ 188.10;ಸತ್ಯಂ ದಾನಮಥಾದ್ರೋಹ ಆನೃಶಂಸ್ಯಂ ತ್ರಪಾ ಘೃಣಾ। ತಪಶ್ಚ ದೃಶ್ಯತೇ ಯತ್ರ ಸ ಬ್ರಾಹ್ಮಣ ಇತಿಸ್ಮೃತಃ। ......ಶೂದ್ರೇ ಚೈತದ್ಭವೇಲ್ಲಕ್ಷ್ಮಂ(ಕ್ಷ್ಮ?) ದ್ವಿಜೇ ತಚ್ಚ ನ ದೃಶ್ಯತೇ। ನ ವೈ ಶೂದ್ರೋ ಭವೇಚ್ಛೂದ್ರೋ ಬ್ರಾಹ್ಮಣೋ ನ ಚ ಬ್ರಾಹ್ಮಣಃ॥ ಶಾಂತಿ 189.4 ಮತ್ತು 8. ವನಪರ್ವದೊಂದಿಗೆ ಹೋಲಿಸಿ 180. 21. 216 14–15: ಉದ್ಯೋಗ ಪರ್ವ 43. 49 (ಯ ಏವ ಸತ್ಯಾನ್ನಾಪೈತಿ ಸ ಜ್ಞೇಯೋ ಬ್ರಾಹ್ಮಣಸ್ತ್ವಯಾ); ಅನುಶಾಸನ 143. 48–49 (ಕರ್ಮಭಿಃ ಶುಚಿಭಿರ್ದೇವಿ ಶುದ್ಧಾತ್ಮಾ ವಿಜಿತೇಂದ್ರಿಯಃ। ಶೂದ್ರೋಽಪಿ ದ್ವಿಜವತ್ಸೇವ್ಯ ಇತಿ ಬ್ರಹ್ಮಾಬ್ರವೀತ್ಸ್ವಯಮ್॥)

[illegible] 150 [illegible] (75-79) [illegible] (75) [illegible] 500 [illegible]

[illegible]

[illegible] (1927 [illegible] 469) [illegible] ('Epic Studies' viii—Kane Festschrift p. 474) [illegible]

[illegible] 24 [illegible]

[illegible] 121. 7 [illegible]

24 [illegible] 25.5) [illegible] 10 [illegible]

[illegible] 3.25 [illegible] 281) [illegible]

ಇಲ್ಲ. ಅಲ್ಲದೆ ಇಲ್ಲಿ 'ವಾನರ ಸೈನ್ಯ'ವೆಂದಾಕ್ಷಣ 'ಕೋತಿಗಳ ಸೈನ್ಯ'ವೆಂದು ಹೇಳುವಂತಿಲ್ಲ. ಇದನ್ನು ಕೋತಿಗಳ ಗುಂಪಿಗೆ ತಮಾಷೆಯಾಗಿ ಅನ್ವಯಿಸಬಹುದು. ಅಲ್ಲದೆ ಪರಸ್ಮೈಪದ ಮತ್ತು ಆತ್ಮನೇಪದಗಳಲ್ಲಿ ಒಂದೇ ಧಾತುವನ್ನು ತನ್ನ ವಿದ್ಯಾರ್ಥಿಗಳ ಉಪಯೋಗಕ್ಕಾಗಿ ವೈಯಾಕರಣ ಗುರು ಪ್ರಾಜ್ಞನು ರಚಿಸಿರಬಹುದು. ದಶರಥಜಾತಕದಲ್ಲಿ ದಶರಥ, ರಾಮ ಮತ್ತು ಸೀತೆಯರನ್ನು ಕುರಿತ ವಿವರಣೆಯಿರುವುದರಿಂದ ಕ್ರಿ. ಪೂ. 250ಕ್ಕಿಂತಲೂ ಹಲವು ದಶಕಗಳ ಮುಂಚೆಯೇ ಈ ಮೂವರನ್ನು ಕುರಿತ ಜನಪ್ರಿಯ ಕಥೆ ಇರುವ ಸಂಭಾವ್ಯತೆಯಿದೆ. ರಾಮಾಯಣ ವಿಭಾಗದಲ್ಲಿ ಮತ್ತಷ್ಟು ಟೀಕೆಗಳನ್ನು ಮಾಡಲಾಗುವುದು.

ಹಾಪ್‌ಕಿನ್ಸ್ ಅನುಸರಿಸಿರುವ ನಾಲ್ಕು ಭಾಗಗಳಲ್ಲಿ ಮೊದಲನೆಯದೇ 'ಅಪಿ ಚಾಯಂ ಪುರಾಗೀತಃ ಶ್ಲೋಕೋ ವಾಲ್ಮೀಕಿನಾ ಭುವಿ। ನ ಹಂತವ್ಯಾಃ ಸ್ತ್ರಿಯಾ ಇತಿ ಯತ್ ಬ್ರವೀಷಿ ಪ್ಲವಂಗಮ... ಪೀಡಾಕರಂ ಅಮಿತ್ರಾಣಾಂ ಯತ್-ಸ್ಯಾತ್ ಕರ್ತವ್ಯಂ ಏವ ತತ್' (ದ್ರೋಣಪರ್ವ 14.67–68)25 ಈ ಉಲ್ಲೇಖದ ವಿರುದ್ಧ ಟೀಕೆಗಳು ಹಲವಾರು. ಅವುಗಳ ಪೈಕಿ ಒಂದೆಂದರೆ, ಯಾವುದು ಉಲ್ಲೇಖಿತವಾಗಿದೆಯೋ ಅದು ಶ್ಲೋಕವಲ್ಲ, ಅದರ ಅರ್ಧ ಪಾದ ಮಾತ್ರ ಎಂಬುದೇ ಆಗಿದೆ: ಎರಡನೆಯದಾಗಿ ರಾಮಾಯಣದಲ್ಲಿನ ಶ್ಲೋಕ ಯಾವುದೇ ನಿಯಮಕ್ಕೆ ಒಳಪಡುವುದಿಲ್ಲ. ಆದರೆ ಶ್ಲೋಕದ ಉತ್ತರಾರ್ಧದಲ್ಲಿ ಸಮರ್ಥವಿದೆ: ಆದಿಪರ್ವ ಮತ್ತು ವನಪರ್ವಗಳಲ್ಲಿ ಸ್ತ್ರೀಹತ್ಯೆಯ ವಿರುದ್ಧ ಅದೇ ನಿಯಮವನ್ನೇ ಕುರಿತು ಈಗಾಗಲೇ ಮಹಾಭಾರತವೇ ಉಲ್ಲೇಖಿಸಿದೆ. ಎನ್ನುವುದು ಮತ್ತೊಂದು ಟೀಕೆ. ಬೇರೊಂದು ಮಹಾಕಾವ್ಯದ ಬಗ್ಗೆ ತನಗಿರುವ ಜ್ಞಾನ ಪ್ರದರ್ಶನ ತೋರಿಸುವ ಸಲುವಾಗಿ ದ್ರೋಣಪರ್ವದಲ್ಲಿ ಪ್ರಕ್ಷೇಪಕಾರನು ಸೇರಿಸಿದ್ದಾನೆ. ಎರಡನೆಯ ಉಲ್ಲೇಖದ ಬಗ್ಗೆ ಹೇಳುವುದಾದರೆ ಇನ್ನೊಂದು ಮಹಾಕಾವ್ಯದಲ್ಲಿ ರಾಮಾಯಣದಿಂದ ತೆಗೆದುಕೊಂಡ ನೇರ ಉಲ್ಲೇಖಗಳನ್ನು ಸಾಧಿಸಲು ಹಾಪ್‌ಕಿನ್ಸ್ ಉತ್ಸಾಹದಲ್ಲಿ ಮೈಮರೆತಿರುವನೆಂದು ಹೇಳಲು ನನಗೆ ವಿಷಾದವೆನಿಸುತ್ತದೆ. ರಾಮಾಯಣದಲ್ಲಿ 'ರಾಜಾನಾಂ ಪ್ರಥಮಂ ವಿಂದೇತ್' ಶ್ಲೋಕ ಬರುವುದೇ ಇಲ್ಲ.26 ಅದು ಅರ್ಥದಲ್ಲಿ ಹಾಗೂ ಮಾತುಗಳಲ್ಲಿ ಅಯೋಧ್ಯಾಕಾಂಡದ 67. 11 ಶ್ಲೋಕದೊಂದಿಗೆ ನಿಕಟವಾಗಿ ಹೊಂದಿಕೊಳ್ಳುತ್ತದೆ ಎಂದು ಹಾಪ್‌ಕಿನ್ಸ್ ಹೇಳದೆ ವಿಧಿಯಿಲ್ಲ. ಅಯೋಧ್ಯಾದಲ್ಲಿನ ಶ್ಲೋಕ ಅದೇ ಮಾತುಗಳಲ್ಲ.(ipsissima verba). ಆತನು ಮಾಡಿರುವ ಅಮೂಲ್ಯ ಊಹೆಯೂ ಒಂದಿದೆ. ಭಾರ್ಗವನೇ ವಾಲ್ಮೀಕಿ ಎಂದು ಆತನು ಭಾವಿಸುತ್ತಾನೆ. ಭಾರ್ಗವನೆಂದರೆ ಉಶನಸ್. ಕೆಳಗೆ ಉಲ್ಲೇಖಿಸಿರುವ ಅಮರಕೋಶದ ಶ್ಲೋಕ ನೋಡಿ. 27 ಹಾಪ್‌ಕಿನ್ಸ್‌ಗೆ ಎಲ್ಲ ವಿದ್ವತ್ತು ಮತ್ತು ಪರಿಶ್ರಮಗಳಿದ್ದರೂ ಶಾಂತಿಪರ್ವ (210–20)ವು ಭಾರ್ಗವನು ನೀತಿಶಾಸ್ತ್ರದ ಕರ್ತೃವೆಂದು ಹೇಳುವುದನ್ನು ಆತ ಇಲ್ಲಿ ಮರೆತಿದ್ದಾನೆ.

ಪ್ರಶ್ನೆಯಿಲ್ಲದಾಗ. ಆದರೆ ಯಾರಿಗಾದರೂ ಸಹಜ ಕ್ರಿಯೆಯಾಗುವಾಗ ಅದು ಪರಸ್ಮೈಪದ ಮಾತ್ರವೇ ಆಗುತ್ತದೆ.

25 ನ ಹಂತವ್ಯಾಃ ಸ್ತ್ರಿಯಶ್ಚೇತಿ ಯದ್ ಬ್ರವೀಷಿ ಪ್ಲವಂಗಮ। ಪೀಡಾಕರಮಮಿತ್ರಾಣಾಂ ಯಚ್ಚ ಕರ್ತವ್ಯಮೇವ ತತ್॥ ಯುದ್ಧಕಾಂಡ 81. 29–30: ಹೋಲಿಸಿ: ಅವಧ್ಯಾಂ ಸ್ತ್ರಿಯಮಿತ್ಯಾಹುಃ ಧರ್ಮಾಧರ್ಮ ವಿನಿಶ್ಚಯೇ। ಆದಿ ಪರ್ವ 158. 31: .ಅವಧ್ಯಾಃ ಸ್ತ್ರಿಯ ಸೃಷ್ಟಾ ಮನ್ಯಂತೇ ಧರ್ಮಚಾರಿಣಃ। ಆದಿ 217.4; ನೋಡಿ : ವನಪರ್ವ 206.46ಸಹ

26 ಆಖ್ಯಾತೇ ರಾಮಚರಿತೇ ನೃಪತಿಂ ಪ್ರತಿ ಭಾರತ॥ ರಾಜಾನಂ ಪ್ರಥಮಂ ವಿಂದೇತ್ತತೋ ಭಾರ್ಯಾಂ ತತೋ ಧನಂ। ರಾಜನ್ಯಸತಿ ಲೋಕಸ್ಯ ಕುತೋ ಭಾರ್ಯಾ ಕುತೋ ಧನಂ॥ ಶಾಂತಿ 57. 40–41; ಅಯೋಧ್ಯಾಕಾಂಡ 67. 11ರಲ್ಲಿ 'ಅರಾಜಕೇ ಧನಂ ನಾಸ್ತಿ ನಾಸ್ತಿ ಭಾರ್ಯಾಪ್ಯರಾಜಕೇ। ಇದಮತ್ಯಾಹಿತಂ ಚಾನ್ಯತ್ಕುತಃ ಸತ್ಯಮರಾಜಕೇ॥': ರಾಜ್ಯೇऽಸತಿ ಕುತೋ ಧರ್ಮೋ ಧರ್ಮೇऽಸತಿ ಕುತಃ ಪರಂ। ಶಾಂತಿ 320.59

27 ಶುಕ್ರೋ ದೈತ್ಯಗುರುಃ ಕಾವ್ಯ ಉಶನಾ ಭಾರ್ಗವಃ ಕವಿಃ ॥ ಅಮರಕೋಶ.

ಅಲ್ಲದೆ ರಾಜಶಾಸ್ತ್ರ ಪ್ರವರ್ತಕರಲ್ಲಿ 28 ಶಾಂತಿಪರ್ವ ಕಾವ್ಯ (ಎಂದರೆ ಉಶನಸ್) ಹಾಗೂ ಭಾರ್ಗವರು ಅಭಿನ್ನರೆಂಬುದನ್ನೂ ಹೇಳುತ್ತದೆ. ರಾಜಶಾಸ್ತ್ರದ ಪ್ರವರ್ತಕನೆಂದು ವಾಲ್ಮೀಕಿಯ ಹೆಸರನ್ನು ಎಲ್ಲೂ ಉಲ್ಲೇಖಿಸಿಲ್ಲ. ರಾವಣನ ರಾಜಧಾನಿಯ ಮೇಲೆ ರಾಮನ ಮುತ್ತಿಗೆಯನ್ನು ವಿವರಿಸುವಾಗ ಉಶನಸ್ (ಶುಕ್ರ) ಮತ್ತು ಭಾರ್ಗವರು ಅಭಿನ್ನರೆಂದು ರಾಮಾಯಣವೇ ಭಾವಿಸುತ್ತದೆ. (ಯುದ್ಧ 4.49). ಉಶನಾ ರಾಜಶಾಸ್ತ್ರ ನಿರೂಪಣೆಯ ಮಹಾಭಾರತದ ಭಾಗಗಳನ್ನು ಉದ್ಧರಿಸಿರುವುದಕ್ಕೆ ಮೇಲೆ ನೋಡಿ. ಹಾಪ್‌ಕಿನ್ಸ್ ಈ ಶ್ಲೋಕವನ್ನು ಸರಿಯಾಗಿ ಗ್ರಹಿಸಲಿಲ್ಲ. ಅದರ ಅರ್ಥ ಹೀಗಿದೆ : ಯಾವನೋ ಅಸ್ಥಾನ ಕವಿಯೊಬ್ಬ ಇಲ್ಲವೆ ರಾಜಶಾಸ್ತ್ರದ ವ್ಯಾಖ್ಯಾನಕಾರ ಉಶನಾಭಾರ್ಗವನೇ ಯಾವನೋ ರಾಜನಿಗೆ ರಾಮನ ಜೀವನವನ್ನು ನಿರೂಪಿಸಿದನು. ಅನಂತರ ಆತನೇ 'ರಾಜಾನಂ ಪ್ರಥಮಂ ವಿಂದೇತ್ ಇತ್ಯಾದಿ' ಪ್ರಸಿದ್ಧ ಶ್ಲೋಕವನ್ನು ವಾಚಿಸಿದ್ದು. ಏಕೆಂದರೆ ಆ ವ್ಯಾಖ್ಯಾನಕಾರನ ಅಂತರ್ಭಾವ 'ರಾಜನಿಲ್ಲ, ಧರ್ಮವಿಲ್ಲ, ರಕ್ಷಣೆಯಿಲ್ಲ' ಎಂಬುದಾಗಿತ್ತು. ಎರಡೂ (ಮಹಾ ಭಾರತ ಮತ್ತು ರಾಮಾಯಣ) ಕಾವ್ಯ ಉಶನನಿಂದಲೇ ಉಲ್ಲೇಖಿಸಿರುವ ಸಾಧ್ಯತೆ ಇರಬಹುದು. ಇದು ಒಂದಾನೊಂದು ಕಾಲದಲ್ಲಿ ಅಸ್ತಿತ್ವದಲ್ಲಿದ್ದು ಅನಂತರ ಮರೆಯಾಗಿರಬಹುದು.

ಮೂರನೆಯ ಭಾಗ ವನಪರ್ವದಲ್ಲಿ ಬರುತ್ತದೆ. ಗಂಧಮಾದನದಲ್ಲಿ ಹನೂಮಂತನನ್ನು ಭೀಮ ಭೇಟಿಯಾದ ಹಾಗೂ, ಅವನನ್ನು ಗುರುತಿಸದೆ ಅವನೊಬ್ಬ ಸಾಮಾನ್ಯ ವಾನರನೆಂದು ಭಾವಿಸಿದುದಾಗಿಯೂ ಹೇಳಲಾಗಿದೆ (ಅಧ್ಯಾಯ 14). ಅಲ್ಲಿ ಅತನು ರಾಮಾಯಣದ ಪ್ರಖ್ಯಾತ ಹನೂಮಂತನು ತನ್ನ ಸೋದರನೆಂದು ಹೇಳುತ್ತಾನೆ.29 (147. 11). ಆ ಅಧ್ಯಾಯಗಳಲ್ಲಿ ವಾಲ್ಮೀಕಿಯ ಹೆಸರನ್ನು ಉಲ್ಲೇಖಿಸಿಲ್ಲ. ಬಹುಶಃ ಈ ಕಥೆ ಅನಂತರ ಪ್ರಕ್ಷೇಪಗೊಂಡಿರಬಹುದು. ವನಪರ್ವವನ್ನು ಬಿಟ್ಟರೆ ಶಾಂತಿಪರ್ವವೇ ವಿಸ್ತಾರವಾದುದು. ನಾಲ್ಕನೆ ಭಾಗ (ಕೆಳಗೆ ಕೊಡಲಾಗಿದೆ)ವನ್ನೇ ಹಾಪ್‌ಕಿನ್ಸ್ ಆಧಾರವಾಗಿಟ್ಟುಕೊಂಡಿದ್ದಾನೆ. ಇದು ಹರಿವಂಶದ ಕೊನೆಯ ಅಧ್ಯಾಯದಲ್ಲಿ (ಇದು ಖಿಲ) ಬರುತ್ತದೆ. ಇದು ಚಿತ್ರಶಾಲಾ ಮತ್ತಿತರ ಮಹಾಭಾರತದ ಸಂಸ್ಕರಣಗಳಲ್ಲಿ ಬರುವುದಿಲ್ಲ.

ಮೇಲಿನ ಚರ್ಚೆಯಿಂದ ಹಾಪ್‌ಕಿನ್ಸ್ ಆಧಾರವಾಗಿಟ್ಟುಕೊಂಡಿರುವ ನಾಲ್ಕು ಭಾಗಗಳ ಪೈಕಿ ಒಂದಂತೂ ತಪ್ಪಾಗಿ ವ್ಯಾಖ್ಯಾನಿತವಾಗಿದೆ. ಎರಡು ಭಾಗಗಳು ಮಹಾಭಾರತದಲ್ಲಿ ಇಲ್ಲವೇ ಇಲ್ಲ. ಉಳಿದ ಒಂದು ಭಾಗ ಬಹುಶಃ ಪ್ರಕ್ಷೇಪವಾಗಿರಬಹುದು.

(ಮುಂದುವರಿಯುವುದು.)

ಅನು : ಎಚ್. ಎಸ್. ಹರಿಶಂಕರ್

---

28 ಭಾರ್ಗವೋ ನೀತಿಶಾಸ್ತ್ರಂ ತು ಜಗಾದ ಜಗತೋ ಹಿತಂ। ಶಾಂತಿ 210.20. ಏತತ್ತೇ ರಾಜಧರ್ಮಾಣಾಂ ನವನೀತಂ ಯುಧಿಷ್ಠಿರ। ಬೃಹಸ್ಪತಿರ್ಹಿ ಭಗವಾನ್ನಾನ್ಯಂ ಧರ್ಮಂ ಪ್ರಶಂಸತಿ। ವಿಶಾಲಾಕ್ಷಶ್ಚ ಭಗವಾನ್ ಕಾವ್ಯಶ್ಚೈವ ಮಹಾತಪಾಃ।... ರಾಜಶಾಸ್ತ್ರ ಪ್ರಣೇತಾರೋ ಬ್ರಹ್ಮಣ್ಯಾ ಬ್ರಹ್ಮವಾದಿನಃ॥ ಶಾಂತಿ. 58, 1–3.

29 ಉಶನಾ ಚ ಪ್ರಸನ್ನಾರ್ಚಿರನು ತ್ವಾಂ ಭಾರ್ಗವೋ ಗತಃ। ಯುದ್ಧಕಾಂಡ 4. 49(48. ಹಲವು ಸಂಕಲನಗಳಲ್ಲಿ)

ಎಂ. ಸಿ. ವಸಂತಕುಮಾರ್

ಬಯಕೆ ಬಯಲು

ಅವಳೆದೆಯ ತಿದಿಯಿಂದುಗಿದ ಬಿಸಿಯುಸಿರು
ಹಾಡಿತ್ತು ಪ್ರೇಮ ಪದವ:
ಬಯಕೆ ಬಯಲಿಗೆ ಭರವಸೆಯ
ಕಜ್ಜಾಮಾಲನು ತುಂಬಿ
ಕಷ್ಟಕಮರಿಯಿಂದಟ್ಟಿದೆನ್ನ ಸಂಯಮದ ಬಂಡಿ
ಬಳಿ ಸೇರುವ ಮೊದಲೇ
ವಿಧಿ ಬರೆದಿದ್ದ ಬೇರೊಂದು ಬರಹ!
ನಂಬಿಕೆಯ ಕಡಿವಾಣವನ್ನ ಹರಿದವಳ ಮನದ
ಹುಚ್ಚುಕುದುರೆ
ಮುಟ್ಟಿತ್ತು ಮತ್ತೊಂದು ದಡವ!
ದಡದಿಂದ ದಡವ!!
ದಡ ಯಾವುದಾದರೂ ಸರಿಯೆ,
ದಡಗಳಾಗಬಾರದಲ್ಲ!
ಕಡಿವಾಣ ಇಲ್ಲದಿದ್ದರೂ ಸರಿಯೆ,
ಹುಚ್ಚು ಇರಬಾರದಲ್ಲ!

ಆ. ನೇ. ಉಪಾಧ್ಯೆ

ಪದ್ಮನಂದಿ ಮತ್ತು ಆತನ ಕೃತಿಗಳು

ಪದ್ಮನಂದಿ ಪಂಚವಿಂಶತಿ—ಗ್ರಂಥದ ಹೆಸರು ಮತ್ತು ಮೂಲ

ಸುಮಾರು ಎಪ್ಪತ್ತೈದು ವರ್ಷಗಳ ಹಿಂದೆ ಪದ್ಮರಾಜ ಪಂಡಿತರು ತಮ್ಮ ಕಾವ್ಯಾಂಬುಧಿಯಲ್ಲಿ ಏಕತ್ವ ಸಪ್ತತಿಯ ಐವತ್ತು ಪದ್ಯಗಳನ್ನು ಪ್ರಕಟಿಸಿದ್ದರು. ಈ ಕೃತಿಯ ಮೇಲೆ ಕೇಶವ ವರ್ಣಿ ಮತ್ತು ಬಾಲ ಚಂದ್ರ ದೇವ ಇವರಿಬ್ಬರೂ ಕನ್ನಡ ಟೀಕೆಗಳನ್ನು ಬರೆದಿರುವರೆಂಬ ಮಾತು ಇತ್ತೀಚೆಗೆ ಬೆಳಕಿಗೆ ಬಂದಿದೆ,1 ಇದಲ್ಲದೆ, ಕೊಲ್ಹಾಪುರದ ಲಕ್ಷ್ಮೀಸೇನ ಮಠದಲ್ಲಿ ಮತ್ತು ಆರಾ ಮೊದಲಾದ ಸ್ಥಳಗಳಲ್ಲಿ ಕನ್ನಡ ಟೀಕೆ ಯೊಡನೆ ಇದರ ಹಸ್ತಲಿಖಿತ ಪ್ರತಿಗಳು ದೊರೆಯುತ್ತವೆ. ಇದುವರೆಗೆ ಈ ಗ್ರಂಥದ ಕರ್ತೃತ್ವ ಮತ್ತು ಕಾಲದ ವಿಷಯವಾಗಿ ಅಷ್ಟೊಂದು ಸಂಗತಿಗಳು ಗೊತ್ತಿರಲಿಲ್ಲ. ಈಗ ತುಸು ಸಂಗತಿಗಳು ಪ್ರಾಪ್ತ ವಾಗಿರುತ್ತವೆ.

ಪದ್ಮನಂದಿ ಪಂಚವಿಂಶತಿ ಎಂಬ ಹೆಸರಿನ ಸಂಸ್ಕೃತ ಗ್ರಂಥವು ಸೊಲ್ಲಾಪುರದಿಂದ ಪ್ರಕಟವಾಗಿದೆ,2 ಇದರ ಸಂಪಾದಕರು ಡಾ ಹೀರಾಲಾಲ್ ಜೈನ್ ಮತ್ತು ಡಾ. ಎ.ಎನ್. ಉಪಾಧ್ಯೆ. ಈ ಪ್ರಕಟನೆಯಲ್ಲಿ ಮೂಲ ಸಂಸ್ಕೃತ ಶ್ಲೋಕಗಳು, ಜೊತೆಗೆ ಒಂದು ಸಂಸ್ಕೃತ ಟೀಕೆ (ಅದರ ಕರ್ತೃ ತಿಳಿದು ಬಂದಿಲ್ಲ)ಮತ್ತು ಹಿಂದಿ ಅನುವಾದವನ್ನು ಕೊಡಲಾಗಿದೆ. ಪಂಚವಿಂಶತಿ ಎಂಬುದು ಇಪ್ಪತ್ತೈದು ಗ್ರಂಥಗಳ ಸಂಗ್ರಹ ವೆಂಬುದನ್ನು ಸ್ಪಷ್ಟಪಡಿಸುತ್ತದೆ. ಹೆಸರು ಪಂಚವಿಂಶತಿಯಾದರೂ ಇದರಲ್ಲಿ ದೊರೆಯುವ ಗ್ರಂಥಗಳು ಇಪ್ಪತ್ತಾರು. ಕೆಲಸಮಯದ ನಂತರ ಇದರಲ್ಲಿ ಯಾವುದಾದರೊಂದು ಗ್ರಂಥವನ್ನು ಸೇರಿಸಿರಬಹುದೆಂದು ಕಾಣುತ್ತದೆ. ಇದೊಂದು ಬೇರೆ ಬೇರೆ ಸಣ್ಣ ದೊಡ್ಡಗ್ರಂಥಗಳ ಸಂಗ್ರಹ ಮತ್ತು ಪ್ರತಿಯೊಂದು ಗ್ರಂಥವೂ ಒಂದು ಸ್ವತಂತ್ರ ವಿಷಯವನ್ನು ನಿರೂಪಿಸುವ ಪ್ರಕರಣವಾಗಿದೆ. ಎಷ್ಟೋ ಪ್ರಕರಣಗಳಲ್ಲಿ ವಿಷಯ ಸೂಚಕ ಶಿರೋನಾಮೆಯುಂಟು, ಕೆಲವೆಡೆಯಲ್ಲಿ ವಿಷಯ ಸೂಚಕ ಶಿರೋನಾಮೆ ಮತ್ತು ಶ್ಲೋಕ ಸಂಖ್ಯೆಯನ್ನೂ ಸಹ ಹೇಳಿದೆ. ಪ್ರತಿಯೊಂದು ಪ್ರಕರಣಕ್ಕೆ ಮಂಗಲಶ್ಲೋಕವಿದೆ, ಮತ್ತು ಅಂತ್ಯ ದಲ್ಲಿ ಕೆಲವು ಕಡೆಗಳಲ್ಲಿ ಗ್ರಂಥಕರ್ತರ ನಿರ್ದೇಶವೂ ದೊರೆಯುತ್ತದೆ. ಸಾಮಾನ್ಯವಾಗಿ ಎಲ್ಲ ಪ್ರಕರಣ ಗಳೂ ಧಾರ್ಮಿಕ ಮತ್ತು ನೈತಿಕ ವಿಷಯಗಳನ್ನು ನಿರೂಪಿಸುತ್ತವೆ; ಕೆಲವು ಪ್ರಕರಣಗಳು ಸ್ತೋತ್ರ ರೂಪವಾಗಿವೆ; ಮತ್ತು ಒಂದೆರಡು ಕ್ರಿಯಾಕಾಂಡದ ಸ್ವರೂಪವುಳ್ಳವಾಗಿವೆ. ಈ ಸಂಗ್ರಹದಲ್ಲಿ ಎರಡು ಪ್ರಕರಣಗಳು (23–24) ಪ್ರಾಕೃತ ಗಾಥೆಗಳಲ್ಲಿದ್ದು ಸ್ತುತಿರೂಪವಾಗಿವೆ; ಉಳಿದ ಎಲ್ಲ ಪ್ರಕರಣಗಳೂ ಸಂಸ್ಕೃತದಲ್ಲಿ ಬೇರೆ ಬೇರೆ ವೃತ್ತಗಳಲ್ಲಿ ರಚಿತವಾಗಿವೆ.

ಈ ಎಲ್ಲ ಪ್ರಕರಣಗಳೂ ಸಂಗ್ರಹರೂಪದಿಂದ ದೊರೆತರೂ ಅವುಗಳು ಮೂಲತಃ ಸ್ವತಂತ್ರ ಮತ್ತು

---

1. ಎಸ್. ಶಿವಣ್ಣ: ಕರ್ಣಾಟಕ ಕವಿಚರಿತೆಯ ಅನುಕ್ತ ಕೃತಿಸೂಚಿ. ಸಂಖ್ಯೆ 250–251. ಮೈಸೂರು 1967

2 ಜೀವರಾಜ ಜೈನ ಗ್ರಂಥಮಾಲಾ. 10. ಸೊಲ್ಲಾಪುರ 1962.

ಪರಸ್ಪರ ಸಂಬಂಧವಿಲ್ಲದ ಪ್ರಕರಣಗಳೆಂಬುದರಲ್ಲಿ ಯಾವ ಸಂದೇಹವೂ ಇಲ್ಲ. ಏಕೆಂದರೆ ಎಷ್ಟೋ ಪ್ರಕರಣಗಳ ಹಸ್ತಲಿಖಿತಗಳು ಸ್ವತಂತ್ರವಾಗಿ ದೊರೆಯುತ್ತವೆ. ಕೆಲವು ಗ್ರಂಥಗಳ ಮೇಲೆ ಕನ್ನಡ ಟೀಕೆಗಳಿವೆ. ಒಂದು ಪ್ರಕರಣಕ್ಕೂ ಬೇರೊಂದು ಪ್ರಕರಣಕ್ಕೂ ಯಾವ ರೀತಿಯ ಸಂಬಂಧವೂ ಇಲ್ಲ. ಇಷ್ಟೇ ಅಲ್ಲ, ಒಂದೇ ವಿಷಯ ಬೇರೆ ಬೇರೆ ಪ್ರಕರಣಗಳಲ್ಲಿ ಚರ್ಚಿತವಾಗಿದೆ. ಕೆಲವು ಶ್ಲೋಕಗಳು ಹಲವು ಪ್ರಕರಣಗಳಲ್ಲಿ ಪುನರುಕ್ತವಾಗಿವೆ. ಕವಿಯು ಆಧ್ಯಾತ್ಮವೃತ್ತಿಯುವನಾಗಿದ್ದುದರಿಂದ ಒಂದೇ ವಿಷಯವನ್ನು ಕೆಲವೆಡೆಗಳಲ್ಲಿ ಪುನಃ ಪುನಃ ಹೇಳಿದ್ದಾನೆ.

ವಿಷಯ ನಿರೂಪಣೆ ಬಹುತರವಾಗಿ ಮುಕ್ತಕ ಸ್ವರೂಪದ್ದಾಗಿದೆ. ಅದ್ದರಿಂದ ಅಲ್ಲಲ್ಲಿ ಪ್ರಕ್ಷೇಪಕವಾಗಿ ಶ್ಲೋಕಗಳನ್ನು ಸೇರಿಸುವುದು ಸಾಧ್ಯವಾಗಿದೆ. ಕೆಲವೆಡೆಯಲ್ಲಿ ಗ್ರಂಥಕಾರನು ಶ್ಲೋಕ ಸಂಖ್ಯೆಯನ್ನು ಪ್ರಕರಣದ ಅಂತ್ಯದಲ್ಲಿ ನಿರ್ದೇಶಿಸಿದ್ದಾನೆ. ಆದರೂ ನಿರ್ದಿಷ್ಟ ಸಂಖ್ಯೆಗಿಂತ ಹೆಚ್ಚು ಶ್ಲೋಕಗಳು ಅಲ್ಲಿ ದೊರೆಯುತ್ತವೆ. ಕೆಲವು ಪ್ರಕರಣಗಳು ಅಷ್ಟಕಗಳಿವೆ; ಆದರೆ ಕೆಲವೆಡೆಯಲ್ಲಿ ಒಂಬತ್ತು ಅಥವಾ ಹತ್ತು ಶ್ಲೋಕಗಳು ದೊರೆಯುತ್ತವೆ. ಆರೇಳು ಪ್ರಕರಣಗಳಲ್ಲಿ ಗ್ರಂಥಕಾರನು ತಿಳಿಸುವ ಸಂಖ್ಯೆ ಒಂದು. ಆದರೆ ಈಗ ಪ್ರಕರಣದಲ್ಲಿ ದೊರೆಯುವ ಪ್ರತ್ಯಕ್ಷ ಸಂಖ್ಯೆ ಬೇರೊಂದು. ಇದರ ಮೇಲಿಂದ ಈ ಪ್ರಕರಣಗಳಲ್ಲಿ ಕಾಲಾಂತರದಿಂದ ಬೇರೆಯವರು ಶ್ಲೋಕಗಳನ್ನು ಸೇರಿಸಿರಬಹುದೆಂದು ತೋರುತ್ತದೆ. ಏಕತ್ವ ಸಪ್ತತಿಯ ತಾಡ ಓಲೆಯ ಪ್ರತಿಗಳಲ್ಲಿ 74 ಶ್ಲೋಕಗಳಿವೆ. ಆದರೆ ಮುದ್ರಿತ ಪ್ರತಿಯಲ್ಲಿ 80 ಶ್ಲೋಕಗಳು ದೊರೆಯುತ್ತವೆ. ಗ್ರಂಥಕಾರನು ಹೇಳುವ ಸಂಖ್ಯೆ 70. ಬೇರೆ ಬೇರೆ ಹಸ್ತಪ್ರತಿಗಳ ಅಭ್ಯಾಸ ಮಾಡಿದರೆ ಪ್ರಕ್ಷಿಪ್ತ ಶ್ಲೋಕಗಳನ್ನು ಕಂಡು ಹಿಡಿಯುವುದು ಸಾಧ್ಯವಾಗಬಹುದು.

ವಿಷಯ ನಿರೂಪಣೆ :

ಈ ಸಂಗ್ರಹದಲ್ಲಿಯ ಗ್ರಂಥಗಳ ವಿಷಯವನ್ನು ಸಂಗ್ರಹವಾಗಿ ಹೀಗೆ ನಿರೂಪಿಸಬಹುದು.

1) ಧರ್ಮೋಪದೇಶಾಮೃತ (ಶ್ಲೋಕ 198): ಆರಂಭದಲ್ಲಿ ಋಷಭ ಮತ್ತು ಶಾಂತಿನಾಥ ಇವರ ಮಂಗಲಸ್ತುತಿ ಇದೆ. ಆಮೇಲೆ ಧರ್ಮದ ವ್ಯಾಖ್ಯೆ ಮತ್ತು ಅದರ ವಿವಿಧ ಸ್ವರೂಪದ ವರ್ಣನೆ ಬಂದಿದೆ. ಗೃಹಸ್ಥ ಧರ್ಮ ಮತ್ತು ಯತಿಧರ್ಮದ ವಿಶೇಷ ನಿರೂಪಣೆಯನ್ನು ಮಾಡಲಾಗಿದೆ. ಕೊನೆಗೆ ಮಾನವ ಜನ್ಮದ ದುರ್ಲಭತೆಯನ್ನು ಹೇಳಿ ಕ್ಷಮಾಗುಣದ ಮಹತ್ವವನ್ನು ಅರುಹಿ. ಧರ್ಮದ ಹಿರಿಮೆಯನ್ನು ಕೊಂಡಾಡಿದ್ದಾಗಿದೆ.

2) ದಾನೋಪದೇಶನಂ (ಶ್ಲೋಕ 54): ಶ್ರೇಯಾಂಸ ರಾಜನ ಉದಾಹರಣೆಯನ್ನು ಹೇಳಿ ಶ್ರಾವಕನ ಜೀವನದಲ್ಲಿ ದಾನಗುಣದ ಮಹತ್ವವನ್ನು ಇಲ್ಲಿ ನಿರೂಪಿಸಿದೆ. ದಾನದಿಂದ ದೊರೆಯುವ ಪುಣ್ಯವು ದೊಡ್ಡದು. ಚೈತ್ಯಾಲಯಗಳನ್ನು ಕಟ್ಟುವುದರಲ್ಲಿ. ಪೂಜೆ ಅರ್ಚನೆಗಳನ್ನು ಮಾಡಿಸುವುದರಲ್ಲಿ. ಮುನಿಗಳಿಗೂ ವಿದ್ವದ್ ಜನರಿಗೂ ಸಹಾಯ ನೀಡುವುದರಲ್ಲಿ ಮತ್ತು ಬಡವರ ದುಃಖವನ್ನು ದೂರ ಮಾಡುವುದರಲ್ಲಿ ಉಪಯುಕ್ತವಾದ ದ್ರವ್ಯವೇ ತಮ್ಮದು. ಉಳಿದದ್ದೆಲ್ಲಾ ಪರಕೀಯರದು. ದಾನರಹಿತ ಜೀವನವು ನಿರರ್ಥಕವು. ಅದ್ದರಿಂದ ಪ್ರತಿಯೊಬ್ಬ ಶ್ರಾವಕನೂ ಆಹಾರ. ಅಭಯ. ಔಷಧ ಮತ್ತು ಜ್ಞಾನ ಇವುಗಳನ್ನು ದಾನಮಾಡಬೇಕು.

3) ಅನಿತ್ಯ ಪಂಚಾಶತ್ (ಶ್ಲೋಕ 55): ಇಲ್ಲಿ ಉದಾಹರಣೆಗಳಿಂದ ಮತ್ತು ಉಪಮೆಗಳಿಂದ ಶರೀರದ ಮತ್ತು ಪ್ರಾಪಂಚಿಕ ಸುಖಗಳೆಲ್ಲ ಕ್ಷಣಿಕವೆಂದು ವಿಶದವಾಗಿ ನಿರೂಪಿಸಲಾಗಿದೆ. ಪ್ರತಿಯೊಬ್ಬನೂ ಮಾಧ್ಯಸ್ಥ ಮತ್ತು ನಿರಪೇಕ್ಷ ವೃತ್ತಿಯಿಂದ ಧರ್ಮಾಚರಣೆಯನ್ನು ಮಾಡಬೇಕು.

4) ಏಕತ್ವ ಸಪ್ತತಿ (ಶ್ಲೋಕ 80): ಇಲ್ಲಿ ಪರಮಾತ್ಮನ ಲಕ್ಷಣಗಳನ್ನು ಸುಂದರವಾಗಿ ನಿರೂಪಿಸಲಾಗಿದೆ. ಮೋಹವನ್ನು ಬಿಟ್ಟು ಪರಮಾತ್ಮನನ್ನು ತಿಳಿದುಕೊಳ್ಳುವುದು ಅವಶ್ಯವಾಗಿದೆ. ವೀತರಾಗ ವೃತ್ತಿಯಿಂದ ಧರ್ಮವನ್ನು ಹೇಳುವವರೇ ನಿಜವಾದ ಗುರುಗಳು. ರಾಗದ್ವೇಷಗಳನ್ನು ಬದಿಗಿಟ್ಟು. ರತ್ನತ್ರಯಾತ್ಮಕ ಮುಕ್ತಿಮಾರ್ಗವನ್ನು ಅನುಸರಿಸಿ ಪರಮಾತ್ಮಪದವನ್ನು ಪಡೆಯಬೇಕು.

5) ಯತಿಭಾವನಾಷ್ಟಕಂ (ಶ್ಲೋಕ 9): ಯತಿಗಳು ಮುನಿಧರ್ಮವನ್ನು ಸ್ವೀಕರಿಸಿದ ಮೇಲೆ

ನಿರೀಹ ವೃತ್ತಿಯಿಂದ ಮತ್ತು ಇಂದ್ರಿಯ ಸಂಯಮದಿಂದ ಆತ್ಮಧ್ಯಾನದಲ್ಲಿ ಮಗ್ನರಾಗಿರಬೇಕು. ಯಾವ ತರಹದ ತೊಂದರೆಗಳು ಬಂದರೂ ತಮ್ಮ ತಪೋವೃತ್ತಿಯನ್ನು ಬಿಡಲಾಗದು.

6) ಉಪಾಸಕ ಸಂಸ್ಕಾರ (ಶ್ಲೋಕ 62): ಇದರಲ್ಲಿ ರತ್ನತ್ರಯಾತ್ಮಕ ಮೋಕ್ಷಮಾರ್ಗದ ನಿರೂಪಣೆಯಿದೆ. ಮತ್ತು ಮುನಿಗಳ ಮತ್ತು ಶ್ರಾವಕರ ಕರ್ತವ್ಯಗಳ ಬಗ್ಗೆ ಹೇಳಲಾಗಿದೆ. ಶ್ರಾವಕರು ವ್ಯಸನಗಳನ್ನು ತ್ಯಾಗ ಮಾಡಿ ತಮ್ಮ ದೇವಪೂಜಾದಿ ಆರು ಕರ್ತವ್ಯಗಳಲ್ಲಿ ನಿರತರಾಗಬೇಕು. ಅನುಪ್ರೇಕ್ಷೆಗಳ ಚಿಂತನೆಯಲ್ಲಿ ಆತ್ಮನ ನಿಜವಾದ ಸ್ವರೂಪವನ್ನು ಕಾಣಬೇಕು.

7) ದೇಶ ವ್ರತೋದ್ಯೋತನಂ (ಶ್ಲೋಕ 27): ಇದರಲ್ಲಿ ಶ್ರಾವಕನ ಅಣು ವ್ರತಗಳ ಚರ್ಚೆಯು ವಿಶದವಾಗಿದೆ. ಇವು ಶ್ರಾವಕನ ಜೀವನದ ವ್ಯಾಪ್ತಿಯನ್ನು ಮತ್ತು ಕರ್ತವ್ಯದ ಕ್ಷೇತ್ರವನ್ನು ತಿಳಿಸುತ್ತವೆ.

8) ಸಿದ್ಧಸ್ತುತಿಃ (ಶ್ಲೋಕ 29): ಒಳ್ಳೆಯ ಗಂಭೀರವಾದ ಶೈಲಿಯಲ್ಲಿ ಗ್ರಂಥಕಾರನು ಇಲ್ಲಿ ಸಿದ್ಧರ ಸ್ತುತಿಯನ್ನು ಮಾಡಿದ್ದಾನೆ. ಅದರಲ್ಲಿ ಅನಂತದರ್ಶನ, ಜ್ಞಾನ, ವೀರ್ಯ, ಸುಖ– ಇವುಗಳ ನಿರೂಪಣೆಯು ಬಂದಿದೆ.

9) ಆಲೋಚನಾ (ಶ್ಲೋಕ 33): ಇದೂ ಒಂದು ಸ್ತುತಿ. ಇದರಲ್ಲಿ ಸ್ತುತಿಕಾರನು ತನ್ನಿಂದಾದ ತಪ್ಪುಗಳನ್ನು ಬಹಿರಂಗ ಪಡಿಸಿ ಆತ್ಮ ನಿರೀಕ್ಷಣೆಯನ್ನು ಮಾಡುತ್ತಾನೆ. ಇದರ ಉದ್ದೇಶ ಆತ್ಮಶುದ್ಧಿ.

10) ಸದ್ಬೋಧ ಚಂದ್ರೋದಯ (ಶ್ಲೋಕ 50): ಒಳ್ಳೆಯ ಹೃದಯಂಗಮವಾದ ಶೈಲಿಯಲ್ಲಿ ಆತ್ಮತತ್ವದ ವಿಚಾರವು ಇಲ್ಲಿ ದೊರೆಯುತ್ತದೆ. ಆತ್ಮಾನುಭವವು ಅತ್ಯಂತ ಮಹತ್ವವಾದುದು. ಕರ್ಮ ಬೇರೆ ಮತ್ತು ಆತ್ಮನು ಬೇರೆ ಎಂಬ ವಿಚಾರಮಯ ಧ್ಯಾನದಿಂದ ಯೋಗಿಯು ಸಂಸಾರದಿಂದ ಬಿಡುಗಡೆ ಹೊಂದುತ್ತಾನೆ.

11) ನಿಶ್ಚಯ ಪಂಚಾಶತ್ (ಶ್ಲೋಕ 62): ಆತ್ಮನ ಸ್ವರೂಪವನ್ನು ವ್ಯವಹಾರ ಮತ್ತು ನಿಶ್ಚಯ – ಹೀಗೆ ಎರಡು ದೃಷ್ಟಿಗಳಿಂದ ನೋಡಬಹುದು. ಇದರಲ್ಲಿ ನಿಶ್ಚಯ ದೃಷ್ಟಿಯಿಂದ ಆತ್ಮನ ಸ್ವರೂಪವನ್ನು ಹೇಳಿದೆ. ಶರೀರಾದಿ ಬಾಹ್ಯ ಪರಿಗ್ರಹಗಳನ್ನು ಬದಿಗಿಟ್ಟು ಆತ್ಮಾನಂದವನ್ನು ಪಡೆಯುವುದು ನಿಜವಾದ ನಿಶ್ಚಯ ದೃಷ್ಟಿ. ಅದರಲ್ಲಿ ಆತ್ಮನೇ ರತ್ನತ್ರಯವು. ಸ್ವ–ಪರ ಭಾವಗಳನ್ನು ಮರೆತು ಆತ್ಮಾನುಭವವನ್ನು ಸೇವಿಸುವುದೇ ನಿಜವಾದ ಆತ್ಮಧ್ಯಾನ.

12) ಬ್ರಹ್ಮಚರ್ಯ ರಕ್ಷಾವರ್ತಿ (ಶ್ಲೋಕ 22): ಆತ್ಮಾನುಭವವನ್ನು ಪಡೆಯಲಿಚ್ಛಿಸುವ ಯೋಗಿಯು ಸ್ತ್ರೀಮೋಹವನ್ನು ಸಂಪೂರ್ಣವಾಗಿ ತ್ಯಜಿಸಬೇಕು. ಇವರು ತಮಗೆ ಯೋಗ್ಯವಾದ ಆಹಾರಾದಿ ಸೇವನೆಯಿಂದ ಸಂಯಮವನ್ನು ಪಾಲಿಸಿ, ತಪಶ್ಚರ್ಯವನ್ನು ಮಾಡಿ, ಆತ್ಮಾನುಭವದ ಆನಂದವನ್ನು ಪಡೆಯಬೇಕು.

13) ಋಷಭ ಸ್ತೋತ್ರಂ (ಶ್ಲೋಕ 60): ಇದರಲ್ಲಿ ಮೊದಲನೆಯ ತೀರ್ಥಂಕರರಾದ ಋಷಭನಾಥನ ಸ್ತುತಿಯಿದೆ. ಇಲ್ಲಿ ಅವರ ಜೀವನ ವೃತ್ತಾಂತವು ಬಂದಿದೆ. ಅವರ ದಿವ್ಯ ಸಮವಸರಣದ ಸೊಬಗಿನ ವರ್ಣನೆಯಿದೆ. ಅವರು ಹೇಳಿದ ಅನೇಕಾಂತ ತತ್ವದ ನಿರೂಪಣೆಯಿದೆ. ಅವರ ಹಿರಿಮೆ ಅವರ ಸರ್ವಜ್ಞತೆ ಇವೆಲ್ಲಾ ಶಬ್ದಾತೀತವಾಗಿವೆ.

14) ದರ್ಶನಸ್ತುತಿ (ಪ್ರಾಕೃತದಲ್ಲಿ 34): ಜಿನಮಂದಿರದಲ್ಲಿ ಹೋಗಿ ಭಗವಂತನ ದರ್ಶನವನ್ನು ಪಡೆಯುವಾಗ ಮಾಡಿದ ಸ್ತುತಿಯು ಇದು. ಇಂಥ ದರ್ಶನದ ಫಲವನ್ನು ಹಲವಾರು ಉಪಮೆಗಳಿಂದ ಇಲ್ಲಿ ನಿರೂಪಿಸಲಾಗಿದೆ.

15) ಶ್ರುತ ದೇವತಾ ಸ್ತುತಿ (ಶ್ಲೋಕ 31): ತೀರ್ಥಂಕರರಿಗೆ ಕೇವಲ ಜ್ಞಾನವು ಪ್ರಾಪ್ತವಾದ ಮೇಲೆ ಜನಹಿತಕ್ಕಾಗಿ ಅವರ ಮುಖದಿಂದ ಹೊರಡುವ ವಾಣಿಯನ್ನು ಶ್ರುತದೇವತೆಯೆಂದು ತಿಳಿಯಲಾಗಿದೆ. ಅವರ ಸಾಕಾರ ಸ್ವರೂಪವೆಂದರೆ ಸರಸ್ವತಿ, ಅಂಬಾ, ಧವಲಾ ಇತ್ಯಾದಿ. ಈ ವಾಣಿಯು ದ್ವಾದಶಾಂಗ ಗ್ರಂಥಗಳಲ್ಲಿ ನಿರ್ದಿಷ್ಟವಾಗಿದೆ.

16) ಸ್ವಯಂಭೂ ಸ್ತುತಿ (ಶ್ಲೋಕ 24): ಇದರಲ್ಲಿ ಒಳ್ಳೆ ಕಾವ್ಯ ಶೈಲಿಯಿಂದ ಪ್ರತಿಯೊಂದು ಶ್ಲೋಕದಲ್ಲಿ ಒಬ್ಬೊಬ್ಬರನ್ನೂ ಉದ್ದೇಶಿಸಿ-24 ಜನ ತೀರ್ಥಂಕರರ ಸ್ತುತಿಯನ್ನು ಮಾಡಲಾಗಿದೆ. ಅಲ್ಲಲ್ಲಿ ಅವರ ಹೆಸರಿನ ವ್ಯುತ್ಪತ್ತಿಯನ್ನೂ ಅವರ ಜೀವನದಲ್ಲಿಯ ಸಂಗತಿಗಳನ್ನೂ ಹೇಳಲಾಗಿದೆ.

17) ಸುಪ್ರಭಾತಾಷ್ಟಕಂ (ಶ್ಲೋಕ 8): ಸುಪ್ರಭಾತದ ಅರ್ಥವು ಇಲ್ಲಿ ಲಾಕ್ಷಣಿಕವಾಗಿದೆ. ಘಾತಿ ಕರ್ಮಗಳ ಕಗ್ಗತ್ತಲೆಯು ಅಳಿದು ಹೋದ ಮೇಲೆ ಕೇವಲಿಯ ಜ್ಞಾನ ಮತ್ತು ದರ್ಶನವೆಂಬ ಎರಡು ಕಣ್ಣುಗಳು ತೆರೆಯುತ್ತವೆ. ಮಿಥ್ಯಾತ್ವವೆಲ್ಲ ದೂರವಾಗಿ ಸರ್ವಜ್ಞತೆಯ ಸುಪ್ರಭಾತವಾಗುತ್ತದೆ.

18) ಶಾಂತಿನಾಥ ಸ್ತೋತ್ರಂ (ಶ್ಲೋಕ 9): ಇದು ಹದಿನಾರನೆಯ ತೀರ್ಥಂಕರರಾದ ಶಾಂತಿನಾಥರ ಸ್ತುತಿ. ಅವರ ಹೆಸರೇ ಶಾಂತಿಪ್ರದ. ಪ್ರತಿಯೊಂದು ಶ್ಲೋಕದ ನಾಲ್ಕನೆಯ ಚರಣವು ಸಮಾನವಾಗಿದ್ದು ಶಾಂತಿನಾಥನು ನಮ್ಮನ್ನು ರಕ್ಷಿಸಲೆಂದು ಬೇಡಿಕೊಳ್ಳಲಾಗಿದೆ. ಇದರಲ್ಲಿ ಎಂಟು ಪ್ರಾತಿಹಾರ್ಯಗಳ ವರ್ಣನೆಯು ಬರುತ್ತದೆ.

19) ಶ್ರೀಜಿನಪೂಜಾಷ್ಟಕಂ (ಶ್ಲೋಕ 10): ಇದೊಂದು ಪೂಜೆಯ ಅಷ್ಟಕ. ಇದರಲ್ಲಿ ಎಂಟು ದ್ರವ್ಯಗಳ ಪೂಜೆಯುಂಟು. ಅವು: ಜಲ, ಚಂದನ, ಅಕ್ಷತ, ಪುಷ್ಪ, ನೈವೇದ್ಯ, ದೀಪ, ಧೂಪ, ಮತ್ತು ಫಲ. ಕೊನೆಯಲ್ಲಿ ಪುಷ್ಪಾಂಜಲಿ. ಕಾವ್ಯಶೈಲಿಯು ಸುಗಮವೂ ಸುಂದರವೂ ಆಗಿದೆ. ಕ್ಷುಧಾರಹಿತ ಭಗವಂತನಿಗೆ ನೈವೇದ್ಯದ ಅಪೇಕ್ಷೆಯಿಲ್ಲವೆಂಬುದನ್ನು ತಿಳಿಸಿ ಹೇಳಲಾಗಿದೆ. ರೈತನು ಭೂಮಿಯಲ್ಲಿ ಬೆಳೆ ಬೆಳೆಯುವುದು ತನ್ನ ಹಿತಕ್ಕಾಗಿ. ಅದೇ ರಾಜನ ಹಿತಕ್ಕೂ. ಅದರಂತೆ ಪೂಜೆಯೂ ಕೂಡ ಆತ್ಮಹಿತ ಮತ್ತು ಮನಃಶುದ್ಧಿಗಾಗಿಯೇ ಇರುವುದೆಂಬುದು ಸರಿ.

20) ಶ್ರೀ ಕರುಣಾಷ್ಟಕಂ (ಶ್ಲೋಕ 8): ಸಂಸಾರ ದುಃಖದಲ್ಲಿ ಮುಳುಗಿದ ಜೀವಾತ್ಮನು ಜಿನೇಶ್ವರರಿಗೆ ಮೊರೆಹೊಕ್ಕು ಸಂಸಾರದಿಂದ ಮುಕ್ತಿಪಡೆಯಲು ಇಲ್ಲಿ ಬೇಡಿಕೊಳ್ಳಲಾಗಿದೆ.

21) ಕ್ರಿಯಾಕಾಂಡ ಚೂಲಿಕಾ ಶ್ಲೋಕ 18): ಮೊದಲಿನ ಒಂಭತ್ತು ಶ್ಲೋಕಗಳಲ್ಲಿ ಭಗವಂತನ ಭಕ್ತಿಪೂರ್ಣ ಸ್ತುತಿ ಇದೆ. ಜಿನೇಶ್ವರನು ಎಲ್ಲ ದೊಡ್ಡ ಗುಣಗಳ ಆಕರ. ಅವನ ಭಕ್ತಿಯೇ ಕ್ರಮೇಣ ಮೋಕ್ಷದ ಮಾರ್ಗವಾಗಿ ಪರಿಣಮಿಸುತ್ತದೆ. ರತ್ನತ್ರಯವೇ ಶರಣು. ಸ್ಯಾದ್ವಾದಾಂಕಿತ ಜಿನವಾಣಿಯೇ ಪ್ರಮಾಣ. ಈ ಚೂಲಿಕೆಯ ಪಠಣದಿಂದ ನಿತ್ಯ ವ್ಯವಹಾರದಲ್ಲಿಯ ದೋಷಗಳು ದೂರವಾಗುತ್ತವೆ.

22) ಏಕತ್ವ ಭಾವನಾದಶಕಂ (ಶ್ಲೋಕ 11): ಆತ್ಮನು ಸ್ವತಂತ್ರನು, ಮತ್ತು ಚೈತನ್ಯ ತೇಜಸ್ಸಿನಿಂದ ಕೂಡಿದವನು. ಸಂಸಾರಕ್ಕೆ ಅಂಜುವ ಕಾರಣವಿಲ್ಲ. ಇಂಥ ಭಾವನೆಯಿಂದ ಜೀವಾತ್ಮನು ರಾಗದ್ವೇಷಗಳಿಂದ ಮುಕ್ತನಾಗಿ ಮೋಕ್ಷ ಸುಖವನ್ನು ಪಡೆಯುತ್ತಾನೆ.

23) ಪರಮಾರ್ಥ ವಿಂಶತಿ (ಶ್ಲೋಕ 20): ಆತ್ಮನು ಕರ್ಮದಿಂದ ನಿಜವಾಗಿ ಭಿನ್ನನಿದ್ದು ಅನಂತ ಚತುಷ್ಟಯದಿಂದ ಕೂಡಿದವನಾಗಿದ್ದಾನೆ. ರಾಗದ್ವೇಷಗಳನ್ನು ಬಿಟ್ಟು ತನ್ನನ್ನು ತಾನೇ ಅರಿಯಬೇಕು. ಈ ರೀತಿ ಸಂಸಾರದಿಂದ ಬಿಡುಗಡೆಯಾಗುತ್ತದೆ.

24) ಶರೀರಾಷ್ಟಕಂ (ಶ್ಲೋಕ 8): ಇದರಲ್ಲಿ ಈ ನಶ್ವರ ಶರೀರ ವರ್ಣಿಸಲ್ಪಟ್ಟಿದೆ. ಇದನ್ನು ಸುಖೋಪಭೋಗಕ್ಕೆ ಉಪಯೋಗಿಸದೆ ಧರ್ಮಾಚರಣೆಗೆ ಮತ್ತು ತಪಶ್ಚರ್ಯಕ್ಕೆ ಉಪಯೋಗಿಸಬೇಕೆಂಬುದೇ ಈ ಅಷ್ಟಕದ ಸಾರ.

25) ಸ್ನಾನಾಷ್ಟಕಂ (ಶ್ಲೋಕ 8): ಬಾಹ್ಯಶುದ್ಧಿಯಿಂದ ಆತ್ಮಿಕ ಶುದ್ಧಿಯಾಗಲಾರದು. ವಿವೇಕವೇ ನಿಜವಾದ ಸ್ನಾನವು. ರತ್ನತ್ರಯವೇ ಯೋಗ್ಯತೀರ್ಥ. ಇಂಥ ಪವಿತ್ರವಾದ ತೀರ್ಥದಲ್ಲಿ ಮಿಂದು ಸಮ್ಯಕ್ ದರ್ಶನಾದಿ ಗುಣಗಳನ್ನು ಪ್ರಾಪ್ತಮಾಡಿಕೊಳ್ಳಬೇಕು.

26) ಬ್ರಹ್ಮಚರ್ಯಾಷ್ಟಕಂ (ಶ್ಲೋಕ 9): ವೈಷಯಿಕ ಸುಖದಿಂದ ಪ್ರಾಪ್ತವಾಗುವ ಸಮಾಧಾನವು ಕ್ಷಣಿಕವಾದ್ದರಿಂದ ಅದು ಸುಖವಾಗಲಾರದು. ಆದ್ದರಿಂದ ಇಂದ್ರಿಯಗಳ ಸಂಯಮದಿಂದ ಶ್ರೇಷ್ಠವಾದ ಆತ್ಮಿಕ ಸುಖವನ್ನು ಪಡೆಯಬೇಕು.

ಪದ್ಮನಂದಿ–ಗ್ರಂಥಕಾರ

ಈ ಇಪ್ಪತ್ತಾರು ಪ್ರಕರಣಗಳಿಗೆ ಪದ್ಮನಂದಿ ಪಂಚವಿಂಶತಿ ಎಂಬ ಹೆಸರು ಕೊಡಲಾಗಿದೆ. ಇಲ್ಲಿ ನಾಲ್ಕು ಪ್ರಕರಣಗಳಲ್ಲಿ (22. 23. 24 ಮತ್ತು 26) ಗ್ರಂಥಕಾರನ ಹೆಸರಿನ ನಿರ್ದೇಶನವಿಲ್ಲ. ಉಳಿದ 22ರಲ್ಲಿ ಮಾತ್ರ ಒಂದಿಲ್ಲೊಂದು ರೂಪದಲ್ಲಿ ಅವನ ಹೆಸರು ಬರುತ್ತದೆ. ಕೆಲವೆಡೆಯಲ್ಲಿ ಪದ್ಮನಂದಿ

(ಪ್ರಾಕೃತ ಶ್ಲೋಕ ಅಥವಾ ಶ್ಲೋಕ್ಯಾರ್ಧ)ವನ್ನು ಬೇರೆ ಕಡೆಯಲ್ಲಿ ಶ್ಲೋಕರೂಪದಿಂದ ಅನ್ವ–, ಅನುಪ್ರಿಯಾ–, ಅಂಧೋರಾ–. ಮತ್ತು ಮಾತು ನಂದಿ ಎಂದು ಉಲ್ಲೇಖಿಸಲಾಗಿದೆ. ಈ ತರದ ಸಮಾಸ ಸಾಧ್ಯಾತ ಶಬ್ದಗಳ ಉಪಯೋಗ ವೃತ್ತಗಳ ಸಂದರ್ಭಕ್ಕಾಗಿ ಮಾಡಿದ್ದು. ಅಲ್ಲಿ ಧರ್ಮ, ಮುನಿ, ಯತೀಂದ್ರ ಮತ್ತು ಸೂರಿ ಎಂಬ ವಿಶೇಷಣಗಳನ್ನು ಅವರಿಗೆ ಬಳಸಲಾಗಿದೆ. ಇದರಿಂದ ಅವರ ಮುನಿವೃತ್ತಿಯು ಖಚಿತವಾಗಿ ವ್ಯಕ್ತವಾಗುತ್ತದೆ. ವೀರನಂದಿಯು ಅವರ ಗುರು (ಶ್ಲೋಕ 198 ಮತ್ತು 257. 546). ಪದ್ಮನಂದಿಯ ವಿಷಯವಾಗಿ ಇಷ್ಟೇ ಸಂಗತಿಗಳು ನಮಗೆ ಈ ಗ್ರಂಥದಲ್ಲಿ ದೊರೆಯುತ್ತವೆ.

ನಾಲ್ಕು ಪ್ರಕರಣಗಳಲ್ಲಿ (22, 23, 24 ಮತ್ತು 26) ಅವರ ಹೆಸರು ಬರದಿದ್ದರೂ ಅವು ಬೇರೆ ಪ್ರಕರಣಗಳಲ್ಲಿಯ ವಿಷಯದ ಕೂಡ ಘನಿಷ್ಠ ಸಂಬಂಧವನ್ನು ತೋರಿಸುತ್ತವೆ. ಆದ್ದರಿಂದ ಈ ಎಲ್ಲ ಪ್ರಕರಣಗಳನ್ನೂ ಬರೆದ ಪದ್ಮನಂದಿಯು ಒಬ್ಬನೇ ಎಂದು ಹೇಳಲು ಅವಕಾಶವಿದೆ.

ಪದ್ಮನಂದಿ ಎಂಬ ಹೆಸರಿನ ಎಷ್ಟೋ ಗ್ರಂಥಕಾರರು ಆಗಿಹೋಗಿದ್ದಾರೆ. ಬೇರೊಬ್ಬ ಪದ್ಮನಂದಿಯು ಕೆಲವು ಪ್ರಕರಣಗಳನ್ನು ಏಕೆ ಬರೆದಿರಬಾರದೆಂಬ ಪ್ರಶ್ನೆಯು ಉಪಸ್ಥಿತವಾಗಬಹುದು. ಈ ಪ್ರಶ್ನೆಯನ್ನು ಉಪಸ್ಥಿತ ಮಾಡುವಲ್ಲಿ ಭಿನ್ನಕರ್ತೃತ್ವಕ್ಕೆ ಸಾಧಾರ ಪ್ರಮಾಣಗಳನ್ನು ಕೊಡಬೇಕಾಗಿತ್ತು. ಈ ಗ್ರಂಥದ ಎಷ್ಟೋ ಪ್ರಕರಣಗಳಲ್ಲಿ ಪದ್ಮನಂದಿಯ ಹೆಸರು ಬಂದಿದೆ. ಅವುಗಳಲ್ಲಿ ಮತ್ತು ಹೆಸರಿಲ್ಲದ ಪ್ರಕರಣಗಳಲ್ಲಿ ಸಮಾನ ವಿಷಯಗಳು ಇರುತ್ತವೆ. ಇವಲ್ಲದೆ ಬೇರೆ ಬೇರೆ ಪ್ರಕರಣಗಳಲ್ಲಿ ಕೆಲವು ಅವೇ ಶ್ಲೋಕಗಳು ಪುನರುಕ್ತವಾಗಿವೆ. ಸಮಾನ ವಿಷಯಗಳು ಮತ್ತು ಸಮಾನ ಶಬ್ದ ರಚನೆಯು ಈ ಪ್ರಕರಣಗಳಲ್ಲಿ ಕಂಡುಬರುತ್ತವೆ. ಸಾಧಾರಣವಾಗಿ ಆರೇಳು ಪ್ರಕರಣಗಳಲ್ಲಿ ಗುರುಭಕ್ತಿ ಮತ್ತು ಗುರುವಚನಗಳ ಮಹಿಮೆಯನ್ನು ಕುರಿತು ಹೇಳಲಾಗಿದೆ. ಪ್ರಾಕೃತ ಮತ್ತು ಸಂಸ್ಕೃತ ಪ್ರಕರಣಗಳಲ್ಲಿಯೂ ಕೂಡ ಸಮಾನ ಶಬ್ದ ರಚನೆಯು ಕಂಡು ಬರುತ್ತದೆ. ಕೆಲವು ಪ್ರಕರಣಗಳಲ್ಲಿ ಉಪಮೆಗಳು ಸಮಾನವಾಗಿವೆ. ಬೇರೊಬ್ಬ ಪದ್ಮನಂದಿಯು ಕೆಲವು ಪ್ರಕರಣಗಳನ್ನು ರಚಿಸಿರುವನೆಂದು ಸಿದ್ಧಮಾಡಲಿಕ್ಕೆ ಆಧಾರವನ್ನು ತೋರಿಸುವವರೆಗೆ, ಈ ಎಲ್ಲ ಪ್ರಕರಣಗಳನ್ನೂ ವೀರನಂದಿಯ ಶಿಷ್ಯನಾದ ಪದ್ಮನಂದಿಯೇ ರಚಿಸಿದ್ದಾನೆಂದು ಹೇಳಲು ಯಾವ ಪ್ರತ್ಯವಾಯವೂ ಇಲ್ಲ.

ಹಲವು ಪದ್ಮನಂದಿಗಳು

ಪ್ರಾಕೃತ ಮತ್ತು ಸಂಸ್ಕೃತ ಗ್ರಂಥಗಳನ್ನು ರಚಿಸಿದ ಪದ್ಮನಂದಿಯೆಂಬ ಹೆಸರಿನ ಹಲವು ಗ್ರಂಥ ಕರ್ತರು ಆಗಿಹೋಗಿದ್ದಾರೆ.

1) ಪ್ರಸಿದ್ಧ ಪ್ರಾಚೀನ ಆಚಾರ್ಯರಾದ ಕುಂದಕುಂದರಿಗೂ ಪದ್ಮನಂದಿಯೆಂಬ ಹೆಸರಿತ್ತು. ಅವರ ಪ್ರಾಕೃತಗ್ರಂಥಗಳು ಪ್ರಸಿದ್ಧವಿವೆ-3. 2) ಜಂಬೂದೀವ ಪಣ್ಣತ್ತಿ ಎಂಬ ಕರಣಾನುಯೋಗದ ಪ್ರಾಕೃತ ಗ್ರಂಥದ ಕರ್ತನ ಹೆಸರು ಪದ್ಮನಂದಿ. ಆತನ ತಾತ. ಗುರುವಿನ ಹೆಸರು ಬಲನಂದಿ ಮತ್ತು ಅಜ್ಜಗುರು ವೀರನಂದಿ. ಇವನ ಕಾಲ ಸುಮಾರು 10ನೆಯ ಇಲ್ಲವೆ 11ನೆಯ ಶತಮಾನ-4. 3) ಭಾರತೀಯ ಜ್ಞಾನ ಪೀಠದಿಂದ ಪ್ರಸಿದ್ಧವಾದ ಪಂಚಸಂಗ್ರಹದ ಮೇಲೆ ಪ್ರಾಕೃತ ವೃತ್ತಿಯನ್ನು ಬರೆದವನು ಮುನಿ ಪದ್ಮನಂದಿ. ಅವರ ವಿಷಯ ನನಗೆ ಹೆಚ್ಚು ಗೊತ್ತಿಲ್ಲ. ಇವನು ಅಕಲಂಕನ ತರುವಾಯದವನು. 4) ಧಮ್ಮರಸಾಯಣವೆಂಬ ಧರ್ಮವನ್ನು ನಿರೂಪಿಸುವ ಒಂದು ನೂರ ತೊಂಭತ್ತು ಮೂರು ಪ್ರಾಕೃತ ಗಾಥೆಯುಳ್ಳ ಒಂದು ಚಿಕ್ಕ ಹೊತ್ತಿಗೆ ಮಾಣಿಕಚಂದ್ರ ದಿ. ಜೈನ ಗ್ರಂಥಮಾಲೆಯಲ್ಲಿ ಪ್ರಸಿದ್ಧವಾಗಿದೆ-5.

---

3. ಆ. ನೇ. ಉಪಾಧ್ಯೆ – ಪ್ರವಚನ ಸಾರ. ಪ್ರಸ್ತಾವನೆ. ಪು. 2ಇ., ಮುಂಬಯಿ. 1935.

4 ಇದು ಜೀವರಾಜ ಗ್ರಂಥಮಾಲೆಯಲ್ಲಿ ಪ್ರಸಿದ್ಧವಾಗಿದೆ. ಸೊಲ್ಲಾಪುರ 1958. ಇದರ ವಿಷಯದಲ್ಲಿ ನೋಡಿ: ಜು. ಮುಖ್ತಾರ–ಪುರಾತನ ಜೈನವಾಕ್ಯಸೂಚೀ. ಪ್ರ. ಪು. 64ಇ., ಸರಸಾವಾ 1950; ನಾ. ಪ್ರೇಮಿ– ಜೈನ ಸಾಹಿತ್ಯ ಔರ್ ಇತಿಹಾಸ. 2 ಆವೃತ್ತಿ; ಪು. 256ಇ. ಮುಂಬಯಿ 1956.

5 ಸಿದ್ಧಾಂತ ಸಾರಾದಿ ಸಂಗ್ರಹ. ಪು. 192ಇ. ಮುಂಬಯಿ. 1922.

ಇದನ್ನು ರಚಿಸಿದವನು ಪದ್ಮನಂದಿ. ಅವನ ಕಾಲದ ವಿಷಯವಾಗಿ ಏನನ್ನೂ ಹೇಳಲಾಗದು. 5) ಪದ್ಮ ನಂದಿ ಹೆಸರಿನ ಓರ್ವ ಭಟ್ಟಾರಕನು ಪ್ರಭಾಚಂದ್ರನ ತರುವಾಯ ದಿಲ್ಲಿ, ಅಜಮೀರ ಗಾದಿಯ ಮೇಲೆ ಬಂದನೆಂದು (ಸನ್ 1328–1393) ಪಟ್ಟಾವಲಿಯಿಂದ ಗೊತ್ತಾಗುತ್ತದೆ. ಇವನು ಹುಟ್ಟು ಬ್ರಾಹ್ಮಣನು. ಮೂವತ್ತುನಾಲ್ಕು ಸುಂದರವಾದ ಸಂಸ್ಕೃತ ಶ್ಲೋಕಗಳಲ್ಲಿ ಭಾವನಾ ಪದ್ಧತಿಯನ್ನೂ ಮತ್ತೊಂದು ಜೀರಾಪಲ್ಲಿ ಪಾರ್ಶ್ವನಾಥ ಸ್ತೋತ್ರವನ್ನು ಬರೆದಿದ್ದಾನೆ-6. 1393ರಲ್ಲಿ ಈತನು ಆದಿನಾಥ ತೀರ್ಥಂಕರರ ಬಿಂಬ ಪ್ರತಿಷ್ಠೆಯನ್ನು ಮಾಡಿಸಿದ್ದಾನೆ.-7. ಮುಂದೆ ಇವನ ಶಿಷ್ಯರೇ ದಿಲ್ಲಿ, ಜಯಪುರ, ಈಡರ್, ಮತ್ತು ಸುರತ್– ಈ ಸ್ಥಳಗಳಲ್ಲಿ ಭಟ್ಟಾರಕರಾದರು.

ಇವರಲ್ಲದೆ ಎಷ್ಟೋ ಶಿಲಾಲೇಖಗಳಲ್ಲಿ ಕೆಲವು ಪದ್ಮನಂದಿಗಳ ಹೆಸರು ದೊರೆಯುತ್ತವೆ. ಅವರ ಗುರುಗಳ ಹೆಸರಿನ ಮೇಲಿಂದ, ಸಂಬಂಧಿತ ವಿಷಯಗಳ ಮೇಲಿಂದ ಮತ್ತು ಅವರ ಸಮಯದ ಮೇಲಿಂದ ಅವರನ್ನು ಭಿನ್ನವ್ಯಕ್ತಿಗಳೆಂದು ನಿರ್ದೇಶಗೊಳಿಸಬಹುದು.

1) ಕುಂದಕುಂದಾನ್ವಯ ಮೂಲಸಂಘ ಕ್ರಾಣೂರ್ಗಣ ಮತ್ತು ತಿಂತ್ರಿಣೀಕ ಗಚ್ಛದ ಪದ್ಮನಂದಿ ಸಿದ್ಧಾಂತಿ ದೇವ ಅಥವಾ – ಚಕ್ರವರ್ತಿಯು ಕ್ರಿ. ಶ. 1075ರಲ್ಲಿ ಒಂದು ದಾನ ಸಮಾರಂಭದಲ್ಲಿ ಉಪಸ್ಥಿತನಿದ್ದನು-8. ತ್ರೈಕಾಲ್ಯಯೋಗಿಯ ಶಿಷ್ಯ ಮತ್ತು ಗೊಲ್ಲಾಚಾರ್ಯನ ಪ್ರಶಿಷ್ಯನಾದ ಕೌಮಾರದೇವ ಯತಿಯು ಅವಿದ್ಧಕರ್ಣ ಪದ್ಮನಂದಿ ಸೈದ್ಧಾಂತಿಕನೆಂದು ಹೆಸರುಗೊಂಡಿದ್ದನು. ಇವನು ಮೂಲ ಸಂಘದ ನಂದಿಗಣಾಂತರ್ಗತ ದೇಶೀಗಣದವನು. ಈತನ ನಿರ್ದೇಶನವು 1163ರ ಶಿಲಾಲೇಖದಲ್ಲಿ ದೊರೆಯುತ್ತದೆ. ಈತನ ಸಹಯೋಗಿ ಪ್ರಭಾಚಂದ್ರ; ಈತನ ಶಿಷ್ಯ ಕುಲಭೂಷಣ. ಕುಲಭೂಷಣನ ಶಿಷ್ಯನಾದ ಮಾಘನಂದಿಯು ಕೊಲ್ಹಾಪುರದವನು. 1176ರ ಶಿಲಾಲೇಖದಲ್ಲಿ ಮಂತ್ರವಾದಿಯೆಂದು ನಿರ್ದಿಷ್ಟನಾದ ಪದ್ಮನಂದಿಯು ಇವನೇ ಆಗಿರಬಹುದು 9.

3) 1181, 1195 ಮತ್ತು 1206 ಇವುಗಳ ಶಿಲಾಲೇಖಗಳಲ್ಲಿ ನಯಕೀರ್ತಿಯ ಶಿಷ್ಯನಾದ ಮತ್ತು ಪ್ರಭಾಚಂದ್ರ ಸಹಯೋಗಿಯಾದ ಒಬ್ಬ ಪದ್ಮನಂದಿಯ ಉಲ್ಲೇಖವಿದೆ-10.

4) ವೀರನಂದಿಯ ಪ್ರಶಿಷ್ಯನಾದ ಮತ್ತು ರಾಮನಂದಿಯ ಶಿಷ್ಯನಾದ ಒಬ್ಬ ಪದ್ಮನಂದಿಯ ಉಲ್ಲೇಖವು 12ನೆಯ ಶತಮಾನದ ಮಧ್ಯದ ಒಂದು ಶಿಲಾಲೇಖದಲ್ಲಿ ಬಂದಿದೆ-11.

5) 1313ರಲ್ಲಿ ಮರಣ ಹೊಂದಿದ ಅಧ್ಯಾತ್ಮ ಶುಭಚಂದ್ರದೇವನ ಇಬ್ಬರು ಶಿಷ್ಯರಲ್ಲಿ ಪದ್ಮನಂದಿ ಪಂಡಿತನು ಒಬ್ಬನು. ಇವರಿಬ್ಬರೂ ಕೂಡಿ ಗುರುವಿನ ಸ್ಮರಣಲೇಖವನ್ನು ಬರೆದಿದ್ದಾರೆ-12.

6) ಬಾಹುಬಲಿ ಮಲಧಾರಿ ದೇವನ ಶಿಷ್ಯನಾದ ಪದ್ಮನಂದಿ ಭಟ್ಟಾರಕ ದೇವನು 1303ರಲ್ಲಿ ಒಂದು ಬಸದಿಯನ್ನು ಕಟ್ಟಿಸಿದನು-13.

7). ಮೂಲಸಂಘ, ದೇಶಿಗಣ, ಪುಸ್ತಕಗಚ್ಛ, ಕೊಂಡಕುಂದಾನ್ವಯದ ತ್ರೈವಿದ್ಯ ದೇವನ ಶಿಷ್ಯನಾದ ಪದ್ಮನಂದಿ ದೇವನು 1316ರಲ್ಲಿ (1376) ಮರಣ ಹೊಂದಿದನು-14

---

6 ಆ. ನೇ. ಉಪಾಧ್ಯೆ– ಕಾರ್ತಿಕೇಯಾನುಪ್ರೇಕ್ಷಾ. ಪ್ರ. ಪು. 79ಇ., ಅಗಾಸ 1960.

7 ಇವನು ಏಕತ್ವ ಸಪ್ತತಿಯ ಕರ್ತನು ಆಗಲಾರನು.

8. ಎಪಿ. ಕರ್ನಾಟಿಕಾ, 8, ಸೊರಬ 262.

9 ಎಪಿ. ಕ., ಶ್ರವಣ ಬೆಳ್ಗೊಳ 64(40), 66(42)

10 ಅದೇ, ಶ್ರ. ಬೆ. 327 (124), 333 (128) ಮತ್ತು 335 (130). ಇವನೂ ಮಂತ್ರ ವಾದೀಶ್ವರನು. ಮೇಲಿನ ನಿರ್ದಿಷ್ಟ ಪದ್ಮನಂದಿಯೂ ಮತ್ತು ಇವನೂ ಒಂದೇ ವ್ಯಕ್ತಿಯಾಗಿರಬಹುದು.

11 ಪಿ. ಬಿ. ದೇಸಾಯಿ– ಜೈನಿಸಂ ಇನ್ ಸೌತ್ ಇಂಡಿಯಾ. ಪು. 280 ಇ. ಸೊಲ್ಲಾಪುರ 1957.

12 ಅದೇ ಶ್ರ. ಬೆ. 65 (41) ಮತ್ತು ಪ್ರ. ಪು. 86).

13 ಎಪಿ.ಕ. 4, ಹುಣಸೂರು 14.

14 ಅದೇ, ಶ್ರ. ಬೆ. 269 (114)

8) 1414ರ ದೇವಗಡ ಶಿಲಾಲೇಖದಲ್ಲಿ ಪ್ರಭಾಚಂದ್ರನ ಶಿಷ್ಯನಾದ ಪದ್ಮನಂದಿಯ ಸ್ತುತಿಯು ದೊರೆಯುತ್ತದೆ.

ಮೇಲೆ ಹೇಳಿದಂತೆ ಇಷ್ಟೊಂದು ಪದ್ಮನಂದಿಯೆಂಬ ಹೆಸರಿನ ವ್ಯಕ್ತಿಗಳನ್ನು, ದೊರೆತ ಸಾಧನಗಳ ಮೇಲಿಂದ ವಿಂಗಡಿಸಬಹುದು.

ಪದ್ಮನಂದಿಯ ಕಾಲ ವಿಚಾರ

ಅ) ಪದ್ಮನಂದಿಯ ಕಾಲದ ವಿಷಯವಾಗಿ ಈ ಎಲ್ಲ ಪ್ರಕರಣಗಳಲ್ಲಿ ನಮಗೆ ಯಾವ ಆಂತರಿಕ ಪ್ರಮಾಣವೂ ದೊರೆಯುವುದಿಲ್ಲ. ನಾವು ಬಾಹ್ಯ ಪ್ರಮಾಣಗಳನ್ನೇ ಅವಲಂಬಿಸಬೇಕು.

1) ಈ ಎಲ್ಲ ಪ್ರಕರಣಗಳ ಮೇಲೆ 1858ರಲ್ಲಿ ಬರೆದ ಒಂದು ಹಿಂದೀ ವಚನಿಕೆಯು ದೊರೆಯುತ್ತದೆ ಮತ್ತು ಜಯಪುರದ ರಾಜಸ್ಥಾನ ಶಾಸ್ತ್ರಭಂಡಾರದೊಳಗೆ 1567ರಲ್ಲಿ ಬರೆದ ಪದ್ಮನಂದಿ ಪಂಚವಿಂಶತಿಯ ಒಂದು ಪ್ರತಿಯಿದೆ-15.

2) ಶ್ರುತಸಾಗರನು (15ನೇಯ ಶತಮಾನ) ತನ್ನ ಸಂಸ್ಕೃತ ಟೀಕೆಯಲ್ಲಿ-16 ಏಕತ್ವ ಸಪ್ತತಿಯ 61ನೇಯ ಶ್ಲೋಕವನ್ನು 'ಉಕ್ತಂ ಚ ವೀರನಂದಿ ಶಿಷ್ಯೇನ ಪದ್ಮನಂದಿನಾ' ಎಂದು ಹೇಳಿ ಉದ್ಧೃತ ಮಾಡಿದ್ದಾನೆ. (ದಂಸಣ ಪಾಹುಡ–9 ಮೊಖ್ಖ ಪಾಹುಡು–12) ಅದೇ ರೀತಿಯಲ್ಲಿ ಧರ್ಮೋಪದೇಶಾಮೃತದ 75ನೇಯ ಶ್ಲೋಕವನ್ನು ಕೊಟ್ಟಿದ್ದಾನೆ. (ದಂಸಣ ಪಾಹುಡ–30). ಇದಲ್ಲದೆ ಧರ್ಮೋಪದೇಶಾಮೃತ 16. ಉಪಾಸಕ ಸಂಸ್ಕಾರ 10, ಈ ಎರಡು ಶ್ಲೋಕಗಳನ್ನು ಆತನು ಉದಾಹರಿಸಿದ್ದಾನೆ. (ಚಾರಿತ್ತ ಪಾಹುಡ-21). ಆತನು ತನ್ನ ಬೋಧ ಪಾಹುಡ–10, 23 ಮತ್ತು 50 ಮತ್ತು ಮೊಖ್ಖಪಾಹುಡ9 ಈ ಸಂದರ್ಭಗಳಲ್ಲಿ ದೇಶವ್ರತೋದ್ಯೋತನ 22, ಸದ್ಬೋಧ ಚಂದ್ರೋದಯ 31, ಮತ್ತು ಏಕತ್ವ ಸಪ್ತತಿ 79 ಈ ಶ್ಲೋಕಗಳನ್ನು ಉದಾಹರಿಸಿದ್ದಾನೆ ಮತ್ತು ಎರಡು ಸಂದರ್ಭಗಳಲ್ಲಿ ಪದ್ಮನಂದಿಯು ವೀರನಂದಿಯ ಶಿಷ್ಯನೆಂದು ಸೂಚಿಸಿದ್ದಾನೆ. ಅದರಂತೆಯೇ ಮೊಖ್ಖಪಾಹುಡ 55ರ ಮೇಲೆ ಏಕತ್ವ ಸಪ್ತತಿಯ ನಾಮನಿರ್ದೇಶ ಮಾಡಿ 53ನೇಯ ಶ್ಲೋಕವನ್ನು ಉದಾಹರಿಸಿದ್ದಾನೆ. ಆದರೆ ಈ ಶ್ಲೋಕವು ಕನ್ನಡ ಪ್ರತಿಗಳಲ್ಲಿ ದೊರೆಯುವುದಿಲ್ಲ. ಈ ಸಂದರ್ಭಗಳ ಮೇಲಿಂದ ಶ್ರುತಸಾಗರನು ವೀರನಂದಿಯ ಶಿಷ್ಯನಾದ ಪದ್ಮನಂದಿಯ ಐದು ಪ್ರಕರಣಗಳನ್ನು ಅರಿತಿದ್ದನು.

3) ಬಹುಶ್ರುತ ಲೇಖಕನಾದ ಆಶಾಧರನು (ಇ. ಸ. 1228ರಿಂದ 1243) ತನ್ನ ಅನಗಾರ ಧರ್ಮಾಮೃತ ಟೀಕೆಯಲ್ಲಿ (80, 21–23 ಮತ್ತು 640) ಸದ್ಬೋಧ ಚಂದ್ರೋದಯದ 10; 18; 16 ಮತ್ತು 44; ಅದರಂತೆಯೇ ಉಪಾಸಕ ಸಂಸ್ಕಾರದ 61ನೆಯ ಶ್ಲೋಕವನ್ನು ಉದಾಹರಿಸಿದ್ದಾನೆ. ಬೇರೆಡೆಯಲ್ಲಿ (9. 80–1, 93 ಮತ್ತು 97) ಧರ್ಮೋಪದೇಶಾಮೃತದ 3 ಶ್ಲೋಕಗಳನ್ನು (41, 42, 43) ಉದಾಹರಿಸಿದ್ದಾನೆ. ಒಂದು ಸಂದರ್ಭದಲ್ಲಿ ಶ್ರೀ ಪದ್ಮನಂದಿ ಪಾದನ ನಿರ್ದೇಶನ ಮಾಡಿದ್ದಾನೆ. ಇದರ ಮೇಲಿಂದ ಪದ್ಮನಂದಿಯ ಕೆಲವು ಪ್ರಕರಣಗಳ ಪರಿಚಯವು ಆಶಾಧರನಿಗೆ ಇತ್ತೆಂಬುದರಲ್ಲಿ ಸಂಶಯವಿಲ್ಲ 17.

4). ಪ್ರಭಾಚಂದ್ರನು ರತ್ನಕರಂಡಕ ಶ್ರಾವಕಾಚಾರದ ಮೇಲಿನ ತನ್ನ ಸಂಸ್ಕೃತ ಟೀಕೆಯಲ್ಲಿ 4.18 ಪದ್ಮನಂದಿಯ ಉಪಾಸಕ ಸಂಸ್ಕಾರದಿಂದ 2 ಶ್ಲೋಕಗಳನ್ನು (43, 44) ಉದಾಹರಿಸಿದ್ದಾನೆ. ಪ್ರಭಾಚಂದ್ರನು ಆಶಾಧರನಿಗಿಂತ ಮುಂಚಿನವನು 18.

---

15 ಕ. ಕಾಸಲೀವಾಲ–ರಾಜಸ್ಥಾನ ಕೇ ಜೈನ ಶಾಸ್ತ್ರ ಭಂಡಾರೋಂಕೀ ಗ್ರಂಥಸೂಚೀ. 2, ಪು.395. ಜಯಪುರ 1954.

16 ಮಾಣಿಕಚಂದ್ರ ದಿ. ಜೈ. ಗ್ರಂ., 17, ಮುಂಬಯಿ 1920.

17 ನಾ. ಪ್ರೇಮಿ – ಜೈನ ಸಾಹಿತ್ಯ ಔರ್ ಇತಿಹಾಸ್, ಪು 342. ಇ.. ಮುಂಬಯಿ, 1956

18 ಮಾಣಿಕ ಚಂದ್ರ ದಿ. ಜೈ. ಗ್ರ., 24. ಪ್ರಸ್ತಾವನೆ ಪು. 53ಇ. ಮುಂಬಯಿ. 1925.

5) ಪದ್ಮಪ್ರಭ ಮಲಧಾರಿದೇವನು ಕುಂದಕುಂದಾಚಾರ್ಯರ ನಿಯಮಸಾರದ ಮೇಲಿನ ತನ್ನ ಸಂಸ್ಕೃತ ಟೀಕೆಯಲ್ಲಿ (ಗಾಥಾ 55, 96, 100 ಮತ್ತು 46) ಏಕತ್ವಸಪ್ತತಿಯ (ಸಾಧಾರಣವಾಗಿ ನಾಮ ನಿರ್ದೇಶನದಿಂದ) 14, 20, 39, 40, 41 ಮತ್ತು 89 ಶ್ಲೋಕಗಳನ್ನು ಉದಾಹರಿಸಿದ್ದಾನೆ. ಈ ಪದ್ಮಪ್ರಭನು ಮರಣ ಹೊಂದಿದ್ದು 1185ರಲ್ಲಿ. ಅಂದರೆ ಪದ್ಮನಂದಿಯು ಪದ್ಮಪ್ರಭನಿಗಿಂತ ಮುಂಚಿನವನು. 12ನೆಯ ಶತಮಾನದ ಮಧ್ಯಕ್ಕಿಂತ ಮೊದಲಿನವನು[19].

6) ಜಯಸೇನನು ಪಂಚಾಸ್ತಿಕಾಯದ (ಮುಂಬಯಿ 1915) ಮೇಲಿನ ತನ್ನ ಸಂಸ್ಕೃತ ಟೀಕೆಯಲ್ಲಿ (ಗಾಥಾ: 162) ಏಕತ್ವ ಸಪ್ತತಿಯ 14ನೆಯ ಶ್ಲೋಕವನ್ನು ನಾಮನಿರ್ದೇಶನ ಮಾಡದೆ ಉದಾಹರಿಸಿದ್ದಾನೆ. ಜಯಸೇನನು ವೀರನಂದಿಯ (1153 ಇ. ಸ.) ಆಚಾರಸಾರದ ಅನಂತರ ಬಂದವನು ಮತ್ತು ಪದ್ಮಪ್ರಭನಿಗಿಂತ ಮುಂಚಿನವನೆಂದು ತೋರುತ್ತಾನೆ. ಯಾಕೆಂದರೆ ನಿಯಮಸಾರದ (32) ಟೀಕೆಯಲ್ಲಿಯ ಕೆಲವು ಅಂಶಗಳು ಜಯಸೇನನ ಪ್ರವಚನಸಾರದ (2–46) ಮೇಲಿನ ಟೀಕೆಯನ್ನು ಹೋಲುತ್ತವೆ.

ಪದ್ಮನಂದಿಯು ವಿಶೇಷ ಅಭ್ಯಾಸ ಮಾಡಿದ ಗ್ರಂಥಕಾರನು. ಅವನ ಶ್ಲೋಕಗಳನ್ನು ಓದಿದ ಮೇಲೆ ಆತನು ತನ್ನ ವಿಷಯ ವಿಚಾರಗಳನ್ನು ಮತ್ತು ಶಬ್ದಗಳನ್ನು ಕುಂದಕುಂದ, ಪೂಜ್ಯಪಾದ ಇತ್ಯಾದಿ ಹಿಂದಿನ ಆಚಾರ್ಯರಿಂದ ತೆಗೆದುಕೊಂಡಂತೆ ತೋರುತ್ತದೆ. ಧಾರ್ಮಿಕ ಚರ್ಚೆಗಳು ಸಮಾನವಾಗಿದ್ದರೆ ಕಾಲ ನಿರ್ದೇಶನದ ದೃಷ್ಟಿಯಿಂದ ಅದಕ್ಕೆ ವಿಶೇಷ ಮಹತ್ವವೇನೂ ಇಲ್ಲ. ಸಾಧಾರಣ ವಿಷಯಗಳಲ್ಲಿ ವಿಚಾರಸಾಮ್ಯ ಮತ್ತು ಶಬ್ದಸಾಮ್ಯ ಕಂಡುಬಂದರೆ ಪರಸ್ಪರ ಪ್ರಭಾವದ ಬಗ್ಗೆ ಅನುಮಾನಿಸಲು ಅವಕಾಶವಿರುತ್ತದೆ.

ಅ) ಪದ್ಮನಂದಿಯ ವಿಚಾರಗಳು ಮತ್ತು ಶಬ್ದಗಳು ಮುಂಚಿನ ಗ್ರಂಥಕರ್ತರಲ್ಲಿ ದೊರೆತಿದ್ದು ಕಾಲಕ್ರಮೇಣ ಇಲ್ಲಿ ನಿರ್ದೇಶಿಸಬಹುದು.

1) ಪೂಜ್ಯಪಾದನ ಸಂಸ್ಕೃತ ಭಕ್ತಿಗಳು ಪ್ರಸಿದ್ಧ ಇವೆ. ಪದ್ಮನಂದಿಯು ಯತಿಭಾವನಾಷ್ಟಕ 6. ಯೋಗಿಭಕ್ತಿಯ 3 ಇತ್ಯಾದಿ ಶ್ಲೋಕಗಳನ್ನು ಹೋಲುತ್ತವೆ: ಅಲ್ಲಿಯೇ ಕ್ಷೇಪಕವಾದ ಎರಡನೆಯ ಶ್ಲೋಕವನ್ನೂ ನಾವು ನೋಡಬಹುದು.

2) ಮಾನತುಂಗನ ಭಕ್ತಾಮರಸ್ತೋತ್ರವು ಒಳ್ಳೆಯ ಕಾವ್ಯವಾಗಿದೆ. ಅದರಲ್ಲೂ ಅದು ಭಕ್ತಿರಸ ಪೂರ್ಣ ಸ್ತುತಿಯಾಗಿದೆ. ಜೈನ ಮುನಿಗಳು ಮತ್ತು ಶ್ರಾವಕರು ಇದರ ಪಠಣ ಮಾಡುತ್ತಾರೆ. ಕ್ರಿಯಾಕಾಂಡ ಚೂಲಿಕಾ1. ವೃಷಭಸ್ತೋತ್ರ 8. 23–34. 28 ಮತ್ತು 51. ಶಾಂತಿನಾಥ ಸ್ತೋತ್ರ 1–8. ಇವೆಲ್ಲವುಗಳನ್ನೂ ನಾವು ಭಕ್ತಾಮರ ಸ್ತೋತ್ರದ 27. 28ರಿಂದ 35. 22. 32 ಮತ್ತು 24. 25 ಇವುಗಳೊಡನೆ ಹೋಲಿಸಬಹುದು.

3)ಪದ್ಮನಂದಿಯ ಕೆಲವು ಶ್ಲೋಕಗಳು ಕುಮುದಚಂದ್ರನ ಕಲ್ಯಾಣಮಂದಿರದ ಸ್ತೋತ್ರವನ್ನು ನೆನಪಿಗೆ ತಂದು ಕೊಡುತ್ತವೆ. ಉದಾಹರಣಾರ್ಥ ವೃಷಭಸ್ತೋತ್ರ24. ಶ್ರುತದೇವತಾಸ್ತುತಿ 31. ಮತ್ತು ಶಾಂತಿನಾಥ ಸ್ತೋತ್ರ 1. 2 ಇವೆಲ್ಲವುಗಳನ್ನು ಕಲ್ಯಾಣಮಂದಿರದ ಸ್ತೋತ್ರದ 19, 2. 25. 26 ಇವುಗಳೊಂದಿಗೆ ಹೋಲಿಸಿನೋಡಬಹುದು.

4) ಗುಣಭದ್ರನ ಆತ್ಮಾನುಶಾಸನವು ಜೈನಧರ್ಮಪರ ಮತ್ತು ನೀತಿಬೋಧಕವಾದ ಸುಂದರವಾದ ಒಂದು ಸುಭಾಷಿತಕೋಶವಾಗಿದೆ. ಪದ್ಮನಂದಿಯ ಕೆಲವು ಪ್ರಕರಣಗಳಲ್ಲಿ ಆತ್ಮಾನುಶಾಸನದ ಪ್ರಭಾವವು ಕಂಡುಬರುತ್ತದೆ. ಉದಾಹರಣೆಗೆ ಧರ್ಮೋಪದೇಶಾಮೃತ 76, ಅನಿತ್ಯಪಂಚಾಶತ್ 34. 44. ಬ್ರಹ್ಮಚರ್ಯರಕ್ಷಾವರ್ತಿ 21 ಇವೆಲ್ಲವುಗಳನ್ನು ಆತ್ಮಾನುಶಾಸನ 15. 130. 34 ಮತ್ತು 111 ಇವುಗಳೊಂದಿಗೆ ಹೋಲಿಸಬಹುದು. ಗುಣಭದ್ರನ ಕಾಲ 9ನೆಯ ಶತಮಾನದ ಮಧ್ಯ[20]

---

19 ಜರ್ನಲ್ ಆಫ್ ದ ಯು. ಆಫ್ ಬಾಂಬೆ 11. 2 , ಮುಂಬಯಿ 1942; ಪಿ. ಬಿ. ದೇಸಾಯಿ. ಜೈನಿಸಂ ಇನ್ ಸೌಥ್ ಇಂಡಿಯಾ. ಪು. 159–60. ಸೊಲ್ಲಾಪುರ 1957.

20 ಈ ಆಚಾರ್ಯರ ಕಾಲದ ಬಗೆಗೆ ನೋಡಿ: ನಾ. ಪ್ರೇಮಿ– ಜೈನ ಸಾಹಿತ್ಯ. ಔರ್ ಇತಿಹಾಸ, ಮುಂಬಯಿ. 1956, ನೋಡಿರಿ.

5) ಸೋಮದೇವನು ಆ ಕಾಲದ ಪ್ರಸಿದ್ಧ ಆಚಾರ್ಯನು ಮತ್ತು ಕವಿಯು. ಆತನ ಯಶಸ್ತಿಲಕದ ಪ್ರಭಾವವು ಆತನ ನಂತರ ಕಾಲದ ಅನೇಕ ಗ್ರಂಥಕಾರರ ಮೇಲೆ ಕಂಡು ಬರುತ್ತದೆ. ಧರ್ಮೋಪದೇಶಾಮೃತದ 15ನೇ ಶ್ಲೋಕವು ಯಶಸ್ತಿಲಕದ ಸಂದರ್ಭವನ್ನು ಹೋಲುತ್ತದೆ. (ಶಾಸ್ತ್ರಿ. ಪು. 401). ಪದ್ಮನಂದಿಯು ದಾನ ಸಂಬಂಧದ ವಿಚಾರಗಳು ಮತ್ತು ಪರಲೋಕದ ಅಸ್ತಿತ್ವದ ಬಗ್ಗೆ ಹೇಳಿದ ಮಾತುಗಳು (ದೇಶ–ವ್ರತೋದ್ಯೋತನ 11, 12. ಧರ್ಮೋಪದೇಶಾಮೃತ 27); ಅಲ್ಲದೆ ಹೇಳಿದ ಶ್ರಾವಕರ ಆರು ಕರ್ತವ್ಯಗಳು (ಉಪಾಸಕ ಸಂಸ್ಕಾರ 7) ಅಷ್ಟ ದಾನದಿಂದ ವಿಚಾರವು ದಾನೋಪದೇಶನ 7. ಆರು ಎಂಟು ಮೂಲಗುಣಗಳ ನಿರ್ದೇಶನವು ಯಶಸ್ತಿಲಕದಲ್ಲಿಯೂ ಸಂದರ್ಭವನ್ನು ನೆನಪಿಗೆ ತರುತ್ತದೆ. (ಶಾಸ್ತ್ರಿ ಪು. 403–4. 257 414. 408. 327 ಇತ್ಯಾದಿ) ಅದರಂತೆಯೇ ಉಪಾಸಕ ಸಂಸ್ಕಾರ 26 ಮತ್ತು ಯಶಸ್ತಿಲಕ (ಶಾಸ್ತ್ರಿ ಪು. 373) ಇವನ್ನು ಹೋಲಿಸಿ ನೋಡಬಹುದು. ಸೋಮದೇವನು ತನ್ನ ಯಶಸ್ತಿಲಕ ಚಂಪೂವನ್ನು ಕ್ರಿ. ಶ. 959ರಲ್ಲಿ ಬರೆದು ಮುಗಿಸಿದನು.

6) ಶುಭಚಂದ್ರನ ಜ್ಞಾನಾರ್ಣವದಲ್ಲಿ ಅನುಪ್ರೇಕ್ಷಾ ಮತ್ತು ಧ್ಯಾನದ ವಿಷಯವಾಗಿ ಸುಂದರವಾದ ಚರ್ಚೆಯು ಬಂದಿದೆ. ಪದ್ಮನಂದಿಯ ಅನಿತ್ಯ ಪಂಚಾಶತ್‌ನಲ್ಲಿ (16, 28, 50) ದೊರೆಯುವ ಅನೇಕ ಉಪಮೆಗಳು ಜ್ಞಾನಾರ್ಣವದ ಅನಿತ್ಯ –ಅನುಪ್ರೇಕ್ಷೆಯಲ್ಲಿ (30--31)ಮತ್ತು ಅಶರಣ ಅನುಪ್ರೇಕ್ಷೆಯಲ್ಲಿ (8) ದೊರೆಯುತ್ತವೆ. ಕೆಲವು ಉಪಮೆಗಳು ಪ್ರಾಚೀನವಾಗಿವೆ (ಶಿವಾರ್ಯನ ಭಗವತೀ ಆರಾಧನೆ, ಗಾಥಾ ನಂ 1770 ನೋಡಿ).

7) ಪದ್ಮನಂದಿಯ ಕಾವ್ಯದಲ್ಲಿ ದೊರೆಯುವ ಆಧ್ಯಾತ್ಮಿಕ ಸರಣಿಯು ಅಮೃತ ಚಂದ್ರನ ಶೈಲಿಯನ್ನು ಹೋಲುತ್ತದೆ. ನಿಶ್ಚಯ ಪಂಚಾಶತ್ (ಶ್ಲೋಕ 8 ಇತ್ಯಾದಿ) ಪುರುಷಾರ್ಥ ಸಿದ್ಧ್ಯುಪಾಯ (4-6) ಇವುಗಳ ಕೂಡ ಹೋಲಿಸಬಹುದು. ಅಮೃತ ಚಂದ್ರನ ಕಾಲ 998ಕ್ಕಿಂತ ಮುಂಚಿನದು. ಏಕೆಂದರೆ ಈ ಕಾಲದಲ್ಲಿ ಧರ್ಮರತ್ನಾಕರವನ್ನು ರಚಿಸಿದ ಜಯಸೇನನು ಅಮೃತ ಚಂದ್ರಾಚಾರ್ಯನ ಪುರುಷಾರ್ಥ ಸಿದ್ಧ್ಯುಪಾಯವನ್ನು ಉಪಯೋಗಿಸಿದ್ದಾನೆ.

8) ಕೆಲವು ಸಂದರ್ಭಗಳಲ್ಲಿ ಪದ್ಮನಂದಿಯ ಕಲ್ಪನೆಗಳು ಮತ್ತು ಶಬ್ದಗಳು ಅಮಿತಗತಿಯ ಗ್ರಂಥಗಳಲ್ಲಿಯ ಸಂದರ್ಭಗಳನ್ನು ಹೋಲುತ್ತವೆ. ಉದಾ: ಧರ್ಮೋಪದೇಶಾಮೃತ 144 ಇತ್ಯಾದಿ ಮತ್ತು ಶ್ರಾವಕಾಚಾರ 4. 46: ಉಪಾಸಕ ಸಂಸ್ಕಾರ 29–30. ಮತ್ತು 13. 44ರಿಂದ 48. ಅದರಂತೆಯೇ ಕ್ರಿಯಾಕಾಂಡ ಚೂಲಿಕಾ 11 ಮತ್ತು ದ್ವಾತ್ರಿಂಶಿಕಾ 5–7 ಎರಡೂ ಸಂದರ್ಭಗಳಲ್ಲಿ ಸಮಸ್ಥಿತಿಯ ಕ್ರಮ ಬೇಡವಾಗಿದೆ. ಅಮಿತಗತಿಯ ಕಾಲವು 10ನೆಯ ಶತಮಾನದ ಕೊನೆ. ಮತ್ತು 11ನೆಯ ಶತಮಾನದ ಆರಂಭ.

ಜಿನಚೈತ್ಯ ಮತ್ತು ಚೈತ್ಯಾಲಯಗಳ ನಿರ್ಮಾಣಕ್ಕಾಗಿ ಪದ್ಮನಂದಿಯು ಹಲವು ಸಂದರ್ಭಗಳಲ್ಲಿ ಉಪದೇಶ ಮಾಡಿದ್ದಾನೆ. ದೇಶ ವ್ರತೋದ್ಯೋತನದ 22ನೆಯ ಶ್ಲೋಕವು ವಸುನಂದಿಯ ಶ್ರಾವಕಾಚಾರದ 481 ಮತ್ತು 482 ಶ್ಲೋಕಗಳನ್ನು ಹೋಲುತ್ತದೆ. ವಸುನಂದಿಯು ಆಶಾಧರನಿಗಿಂತ ಮುಂಚಿನವನು.

ಪದ್ಮನಂದಿಯು ತನಗಿಂತ ಮುಂಚೆ ಆಗಿಹೋದ ಯಾವ ಗ್ರಂಥಕಾರರ ಮತ್ತು ಗ್ರಂಥಗಳ ಹೆಸರುಗಳನ್ನು ನಿರ್ದೇಶಿಸುವುದಿಲ್ಲ. ಸಮಾನ ವಿಚಾರ ಮತ್ತು ಶಬ್ದ ರಚನೆಗಳ ಮೇಲಿಂದ ಅವರ ಕಾಲವನ್ನು ನಿರ್ಣಯಿಸಿದರೆ ಅದು ಸಂಭಾವ್ಯ. ಹೊರತು ನಿರ್ಣಯಾತ್ಮಕವಲ್ಲ.

ಮೇಲಿನ ಚರ್ಚೆಯಿಂದ ಪದ್ಮನಂದಿಯು ಅಮಿತಗತಿಯ ಅನಂತರ ಮತ್ತು ನಿಶ್ಚಯವಾಗಿ ಪದ್ಮಪ್ರಭನಿಗಿಂತ ಮುಂಚೆ ಆಗಿ ಹೋದನು.

ಏಕತ್ವ ಪಂಚವಿಂಶತಿಯ ಮೇಲೆ ಒಂದು ಕನ್ನಡ ಟೀಕೆ ಉಪಲಬ್ಧವಿದೆ. ಅದರ ಶೈಲಿಯು ತಾತ್ತ್ವಿಕವಾಗಿದ್ದು ದೀರ್ಘವಾಕ್ಯಗಳಿಂದಲೂ. ಸಂಸ್ಕೃತ ಸಮಾಸಗಳಿಂದಲೂ ಸ್ವಲ್ಪ ಕಠಿಣವಾಗಿದೆ. ಅದರಲ್ಲಿ ಕುಂದಕುಂದರ ಮತ್ತು ಅಮೃತಚಂದ್ರರ ಗ್ರಂಥಗಳಿಂದ ಅನೇಕ ಸಂಸ್ಕೃತ –ಪ್ರಾಕೃತ ಶ್ಲೋಕಗಳನ್ನು ಉದಾಹರಿಸಲಾಗಿದೆ. ಅದರ ಶೈಲಿಯು ಪ್ರಥಮಪುರುಷವಾಗಿರದೆ ಉತ್ತಮಪುರುಷದಲ್ಲಿ. ಟೀಕಾಕಾರನ ಹೆಸರು (ಶ್ರೀ) ಪದ್ಮನಂದಿವ್ರತಿ ಮತ್ತು ಗ್ರಂಥಕಾರರ ಹೆಸರು ಪದ್ಮನಂದಿಮುನಿ. ಅವರು

ಸಮಕಾಲೀನರೆಂಬುದು ನಿಶ್ಚಿತ. ಅವರಿಬ್ಬರೂ ಒಂದೇ ವ್ಯಕ್ತಿಯೆಂದು ಊಹಿಸಬಹುದು. ಆದರೆ ಈ ಊಹೆಯಲ್ಲಿ ಸ್ವಲ್ಪ ಸಂಶಯವಿದೆ. ಏಕೆಂದರೆ ಪದ್ಮನಂದಿ ಪಂಚವಿಂಶತಿಯಲ್ಲಿ ಶುಭಚಂದ್ರ ಮತ್ತು ಕನಕನಂದಿಯ ನಿರ್ದೇಶನವಿಲ್ಲ. ಅಲ್ಲದೆ ಏಕತ್ವಸಪ್ತತಿ ಮತ್ತು ಅದರ ಟೀಕೆಯಲ್ಲಿ ವೀರನಂದಿಯ ನಿರ್ದೇಶನವಿಲ್ಲ. ಹೀಗಿದ್ದರೂ ಇಬ್ಬರೂ ಒಂದೇ ವ್ಯಕ್ತಿಯೆಂದು ಹಿಡಿದು ಸದ್ಯಕ್ಕೆ ನಡೆಯಬಹುದು; ಅಂದರೆ ಪದ್ಮನಂದಿಯೇ ತನ್ನ ಏಕತ್ವಸಪ್ತತಿಯ ಮೇಲೆ ಕನ್ನಡವೃತ್ತಿಯನ್ನು ಬರೆದಿದ್ದಾನೆ. ಲಬ್ಧಾತ್ಮವೃತ್ತಿ ಎಂಬ ಶಬ್ದದಿಂದ ಅದು ಸೂಚಿತವಾದಂತೆ ತೋರುತ್ತದೆ.

ಈ ಟೀಕೆಯಲ್ಲಿ ಹೇಳಿದಂತೆ ಪದ್ಮನಂದಿ ಮುನಿಯು ಶುಭಚಂದ್ರ ರಾದ್ಧಾಂತದೇವನ ಅಗ್ರ ಶಿಷ್ಯನು; ಕನಕನಂದಿ ಪಂಡಿತನಿಂದ ವಿದ್ಯೆಯನ್ನು ಪಡೆದವನು; ಅಮೃತಚಂದ್ರನ ವಾಕ್ಚಂದ್ರಿಕೆಯ ಪ್ರಕಾಶದಿಂದ ಅವನಿಗೆ ಅಧ್ಯಾತ್ಮಾವಲೋಕನವು ದೊರೆಯಿತು ಮತ್ತು ನಿಂಬಸಾಮಂತನ ಪ್ರಬೋಧನೆಗಾಗಿ ಈ ಕನ್ನಡ ಟೀಕೆಯನ್ನು ಆತನು ಬರೆದನು.

ಈ ಸಮಸಾಮಯಿಕ ಸಂಗತಿಗಳು ಏಕತ್ವಸಪ್ತತಿಯ ಕರ್ತೃವಿನ ಅಂದರೆ ನಮ್ಮ ಪದ್ಮನಂದಿಯ ಕಾಲ ನಿರ್ಣಯಕ್ಕೆ ಬಹಳ ಸಹಾಯಕವಾಗಿದೆ. ಪದ್ಮನಂದಿಗೆ ಇಬ್ಬರಿಗಿಂತ ಹೆಚ್ಚು ಗುರುಗಳು ಇದ್ದಿರಬಹುದು. ಆದ್ದರಿಂದ ವೀರನಂದಿ ಮತ್ತು ಶುಭಚಂದ್ರ ಇವರಿಬ್ಬರೂ ಪದ್ಮನಂದಿಯ ಗುರುಗಳೆಂದು ನಾವು ಊಹಿಸಬಹುದು. ಆರ್. ನರಸಿಂಹಾಚಾರ್ಯರು ಏಕತ್ವ ಸಪ್ತತಿ ಮತ್ತು ಅದರ ಕನ್ನಡ ಟೀಕೆ ಇವು ಭಿನ್ನವೆಂದು ತಿಳಿಯಲಿಲ್ಲ. ಆ ಕಾರಣ ಏಕತ್ವ ಸಪ್ತತಿಯಲ್ಲಿಯೇ ನಿಂಬನು ಸಾಮಂತ ಚೂಡಾಮಣಿಯೆಂದು ಹೇಳಿದ್ದಾಗಿ ಅವರು ಊಹಿಸಿದರು. 1123ರಲ್ಲಿ ಮರಣ ಹೊಂದಿದ ಶುಭಚಂದ್ರನು ಪದ್ಮನಂದಿಯ ಗುರುವೆಂದು ಅವರು ತಿಳಿದಿದ್ದಾರೆ. ಆದರೆ ಇದೇ ಶುಭಚಂದ್ರನು ಪದ್ಮನಂದಿಯ ಗುರುವೆಂದು ಹೇಳಲಿಕ್ಕಾಗದು. ಈ ಶಿಲಾಲೇಖದಲ್ಲಿ ಶುಭಚಂದ್ರನ ವ್ಯಕ್ತಿತ್ವದ ಮತ್ತು ಸಮಾಧಿಯ ವರ್ಣನೆಯಿದೆ. ಆದರೆ ಪದ್ಮನಂದಿಯ ನಿರ್ದೇಶನವು ಇಲ್ಲ 21.

ಈ ಟೀಕೆಯಲ್ಲಿ ಶುಭಚಂದ್ರನಿಗೆ ರಾದ್ಧಾಂತದೇವನೆಂಬ ಬಿರುದು ಇರುತ್ತದೆ. ಶಿಲಾಲೇಖದಲ್ಲಿಯೂ ಸಹ ಜೈನಮಾರ್ಗರಾದ್ಧಾಂತಪಯೋಧಿ ಎಂಬ ವಿಶೇಷಣಗಳುಂಟು. ಒಂದೇ ವ್ಯಕ್ತಿಯೆಂದು ಸಿದ್ಧಾಂತ ಮಾಡಲು ಇನ್ನೂ ಹೆಚ್ಚು ಪ್ರಮಾಣಗಳು ಬೇಕು. ಏಕೆಂದರೆ ಆ ಕಾಲದ ಶಿಲಾಲೇಖಗಳನ್ನು ನೋಡಹೋದರೆ ಶುಭಚಂದ್ರ ಎಂಬ ಹೆಸರಿನ ಅನೇಕ ಗುರುಗಳು ಆಗಿಹೋದದ್ದು ಕಂಡುಬರುತ್ತದೆ. ಪದ್ಮನಂದಿಯು ನಿಂಬದೇವನ ಸಮಕಾಲೀನ. ನಿಂಬದೇವನು ಶಿಲಾಹಾರ ಅರಸನಾದ ಗಂಡರಾದಿತ್ಯನ ಮಹಾಸಾಮಂತ. ಅವನು ಮಾಘನಂದಿಯ (ಕೊಲ್ಲಾಪುರೇ ತೀರ್ಥಕೃತ್) ಶಿಷ್ಯ. ಕೊಲ್ಲಾಪುರದಲ್ಲಿ ಈತನು ರೂಪನಾರಾಯಣ ಬಸದಿಯನ್ನು ಕಟ್ಟಿಸಿದನು. (ರೂಪನಾರಾಯಣ ಗಂಡರಾದಿತ್ಯನ ಬಿರುದು.) ಅವನು ಕಾರ್ತಿಕ ಪಂಚಮಿ ಶಕ 1058ರಲ್ಲಿ (ಇಸ 1136) ಕೊಲ್ಲಾಪುರ ಮತ್ತು ಮಿರಜ ಮುಂತಾದ ಸ್ಥಳಗಳ ವರ್ತಕರಿಂದ ಕೆಲವು ಆದಾಯವನ್ನು ದೊರಕಿಸಿ ಕವಡೆಗೊಳ್ಳದಲ್ಲಿ ಕಟ್ಟಿಸಿದ ಪಾರ್ಶ್ವನಾಥ ಬಸದಿಗೆ ದಾನವನ್ನು ಕೊಟ್ಟಿದ್ದಾನೆ. ಈ ಬಸದಿಯು ಈಗಿನ ಶುಕ್ರವಾರ ಪೇಟೆಯಲ್ಲಿನ ಮಾನಸ್ತಂಭ ಬಸದಿಯಾಗಿರಬಹುದು.

ನಿಂಬದೇವನು ಧಾರ್ಮಿಕಪ್ರವೃತ್ತಿಯ ಜೈನನು. ಶಿಲಾಲೇಖಗಳಲ್ಲಿ ಆತನ ಸದ್ಗುಣಗಳ ವರ್ಣನೆಯು ದೊರೆಯುತ್ತದೆ. ವಿದ್ವಾನ್ ಯತಿಗಳಿಗೆ ಆತನು ಕಲ್ಪವೃಕ್ಷವಾಗಿದ್ದ. ಇವರ ಮೇಲಿಂದ ಸುಮಾರು 1136ರ ಕಾಲಕ್ಕೆ ನಿಂಬ ಸಾಮಂತರು ಆಗಿಹೋದನು. ಈ ಕಾರಣ ಅವನ ಸಮಕಾಲೀನನಾದ ಪದ್ಮನಂದಿಯ ಕಾಲವು 12ನೆಯ ಶತಮಾನದ ಮಧ್ಯ. ಪದ್ಮನಂದಿಯು ಅಮಿತಗತಿಯ ಅನಂತರದವನು. ಪದ್ಮಪ್ರಭನಿಗಿಂತ ಮುಂಚಿನವನು ಮತ್ತು ನಿಂಬದೇವನ ಸಮಕಾಲೀನನು. ಪದ್ಮನಂದಿಯನ್ನು 12ನೆಯ ಶತಮಾನದ ಮಧ್ಯದ ಗಡುವಿನಲ್ಲಿ ಇರಿಸಬಹುದು.

ನಿಂಬ ಸಾಮಂತನು ಆ ಕಾಲದ ಬಹು ಪ್ರಸಿದ್ಧ ವ್ಯಕ್ತಿ. ಮುಂದಿನ ಕಾಲದಲ್ಲಿ ಇವನ ವ್ಯಕ್ತಿತ್ವವು ಎಷ್ಟೋ ಕಥೆಗಳಿಗೆ ಆಧಾರವಾಯಿತು. ಕನ್ನಡದಲ್ಲಿ ನಿಂಬಸಾಮಂತ ಚರಿತೆ ಎಂಬ ಹೊತ್ತಗೆಯು ದೊರೆ

---

21 ಎಪಿ. ಕ., 2, ಶ್ರ. ಬೆ., ಪ್ರ. ಪು., 68, ಮತ್ತು 117 (43), ಪ್ರ. ಪು. 82.

ಯುತ್ತದೆ. ಇದರ ಒಂದು ಪ್ರತಿಯನ್ನು ನಾನು ಪ್ರೊ. ಕುಂದಣಗಾರರಿಗೆ ಕೊಟ್ಟಿದ್ದೆನು. ಅದರ ಮೇಲಿಂದ ಅವರು ಅದರ ಒಂದು ಪ್ರತಿಲಿಪಿಯನ್ನು ಮಾಡಿಕೊಂಡಿದ್ದರು; ಕನ್ನಡ ಜಿನವಿಜಯದಲ್ಲಿ (ಆಗಸ್ಟ್ 1931) ನಿಂಬ ಸಾಮಂತನ ವಿಷಯವಾಗಿ ಒಂದು ಲೇಖನವನ್ನು ಬರೆದಿದ್ದರು. ನನಗೆ ದೊರೆತ ಪ್ರತಿಯು ಈಗ ಬಾಹುಬಲಿ (ಕೊಲ್ಹಾಪುರ ಜಿಲ್ಲೆ)ಯ ಗುರುಕುಲದಲ್ಲಿ ಇದೆ. ಮತ್ತು ಪ್ರೊ. ಕುಂದಣಗಾರರು ತಮ್ಮ ಪ್ರತಿಲಿಪಿಯನ್ನು ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಕೊಟ್ಟಿದ್ದಾರೆ.

ಈ ಚರಿತೆಯ ಮೂಲ ಪ್ರತಿಯ ಕಾಲ ಇ. ಸ. 1736. ಕೊಲ್ಹಾಪುರದ ಶ್ರೀ ಜಿನಸೇನ ಭಟ್ಟಾರಕರ ಶಿಷ್ಯರಾದ ಗುಣಭದ್ರರ ಶಿಷ್ಯಳಾದ ಶಾಂತಿಮತಿ ಕಂತಿಯವರು ಈ ಪ್ರತಿಯನ್ನು ಮಾಡಿಸಿದರು. ಸೇನ ಗಣದ ಜಿನಸೇನರ ಭೃತ್ಯನಾದ ಸತ್ಕವಿಯೆಂದು ಕರೆಯಲ್ಪಟ್ಟ ಪಾರೀಶ್ವನೇ ಇದರ ಗ್ರಂಥಕರ್ತನು. ಇವನ ಕಾಲ ಇ. ಸ. 1736ಕ್ಕಿಂತ ಮುಂಚಿನದು. ಈತನು ಹದಿನೇಳನೆಯ ಶತಮಾನದಲ್ಲಿ ಆಗಿಹೋಗಿರಬಹುದೆಂದು ಭಾಷೆ ಮತ್ತು ಶೈಲಿಗಳ ಮೇಲಿಂದ ಪ್ರೊ. ಕುಂದಣಗಾರರ ಊಹೆ. ಈ ಗ್ರಂಥವು ಮೌಖಿಕದ ಪರಂಪರೆ ಅಥವಾ ಮುಂಚಿನ ಯಾವುದೋ ಒಂದು ಪ್ರಬಂಧದ ಆಧಾರದ ಮೇಲಿಂದ ಬರೆಯಲ್ಪಟ್ಟಿರಬಹುದು. ಇದರಲ್ಲಿ ಐದು ಸಂಧಿಗಳಿವೆ. ಮತ್ತು ಸುಮಾರು 506 ಷಟ್ಪದಿಗಳಿವೆ. ನಿಂಬದೇವನು ಒಳ್ಳೇ ಧಾರ್ಮಿಕನು. ಜಿನಧರ್ಮ ಭಕ್ತನು. ಜೈನಮುನಿಗಳಿಗೆ ಮತ್ತು ಆಚಾರ್ಯರಿಗೆ ಆಶ್ರಯದಾತನು. ಜನಸಾಮಾನ್ಯರಿಗೆ ಮೆಚ್ಚುಗೆಯಾಗಿದ್ದನಲ್ಲದೆ ಅವರ ಪ್ರೀತಿಯನ್ನು ಸಂಪಾದಿಸಿದ್ದನು. ಜಿನಧರ್ಮ ಪರಾಯಣನಾದ ಕಲ್ಯಾಣದ ಬಿಜ್ಜಳನು ಗಂಡರಾದಿತ್ಯನ ಕೀರ್ತಿಯನ್ನು ಕೇಳಿ ಆತನ ಮೇಲೆ ದಂಡೆತ್ತಿದನು.

ಗಂಡರಾದಿತ್ಯನ ಪರವಾಗಿ ನಿಂಬದೇವನು ರಣರಂಗದಲ್ಲಿ ಇಳಿದು ಶೌರ್ಯದಿಂದ ಹೋರಾಡಿದನಲ್ಲದೆ ಸೈನ್ಯವನ್ನು ಹೊಡೆದು ಹಾಕಿದನು. ಆದರೆ ಕೊನೆಗೆ ಬಿಜ್ಜಳನ ಆನೆಯಿಂದ ತುಳಿಯಲ್ಪಟ್ಟನು. ಗಂಡರಾದಿತ್ಯನ ಆಶ್ರಯದಲ್ಲಿ ಇಂಥ ಎಷ್ಟೋ ಶೂರ ಸೇನಾಪತಿಗಳು ಇರಬಹುದೆಂದು ಭಯಗೊಂಡು ಬಿಜ್ಜಳನು ಮರುದಿನವೇ, ಮುಂದೆ ಯುದ್ಧ ಮಾಡದೆ, ಕಲ್ಯಾಣಕ್ಕೆ ತಿರುಗಿದನು! ಇದಿಷ್ಟೇ ಕಥೆಯ ಸಾರಾಂಶ. ಪ್ರೊ. ಕುಂದಣಗಾರರು ಕಥೆಯೊಳಗಿನ ಐತಿಹಾಸಿಕ ದೋಷಗಳನ್ನು ಎತ್ತಿ ತೋರಿಸಿದ್ದಾರೆ. ಶಿಲಾಹಾರ ಗಂಡರಾದಿತ್ಯನು ಚಾಲುಕ್ಯ ವಿಕ್ರಮಾದಿತ್ಯ ತ್ರಿಭುವನಮಲ್ಲದೇವನ (1077ರಿಂದ 1126) ಸಮಕಾಲೀನನು. ಮತ್ತು ತನ್ನ ತಂಗಿಯಾದ ಚಂದ್ರಿಕಾದೇವಿಯನ್ನು ಅವನಿಗೆ ಮದುವೆ ಮಾಡಿಕೊಟ್ಟಿದ್ದನು. ಆತನು ಆಳಿದ್ದು 1110ರಿಂದ 1136ರ ವರೆಗೆ. ಚಾಲುಕ್ಯರ ವಿರುದ್ಧ ಧಾಳಿಯಾದದ್ದು 1157ರಲ್ಲಿ. ಇದು ಶಿಲಾಹಾರ ಭೋಜನ ವಿರುದ್ಧ ಹೊರತು ಗಂಡರಾದಿತ್ಯನ ವಿರುದ್ಧವಲ್ಲ. ನಿಂಬದೇವನು ಕೊಲ್ಲಾಪುರದಲ್ಲಿ ಎರಡು ಜಿನ ಬಸದಿಗಳನ್ನು ಕಟ್ಟಿಸಿದನು. ಆ ಕಾಲದ ಪ್ರಸಿದ್ಧ ಆಚಾರ್ಯರಾದ ಮಾಘನಂದಿಗಳೇ ಅವನ ಗುರುಗಳು. ನಿಂಬದೇವನಿಗಾಗಿ ಏಕತ್ವಸಪ್ತತಿಯ ಟೀಕೆಯನ್ನು ಬರೆಯಲಾಯಿತು. ಇದರಲ್ಲಿ ಆತನ ಶೌರ್ಯವನ್ನು ವರ್ಣಿಸಲಾಗಿದೆ. ಆತನು ಎಷ್ಟೋ ದತ್ತಿಗಳನ್ನು ಕೊಟ್ಟಿದ್ದಾನೆ. ಇವೆಲ್ಲ ಸಂಗತಿಗಳು ಕೊಲ್ಲಾಪುರ ಮತ್ತು ಮಿರಜ ಪ್ರಾಂತಗಳಲ್ಲಿ ಜಾನಪದ ಗೀತೆಗಳಲ್ಲಿ ಜನಸಮುದಾಯದ ಸ್ಮರಣೆಯಲ್ಲಿ ಬಹುಕಾಲ ಉಳಿದಿರಬಹುದು. ಅದರ ಆಧಾರದ ಮೇಲಿಂದ ಪಾರೀಶ್ವನು ಈ ಚರಿತೆಯನ್ನು ಬರೆದಿರಬಹುದು.

ಪದ್ಮನಂದಿಯ ವ್ಯಕ್ತಿತ್ವ

ಮೇಲಿನ ಚರ್ಚೆಯ ಮೇಲಿಂದ ನಮ್ಮ ಕಣ್ಣು ಮುಂದೆ ಪದ್ಮನಂದಿಯ ವ್ಯಕ್ತಿತ್ವವು ಸ್ವಲ್ಪಮಟ್ಟಿಗೆ ಕಂಡುಬರುತ್ತದೆ. ಪದ್ಮನಂದಿಯು ಆಗಿನ ಕನ್ನಡನಾಡಿನಲ್ಲಿ ಆಗಿಹೋದನು. ಅವನ ಕಾಲ 12ನೆಯ ಶತಮಾನದ ಮಧ್ಯೆ. ವೀರನಂದಿ ಮತು ಶುಭಚಂದ್ರ ಇವನ ಗುರುಗಳು. ಕನಕನಂದಿ ಪಂಡಿತನಿಂದ ಅವನು ಅಭ್ಯಾಸವನ್ನು ಪಡೆದಿದ್ದನು, ಮತ್ತು ಅಮೃತಚಂದ್ರನ ಅಧ್ಯಾತ್ಮಿಕ ಗ್ರಂಥಗಳನ್ನು ಓದಿದ್ದನು. ಕುಂದಕುಂದ, ಪೂಜ್ಯಪಾದ. ಶುಭಚಂದ್ರ, ಸೋಮದೇವ ಮೊದಲಾದವರ ಗ್ರಂಥಗಳನ್ನು ಆಳವಾಗಿ ತಿಳಿದುಕೊಂಡವನು. ಸಂಸ್ಕೃತ -- ಪ್ರಾಕೃತ ಮತ್ತು ಕನ್ನಡ ಭಾಷೆಗಳ ಮೇಲೆ ಈತನಿಗೆ ಪ್ರಮಾಣ

ಭೂತವಾದ ಪ್ರಭುತ್ವವಿತ್ತು. ಅವನ ಪ್ರಕರಣಗಳಲ್ಲಿ ಏಕತ್ವ ಸಪ್ತತಿಯು ಬಹಳ ಪ್ರಸಿದ್ಧಿಯನ್ನು ಹೊಂದಿತು. ಇದಲ್ಲದೆ ಪದ್ಮಪ್ರಭ ಮೊದಲಾದವರು ಅದರಿಂದ ಶ್ಲೋಕಗಳನ್ನು ಉದಾಹರಿಸಿದ್ದಾರೆ.

ಶಿಲಾಹಾರದ ಸಾಮಂತನಾದ ನಿಂಬದೇವನ ಸಲುವಾಗಿ ಅದರ ಮೇಲೆ ಕನ್ನಡಟೀಕೆಯು ಬರೆಯಲ್ಪಟ್ಟಿತು. ತಾನು ವ್ರತಿ. ಸೂರಿ. ಯತೀಂದ್ರನೆಂದು (ಪದ್ಮನಂದಿಯು) ಕರೆದುಕೊಳ್ಳುತ್ತಾನೆ. ಗುರುಗಳ ಉಪದೇಶಕ್ಕೆ ವಿಶೇಷ ಮಹತ್ವ ಕೊಡುತ್ತಾನೆ. ಒಳ್ಳೆಯ ನಿಷ್ಠುರತೆಯಿಂದ ಯತಿಧರ್ಮವನ್ನು ಪಾಲಿಸುತ್ತಾನೆ. ದಿಗಂಬರ ಮುನಿಯಾಗಿ ಸಂಯಮಕ್ಕೆ ಮತ್ತು ಬ್ರಹ್ಮಚರ್ಯಕ್ಕೆ ವಿಶಿಷ್ಟ ಪ್ರಾಧಾನ್ಯವನ್ನು ನೀಡುತ್ತಾನೆ. ವ್ಯವಹಾರ ದೃಷ್ಟಿಯು ಸಾಮಾನ್ಯ ಜನರಿಗಾಗಿರುತ್ತದೆ. ಆತನು ನಿಶ್ಚಯನಯಕ್ಕೆ ಹೆಚ್ಚು ಮಹತ್ವ ಕೊಡುತ್ತಾನೆ. ಏಕಾಂತವಾಸವನ್ನು ಆತನು ಅಪೇಕ್ಷಿಸುತ್ತಾನೆ. ಚಿಂತನದಿಂದ ಮುಖ್ಯವಾದ ಆತ್ಮಾನುಭವಕ್ಕೆ ಅವನು ಹೆಚ್ಚು ಬೆಲೆ ನೀಡುತ್ತಾನೆ. ಧರ್ಮಧ್ಯಾನಕ್ಕೆ ಇದು ಯೋಗ್ಯ ಕಾಲವಲ್ಲ: ಅಲ್ಲಲ್ಲಿ ಅಧಃಪತನವು ಕಾಣುತ್ತದೆ- ಎಂದು ಹೇಳಿಕೊಂಡಿದ್ದಾನೆ. ಜಿನಮಂದಿರ, ಜಿನಪೂಜೆ, ಬಿಂಬ ಪ್ರತಿಷ್ಠೆ, ಮುನಿಸೇವೆ ಇತ್ಯಾದಿ ಕರ್ತವ್ಯಗಳನ್ನು ಶ್ರಾವಕರಿಗೆ ಉಪದೇಶಿಸಿದ್ದಾನೆ. ವರ್ತಮಾನ ಕಾಲದಲ್ಲಿ ಜ್ಞಾನಚಾರಿತ್ರ್ಯಕ್ಕಿಂತ ಭಕ್ತಿಮಾರ್ಗವೇ ಒಳ್ಳೆಯದೆಂದು ಒಪ್ಪಿದ್ದಾನೆ. ಜೈನ ಶಾಸ್ತ್ರದಲ್ಲಿ ಅವನ ಅಭ್ಯಾಸವು ಆಳವಾಗಿದೆ. ಅಲ್ಲಲ್ಲಿ ವೇದಾಂತದ ಮತ್ತು ಭಕ್ತಿಮಾರ್ಗದ ಪರಿಭಾಷೆಯನ್ನು ಉಪಯೋಗಿಸಿದ್ದಾನೆ. ಅವನ ಕವಿತ್ವವು ಸಾಧಾರಣವಾದುದಲ್ಲ. ಅನೇಕ ಆಧ್ಯಾತ್ಮಿಕ ವಿಷಯಗಳನ್ನು ಸರಳವಾಗಿ, ಸುಂದರವಾಗಿ ಮತ್ತು ಭವ್ಯವಾಗಿ ಹೇಳಿದ್ದಾನೆ. ಅವನು ಉತ್ಕೃಷ್ಟ ಆಧ್ಯಾತ್ಮಿಕ ಮುನಿಯು. ಅವನ ಕವಿತಾಶಕ್ತಿ ಮತ್ತು ವಿಚಾರಸರಣಿಯನ್ನು ನೋಡಿದಾಗ, ನಮಗೆ ಭರ್ತೃಹರಿ, ಗುಣಭದ್ರ, ಶುಭಚಂದ್ರ, ಅಮೃತಚಂದ್ರ ಮೊದಲಾದವರ ಧಾರ್ಮಿಕ ಮತ್ತು ನೈತಿಕ ಕಾವ್ಯಗಳ ನೆನಪಾಗುತ್ತದೆ-22.

---

22 ವಿಶಿಷ್ಟ ಮತ್ತು ಹೆಚ್ಚಿನ ಸಂದರ್ಭಗಳಿಗಾಗಿ ಪದ್ಮನಂದಿ ವಿರಚಿತ ಪಂಚ ವಿಂಶತಿಯ ಇಂಗ್ಲಿಷ್ ಮತ್ತು ಹಿಂದೀ ಪ್ರಸ್ತಾವನೆಗಳನ್ನು ನೋಡಬೇಕು. ಈ ಗ್ರಂಥವು ಡಾ. ಆ. ನೇ. ಉಪಾಧ್ಯೆ ಮತ್ತು ಡಾ. ಹೀರಾಲಾಲ ಜೈನ ಇವರಿಂದ ಸಂಪಾದಿತವಾಗಿ, ಜೀವರಾಜ ಜೈನಗ್ರಂಥಮಾಲೆಯಲ್ಲಿ 10ನೆಯ ಗ್ರಂಥವಾಗಿ ಪ್ರಕಟವಾಗಿದೆ. ಸೋಲ್ಲಾಪುರ, 1962.

ಕೆ. ಕೆಂಪೇಗೌಡ

ಕನ್ನಡ ಭಾಷಾ ವಿಜ್ಞಾನದ ಚರಿತ್ರೆ

ಕನ್ನಡ ಭಾಷೆಯ ಶಾಸ್ತ್ರೀಯ ಅಧ್ಯಯನ ಕಾರ್ಯ ಅತಿ ಪ್ರಾಚೀನ ಕಾಲದಿಂದಲೂ ನಡೆದು ಬಂದಿದ್ದು. ಪ್ರಾಚೀನ ಪಂಡಿತೋತ್ತಮರು ಆ ಕಾಲದಲ್ಲಿ ಪ್ರಚಲಿತವಾಗಿದ್ದ ಭಾಷಾ ಶಾಸ್ತ್ರದ ರೂಪ ರೇಖೆಗಳನ್ನು ಚೆನ್ನಾಗಿ ಮನನ ಮಾಡಿ ಅದರ ತತ್ವಗಳನ್ನು ಆಧಾರವಾಗಿರಿಸಿಕೊಂಡು ಕನ್ನಡ ನುಡಿಯ ರಚನೆ, ಸ್ವರೂಪ ಮತ್ತು ಅದರ ಬೆಳವಣಿಗೆಗೆ ಸಂಬಂಧಿಸಿದ ಹಲವಾರು ವಿಚಾರಗಳನ್ನು ವಿಶ್ಲೇಷಿಸಿ, ವಿವರಿಸಿ ಉಪದೇಶಿಸುವ ಗ್ರಂಥ ರಚನೆಗಳನ್ನು ಮಾಡಿದ್ದಾರೆ. ಪ್ರಾಚೀನ ಆಚಾರ್ಯರ ಪ್ರಯತ್ನದ ಫಲದಿಂದಾಗಿ ಕನ್ನಡ ಭಾಷೆ ಮತ್ತು ಸಾಹಿತ್ಯಗಳ ಶಾಸ್ತ್ರೀಯ ಅಧ್ಯಯನ ಕಾರ್ಯ ಬಹುವಾಗಿ ವಿವಿಧ ಪ್ರಕಾರಗಳಲ್ಲಿ ನಡೆದು, ಬೆಳೆದು ಬಂದು ತನ್ನ ವೈಶಾಲ್ಯತೆಯನ್ನು ಸ್ಥಾಪಿಸಿಕೊಂಡಿದೆ. ಈ ಕನ್ನಡ ಭಾಷೆಯ ಅಧ್ಯಯನ ಕಾರ್ಯ ಸುಗಮವಾಗಿ ನಡೆದು ಬಂದ ದಾರಿಯನ್ನು ಗಮನಿಸುತ್ತಾ, ಅದು ಹೇಗೆ ತನ್ನ ವೈಶಾಲ್ಯತೆಯನ್ನು ಸ್ಥಾಪಿಸಿಕೊಂಡಿತು ಎಂಬುದನ್ನು ಇಲ್ಲಿ ಸಂಕ್ಷಿಪ್ತವಾಗಿ ನೋಡಲಾಗಿದೆ.

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ "ಕವಿರಾಜಮಾರ್ಗ"ವೇ ಮೊಟ್ಟಮೊದಲನೆಯ ಗ್ರಂಥ. ಈ ಲಕ್ಷಣ ಗ್ರಂಥದ ರಚನಾಕಾರನ ಮತ್ತು ಅವನ ಕಾಲದ ವಿಚಾರದಲ್ಲಿ ವಿದ್ವಾಂಸರಲ್ಲಿ ಒಮ್ಮತವಿದ್ದಂತಿಲ್ಲ. ಈ ಗ್ರಂಥದ ಬಗ್ಗೆ ಭಿನ್ನ ಭಿನ್ನ ಅಭಿಪ್ರಾಯಗಳು ಹೊರಬಂದಿವೆ. ಕನ್ನಡ ಭಾಷಾ ಚರಿತ್ರೆಯ ದೃಷ್ಟಿಯಿಂದ ಇದು ಪರಮೋತ್ಕೃಷ್ಟ ಗ್ರಂಥವೆನ್ನಬಹುದು. ಇಲ್ಲಿ ಕನ್ನಡನಾಡಿನ ವರ್ಣನೆ, ಆಗಿನ ಕಾಲದ ಕನ್ನಡನಾಡಿನ ಜನ ಜೀವನ, ಸಂಸ್ಕೃತಿ, ಆಚಾರ–ವ್ಯವಹಾರಗಳ ಬಗ್ಗೆ ತುಂಬ ಮೆಚ್ಚಿಕೊಳ್ಳಬಹುದಾದ ಮಾತುಗಳು ಕಂಡುಬರುತ್ತವೆ. ಅದೂ ಅಲ್ಲದೆ, ಇದರಲ್ಲಿನ ಕನ್ನಡ ವ್ಯಾಕರಣ ಸಂಬಂಧಿಯಾದ ಹಲವಾರು ಉತ್ತಮ ವಿಚಾರಗಳು ಕನ್ನಡ ವಿದ್ವಾಂಸರ ಗಮನವನ್ನು ಸೆಳೆಯದೆ ಇರವು. ಇಲ್ಲಿ ನಿರೂಪಿತವಾಗಿರುವ ಪ್ರಾಚೀನ ಕನ್ನಡ ಭಾಷಾ ಸ್ವರೂಪ, ಶೈಲಿ, ಮತ್ತು ವ್ಯಾಕರಣದ ಇತರ ವಿಚಾರಗಳು ತುಂಬ ಸೊಗಸಾಗಿವೆ, ಉಪಯುಕ್ತವಾಗಿವೆ. ವ್ಯಾಕರಣ ಶಾಸ್ತ್ರಕ್ಕೆ ಸಂಬಂಧಿಸಿದ ಹೆಚ್ಚು ವಿಚಾರಗಳು ಇದರಲ್ಲಿ ವಿಶಿಷ್ಟವಾಗಿ ಕಂಡುಬರುವುದರಿಂದ ಈ ಗ್ರಂಥವನ್ನು ಮೊಟ್ಟಮೊದಲನೆಯ ಕನ್ನಡ ವ್ಯಾಕರಣ ಗ್ರಂಥವೆಂದು ಕರೆಯಬಹುದಾಗಿದೆ. ಇಲ್ಲಿಯೇ ಕನ್ನಡ ಭಾಷೆಯ ವ್ಯಾಕರಣ ನಿರ್ಮಾಣಕ್ಕೆ ತಳಹದಿ ಹಾಕಿರುವಂತೆ ಕಂಡುಬರುತ್ತದೆ. ಕವಿರಾಜಮಾರ್ಗಕಾರನು ಆಗಿನ ಕಾಲದ ಅಡುನುಡಿಯ ಜಾಡನ್ನು ಹಿಡಿದು ಭಾಷಾಪ್ರಯೋಗ ನಡೆಸಿದ್ದಾನೆ. ಪೂರ್ವದ ಹಳಗನ್ನಡದ ವಿವಿಧ ರೂಪಗಳು, ವಿವಿಧ ಅಪೂರ್ವ ಪದಪ್ರಯೋಗಗಳು ಈ ಗ್ರಂಥದಲ್ಲಿ ಸ್ಪಷ್ಟವಾಗಿ ದೊರೆಯುತ್ತವೆ. ಇಲ್ಲಿನ ಆ ಪೂರ್ವ ಪದ ಪ್ರಯೋಗಗಳು ಹೆಚ್ಚಾಗಿ ಪ್ರಾಕೃತ ಭಾಷಾ ಪದಗಳನ್ನೇ ಹೋಲುತ್ತವೆ. ಈ ಕಾರಣದಿಂದ ಆಗಿನ ಕಾಲದಲ್ಲಿ ಕನ್ನಡ ಭಾಷೆಯ ಜೊತೆಗೆ ಪ್ರಾಕೃತವೂ ಜನ ಸಾಮಾನ್ಯರ ಭಾಷೆಯಾಗಿದ್ದಿರಬಹುದೆಂಬ ಅನುಮಾನ ಹುಟ್ಟುತ್ತದೆ. ಕನ್ನಡ ಸಾಹಿತ್ಯ ರಂಗದಲ್ಲಿ ಎರಡನೇ ನಾಗವರ್ಮನ 'ಕಾವ್ಯಾವಲೋಕನ' ಹೊರಬರುವವರೆಗೆ ಸುಮಾರು ಮೂರು ಶತಮಾನಗಳ ಕಾಲ ಈ 'ಕವಿರಾಜಮಾರ್ಗ'ವೇ ಕವಿಜನದ ರತ್ನಗನ್ನಡಿಯೂ, ಕೈ ದೀವಿಗೆಯೂ ಆಗಿದ್ದಿತು.

ಇಲ್ಲಿ ಕಂಡುಬರುವ ಕನ್ನಡ ಭಾಷಾಸಂಬಂಧಿ ವ್ಯಾಕರಣ ವಿಚಾರಗಳು ಭಾಷಾಶಾಸ್ತ್ರದ ದೃಷ್ಟಿಯಿಂದ ಅತ್ಯಂತ ಅಮೂಲ ವಾದುವು.

'ಕವಿರಾಜ ಮಾರ್ಗ'ದ ಅನಂತರ ಬಹುಕಾಲದ ಮೇಲೆ ಕನ್ನಡ ಸಾಹಿತ್ಯರಂಗದಲ್ಲಿ ಕನ್ನಡ ಭಾಷೆಗೆ ಸಂಬಂಧಿಸಿದಂತೆ ನಾಲ್ಕು ಪ್ರಾಚೀನ ಗ್ರಂಥಗಳು ಕಾಣಿಸಿಕೊಂಡುವು. ಅವು ಎರಡನೇ ನಾಗವರ್ಮನ ಕಾವ್ಯಾವಲೋಕನ, ಭಾಷಾಭೂಷಣ, ಕೇಶಿರಾಜನ ಶಬ್ದಮಣಿದರ್ಪಣ ಮತ್ತು ಭಟ್ಟಾಕಳಂಕನ ಶಬ್ದಾನುಶಾಸನ. ಇವುಗಳಲ್ಲಿ 'ಭಾಷಾಭೂಷಣ' ಮತ್ತು 'ಶಬ್ದಾನುಶಾಸನ' ಗ್ರಂಥಗಳು ಸಂಸ್ಕೃತ ಭಾಷೆಯಲ್ಲಿಯೂ, ಉಳಿದ ಎರಡು ಗ್ರಂಥಗಳು ಕನ್ನಡ ಭಾಷೆಯಲ್ಲಿಯೂ ಕಂಡುಬರುತ್ತವೆ. ಕನ್ನಡ ಭಾಷಾ ವ್ಯಾಕರಣಕ್ಕೆ ಸಂಬಂಧಿಸಿದ ಹಲವಾರು ವಿಚಾರಗಳನ್ನು ಸಂಸ್ಕೃತ ಭಾಷೆಯಲ್ಲಿ 'ಭಾಷಾಭೂಷಣ'ಮತ್ತು ಶಬ್ದಾನುಶಾಸನ ಗ್ರಂಥಗಳಲ್ಲಿ ಸೊಗಸಾಗಿ ಚಿತ್ರಿಸಲಾಗಿದೆ. ಪ್ರಾಚೀನ ಭಾಷಾ ಪಂಡಿತೋತ್ತಮರ ಭಾಷಾಶಾಸ್ತ್ರಕ್ಕೆ ಸಂಬಂಧಿಸಿದ ತತ್ವಗಳನ್ನು ಆಧಾರವಾಗಿರಿಸಿಕೊಂಡು ಕನ್ನಡಭಾಷೆಯ ರಚನೆ ಮತ್ತು ಸ್ವರೂಪವನ್ನು ಶಾಸ್ತ್ರೀಯವಾಗಿ ವಿಶ್ಲೇಷಿಸುವ ಪ್ರಯತ್ನ ಇಲ್ಲಿ ನಡೆದಿರುವಂತಿದೆ. ನಾಗವರ್ಮನ 'ಕಾವ್ಯಾವಲೋಕನ'ದಲ್ಲಿ ಕನ್ನಡ ವ್ಯಾಕರಣಕ್ಕೆ ಸಂಬಂಧಿಸಿದ ವಿಶಿಷ್ಟ ವಿಚಾರಗಳ ವಿವರಣೆ ಬಹು ಉಪಯುಕ್ತವಾಗಿದೆ. ಈ ದೃಷ್ಟಿಯಿಂದಲೇ ನಾಗವರ್ಮನನ್ನು ಕನ್ನಡದ ಮೊಟ್ಟಮೊದಲ ವೈಯಾಕರಣಿ ಎನ್ನಬಹುದಾಗಿದೆ. 'ಭಾಷಾಭೂಷ'ಣ ಮತ್ತು ಈ 'ಕಾವ್ಯಾವಲೋಕನ'ದಲ್ಲಿ ನಾಗವರ್ಮನ ನೈಜವಾದ ಭಾಷಾಪಾಂಡಿತ್ಯ ಪ್ರತಿಬಿಂಬಿತವಾಗಿ ಕನ್ನಡದಲ್ಲಿ 'ಕಾವ್ಯಾವಲೋಕನ' ಉತ್ಕೃಷ್ಟ ಗ್ರಂಥಗಳಲ್ಲಿ ಒಂದಾಗಿದೆ.

ಕೇಶಿರಾಜನ 'ಶಬ್ದಮಣಿ ದರ್ಪಣ' ಅಪಾರ ಪಾಂಡಿತ್ಯ ಉಳ್ಳ, ಅಮೋಘವಾದ, ಅತಿ ಪ್ರಾಮಾಣಿಕತೆಯಿಂದ ರಚಿತವಾದ ಹಳಗನ್ನಡ ವ್ಯಾಕರಣಗ್ರಂಥ. ಇದರ ರಚನೆ ಸಂಸ್ಕೃತ ವ್ಯಾಕರಣ ಗ್ರಂಥಗಳ ಮಾದರಿಯಲ್ಲಿಯೇ ನಡೆದಿದೆ. ಆಗಿನ ಕಾಲದಲ್ಲಿ ಇದರಂತೆ ಇನ್ನೂ ಅನೇಕ ವ್ಯಾಕರಣಗ್ರಂಥಗಳು ಕನ್ನಡದಲ್ಲಿ ರಚಿತವಾಗಿರಬಹುದು. ಆದರೆ ದೊರೆತಿರುವ ಗ್ರಂಥ ಮಾತ್ರ ಇದೊಂದೆ. ಇದರಲ್ಲಿ ಸುಮಾರು 11ನೇ ಮತ್ತು 12ನೇ ಶತಮಾನದ ಕನ್ನಡನುಡಿಯ ನೈಜ ಸ್ವರೂಪ ಸ್ಪಷ್ಟವಾಗಿ ಕಂಡು ಬರುತ್ತದೆ. 'ಶಬ್ದಮಣಿದರ್ಪಣ'ದಲ್ಲಿ ಹಳಗನ್ನಡ ಭಾಷಾಸ್ವರೂಪ. ಭಾಷಾಶೈಲಿ, ನವೀನ ಪದ ಪ್ರಯೋಗಗಳು. ಆಗಿನ ಕಾಲದ ಕನ್ನಡ ಭಾಷೆಯ ರಚನಾ ಕ್ರಮ, ಅದರ ವ್ಯಾಕರಣ ವಿಚಾರಗಳು ಬಹುಸ್ಪಷ್ಟವಾಗಿ ಗೋಚರವಾಗುತ್ತವೆ. ಇವು ಆಳವಾದ ಅಧ್ಯಯನ ಫಲದಿಂದ ಹೊರ ಬಂದ ವಿಚಾರಗಳಾಗಿ ಮಿಂಚುತ್ತಿವೆ. ಅತಿ ಪ್ರಾಮಾಣಿಕತೆಯಿಂದ ರಚಿತವಾದ ಕೇಶಿರಾಜನ ಈ 'ಶಬ್ದಮಣಿದರ್ಪಣ' ಹಳಗನ್ನಡ ವ್ಯಾಕರಣರತ್ನವೆನಿಸಿಕೊಂಡಿದೆ. ಇದು ಹಳಗನ್ನಡ ಪ್ರಪಂಚದ ರನ್ನಗನ್ನಡಿ. ಇಲ್ಲಿ ಭಾಷಾಶಾಸ್ತ್ರದ ದೃಷ್ಟಿಯಿಂದ ಸರಿಯಾಗಿ ಪದ ಪ್ರಯೋಗಗಳನ್ನು ಮಾಡಲಾಗಿದೆ. ಕವಿಜನರ ಪ್ರಯೋಗಗಳನ್ನು ಕಡೆಗಣಿಸದೆ ಗಮನ ಹರಿಸಿ ಅವುಗಳನ್ನು ಸ್ಪಷ್ಟಪಡಿಸಿದ್ದಾನೆ. ಈ ಗ್ರಂಥವನ್ನು ಆಳವಾಗಿ ಅಭ್ಯಸಿಸಿ ಇಲ್ಲಿನ ಭಾಷಾಸ್ವರೂಪ, ಶೈಲಿ, ಮತ್ತು ವ್ಯಾಕರಣ ವಿಚಾರಗಳನ್ನು, ಭಾಷಾ ವಿಶ್ಲೇಷಣಾ ವಿಧಾನವನ್ನು ಮೆಚ್ಚಿ ಕೆಲವು ವಿದ್ವಾಂಸರು ಟೀಕೆ ಟಿಪ್ಪಣಿಗಳನ್ನು ಬರೆದು ಪ್ರಕಟಿಸಿದ್ದಾರೆ. ಇವರಲ್ಲಿ ಡಿ. ಎಲ್. ನರಸಿಂಹಾಚಾರ್, ಡಿ. ಕೆ. ಭೀಮಸೇನರಾವ್ ಮತ್ತು ಬಿಳಿಗಿರಿ ಅತಿಮುಖ್ಯರು. ಬಿಳಿಗಿರಿಯವರು ಶಬ್ದಮಣಿ ದರ್ಪಣವನ್ನು ಒಂದು ಶ್ರೇಷ್ಠ ವಿವರಣಾತ್ಮಕ ಹಳಗನ್ನಡ ವ್ಯಾಕರಣವೆಂದು ಪ್ರಶಂಸಿಸುತ್ತಾ ಅವನ ಭಾಷೆಯ ಆದರ್ಶದ ಕಡೆ ಗಮನ ಹರಿಸಿ ಅದರ ನೈಜ ಸ್ವರೂಪವನ್ನು ಕುರಿತು. ಆಧುನಿಕ ಭಾಷಾ ಶಾಸ್ತ್ರದ ದೃಷ್ಟಿಯಿಂದ ವಿಚಾರಮಾಡಿ, 'ಆಲೋಕ' ಎಂಬ ವಿಮರ್ಶನ ಗ್ರಂಥವನ್ನು ಬರೆದು, ಅದರ ಮೊದಲನೆಯ ಭಾಗವನ್ನು ಪ್ರಕಟಿಸಿದ್ದಾರೆ. ಇದಕ್ಕಿಂತ ಹಿಂದೆ ಎಷ್ಟೋ ವಿಮರ್ಶನಗ್ರಂಥಗಳು ಹೊರ ಬಂದಿವೆ. ಅವುಗಳಲ್ಲಿ ಇಷ್ಟೊಂದು ಆಧುನಿಕ ಭಾಷಾಶಾಸ್ತ್ರದ ದೃಷ್ಟಿಯಿಂದ ವಿಚಾರ ನಡೆವಿರುವುದು ತೀರ ಕಡಿಮೆ. 'ಕವಿರಾಜ ಮಾರ್ಗ' ಮತ್ತು 'ಶಬ್ದಮಣಿದರ್ಪಣ'ಗಳಲ್ಲಿನ ಭಾಷಾ ಸ್ವರೂಪವನ್ನು ಗಮನಿಸಿದಾಗ ಕನ್ನಡ ಭಾಷಾಜ್ಞಾನ ಎಷ್ಟೊಂದು ಅಮೋಘವಾದುದು ಎಂದು ಸ್ಪಷ್ಟವಾಗಿ ತಿಳಿದು ಬರುತ್ತದೆ. ಇಲ್ಲಿನ ಭಾಷಾ ವಿಶ್ಲೇಷಣಾ ವಿಧಾನವಂತೂ ಬಹು ಮೇಲ್ಮಟ್ಟದ್ದು. ವ್ಯಾಕರಣ ವಿಚಾರಗಳಂತೂ ತುಂಬ ಆಳವಾಗಿ ಅಭ್ಯಸಿಸಿ ಮನನ ಮಾಡಿ ವಿವೇಚಿಸಿರುವಂತಿವೆ. ಈ ನಿಟ್ಟಿನಲ್ಲಿ ಕನ್ನಡ ಭಾಷಾಶಾಸ್ತ್ರಕ್ಕೆ ತನ್ನದೇ ಆದ ಒಂದು ಪ್ರಾಚೀನ ಪರಂಪರೆ ಇದೆ ಎಂದು

ಊಹಿಸಬಹುದಾಗಿದೆ. ಈ ಎರಡು ಗ್ರಂಥಗಳು ಕನ್ನಡ ಭಾಷಾಶಾಸ್ತ್ರದ ದೃಷ್ಟಿಯಿಂದ ಗಮನಾರ್ಹ ವಾಗಿವೆ.

ಅಂತರರಾಷ್ಟ್ರೀಯ ಭಾಷಾವಿಜ್ಞಾನಕ್ಷೇತ್ರಕ್ಕೆ ನೀಡಿರುವ ಭಾರತೀಯರ ಕಾಣಿಕೆ ಏನು ಕಡಿಮೆ ಯಲ್ಲ. ಇವರ ಪರಿಶ್ರಮದ ಫಲವೇ ಆಧುನಿಕ 'ಭಾಷಾ ವಿಜ್ಞಾನ'. ಇಲ್ಲಿ ಭಾರತೀಯ ವಿದ್ವಾಂಸರ ಸೇವೆ ಅಪಾರವಾದುದು. ಭಾರತೀಯರ ಭಾಷಾವಿಜ್ಞಾನ ಮೊಟ್ಟ ಮೊದಲು ಸಂಸ್ಕೃತ ಭಾಷೆಯಲ್ಲಿಯೇ ಹುಟ್ಟಿ ಇತರ ಭಾಷೆಗಳ ಸಹಾಯ ಪಡೆದು ಪ್ರಕಾಶಕ್ಕೆ ಬಂದಿತು. ಆಗಿನ ಕಾಲದಲ್ಲಿ ಸಂಸ್ಕೃತ ಭಾಷೆ ವ್ಯಾವಹಾರಿಕ ಭಾಷೆಯಾಗಿದ್ದುದೇ ಇದಕ್ಕೆ ಮುಖ್ಯ ಕಾರಣ. ಸಂಸ್ಕೃತ ಭಾಷೆಯ ಪ್ರಕಾಂಡ ಪಂಡಿತರೆನಿಸಿಕೊಂಡಿರುವ ಪಾಣಿನಿ, ಪತಂಜಲಿ ಮತ್ತು ಯಾಸ್ಕ ಮಹಾಮುನಿಗಳು ಸಂಸ್ಕೃತ ಭಾಷೆಯಲ್ಲಿಯೇ ಮೊಟ್ಟಮೊದಲು ವ್ಯಾಕರಣ ಹಾಗು ನಿಘಂಟುಗಳನ್ನು ರಚಿಸಿದರು. ಇವರಿಗಿಂತಲೂ ಹಿಂದೆ ಇನ್ನೂ ಅನೇಕ ವ್ಯಾಕರಣ ಹಾಗು ನಿಘಂಟುಗಳ ರಚನೆಯಾಗಿದ್ದಿರಬಹುದು. ಅವುಗಳಲ್ಲಿ ಯಾವುವೂ ಇಲ್ಲಿಯ ವರೆಗೆ ಸಿಕ್ಕಿಲ್ಲ. ಪಾಣಿನಿಯು ವ್ಯಾಕರಣ ಗ್ರಂಥವನ್ನು ಮೊಟ್ಟಮೊದಲು ರಚಿಸಿ ಭಾರತದ ಮೊಟ್ಟ ಮೊದಲ ವೈಯಾಕರಣಿ ಎನಿಸಿಕೊಂಡಿದ್ದಾನೆ. ಅದೂ ಅಲ್ಲದೆ, ಭಾರತೀಯ ಭಾಷಾವಿಜ್ಞಾನದ ಜನಕನೆಂದು ಕರೆಸಿಕೊಂಡಿದ್ದಾನೆ. ಇವನ ವಿದ್ವತ್ಪೂರ್ಣ ಗ್ರಂಥವನ್ನು ಅಭ್ಯಸಿಸಿದ ಇತರ ವಿದ್ವಾಂಸರು ಇದನ್ನು ತುಂಬ ಪ್ರಶಂಸಿಸಿದ್ದಾರೆ. ಇಂತಹ ಅಪೂರ್ವವಾದ ವ್ಯಾಕರಣವನ್ನು ರಚಿಸಿದ ಕೀರ್ತಿ ಭಾರತೀಯನಾದ ಪಾಣಿನಿಗೆ ಸಲ್ಲುತ್ತದೆ. ಆ ಸಮಯದಲ್ಲಿ ಜಗತ್ತಿನ ಯಾವ ಭಾಷೆಯಲ್ಲಿಯೂ, ಯಾವ ಮೂಲೆ ಯಲ್ಲಿಯೂ ಇಂತಹ ವ್ಯಾಕರಣ ಗ್ರಂಥದ ರಚನೆಯಾಗಿರಲಿಲ್ಲ. ಈ ಕಾರಣದಿಂದ, ಜಗತ್ತಿನ ಭಾಷಾವಿಜ್ಞಾನ ಕ್ಷೇತ್ರಕ್ಕೆ ಪಾಣಿನಿಯು ಅಮೂಲ್ಯವಾದ ವ್ಯಾಕರಣಗ್ರಂಥವನ್ನು ಸಂಸ್ಕೃತ ಭಾಷೆಯಲ್ಲಿ ರಚಿಸಿ ಅಪೂರ್ವ ಕಾಣಿಕೆಯನ್ನಾಗಿ ನೀಡಿದ್ದಾನೆ. ಇದು ಭಾರತೀಯರೆಲ್ಲರೂ ಹೆಮ್ಮೆ ಪಡುವಂತಹ ಸಂಗತಿಯೇ ಸರಿ. ಯಾಸ್ಕ ಮಹಾಮುನಿಯ ನಿಘಂಟು ಬಹು ಪ್ರಾಚೀನವಾದುದು, ಉಪಯುಕ್ತವಾದುದು. ಈ ಮಾದರಿಯಲ್ಲಿಯೇ ಅನೇಕ ನಿಘಂಟುಗಳ ರಚನೆಯಾಗಿರಬಹುದು. ಆದರೆ ದೊರೆತಿರುವ ಬಹು ಪ್ರಾಚೀನ ನಿಘಂಟು 'ನಿರುಕ್ತ' ಒಂದೇ ಆಗಿದೆ. ಪತಂಜಲಿಯು ಪಾಣಿನಿ ಸ್ಪಷ್ಟಪಡಿಸದೆ ಕೇವಲ ಹೆಸರಿಸಿದ ಎಷ್ಟೋ ವಿಚಾರಗಳನ್ನು ತನ್ನ ವ್ಯಾಕರಣದಲ್ಲಿ ವಿಶದಪಡಿಸಿ, ಕೀರ್ತಿಯನ್ನು ಸಂಪಾದಿಸಿ ಕೊಂಡಿದ್ದಾನೆ. ಈ ಮಾದರಿಯಲ್ಲಿಯೇ ಇತರ ಭಾರತೀಯ ಭಾಷೆಗಳಲ್ಲಿ ವ್ಯಾಕರಣಗ್ರಂಥ ಹಾಗೂ ನಿಘಂಟುಗಳ ರಚನೆ ನಡೆಯಿತು. ಪಾಣಿನಿಯನ್ನೆ ಅನುಸರಿಸಿ ಪಾಶ್ಚಿಮಾತ್ಯರು ತಮ್ಮ ತಮ್ಮ ಭಾಷೆಗಳಲ್ಲಿ ವ್ಯಾಕರಣ ಗ್ರಂಥಗಳನ್ನು ರಚಿಸತೊಡಗಿದರು.. ಹೀಗೆ ಭಾರತದಲ್ಲಿ ಹುಟ್ಟಿದ ಭಾಷಾವಿಜ್ಞಾನ ಈ ದಿನ ಜಗತ್ತಿನ ನಾನಾ ದೇಶಗಳಲ್ಲಿ ಬೆಳೆದು ಕಂಗೊಳಿಸುತ್ತಿದೆ. ಇಂತಹ ಭಾಷಾ ವಿಜ್ಞಾನದ ಪ್ರಗತಿಗೆ ಭಾರತೀಯ ಭಾಷಾ ವಿಜ್ಞಾನಿಗಳ ಕೊಡಿಗೆ ಅಪಾರವಾದುದು ಎನ್ನಬಹುದಾಗಿದೆ. ಈ ಮಾರ್ಗವನ್ನೇ ಅನುಸರಿಸಿದ ಕನ್ನಡ ಪಂಡಿತರು ಅನೇಕ ವ್ಯಾಕರಣ ಗ್ರಂಥಗಳನ್ನು ರಚಿಸಿದ್ದಾರೆ: ಕನ್ನಡ ಭಾಷಾ ಅಧ್ಯಯನಕ್ಕೆ ಸುಗಮಮಾರ್ಗವನ್ನು ಕಲ್ಪಿಸಿಕೊಟ್ಟ ಕೇಶಿರಾಜನ 'ಶಬ್ದಮಣಿದರ್ಪಣ' ಮತ್ತು ಶ್ರೀ ವಿಜಯಕೃತ 'ಕವಿರಾಜಮಾರ್ಗ' ಗ್ರಂಥಗಳು ಹೆಚ್ಚು ಕಡಿಮೆ ಈ ಹಾದಿಯನ್ನೇ ಅನುಸರಿಸುವಂತಿವೆ. ಕನ್ನಡದ ಅನೇಕ ಕವಿಗಳು ಈ ಜಾಡನ್ನು ಹಿಡಿದು ಮುಂದೆ ಬಂದು ಪೂರ್ಣ ಪಾಂಡಿತ್ಯವನ್ನು ಸಂಪಾದಿಸಿ ಬಹು ಜಾಣ್ಮೆಯಿಂದ ಭಾಷಾ ಅಧ್ಯಯನ ಕಾರ್ಯವನ್ನು ಮುಂದುವರಿಸಿ ಅನೇಕ ಗ್ರಂಥ ಗಳನ್ನು ರಚಿಸಿ ಕನ್ನಡ ಜನತೆಗೆ, ಕನ್ನಡ ನುಡಿಗೆ ಅಪಾರವಾದ ಕೀರ್ತಿಯನ್ನು ತಂದಿದ್ದಾರೆ.

ಆಗಿನ ಕಾಲದಲ್ಲಿ ವ್ಯಾಕರಣಗ್ರಂಥಗಳೇ ಹೆಚ್ಚಿನ ಪ್ರಮಾಣದಲ್ಲಿ ದೊರೆಯುತ್ತವೆ: ಇವೆಲ್ಲ ಅಧಿಕ ವಾಗಿ ಪಾಣಿನಿಯ ವ್ಯಾಕರಣ ಸೂತ್ರವನ್ನೇ ಶಾಸ್ತ್ರೀಯವಾಗಿ ಅಭ್ಯಸಿಸಿ, ವಿಶ್ಲೇಷಿಸಿ, ವಿವರಿಸಿದಂತಹ ಗ್ರಂಥಗಳು. ಈಗ ದೊರೆತಿರುವ ಎಲ್ಲಾ ವ್ಯಾಕರಣಕಾರರಲ್ಲಿ ಭಾಷೆಯ ವಿವರಣಾತ್ಮಕ ವಿಧಾನದ ಕಡೆ ಗಮನವಿತ್ತೆ ವಿನಾ ಭಾಷೆಯ ತೌಲನಾತ್ಮಕ ಅಧ್ಯಯನದ ಕಡೆ ಅವರ ಗಮನವಿದ್ದಂತಿಲ್ಲ. ಭಾಷಾ ವಿಜ್ಞಾನ ಕ್ಷೇತ್ರದಲ್ಲಿ ಅತ್ಯಂತ ಜನಪ್ರಿಯವೆನಿಸಿಕೊಂಡಿರುವ ತೌಲನಾತ್ಮಕ ಪದ್ಧತಿ ಆ ಕಾಲದಲ್ಲಿ ಅಷ್ಟೊಂದು ಜನಪ್ರಿಯವೆನಿಸಿಕೊಂಡಿರಲಿಲ್ಲವೆಂದು ತೋರುತ್ತದೆ. ಭಾರತಕ್ಕೆ ಕ್ರೈಸ್ತಮತ ಪ್ರಚಾರಕ್ಕಾಗಿ ಬಂದ ಪಾಶ್ಚಿಮಾತ್ಯರು ಭಾರತೀಯ ಜ್ಞಾನ ಹಾಗೂ ಅಧ್ಯಯನದ ಇತಿಹಾಸದಲ್ಲಿ ಒಂದು ಹೊಸ ಅಧ್ಯಾಯ

ವನ್ನೇ ಆರಂಭಿಸಿದರು. ಈ ಮತ ಪ್ರಚಾರಕರು ದೇಶೀಯ ಜನರೊಡನೆ ಸಂಪರ್ಕವನ್ನು ಹೊಂದಲು ದೇಶೀಯ ಭಾಷೆಗಳ ಜ್ಞಾನ ಅತ್ಯಾವಶ್ಯಕವಾಗಿದ್ದ ಕಾರಣ ಆ ಭಾಷೆಗಳನ್ನು ಕಲಿಯತೊಡಗಿದರು. ಆ ದೇಶೀಯ ಭಾಷೆಗಳನ್ನು ಕಲಿಯುವುದರ ಜೊತೆಗೆ ಅವುಗಳ ಅಧ್ಯಯನ ಕಾರ್ಯವನ್ನು ಮುಂದುವರಿಸಿದರು. ಇದರ ಕಾರಣದಿಂದಾಗಿ ದೇಶೀಯ ಭಾಷಾಜ್ಞಾನ ಮತ್ತಷ್ಟು ಬೆಳಗೊಳ್ಳಲು ಸಾಧ್ಯವಾಯಿತು. ಅವುಗಳನ್ನು ವ್ಯಾಕರಣ ದೃಷ್ಟಿಯಿಂದ ಪರಿಶೀಲಿಸಿ ವ್ಯವಹಾರಕ್ಕೆ ಅಗತ್ಯವಾದ ವ್ಯಾಕರಣವನ್ನು ಸಿದ್ಧಪಡಿಸಿಕೊಂಡರು. ವ್ಯವಹಾರಿಕ ಕಾರಣಗಳಿಂದ ಕಲಿತ ವಿವರಣಾ ಕಾರ್ಯವನ್ನು ನಡೆಸಿದ ಭಾಷೆಗಳಲ್ಲಿ ಕನ್ನಡವೂ ಒಂದಾಗಿದೆ. ಅದು ಅಲ್ಲದೆ, ಈ ಮತಪ್ರಚಾರಕರು ಭಾರತದ ಸಾಹಿತ್ಯ ಸಂಪನ್ನ ಭಾಷೆಯಾದ ಸಂಸ್ಕೃತವನ್ನು ಆಳವಾಗಿ ಅಧ್ಯಯಿಸಿ ಇದನ್ನು ತೌಲನಾತ್ಮಕ ಅಧ್ಯಯನಕ್ಕೆ ಒಳಪಡಿಸಿದರು. ಇದರ ಪರಿಣಾಮದಿಂದಾಗಿ ಕೆಲವು ವಿದ್ವಾಂಸರು ತೌಲನಾತ್ಮಕ ದೃಷ್ಟಿಯಿಂದ ಭಾಷಾ ಅಧ್ಯಯನ ಕಾರ್ಯವನ್ನು ಭಾರತ ಹಾಗು ಇತರ ದೇಶಗಳಲ್ಲಿ ಆರಂಭಿಸಿದರು. ಜಗತ್ತಿನ ಅನೇಕ ಭಾಷೆಗಳಲ್ಲಿ ಈ ತೆರನಾದ ಅಧ್ಯಯನ ಆರಂಭಗೊಂಡು ಅನೇಕ ತೌಲನಾತ್ಮಕ ವ್ಯಾಕರಣ ಗ್ರಂಥಗಳು ಬೆಳಕಿಗೆ ಬಂದುವು. ಹೀಗೆ ದಿನೇ ದಿನೇ ತೌಲನಾತ್ಮಕ ಅಧ್ಯಯನ ಕಾರ್ಯ ಭಾಷಾ ವಿಜ್ಞಾನ ಕ್ಷೇತ್ರದಲ್ಲಿ ಜನಪ್ರಿಯತೆಯನ್ನು ಗಳಿಸಿಕೊಂಡು ಸಮಸ್ತ ಭಾಷೆಗಳ ದೀರ್ಘ ಇತಿಹಾಸದಲ್ಲಿ ವ್ಯಾಕರಣ ಸಂಬಂಧವಾದ ಬದಲಾವಣೆಗಳು ವಿವರಣಾತ್ಮಕ ಹಾಗು ತೌಲನಾತ್ಮಕ ವಿಧಾನಗಳಲ್ಲಿ ಕಾಣಿಸಿಕೊಂಡುವು. ಈ ಎಲ್ಲಾ ಗ್ರಂಥಗಳು ಪಾಶ್ಚಿಮಾತ್ಯ ವ್ಯಾಕರಣ ಸಂಪ್ರದಾಯ ಮತ್ತು ವೈಜ್ಞಾನಿಕ ವಿಧಾನದ ಮಾದರಿಯನ್ನು ಹಿಡಿದು ಮುಂದುವರಿಯಲು ಸಾಧ್ಯವಾಯಿತು. ಜೋನ್ಸ್, ಬಾಪ್ ಮುಂತಾದ ವಿದ್ವಾಂಸರು ಸಂಸ್ಕೃತ ಭಾಷೆಯನ್ನು ಆಳವಾಗಿ ಅಧ್ಯಯಿಸಿ ಅದನ್ನು ಇತರ ಭಾಷೆಗಳೊಡನೆ ಹೋಲಿಸಿ ಅವುಗಳ ಸಾಮ್ಯತೆ ಹಾಗು ಅಸಾಮ್ಯತೆಗಳನ್ನು ಕಂಡುಕೊಂಡರು. ತೌಲನಾತ್ಮಕ ವಿಧಾನವನ್ನು ಪ್ರಚಾರಕ್ಕೆ ತರುವ ಸಾಹಸಕಾರ್ಯವನ್ನು ಆಗಲೇ ಮಾಡಿದ್ದರು. ಅಂದಿನಿಂದ ಭಾಷಾ ವಿಜ್ಞಾನ ಕ್ಷೇತ್ರದಲ್ಲಿ ಹಳೆಯ ವ್ಯಾಕರಣ ಸಂಪ್ರದಾಯದ ಜೊತೆಗೆ ಈ ಹೊಸ ವಿಧಾನ ಕೂಡಿಕೊಂಡು ಜನಪ್ರಿಯತೆಯನ್ನು ಗಳಿಸಿಕೊಂಡಿತು.

ಈ ತೌಲನಾತ್ಮಕ ಭಾಷಾ ಅಧ್ಯಯನ ಕ್ರಮ ಭಾಷಾವಿಜ್ಞಾನ ಕ್ಷೇತ್ರದಲ್ಲಿ ಕಾಣಿಸಿಕೊಂಡ ಮೇಲೆ ಜಗತ್ತಿನ ನಾನಾ ಭಾಷೆಗಳಲ್ಲಿನ ವಿದ್ವಾಂಸರುಗಳು ಅವರವರ ಭಾಷೆಗಳನ್ನು ಈ ಕ್ರಮದಲ್ಲಿ ಅಧ್ಯಯನ ನಡೆಸಿ ಅನೇಕ ತೌಲನಾತ್ಮಕ ವ್ಯಾಕರಣಗ್ರಂಥಗಳನ್ನು, ಲೇಖನಗಳನ್ನು ಬರೆದು ಭಾಷಾವಿಜ್ಞಾನ ಕ್ಷೇತ್ರ ಮತ್ತಷ್ಟು ವಿಶಾಲಗೊಳ್ಳಲು ಕಾರಣರಾದರು. ಆ ಹೊತ್ತಿಗಾಗಲೆ ಕನ್ನಡ ಭಾಷೆ ಸಂಸ್ಕೃತಜನ್ಯವೆಂಬ ಭಾವನೆ ವಿದ್ವಾಂಸರಲ್ಲಿ ಬೇರೂರಿದ್ದಿತು. ಈ ಕನ್ನಡ ಭಾಷೆಯನ್ನು ಸಂಸ್ಕೃತ ಭಾಷೆಯೊಡನೆ ಹೋಲಿಸಿ ಅದರ ತೌಲನಾತ್ಮಕ ಅಧ್ಯಯನ ಕಾರ್ಯ ಮುಂದುವರಿಸಿದಾಗ ಇದು ಸಂಸ್ಕೃತಜನ್ಯವಲ್ಲವೆಂಬ ನಿರ್ಧಾರಕ್ಕೆ ಕೆಲವು ವಿದ್ವಾಂಸರು ಬಂದು ನಿಂತರು. ಹಾಗೆಯೇ ತೆಲುಗು, ತಮಿಳು, ಕನ್ನಡ ಮತ್ತು ಮಲಯಾಳಂ ಇತ್ಯಾದಿ ಭಾಷೆಗಳನ್ನು ದ್ರಾವಿಡೇತರ ಭಾಷೆಗಳೊಡನೆ ಹೋಲಿಸಿದಾಗ ಅವು ಒಂದು ಸ್ವತಂತ್ರ ಭಾಷಾ ವರ್ಗಕ್ಕೆ ಸೇರಿದುವುಗಳು ಎಂಬ ಭಾವನೆ ವಿದ್ವಾಂಸರಲ್ಲಿ ಮೂಡಿತು. ಭಾಷೆಗಳ ವರ್ಗೀಕರಣ ಆಗ ಒಂದು ದೊಡ್ಡ ಸಮಸ್ಯೆಯಾಗಿಯೇ ಉಳಿದಿದ್ದಿತು. ಇದನ್ನು ಸುಲಭವಾಗಿ ಪರಿಹರಿಸಲು ಈ ತೌಲನಾತ್ಮಕ ಭಾಷಾ ಅಧ್ಯಯನ ಕ್ರಮ ಬಹು ಉಪಕಾರಿಯಾಗಿ ಕಾಣಿಸಿಕೊಂಡಿತು. ಹೀಗೆ ಈ ಕ್ರಮದ ಭಾಷಾ ಅಧ್ಯಯನದ ಫಲದಿಂದಾಗಿ ಭಾಷಾ ಸಂಬಂಧಿಯಾದ ಹಲವಾರು ವಿಚಾರಗಳು ಬೆಳಕಿಗೆ ಬಂದುವು. ಕುಮಾರಿಲ ಭಟ್ಟ, ಹೇಮಚಂದ್ರ, ಕೋಲ್‌ಬ್ರೂಕ್, ವಿಲ್ಸನ್, ಪೋಪ್ ಮುಂತಾದ ವಿದ್ವಾಂಸರುಗಳ ದ್ರಾವಿಡ ಭಾಷೆಗಳು ಸಂಸ್ಕೃತಜನ್ಯವೆಂಬ ಭಾವನೆ ನಿರ್ನಾಮವಾಗಲು ಈ ತೌಲನಾತ್ಮಕ ಭಾಷಾ ಅಧ್ಯಯನ ವಿಧಾನದ ಬಿರುಗಾಳಿಯನ್ನೇ ಎಬ್ಬಿಸುವಂತಹ ಸಾಹಸ ಕಾರ್ಯವನ್ನು ಎಲ್ಲಿಸ್, ರಾಸ್ಮಸ್ ರಾಸ್ಕ್ ಮತ್ತು ಕಾಲ್ಡ್‌ವೆಲ್ ಮುಂತಾದ ವಿದ್ವಾಂಸರುಗಳು ನಡೆಸಿ ಕೀರ್ತಿಯನ್ನು ಸಂಪಾದಿಸಿಕೊಂಡಿದ್ದಾರೆ. ಇಲ್ಲಿಯ ವರೆಗೂ [illegible] ಭಾಷೆ ಸಂಸ್ಕೃತಜನ್ಯವೆಂಬ ಭಾವನೆ ವಿದ್ವಾಂಸರನ್ನು ಕಾಡುತ್ತಲೇ ಬಂದಿದ್ದಿತು. ಈ ದಿಕ್ಕಿನಲ್ಲಿ [illegible]ವಾದ ಅಧ್ಯಯನಕಾರ್ಯ ನಡೆದು ಹಲವಾರು ಗ್ರಂಥ ಹಾಗೂ ಲೇಖನಗಳು ಹೊರಬಂದುವು. ಇದರಿಂದ ದ್ರಾವಿಡ ಭಾಷಾಕ್ಷೇತ್ರಕ್ಕೆ ಮಹತ್ ಉಪಕಾರವಾಯಿತಲ್ಲದೆ ಕನ್ನಡ ಭಾಷಾಶಾಸ್ತ್ರ ಸಾಕಷ್ಟು ಪ್ರಗತಿಗೊಳ್ಳಲು ಕಾರಣವಾಯಿತೆನ್ನಬಹುದಾಗಿದೆ.

ದ್ರಾವಿಡ ಭಾಷೆ ಸಂಸ್ಕೃತ ಭಾಷೆಯಿಂದ ಬೇರೆಯಾಗಿಯೇ ಭಾವಿಸಲ್ಪಟ್ಟಿರಲಿಲ್ಲ. ದ್ರಾವಿಡ ಮೇಲೆ ಕೆಲವು ವಿದ್ವಾಂಸರಿಗೆ ಪ್ರಾಕೃತ ಭಾಷೆಯಿಂದ ಬೇರೆಯಾಗಿರುವುದೆಂಬ ಅಭಿಪ್ರಾಯವಿತ್ತು. ಒಂದು ಅಥವಾ ಎರಡು ಕಡೆಗಳಲ್ಲಿ ತಿಳಿವಳಿಕೆ ಕಂಡುಬರುವುದಿಲ್ಲ. ಪ್ರಾಚೀನರಿಂದ ಭಾರತಕ್ಕೆ 1796ರಲ್ಲಿ ಎಲ್ಲೀಸ್ ಎಂಬುವನು ಅಧಿಕಾರಿಯಾಗಿ ಬಂದು ದಕ್ಷಿಣ ಭಾರತದ ಹಲವಾರು ಕಡೆಗಳಲ್ಲಿ ಬೇರೆ ಬೇರೆ ಹುದ್ದೆಗಳಲ್ಲಿದ್ದುಕೊಂಡು ಸ್ಥಳೀಯ ಭಾಷೆಗಳನ್ನು ಅಧ್ಯಯನ ಮಾಡಿಕೊಂಡನು. ಭಾರತಕ್ಕೆ ಬಂದು ದ್ರಾವಿಡ ಭಾಷೆಗಳ ಅಧ್ಯಯನ ಮಾಡಿಕೊಂಡ ವಿದ್ವಾಂಸರಲ್ಲಿ ಇವನೇ ಮೊಟ್ಟಮೊದಲಿಗನು. ದ್ರಾವಿಡ ಭಾಷೆಗಳಾದ ತಮಿಳು, ಕನ್ನಡ, ತೆಲುಗು ಮತ್ತು ಮಲೆಯಾಳಂಗಳನ್ನು ಅಧ್ಯಯನ ಮಾಡಿ ಅವು ಸಂಸ್ಕೃತದಿಂದ ಬೇರೆಯಾಗಿದ್ದ ಮೂಲಲಕ್ಷಣಗಳನ್ನು ಹೊಂದಿರುವ ಅಂಶವನ್ನು ಘೋಷಿಸಿದ್ದನು. ಇದೇ ಕಾಲದಲ್ಲಿ ಮದರಾಸಿನ ರಾಸ್ಕ್, ಬ್ರೌನ್ ಮತ್ತು ಕಾಲ್ಡ್‌ವೆಲ್ ಮುಂತಾದ ವಿದ್ವಾಂಸರುಗಳು ದ್ರಾವಿಡ ಭಾಷೆಗಳು ಸಂಸ್ಕೃತಜನ್ಯವಲ್ಲವೆಂದು ಎಲ್ಲೀಸ್‌ನ ವಾದವನ್ನು ಪ್ರತಿಪಾದಿಸುತ್ತಾ ಅವುಗಳ ಸಂಬಂಧವನ್ನು ಸಿಥಿಯನ್ ಭಾಷಾ ವರ್ಗದೊಡನೆ ಸ್ಪಷ್ಟಪಡಿಸಿದರು. ಇದನ್ನು ಆಳವಾಗಿ ಅಧ್ಯಯನ ನಡೆಸಿದ ಕೆಲವು ವಿದ್ವಾಂಸರುಗಳು ಲೇಖನಗಳನ್ನು, ಗ್ರಂಥಗಳನ್ನು ರಚಿಸಿ ಪ್ರಕಟಿಸಿ ಹಲವಾರು ವಿಚಾರಗಳನ್ನು ಬೆಳಕಿಗೆ ತಂದಿದ್ದಾರೆ. ಕನ್ನಡ ಭಾಷಾಶಾಸ್ತ್ರಕ್ಕೆ ಇವು ನೇರವಾಗಿ ಸಂಬಂಧಪಡದಿದ್ದರೂ ಎಷ್ಟೋ ವಿಚಾರಗಳು ಈ ದಿಕ್ಕಿನಲ್ಲಿ ಗಮನಾರ್ಹವಾಗಿವೆ, ಉಪಯೋಗಕಾರಿಯಾಗಿವೆ. ಕನ್ನಡ ಭಾಷೆಯ ಒಂದು ವ್ಯಾಕರಣಗ್ರಂಥವನ್ನು 1838ರಲ್ಲಿ ಶ್ರೀರಂಗಪಟ್ಟಣದ ಕೃಷ್ಣಮಾಚಾರ್ಯರು ರಚಿಸಿ ಪ್ರಕಟಿಸಿದರು. ಅದೇ 'ಹೊಸಗನ್ನಡ ನುಡಿಗನ್ನಡಿ'. ಕೇಶಿರಾಜನ 'ಶಬ್ದಮಣಿದರ್ಪಣ' ಹೊರತು ಬೇರೆ ಹೊಸಗನ್ನಡ ಭಾಷೆಯಲ್ಲಿ ಇಲ್ಲಿಯ ತನಕ ಅಷ್ಟೊಂದು ಉಪಯುಕ್ತವಾದ ಗ್ರಂಥ ಹೊರಬಂದಿರಲೇ ಇಲ್ಲ. ಈ ವ್ಯಾಕರಣಗ್ರಂಥ ಕಾಲ್ಡ್‌ವೆಲ್ ಮಹಾಶಯನಿಗಿಂತ 18 ವರ್ಷ ಮೊದಲೇ ಹೊರಬಂದಿತು. ಇಲ್ಲಿ ಕೃಷ್ಣಮಾಚಾರ್ಯನು ಸಂಸ್ಕೃತ ಹಾಗು ದ್ರಾವಿಡ ಭಾಷೆಗಳ ವ್ಯಾಕ್ತಿ ಸಂಬಂಧವನ್ನು ಸ್ಪಷ್ಟಪಡಿಸುತ್ತಾ ಅವು ಒಂದು ಸ್ವತಂತ್ರ ಭಾಷಾವರ್ಗಕ್ಕೆ ಸೇರಿದ ಭಾಷೆಗಳು ಎಂದು ಕರೆದನು. ಇವನ ವ್ಯಾಕರಣ ಅನುಬಂಧದಲ್ಲಿ ಪ್ರಶ್ನೋತ್ತರ ರೂಪದಲ್ಲಿದೆ. ತೆಲುಗು ಭಾಷೆಯಿಂದಲೇ ಇತರ ದ್ರಾವಿಡ ಭಾಷೆಗಳು ಹುಟ್ಟಿವೆ ಎಂಬ ಅಭಿಪ್ರಾಯಕ್ಕೆ ಬಂದು ಅವುಗಳ ಸ್ಪಷ್ಟೀಕರಣಕ್ಕಾಗಿ ಕೆಲವು ಶಬ್ದ ಕಡೆಗಳ ಪಟ್ಟಿಯನ್ನು ಈ ಗ್ರಂಥದ ಕೊನೆಯಲ್ಲಿ ಸೇರಿಸಿದ್ದಾನೆ. ಈ ಸಾಮಗ್ರಿ ತೌಲನಾತ್ಮಕ ಅಧ್ಯಯನಕ್ಕೆ ತುಂಬ ಉಪಯುಕ್ತವಾದುದಾಗಿದೆ. ಇದೇ ವ್ಯಾಕರಣ ಗ್ರಂಥದ ರೀತಿಯಲ್ಲಿ ರಾಮಚಂದ್ರಯ್ಯ "ವಾಗ್ಭೂಷಣ" ಎಂಬ ಗ್ರಂಥವನ್ನು ಬರೆದು ಪ್ರಕಟಿಸಿದರು. ಇದೂ ಕೂಡ ಪ್ರಶ್ನೋತ್ತರ ರೂಪದಲ್ಲಿ ದೊರೆಯುತ್ತದೆ. ಇದು ಆಧುನಿಕದಲ್ಲಿದ್ದವರಿಂದ ಬಹುವೇಗ ಜನಪ್ರಿಯತೆಯನ್ನು ಗಳಿಸಿಕೊಂಡಿತು.

ಅನಂತರ ದ್ರಾವಿಡ ಭಾಷಾವಿಜ್ಞಾನದ ಜನಕನೆನಿಸಿಕೊಂಡಿರುವ ಕಾಲ್ಡ್‌ವೆಲ್ ಮಹಾಶಯನು ದ್ರಾವಿಡಭಾಷೆಗಳನ್ನು ಆಳವಾಗಿ ಅಭ್ಯಸಿಸಿ, ದಕ್ಷಿಣ ದ್ರಾವಿಡ ಭಾಷೆಗಳನ್ನು ಕುರಿತು ಒಂದು ತೌಲನಾತ್ಮಕ ವ್ಯಾಕರಣವನ್ನೇ ಬರೆದು 1856ರಲ್ಲಿ ಪ್ರಕಟಿಸಿದನು. ಇದರಿಂದ ದ್ರಾವಿಡ ಭಾಷಾ ಅಧ್ಯಯನ ಕ್ರಮ ಮತ್ತೊಂದು ಮೆಟ್ಟಿಲು ಮೇಲೆ ಬಂದಂತಾಯಿತು. 1838ರಲ್ಲಿ ಕಾಲ್ಡ್‌ವೆಲ್‌ನು ಬಿಷಪ್ ಆಗಿ ಮತ ಪ್ರಚಾರಕ್ಕಾಗಿ ಭಾರತಕ್ಕೆ ಬಂದನು. ಇವನು ಹೆಚ್ಚು ಕಾಲವನ್ನು ಮದರಾಸಿನ ತಿನ್ನವೆಲ್ಲಿಯಲ್ಲಿಯೇ ಕಳೆದನು. ಅಲ್ಲಿ ತನ್ನ ಮತಪ್ರಚಾರಕ್ಕೆ ದೇಶೀಯ ಭಾಷಾ ಸಂಪರ್ಕ ಅತ್ಯಾವಶ್ಯಕವೆನಿಸಿದ ಕಾರಣ ತಮಿಳು ಭಾಷೆಯನ್ನು ಕಲಿತು ಆಳವಾದ ಅಧ್ಯಯನ ನಡೆಸಿದನು. ಈ ಭಾಷೆಯೊಡನೆ ಇತರ ದ್ರಾವಿಡ ಭಾಷೆಗಳನ್ನು ಹೋಲಿಸಿ ಅವುಗಳ ಪರಸ್ಪರ ಸಂಬಂಧವನ್ನು ಸಂಪಾದಿಸಿ ಒಂದು ವ್ಯಾಕರಣ ಗ್ರಂಥವನ್ನು ರಚಿಸಿದನು. ಇದು ಈಗಲೂ ತುಂಬ ಉಪಯುಕ್ತಗ್ರಂಥವಾಗಿ ಕಾಣಿಸಿಕೊಳ್ಳುತ್ತಿದೆ. ಆಗಿನ ಕಾಲಕ್ಕಾಗಲೇ ಹಲವಾರು ಪಾಶ್ಚಿಮಾತ್ಯ ವಿದ್ವಾಂಸರುಗಳು ಭಾರತೀಯ ವಿವಿಧ ಭಾಷೆಗಳ ಬಗ್ಗೆ ಹೆಚ್ಚು ಆಸಕ್ತಿಯಿಂದ ಬಹಳಷ್ಟು ಕೆಲಸ ಮಾಡಿ ಅನೇಕ ಗ್ರಂಥಗಳನ್ನು ಪ್ರಕಟಿಸಿದ್ದರು. ಗುಂಡರ್ಟ್, ಬ್ರೌನ್, ಜಾನ್ ಮ್ಯಾಕ್ಸಿಕನ್, ಎಲ್ಲಿಸ್, ಕ್ಯಾರಿ ಮುಂತಾದವರ ಗ್ರಂಥಗಳನ್ನು ಆಳವಾಗಿ ಅಧ್ಯಯನ ನಡೆಸಿ, ಎಲ್ಲಿಸ್, ರಾಸ್‌ಮನ್ ರಾಸ್ಕ್, ಕೃಷ್ಣಮಾಚಾರ್ಯ ಮುಂತಾದವರ ಹೇಳಿಕೆಗಳನ್ನು ಆಧಾರವಾಗಿರಿಸಿಕೊಂಡು ಅವುಗಳನ್ನು

ಪೂರ್ಣವಾಗಿ ಗಮನಿಸಿ ದ್ರಾವಿಡ ಭಾಷೆಗಳ ಜ್ಞಾತಿ ಸಂಬಂಧವನ್ನು ಕಂಡುಕೊಂಡು. ಅವುಗಳು ಸಂಸ್ಕೃತ ಭಾಷಾಜನ್ಯವಲ್ಲವೆಂದು ಪ್ರತಿಪಾದಿಸುತ್ತಾ ಅವುಗಳ ಸಂಬಂಧವನ್ನು ಸಿಥಿಯನ್ ಭಾಷಾ ವರ್ಗದೊಡನೆ ಸ್ಥಾಪಿಸುವ ಯತ್ನ ನಡೆಸುತ್ತಲೇ ಕೊನೆಗೆ ಈ ದ್ರಾವಿಡ ಭಾಷೆಗಳು ಒಂದು ಸ್ವತಂತ್ರ ಭಾಷಾ ವರ್ಗಕ್ಕೆ ಸೇರುತ್ತವೆ ಎಂಬುದನ್ನು ಕಾಲ್ಡ್‌ವೆಲ್‌ನು ಕೆವಕ ನೋಡಿದನು. ಇವನ ಗ್ರಂಥ ದ್ರಾವಿಡ ಭಾಷಾ ವಿಜ್ಞಾನಕ್ಕೂ ಅಲ್ಲದೆ ಕನ್ನಡ ಭಾಷಾ ಅಧ್ಯಯನಕ್ಕೂ ಉಪಯುಕ್ತವಾದುದಾಗಿದೆ. ಇದನ್ನು ಪೂರ್ಣವಾಗಿ ಅಭ್ಯಸಿಸಿದ ಪ್ರೋ. ದೇ. ಜವರೇಗೌಡ, ಪ್ರೊ. ಮರಿಯಪ್ಪ ಭಟ್ಟ, ಪ್ರೊ. ಆರ್. ಸಿ. ಹಿರೇಮಠ ಮತ್ತು ಪ್ರೊ. ಹಾ. ಮಾ. ನಾಯಕ್ ಮುಂತಾದವರು ಇದು ದ್ರಾವಿಡ ಭಾಷಾವಿಜ್ಞಾನದ ಬೈಬಲ್ಲು ಎಂದು ಕರೆದಿದ್ದಾರೆ: ಇವನನ್ನು ದ್ರಾವಿಡ ಭಾಷಾ ವಿಜ್ಞಾನದ ಜನಕನೆಂದು ಹೇಳಿ ತುಂಬ ಮೆಚ್ಚಿಕೊಂಡಿದ್ದಾರೆ. ಇವನಿಗೆ ಕನ್ನಡ, ತೆಲುಗು, ತುಳು ಮತ್ತು ಮಲೆಯಾಳಂ ಭಾಷೆಗಳ ಜ್ಞಾನ ತಮಿಳು ಭಾಷೆಯಷ್ಟಿಲ್ಲದಿದ್ದರೂ ತನ್ನ ಗ್ರಂಥದಲ್ಲಿ ನಿರೂಪಿಸಿರುವ ವಿಚಾರಗಳು ತುಂಬ ವಿಚಾರಪೂರ್ಣ ಹಾಗು ಗಮನಾರ್ಹವಾಗಿದೆ. ಈ ಗ್ರಂಥದಲ್ಲಿ ಕಂಡುಬರುವ ಅವನ ಭಾಷಾ ವಿಶ್ಲೇಷಣ ವಿಧಾನ, ನಿರೂಪಣಾಕ್ರಮ, ಭಾಷಾ ಸೊಗಸು ಸಾಮಾನ್ಯವಲ್ಲ. ಆ ಕಾಲಕ್ಕೆ ಅತನ ಸಾಹಸ, ಸಾಧನೆ ಅತ್ಯದ್ಭುತವಾದುದು. ತನಗಿಂತ ಹಿಂದೆ ಈ ದ್ರಾವಿಡ ಭಾಷೆಗಳ ಬಗ್ಗೆ ಹೇಳಿರುವ ಎಲ್ಲಾ ವಿಚಾರಗಳನ್ನು ಖಂಡಿಸಿ ಎಲ್ಲಿಸ್, ರಾಸ್ಕ್, ಕೃಷ್ಣಮಾಚಾರ್ಯರ ಹೇಳಿಕೆಗಳನ್ನು ಪರಿಶೀಲಿಸಿ ಸ್ಪಷ್ಟಗೊಳಿಸುತ್ತಾ ಈ ಗ್ರಂಥವನ್ನು ರಚಿಸಿ ಕಾಲ್ಡ್‌ವೆಲ್‌ನು ದ್ರಾವಿಡ ಭಾಷಾವಿಜ್ಞಾನಕ್ಕೆ ಭದ್ರವಾದ ತಳಹದಿಯ ಹಾಕಿದ್ದಾನೆ ಎಂದರೆ ಅತಿಶಯೋಕ್ತಿಯಾಗಲಾರದು. ಇದರಿಂದ ಕನ್ನಡ ಭಾಷೆಯ ಅಧ್ಯಯನಕ್ಕೂ ಸಾಕಷ್ಟು ಸ್ಫೂರ್ತಿ ದೊರೆಯುತ್ತದೆ.

1871ರಲ್ಲಿ ಜರ್ಮನಿಯ ಮಿಷನರಿ ರೆವರೆಂಡ್ ಎಫ್. ಕಿಟ್ಟೆಲ್ ಮಹಾಶಯನು ಭಾರತಕ್ಕೆ ಬಂದು ಕನ್ನಡ ಭಾಷಾಕ್ಷೇತ್ರದಲ್ಲಿ ಅಪೂರ್ವವಾದ, ಅಮೋಘವಾದ ಕೆಲಸ ಮಾಡಿದ್ದಾನೆ. ಇವನು ಕೇಶಿರಾಜನ 'ಶಬ್ದಮಣಿದರ್ಪಣ'ವನ್ನು ಸಂಪಾದಿಸಿ ಅದನ್ನು ಪುನರ್ ಮುದ್ರಿಸುವುದರ ಜೊತೆಗೆ 1894ರಲ್ಲಿ ಕನ್ನಡಿಗರಿಗೆ ಹಿರಿಯ ಕಾಣಿಕೆಯಾಗಿ ಬಹುಪ್ರಸಿದ್ಧವಾದ ವಿದ್ವತ್ಪೂರ್ಣ ಕನ್ನಡ–ಇಂಗ್ಲಿಷ್ ಬೃಹದ್‌ಕೋಶವನ್ನು ನೀಡಿ ಕನ್ನಡಿಗರ ಮೆಚ್ಚುಗೆಗೆ ಪಾತ್ರನಾಗಿದ್ದಾನೆ. ಇಲ್ಲಿಯ ವರೆಗೆ ಈ ಕೋಶವನ್ನು ಮೀರಿಸುವ ಕೋಶ ಇನ್ನೂ ಬಂದಿಲ್ಲ. ಈ ದಿಕ್ಕಿನಲ್ಲಿ ಕನ್ನಡ ಭಾಷೆಗೆ ಕಿಟ್ಟೆಲ್ ಮಹಾಶಯನ ಸೇವೆ ಅಪಾರವಾದುದು. ಈ ನಿಘಂಟಿಗಾಗಿಯೇ ಟುಬಿಂಗನ್ ವಿಶ್ವವಿದ್ಯಾನಿಲಯವು ಇವನಿಗೆ ಡಾಕ್ಟರೇಟ್ ಪದವಿಯನ್ನು ನೀಡಿದ್ದಿತು. ಈಗ ಈ ನಿಘಂಟನ್ನು ಪರಿಷ್ಕರಿಸಿ ಪುನರ್ ಮುದ್ರಿಸುವ ಕಾರ್ಯ ಮದರಾಸ್ ವಿಶ್ವವಿದ್ಯಾನಿಲಯವು ಪ್ರೊ. ಮರಿಯಪ್ಪ ಭಟ್ಟರವರ ನೇತೃತ್ವದಲ್ಲಿ ಮುಗಿದಿದೆ. ಅಲ್ಲದೆ ಕಿಟ್ಟೆಲ್ ಮಹಾಶಯನು 1903ರಲ್ಲಿ 'AGrammar of the Kannada Language' ವ್ಯಾಕರಣಗ್ರಂಥವನ್ನು ರಚಿಸಿ ಪ್ರಕಟಿಸಿದನು. ಇದರಲ್ಲಿ ಕನ್ನಡಭಾಷೆಯ ಮೂರು ಅವಸ್ಥೆಗಳನ್ನು ಬಹು ಸೊಗಸಾಗಿ ಚಿತ್ರಿಸಲಾಗಿದೆ. ಹಳಗನ್ನಡ, ನಡುಗನ್ನಡ ಮತ್ತು ಹೊಸಗನ್ನಡಗಳ ವಿಕಾಸಕ್ರಮವನ್ನು ಸುಂದರವಾಗಿ ವಿವರಿಸಲಾಗಿದೆ. ಇವನು ಕನ್ನಡ ಭಾಷಾ ಅಧ್ಯಯನ ಚರಿತ್ರೆಯಲ್ಲಿ ಚಿರಸ್ಥಾಯಿಯಾಗಿ ಉಳಿಯುವ ಹಲವಾರು ಗ್ರಂಥ ಹಾಗು ಲೇಖನಗಳನ್ನು ಬರೆದು ಪ್ರಕಟಿಸಿದ್ದಾನೆ. ಪಾಶ್ಚಿಮಾತ್ಯ ದೇಶದಿಂದ ಬಂದ ಇವನು ವೈಯಕ್ತಿಕವಾಗಿ ಕನ್ನಡ ಭಾಷೆಯಲ್ಲಿ ಇಷ್ಟೊಂದು ವಿದ್ವತ್ಪೂರ್ಣ ಕೆಲಸ ಮಾಡಿದ್ದಾನೆಂದರೆ ತುಂಬ ಆಶ್ಚರ್ಯವಾಗದೆ ಇರದು.

1892ರಲ್ಲಿ ಧೋಂಡೋ ನರಸಿಂಹ ಮುಳಬಾಗಿಲ್ ಅವರು 'ನುಡಿಗಟ್ಟು' ಎಂಬ ವ್ಯಾಕರಣಗ್ರಂಥವನ್ನು ಬರೆದು ಪ್ರಕಟಿಸಿದರು. ಇದು ಕನ್ನಡಭಾಷೆಯನ್ನು ಮಾತೃಭಾಷೆಯನ್ನಾಗಿ ಕಲಿಯುವ ವಿದ್ಯಾರ್ಥಿಗಳ ದೃಷ್ಟಿಯಿಂದ ತುಂಬ ಉಪಯುಕ್ತವಾಗಿದೆ. ಇದು ಆಧುನಿಕ ಕನ್ನಡಭಾಷೆಯ ವ್ಯಾಕರಣದ ಕೈಪಿಡಿಯಂತೆ ಕಾಣುತ್ತಿದೆ. ಇದನ್ನು ಶಬ್ದಮಣಿದರ್ಪಣ, ಶಬ್ದಾನುಶಾಸನ ಮುಂತಾದ ಪ್ರಾಚೀನ ವ್ಯಾಕರಣ ಗ್ರಂಥಗಳನ್ನು ಆಧಾರವಾಗಿರಿಸಿಕೊಂಡು ರಚಿಸಲಾಗಿದೆ ಎಂದು ಸ್ವತಃ ಲೇಖಕರೇ ಹೇಳಿಕೊಂಡಿದ್ದಾರೆ. ಈ ಗ್ರಂಥದಲ್ಲಿ ಮುಖ್ಯವಾಗಿ ಅಕ್ಷರ ವಿಚಾರ, ಶಬ್ದ ವಿಚಾರ, ಹಾಗು ವಾಕ್ಯ ವಿಚಾರಗಳು ತುಂಬ ಸೊಗಸಾಗಿವೆ. ಇವರಲ್ಲಿ ಆಧುನಿಕ ಭಾಷಾ ವಿಜ್ಞಾನದ ಮೂರು ಸ್ತರಗಳು ಕಾಣುತ್ತಿರುವುದು ತುಂಬ ಆಶ್ಚರ್ಯಕರ ಸಂಗತಿ. ಇಲ್ಲಿ ವ್ಯಾಕರಣ ವಿಚಾರವನ್ನು ಚಿತ್ರಿಸುವ ಮೊದಲು ಭಾಷೆ, ವ್ಯಾಕರಣ ಅವುಗಳ ಲಕ್ಷಣ

ನಿರೂಪಣೆಯನ್ನು ಬಹು ಸೊಗಸಾಗಿ ಚಿತ್ರಿಸಿದ್ದಾರೆ. ಇಂತಹ ವಿವರಣೆಯನ್ನು ಕೊಟ್ಟ ಕನ್ನಡ ವೈಯಾಕರಣರು ಬಹುಶಃ ಇವರೊಬ್ಬರೇ ಇರಬೇಕೆಂದು ತೋರುತ್ತದೆ. ಕನ್ನಡಭಾಷೆಯ ಧ್ವನಿಗಳನ್ನು ಅವುಗಳ ಉಚ್ಚಾರಣೆಗನುಗುಣವಾಗಿ ವರ್ಣಿಸಿ ವರ್ಗೀಕರಿಸುವ ಪ್ರಯತ್ನ ಇಲ್ಲಿ ನಡೆದಿದೆ. ಪದಗಳನ್ನು ಅರ್ಥಯುಕ್ತ ಸಂಘಟಕಗಳೆಂದು ಗಣಿಸಿ ವಾಕ್ಯವೆಂದರೇನು ಎಂಬುದನ್ನು ಚರ್ಚಿಸಲಾಗಿದೆ. ಈ ಬಗೆಯ ವಿಚಾರಗಳು ಆಧುನಿಕ ಭಾಷಾವಿಜ್ಞಾನಿಗಳ ಹೇಳಿಕೆಗೆ ಬಹು ಹತ್ತಿರವಾಗಿ ನಿಲ್ಲುತ್ತವೆ. ಈ ದೃಷ್ಟಿಯಿಂದ 'ನುಡಿಗಟ್ಟು' ವ್ಯಾಕರಣವು ಕನ್ನಡ ಭಾಷಾ ಚರಿತ್ರೆಯಲ್ಲಿ ತುಂಬ ಗಮನಾರ್ಹವಾದುದು, ಕುತೂಹಲಕಾರಿಯಾದುದು ಮತ್ತು ಉಪಯುಕ್ತವಾದುದಾಗಿದೆ.

ಕನ್ನಡ ಭಾಷಾಶಾಸ್ತ್ರಕ್ಕೆ ನೇರವಾಗಿ ಒಳಪಡದಿದ್ದರೂ ಕೆಲವು ವಿದ್ವಾಂಸರುಗಳು ದ್ರಾವಿಡ ಭಾಷಾವಿಜ್ಞಾನದಲ್ಲಿ ಗಣನೀಯ ಕಾರ್ಯವನ್ನು ನಡೆಸಿ ಅಪಾರವಾದ ಕೀರ್ತಿಯನ್ನು ತಂದಿದ್ದಾರೆ. ಇವರನ್ನು ಇಲ್ಲಿ ಕೈಬಿಡುವಂತಿಲ್ಲ. ಇವರು ಕನ್ನಡ ಭಾಷಾ ಅಧ್ಯಯನಕ್ಕೆ ಸಂಬಂಧಿಸಿದ ಹಲವಾರು ವಿಚಾರಗಳನ್ನು ಬೆಳಕಿಗೆ ತಂದಿದ್ದಾರೆ. ಅವರುಗಳಲ್ಲಿ ಎರ್ನಾಕುಲಂನ ಎಲ್. ವಿ. ರಾಮಸ್ವಾಮಿ ಅಯ್ಯರ್ ಮತ್ತು ಎಸ್. ನಾರಾಯಣ ರಾವ್ ಬಹು ಮುಖ್ಯರು. ಎಲ್. ವಿ. ರಾಮಸ್ವಾಮಿ ಅಯ್ಯರ್‌ರವರು ಕನ್ನಡ ಧ್ವನಿಗಳ ಬಗ್ಗೆ ಅಭ್ಯಸಿಸಿ, ಕೆಲವು ಲೇಖನಗಳನ್ನು ಹೊರ ತಂದಿದ್ದಾರೆ. ಇವರಿಗೆ ತಮಿಳು, ತುಳು ಮತ್ತು ಹಳಗನ್ನಡ ಜ್ಞಾನ ಅಪಾರವಾಗಿದ್ದಿತು. ಇತರ ದ್ರಾವಿಡ ಭಾಷೆಗಳ ಜ್ಞಾನ ಅಷ್ಟೊಂದು ಇರಲಿಲ್ಲ. ದ್ರಾವಿಡ ಭಾಷೆಗಳನ್ನು ಕುರಿತು ಆಳವಾದ ಅಧ್ಯಯನ ನಡೆಸಿದ ಭಾರತೀಯರಲ್ಲಿ ಎಲ್. ವಿ. ರಾಮಸ್ವಾಮಿ ಅಯ್ಯರ್ ಅಗ್ರಗಣ್ಯರು. ಭಾಷಾಶಾಸ್ತ್ರಕ್ಕೆ ಸಂಬಂಧಿಸಿದ ಇವರ ಸುಮಾರು 90 ಲೇಖನಗಳು ಬೆಳಕಿಗೆ ಬಂದಿವೆ. ಆ ಮೇಲೆ ಅನಂತಪುರದ ಎಸ್. ನಾರಾಯಣ ರಾವ್ ಎಂಬುವರು ದ್ರಾವಿಡ ಧ್ವನಿಗಳ ಬಗ್ಗೆ ಅಪೂರ್ವವಾದ ಕೆಲಸ ಮಾಡಿ ದ್ರಾವಿಡ ಧ್ವನಿಗಳನ್ನು ಕುರಿತ ಒಂದು ಗ್ರಂಥವನ್ನೇ ಬರೆದು ಪ್ರಕಟಿಸಿದರು. ದ್ರಾವಿಡ ಭಾಷೆಗಳು ಪ್ರಾಕೃತ ಭಾಷೆಯಿಂದ ಜನ್ಯವಾದಂತಹವುಗಳು ಎಂಬ ವಾದವನ್ನು ಪ್ರತಿಪಾದಿಸಲು ಯತ್ನಿಸಿ ವಿಫಲರಾಗಿದ್ದಾರೆ. ಇದೇ ಹಾದಿಯಲ್ಲಿ ಮುಂದುವರಿದ ಕೊಳಕೆ ಪರಮೇಶ್ವರಯ್ಯ ಅವರು ಪ್ರಾಕೃತ ಹಳಗನ್ನಡಕ್ಕೆ ಮೂಲವಿದ್ದರೂ ಇರಬಹುದೆಂದು ಅನುಮಾನವನ್ನು ಸೂಚಿಸಿದ್ದಾರೆ. ಫ್ರಾನ್ಸ್ ದೇಶದ ಜೂಲ್ಸ್ ಬ್ಲಾಕ್‌ನು ದ್ರಾವಿಡ ಭಾಷಾವಿಜ್ಞಾನಕ್ಕೆ ತನ್ನದೆ ಆದ ಕಾಣಿಕೆಯನ್ನು ನೀಡಿದ್ದಾನೆ. ದ್ರಾವಿಡ ಭಾಷೆಗಳನ್ನು ಆಳವಾಗಿ ಅಧ್ಯಯನ ಮಾಡಿ ಅದರ ಫಲದಿಂದಾಗಿ 'The Grammatical Structure of Dravidian Languages' ಎಂಬ ಗ್ರಂಥವನ್ನೇ ಬರೆದು ಪ್ರಕಟಿಸಿದನು. ಕಾಲ್ಡ್‌ವೆಲ್ ಮಹಾಶಯನ ಅನಂತರ ದ್ರಾವಿಡ ಭಾಷಾವಿಜ್ಞಾನದ ಬಗ್ಗೆ ಹೊರ ಬಂದ ಉತ್ತಮ ಗ್ರಂಥಗಳಲ್ಲಿ ಇದು ಎರಡನೆಯದು. ಈ ಗ್ರಂಥದಲ್ಲಿ ಕನ್ನಡ ವ್ಯಾಕರಣಕ್ಕೆ ಸಂಬಂಧಿಸಿದ ಕೆಲವು ವಿಚಾರಗಳು ಸ್ಪಷ್ಟವಾಗಿ ಗೋಚರವಾಗುತ್ತವೆ. ಕನ್ನಡಭಾಷಾ ವಿಜ್ಞಾನ ಕ್ಷೇತ್ರ ಮತ್ತಷ್ಟು ವಿಶಾಲಗೊಳ್ಳಲು ಎಲ್. ವಿ. ರಾಮಸ್ವಾಮಿ ಅಯ್ಯರ್, ಎಸ್. ನಾರಾಯಣ ರಾವ್, ಕಾಲ್ಡ್‌ವೆಲ್ ಮತ್ತು ಜೂಲ್ಸ್ ಬ್ಲಾಕ್‌ರವರ ಸೇವೆ ಏನು ಕಡಿಮೆಯಲ್ಲ. ಕನ್ನಡ ಭಾಷೆಯ ಅಧ್ಯಯನಕ್ಕೆ ಹೇರಳವಾದ ಸಾಮಗ್ರಿಯನ್ನು ಸಂಗ್ರಹಿಸಿ ಮಹತ್ ಉಪಕಾರ ಮಾಡಿ ಕೀರ್ತಿಯನ್ನು ಪಡೆದುಕೊಂಡಿದ್ದಾರೆ. ಇಲ್ಲಿ ಎಷ್ಟೋ ವಿಚಾರಗಳು ಕನ್ನಡ ಭಾಷೆಗೆ ನೇರವಾಗಿ ಸಂಬಂಧ ಪಡದಿದ್ದರೂ ಇತರ ದ್ರಾವಿಡ ಭಾಷೆಗಳ ಜೊತೆಯಲ್ಲಿಯೇ ಕನ್ನಡಭಾಷೆಯನ್ನು ಕುರಿತು ವಿಚಾರ ಮಾಡಿರುವ ವ್ಯಾಕರಣ ವಿಚಾರಗಳು ಗಮನಾರ್ಹವಾಗಿವೆ, ಕುತೂಹಲಕಾರಿಯಾಗಿವೆ ಎನ್ನಬಹುದು.

1934ರಲ್ಲಿ ರಾವ್ ಬಹದ್ದೂರ್ ಆರ್. ನರಸಿಂಹಾಚಾರ್ಯರು 'History of Kannada Language' ಎಂಬ ಗ್ರಂಥವನ್ನು ಬರೆದು ಕನ್ನಡಿಗರಿಗೆ ಹಿರಿಯ ಕಾಣಿಕೆಯನ್ನಾಗಿ ನೀಡಿದ್ದಾರೆ. ಇವರಲ್ಲಿ ಪೂರ್ವದ ಹಳಗನ್ನಡವನ್ನು ಕುರಿತು ಚರ್ಚಿಸಿರುವ ಹೇರಳ ಸಾಮಗ್ರಿ ಇದೆ. ಕನ್ನಡ ಭಾಷೆಯ ಸ್ವರೂಪ ಮತ್ತು ಐತಿಹಾಸಿಕ ಬೆಳವಣಿಗೆಯನ್ನು ಬಹುವಾಗಿ ವರ್ಣಿಸಿ ಕನ್ನಡ ಭಾಷಾಚರಿತ್ರೆಗೆ ಮಹೋಪಕಾರವನ್ನು ಮಾಡಿದ್ದಾರೆ. ಇವರ ಮೊದಲನೆಯ ಅಧ್ಯಾಯದಲ್ಲಿ ದ್ರಾವಿಡ ಭಾಷೆಗಳ ದೃಷ್ಟಿಯಿಂದ ಕನ್ನಡ ಭಾಷೆಯ ಸ್ಥಾನಮಾನವನ್ನು ಕುರಿತು ಅವಲೋಕಿಸಲಾಗಿದೆ. ಕನ್ನಡ ವ್ಯಾಕರಣಕ್ಕೆ ಸಂಬಂಧಿಸಿದ ಕನ್ನಡ ವರ್ಣಮಾಲೆ, ಧ್ವನಿಗಳು ಮತ್ತು ಇತರ ವ್ಯಾಕರಣ ವಿಚಾರಗಳು ವಿಸ್ತಾರವಾಗಿ

ಕಂಡುಬರುತ್ತವೆ. ಇವರ ಈ ಗ್ರಂಥದ ನಾಲ್ಕನೆ ಅಧ್ಯಾಯದಲ್ಲಿ ಪದಕೋಶದ ಸ್ವರೂಪವನ್ನು,ಕೊನೆಯ ಅಧ್ಯಾಯದಲ್ಲಿ ಭಾಷಿಕ ಬದಲಾವಣೆಯ ವಿಚಾರವನ್ನು ಗಣನೀಯವಾಗಿ ಚಿತ್ರಿಸಲಾಗಿದೆ. ಪಂಜೆ ಮಂಗೇಶರಾಯರ 'ಕನ್ನಡ ಮೂಲ ವ್ಯಾಕರಣ' ಕನ್ನಡ ಭಾಷೆಯ ಮತ್ತೊಂದು ಉತ್ತಮ ವ್ಯಾಕರಣ. ಇದರಲ್ಲಿ ಮೂವತ್ತೊಂದು ಸರಳಪಾಠಗಳ ರೂಪದಲ್ಲಿ ಸಮಗ್ರ ಕನ್ನಡ ಭಾಷೆಯ ಸ್ವರೂಪವನ್ನು ವಿವರಿಸಲಾಗಿದೆ. ಇದನ್ನು ಮದರಾಸ್ ಪ್ರಾಂತ್ಯದ ವಿದ್ಯಾ ಇಲಾಖೆಯಲ್ಲಿಯ ಮೂರು ಮತ್ತು ನಾಲ್ಕನೇ ತರಗತಿಗಳಿಗೆ ಪಠ್ಯಪುಸ್ತಕವನ್ನಾಗಿ ಗೊತ್ತುಮಾಡಲಾಗಿದ್ದಿತು. ಈ ವ್ಯಾಕರಣದ ಕೊನೆಯಲ್ಲಿ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಅನೇಕ ಪ್ರಶ್ನೆಗಳನ್ನು ಕೊಡಲಾಗಿದೆ. ಇದರ ಆರನೇ ಆವೃತ್ತಿ 1936ರಲ್ಲಿ ಪ್ರಕಟವಾಯಿತು. ಇದು ಶಾಲಾ ಮಕ್ಕಳಿಗೆ ಬಹು ಉತ್ತಮ ವ್ಯಾಕರಣಗಳಲ್ಲಿ ಒಂದಾಗಿದೆ. ಇಂತಹ ಮತ್ತೊಂದು ವ್ಯಾಕರಣ 'ಶಬ್ದಾದರ್ಶ' ಎಂಬ ಹೆಸರಿನಿಂದ ಪ್ರಕಟವಾಗಿದೆ. ಇದನ್ನು ಹಳೆಯ ಮೈಸೂರು ಪ್ರಾಂತ್ಯದ ಶಾಲಾ ಮಕ್ಕಳ ಉಪಯೋಗಕ್ಕಾಗಿ ಪ್ರಕಟಿಸಿದಂತಹ ಮತ್ತೊಂದು ಉತ್ತಮ ಕನ್ನಡ ವ್ಯಾಕರಣ. ಇದನ್ನು 1933ರಲ್ಲಿ ಬಿ. ಮಲ್ಲಪ್ಪನವರು ಬರೆದು ಪ್ರಕಟಿಸಿದ್ದರು. ಇದು ಮತ್ತೆ ಮೈಸೂರು ಸಂಸ್ಥಾನದ ವಿದ್ಯಾ ಇಲಾಖೆಯವರಿಂದ ಪರಿಷ್ಕರಿಸಲ್ಪಟ್ಟು ಪ್ರಕಟಗೊಂಡಿತು. ಸರಳವಾದ, ಸುಲಭವಾದ, ನಿಷ್ಕೃಷ್ಟವಾದ ವ್ಯಾಕರಣಗಳಲ್ಲಿ 'ಶಬ್ದಾದರ್ಶ'ವೂ ಒಂದಾಗಿದೆ ಎನ್ನಬಹುದು.

ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಬಹುಕಾಲ ಭಾಷಾಶಾಸ್ತ್ರದ ಅಧ್ಯಾಪಕರಾಗಿದ್ದುಕೊಂಡು ಕನ್ನಡಭಾಷೆಯ ಪ್ರಾಚೀನ ಶಾಸನಗಳ ಸಂಪತ್ತನ್ನು ಅಧ್ಯಯನ ಮಾಡಿ ಎ. ಎನ್. ನರಸಿಂಹಯ್ಯನವರು ತುಂಬ ವಿದ್ವತ್ಪೂರ್ಣವಾದ 'A Grammar of the oldest Kannada Inscriptions' ಗ್ರಂಥವನ್ನು ರಚಿಸಿ 1941ರಲ್ಲಿ ಕನ್ನಡರಿಗೆ ನೀಡಿದರು. ಇದರಲ್ಲಿ ಕನ್ನಡಭಾಷೆಯ ಮೊಟ್ಟಮೊದಲ ಶಾಸನವೆನಿಸಿಕೊಂಡಿರುವ ಹಲ್ಮಿಡಿ ಶಾಸನದಿಂದ ಹಿಡಿದು ಸುಮಾರು ಕ್ರಿ.ಶ. 6 ಮತ್ತು 7ನೇ ಶತಮಾನಗಳ ಶಾಸನಗಳ ವರೆಗೂ ಪೂರ್ಣ ಅಧ್ಯಯನ ಕಾರ್ಯ ನಡೆಸಿಕೊಟ್ಟಿರುವ ವಿವರಣೆ ಇದೆ. ಇವರಲ್ಲಿ ಹೆಚ್ಚಾಗಿ ಹಳಗನ್ನಡ ಸ್ವರೂಪವನ್ನೇ ಕುರಿತು ಚರ್ಚಿಸಿರುವ ವಿವರಣೆ ಇದೆ. ಕನ್ನಡಭಾಷಾ ಚರಿತ್ರೆಯ ದೃಷ್ಟಿಯಿಂದ ಹೆಚ್ಚು ಸಾಮಗ್ರಿ ಇದರಲ್ಲಿ ದೊರೆಯುತ್ತದೆ. ಈ ವಿವರಣೆಯ ಜೊತೆಗೆ ಶಬ್ದಕೋಶ. ಧ್ವನಿ ವ್ಯತ್ಯಾಸಗಳ ಸೊಗಸಾದ ನಿರೂಪಣೆ ಈ ಗ್ರಂಥದಲ್ಲಿ ಕಂಡುಬರುತ್ತದೆ. ಎ. ಎನ್. ನರಸಿಂಹಯ್ಯನವರ ಕೆಲಸವನ್ನೇ ಡಾ. ಜಿ. ಎಸ್, ಗಾಯ್‌ಯವರು ಮುಂದುವರಿಸಿ ' Historical Grammar of old Kannada ' ಎಂಬ ಪ್ರಬಂಧವನ್ನು ಬರೆದು ಪ್ರಕಟಿಸಿದರು. ಇದರಲ್ಲಿ ಡಾ. ಜಿ. ಎಸ್. ಗಾಯ್ ಅವರು ಕ್ರಿ. ಶ. 8, 9 ಮತ್ತು 10ನೇ ಶತಮಾನಗಳ ಹಳಗನ್ನಡ ಶಾಸನಗಳನ್ನು ನರಸಿಂಹಯ್ಯನವರಂತೆ ಆಳವಾಗಿ ಅಭ್ಯಸಿಸಿ ವಿವರಿಸಿದ್ದಾರೆ. ಈ ಪ್ರಬಂಧಕ್ಕೆ ಪೂನಾ ವಿಶ್ವವಿದ್ಯಾನಿಲಯವು ಅವರಿಗೆ ಡಾಕ್ಟರೇಟ್ ಪದವಿಯನ್ನು ನೀಡಿತು. ಇಲ್ಲಿ ಕನ್ನಡ ಭಾಷೆಯ ವ್ಯಾಕರಣಕ್ಕೆ ಸಂಬಂಧಿಸಿದ ವಿಚಾರಗಳನ್ನು ವಿವರಣಾತ್ಮಕ ಹಾಗೂ ಐತಿಹಾಸಿಕವಾಗಿ ಚರ್ಚಿಸಿರುವ ವಿಚಾರವಂತು ತುಂಬ ಗಮನಾರ್ಹವಾಗಿದೆ. ಮುಂದಿನ ಮೂರು ಶತಮಾನಗಳ ಅಂದರೆ ಕ್ರಿ. ಶ. 11, 12 ಮತ್ತು 13ನೇ ಶತಮಾನಗಳ ಶಾಸನಗಳನ್ನು ಕುರಿತು ಪ್ರೊ. ದೇ. ಜವರೇಗೌಡ ಅವರು ಅಧ್ಯಯನ ಮುಂದುವರಿಸಿದ್ದಾರೆ. ಈ ಸಂಶೋಧನೆಯ ಫಲ ಮುಂದೆ ಪ್ರಕಟಗೊಳ್ಳುವ ನಿರೀಕ್ಷೆಯಿದೆ. ಹೀಗೆ ಕನ್ನಡಭಾಷೆಯ ಪ್ರಾಚೀನ ಶಾಸನಗಳನ್ನು ಪೂರ್ಣವಾಗಿ ಎ. ಎನ್. ನರಸಿಂಹಯ್ಯ, ಡಾ. ಜಿ. ಎಸ್. ಗಾಯ್ ಮತ್ತು ಪ್ರೊ. ದೇ. ಜವರೇಗೌಡ ಅವರುಗಳು ಆಳವಾಗಿ ಅಭ್ಯಸಿಸಿ ಕನ್ನಡ ಭಾಷಾ ಅಧ್ಯಯನಕ್ಕೆ ಮಾರ್ಗದರ್ಶಕರಾಗಿದ್ದಾರೆ. ಇವರ ಸಂಶೋಧನೆಯ ಫಲ ತುಂಬ ಉಪಯುಕ್ತವಾಗಿವೆ. ಕನ್ನಡ ಭಾಷಾ ಚರಿತ್ರೆಯ ವಿಕಾಸಕ್ಕೆ ಇವರುಗಳಿಂದ ಮಹತ್ವಪೂರ್ಣ ನೆರವು ದೊರೆಯುವುದರಲ್ಲಿ ಅನುಮಾನವೇನಿಲ್ಲ.

ಕನ್ನಡಭಾಷೆಯ ಅಧ್ಯಯನಕ್ಕೆ ತುಂಬ ನೆರವಾಗುವಂತಹ, ಆಧುನಿಕ ಕ್ರಮಗಳಿಗೆ ಅನುಸಾರವಾಗಿ ಕನ್ನಡ ಭಾಷೆ ಮತ್ತು ಸಾಹಿತ್ಯಗಳ ವಿವಿಧ ಅಂಗಗಳನ್ನು ಒಳಗೊಂಡಿರುವ ಒಂದು ಉಪಯುಕ್ತ ಗ್ರಂಥವನ್ನು ಹೊರ ತರಲು ಮೈಸೂರು ವಿಶ್ವವಿದ್ಯಾನಿಲಯವು ಯೋಜಿಸಿ 'ಕನ್ನಡ ಕೈಪಿಡಿ' ಎಂಬ ಗ್ರಂಥವನ್ನು ಎರಡು ಸಂಪುಟಗಳಲ್ಲಿ ಪ್ರಕಟಿಸಿತು. ಕನ್ನಡಭಾಷೆ, ಸಾಹಿತ್ಯ, ಛಂದಸ್ಸು ಮತ್ತು ಕಾವ್ಯಮಿಮಾಂಸೆಗಳನ್ನೊಳಗೊಂಡ ಈ ಗ್ರಂಥ ಕನ್ನಡಿಗರಿಗೆ ಅತ್ಯುಪಕಾರಿಯಾದುದು. ಈ ಗ್ರಂಥವು ಅಗ್ರಗಣ್ಯ ಕನ್ನಡ

ವಿದ್ವಾಂಸರಾದ ಬಿ. ಎಂ. ಶ್ರೀಕಂಠಯ್ಯನವರ ನೇತೃತ್ವದಲ್ಲಿ ರಚಿತವಾಯಿತು. ಇದರಲ್ಲಿ ಕನ್ನಡಭಾಷೆಯ ಚರಿತ್ರೆ, ಸಾಹಿತ್ಯ ಚರಿತ್ರೆ ಮತ್ತು ಕಾವ್ಯಮೀಮಾಂಸೆ ಕುರಿತ ಹಲವಾರು ವಿಚಾರಗಳು ನಿರೂಪಿತವಾಗಿವೆ. ಇದರ ಜೊತೆಗೆ ಕನ್ನಡ ಛಂದಸ್ಸು ಮತ್ತು ವ್ಯಾಕರಣ ಸಂಬಂಧಿ ವಿಚಾರಗಳು ತುಂಬ ಮೆಚ್ಚುವಂತಹ ರೀತಿಯಲ್ಲಿ ನಿರೂಪಿತವಾಗಿದ್ದು ಕನ್ನಡ ಭಾಷೆ ಮತ್ತು ಸಾಹಿತ್ಯದ ಬೆಳವಣಿಗೆಗೆ ತುಂಬ ಸಹಕಾರಿಯಾಗಿ ನಿಂತಿವೆ. ಈ 'ಕನ್ನಡ ಕೈಪಿಡಿ'ಯ ಮೊದಲಭಾಗದಲ್ಲಿ ಟಿ. ಶ್ರೀನಿವಾಸರಾಘವಾಚಾರ್ ಮತ್ತು ಬಿ. ಕೃಷ್ಣಪ್ಪನವರಿಂದ ರಚಿತವಾದ ಹಳಗನ್ನಡ ವ್ಯಾಕರಣ ಸಂಕ್ಷಿಪ್ತವಾಗಿ ಸೊಗಸಾಗಿ ಕಂಡುಬರುತ್ತದೆ. ಇದರ ಎರಡನೆ ಭಾಗದಲ್ಲಿ ಬಿ. ಎಂ. ಶ್ರೀ. ಮತ್ತು ಟಿ. ಎಸ್. ವೆಂಕಣ್ಣಯ್ಯ ಅವರುಗಳಿಂದ ಕನ್ನಡಭಾಷೆಯ ಇತಿಹಾಸ ಸರಳವಾಗಿ, ಸಂಕ್ಷಿಪ್ತವಾಗಿ, ಸ್ವಾರಸ್ಯವಾಗಿ ನಿರೂಪಿತವಾಗಿದೆ. ಇಂತಹ ವಿದ್ವತ್ಪೂರ್ಣ ಗ್ರಂಥಗಳಲ್ಲಿ ಆರ್. ನರಸಿಂಹಾಚಾರ್ಯರವರ ಗ್ರಂಥವನ್ನು ಬಿಟ್ಟರೆ ಕನ್ನಡ ಸಾಹಿತ್ಯ ರಂಗದಲ್ಲಿ ಇದೇ ಮೊದಲನೆಯದಾಗಿ ನಿಲ್ಲುತ್ತದೆ.

ಕನ್ನಡ ಭಾಷಾಶಾಸ್ತ್ರದ ಪ್ರಗತಿಗೆ ಅವಿಶ್ರಾಂತರಾಗಿ ದುಡಿದ ಹಲವರು ವಿದ್ವಾಂಸರು ಉಂಟು. ಅವರು ರಚಿಸಿರುವ ಗ್ರಂಥ, ಲೇಖನಗಳಂತು ತುಂಬ ಉಪಯುಕ್ತವಾಗಿವೆ. ಕನ್ನಡಿಗರಿಗೆ ತುಂಬ ಮೆಚ್ಚುಗೆಗೆ ಪಾತ್ರರಾಗಿರುವವರಲ್ಲಿ ಆರ್. ರಘುನಾಥರಾಯರು (ಕರ್ನಾಟಕ ಭಾಷಾ ವ್ಯಾಕರಣೋಪನ್ಯಾಸ ಮಂಜರಿ), ಶಂ.ಬಾ. ಜೋಶಿ(ಕಂನ್ನುಡಿಯ ಹುಟ್ಟು, ಕನ್ನಡದ ನೆಲೆ), ಮಾಸ್ತಿ ವೆಂಕಟೇಶ ಅಯ್ಯಂಗಾರ್ (ನಮ್ಮ ನುಡಿ), ಗೋವಿಂದ ಪೈ (ಮೂರು ಉಪನ್ಯಾಸಗಳು), ಶ್ರೀರಂಗ (ಶಾರದೆಯ ಸಂಸಾರ ಅಥವಾ ಭಾಷಾಶಾಸ್ತ್ರ), ಮ. ಪ್ರ. ಪೂಜಾರ ((ಕೆಲವು ಕನ್ನಡ ವ್ಯಾಕರಣ ವಿಚಾರಗಳು ಮತ್ತು ನುಡಿಗನ್ನಡಿ) ಸಿ. ಆರ್. ಶಂಕರನ್ (Some Problems in Kannada Linguistics), ಸೇಡಿಯಾಪು ಕೃಷ್ಣಭಟ್ಟ (ಕನ್ನಡ ವರ್ಣಗಳು), ಪ್ರೊ. ಡಿ. ಎಲ್. ನರಸಿಂಹಾಚಾರ್(ಶಬ್ದ ವಿಹಾರ) ಮುಂತಾದವರು ಅತಿ ಪ್ರಮುಖರೆನಿಸಿಕೊಂಡಿದ್ದಾರೆ. ಇವರ ಗ್ರಂಥ ಹಾಗು ಲೇಖನಗಳು ಕನ್ನಡ ಭಾಷೆಯ ಅಧ್ಯಯನಕ್ಕೆ ತುಂಬ ಪ್ರಯೋಜನಕಾರಿಯಾಗಿ ಪ್ರೋತ್ಸಾಹ ನೀಡುತ್ತವೆ. ಇಲ್ಲಿ ಕನ್ನಡಭಾಷೆಯ ವಿವಿಧ ಅವಸ್ಥೆಗಳನ್ನು ಕುರಿತ ಚರ್ಚೆ ವ್ಯಾಪಕವಾಗಿ ನಡೆದಿದೆ. ಕನ್ನಡ ಧ್ವನಿಮಾವಿಜ್ಞಾನ, ಆಕೃತಿಮಾವಿಜ್ಞಾನ, ವಾಕ್ಯ ವಿಜ್ಞಾನ ಹಾಗು ಶಬ್ದಾರ್ಥ ವಿಜ್ಞಾನಗಳನ್ನು ಕುರಿತು ವಿಸ್ತಾರವಾಗಿ ವಿಶ್ಲೇಷಿಸಿ, ನೀಡಿರುವ ವಿವರಣೆ ಸಹಿತ ಹಾಗು ಶಬ್ದಾರ್ಥ ವಿಜ್ಞಾನಗಳನ್ನು ಕುರಿತು ವಿಸ್ತಾರವಾಗಿ ವಿಶ್ಲೇಷಿಸಿ, ನೀಡಿರುವ ವಿವರಣೆ ಸಹಿತ ನಡುಗನ್ನಡ ಮತ್ತು ಹೊಸಗನ್ನಡ ಭಾಷಾಸ್ವರೂಪ ಇಲ್ಲಿ ಸ್ಪಷ್ಟವಾಗಿ ತಿಳಿದುಬರುತ್ತದೆ. ಈ ಲೇಖಕರು ಹೇರಳವಾಗಿ ವಿಷಯ ಸಂಗ್ರಹಕಾರ್ಯ ನಡೆಸಿ, ಅವುಗಳನ್ನು ಕ್ರಮಬದ್ಧವಾಗಿ ಅಳವಡಿಸುವ ಪ್ರಯತ್ನ ಮಾಡಿದ್ದಾರೆ. ಆಧುನಿಕ ಭಾಷಾ ವಿಜ್ಞಾನದ ಪ್ರಚಾರಕ್ಕೆ ಯೋಗ್ಯವಾದ ಅವರ ವಿಚಾರಗಳು, ಚರ್ಚೆಗಳು ವ್ಯಾಪಕವಾಗಿದ್ದು ತುಂಬ ಉಪಯುಕ್ತವಾಗಿ ಕಾಣಸಿಕೊಳ್ಳುತ್ತವೆ.

ಕನ್ನಡ ಸಾಹಿತ್ಯದ ಇತಿಹಾಸದಲ್ಲಿ ರಂ.ಶ್ರೀ. ಮುಗಳಿಯವರು ಕನ್ನಡಭಾಷೆಯ ಹುಟ್ಟು ಮತ್ತು ಅದರ ಬೆಳವಣಿಗೆಯನ್ನು ಕುರಿತು ನಿರೂಪಿಸಿರುವ ವಿಧಾನ,ಅವರ ಅರ್ಥವತ್ತಾದ ವಿವೇಚನೆ ಗಮನಾರ್ಹವಾಗಿದೆ. ದಿವಂಗತ ಪ್ರೊ. ತೀ. ನಂ. ಶ್ರೀಕಂಠಯ್ಯನವರು ಕನ್ನಡ ಭಾಷಾಶಾಸ್ತ್ರಕ್ಕೆ ತಮ್ಮದೇ ಆದ ಕಾಣಿಕೆ ನೀಡಿದ್ದಾರೆ. ಮೈಸೂರು ಸಂಸ್ಥಾನದ ವಿದ್ಯಾ ಇಲಾಖೆಯವರು ಪ್ರಕಟಿಸಿರುವ ಇವರ 'ಕನ್ನಡ ಮಧ್ಯಮ ವ್ಯಾಕರಣ'ವು ಉಪಯುಕ್ತ ವ್ಯಾಕರಣ ಗ್ರಂಥವೆನಿಸಿಕೊಂಡಿದೆ. ಇದು ಹೊಸಗನ್ನಡ ವ್ಯಾಕರಣಗಳಲ್ಲಿ ಅತ್ಯುನ್ನತವಾದುದು. ಪ್ರಾಥಮಿಕ, ಮಾಧ್ಯಮಿಕ ಹಾಗು ಪ್ರೌಢಶಾಲೆಯ ವಿದ್ಯಾರ್ಥಿಗಳ ಉಪಯೋಗಕ್ಕಾಗಿ ಸರ್ಕಾರದವರು ವ್ಯಾಕರಣ ಗ್ರಂಥಗಳನ್ನು ರಚಿಸುವ ಯೋಜನೆಯನ್ನು ರೂಪಿಸಿ ಕ್ರಮವಾಗಿ ಇವುಗಳ ರಚನಾ ಕಾರ್ಯಭಾರವನ್ನು ಡಾ. ಎ.ಎನ್. ನರಸಿಂಹಯ್ಯ ಪ್ರೊ. ತೀ. ನಂ. ಶ್ರೀಕಂಠಯ್ಯ ಮತ್ತು ಟಿ. ಎಸ್. ವೆಂಕಣ್ಣಯ್ಯನವರುಗಳಿಗೆ ವಹಿಸಿದ್ದರು. ಮೊದಲು ಡಾ. ಎ. ಎನ್. ನರಸಿಂಹಯ್ಯನವರು 'ಕನ್ನಡ ಪ್ರಥಮ ವ್ಯಾಕರಣ'ವನ್ನು ಬರೆದು ಪ್ರಕಟಿಸಿದರು.ಪ್ರೊ. ತೀ. ನಂ. ಶ್ರೀಕಂಠಯ್ಯನವರು 'ಕನ್ನಡ ಮಧ್ಯಮ ವ್ಯಾಕರಣ'ವನ್ನು ಬರೆದು ಪ್ರಕಟಿಸಿದರು. ಇದರ ಮುಂದಿನ ಹೆಜ್ಜೆಯೇ ಟಿ. ಎಸ್. ವೆಂಕಣ್ಣಯ್ಯನವರದಾಗಿತ್ತು. ಈ ಕಾರ್ಯ ಕಾರಣಾಂತರಗಳಿಂದ ಮುಂದುವರಿಯಲಾಗದೆ ಹಾಗೆಯೇ ಉಳಿದುಕೊಂಡಿತು. ತೀ. ನಂ. ಶ್ರೀ. ಯವರು ಕನ್ನಡ ಭಾಷಾ ಶಾಸ್ತ್ರಕ್ಕೆ ಸಂಬಂಧಿಸಿದಂತೆ ಹಲವಾರು ಲೇಖನಗಳನ್ನು ಬರೆದಿದ್ದಾರೆ. ಅವುಗಳಲ್ಲಿ ಹೆಚ್ಚಿನವು ಇಂಗ್ಲ

[illegible] "Mutation of i, u, e, and o Vowels in Kannad[illegible] [illegible] "Affricates in Kannada speech" [illegible] 1951ರಲ್ಲಿ [illegible]

[illegible]

1961ರಲ್ಲಿ [illegible] "[illegible] Structure of Kannada" [illegible] ಆರ್. ಸಿ. ಹಿರೇಮಠ ಅವರಿಗೆ ಸಲ್ಲುತ್ತದೆ.

[illegible]

ಇನ್ನೂ ಕೆಲವು ದೋಷಗಳು ಕಂಡುಬರುವವು. ಅವುಗಳಲ್ಲಿ ಕನ್ನಡ ಕ್ರಿಯಾಪದ, ನಾಮಪದಗಳ ರೂಪಗಳು ಮತ್ತು ತೌಲನಿಕ ವ್ಯಾಕರಣ ಎಂಬ ಅಧ್ಯಾಯಗಳು ಮುಖ್ಯವಾದವುಗಳು. ಆಧುನಿಕ ಭಾಷಾವಿಜ್ಞಾನದ ತತ್ವಗಳನ್ನು ಅಳವಡಿಸಿಕೊಂಡು ಕ್ರಮವಾಗಿ ಅಭ್ಯಾಸಮಾಡದ ಇದರ ಕರ್ತೃವಿಗೆ ನಿಜವಾದ ವ್ಯಾಕರಣಕರ್ತರಾಗಿ ಮೈಸೂರು ಪ್ರಾಂತ್ಯದ ಕನ್ನಡ ಆಡುಮಾತಿನ ಸ್ವರೂಪವನ್ನು ಕುರಿತು ವಿಲಿಯಂ ಬ್ರೈಟ್ ಎಂಬ ವಿದ್ವಾಂಸರು "An Outline of Colloqial Kannada" ಎಂಬ ಗ್ರಂಥವನ್ನು ಸನ್ 1938 ರಲ್ಲಿ ಪ್ರಕಟಿಸಿದರು. ಇಲ್ಲಿ ಕನ್ನಡದ ಆಡುಮಾತಿನ ಸ್ವರೂಪದ ವಿವರಣೆ ಕಂಡು ಬರುತ್ತದೆ. ಇದು ಅಲ್ಲದೆ, ವಿಲಿಯಂ ಬ್ರೈಟ್ ಮುಂತಾದವರು ಕನ್ನಡ ಕುರಿತು ಅನೇಕ ಲೇಖನಗಳನ್ನು ಕುರಿತು ಬಹಳ ಲೇಖನಗಳನ್ನು ಬರೆದಿದ್ದಾರೆ. ಇದು ಕನ್ನಡ ಭಾಷಾ ವಿಜ್ಞಾನ ಕ್ಷೇತ್ರದ ಹೊಸ ತಿರುವಿಗೆ ಕಾರಣವಾಗಿ ನಿಲ್ಲುವುದರಲ್ಲಿ ಸಂದೇಹವಿಲ್ಲ.

ರೆವರೆಂಡ್ ಎಫ್. ಕಿಟ್ಟೆಲ್ ಮಹಾಶಯರು ಕನ್ನಡ – ಇಂಗ್ಲಿಷ್ ನಿಘಂಟುಕೋಶವನ್ನು ತಯಾರಿಸಿದ ಮೇಲೆ ಅನೇಕ ಪುಟ್ಟ ಪುಟ್ಟ ನಿಘಂಟುಗಳು ಕನ್ನಡ ಭಾಷೆಗೆ ಸಂಬಂಧಿಸಿದಂತೆ ದೊರೆಯುತ್ತವೆ. ಕನ್ನಡ ಸಾಹಿತ್ಯ ಪರಿಷತ್ ಕನ್ನಡ-ಕನ್ನಡ ನಿಘಂಟನ್ನು ತಯಾರಿಸುವ ಕಾರ್ಯವನ್ನು ನಿರ್ವಹಿಸುತ್ತಿದೆ. ಮೈಸೂರು ವಿಶ್ವವಿದ್ಯಾನಿಲಯದ ಪ್ರಸಾರಾಂಗವು ಇಂಗ್ಲಿಷ್-ಕನ್ನಡ ನಿಘಂಟನ್ನು ಪ್ರಕಟಿಸಿದ್ದಲ್ಲದೆ ಅದನ್ನು ಮತ್ತೆ ಆಧುನಿಕ ರೀತಿಯಲ್ಲಿ ಭಾಷಾಶಾಸ್ತ್ರದ ದೃಷ್ಟಿಯಿಂದ ಪರಿಷ್ಕರಿಸುವ ಕಾರ್ಯವನ್ನು ಮಾಡುತ್ತಿರುವುದು ತಿಳಿದಿದೆ. ಕಾಲಿಕ ಮುಂತಾದವರು ಕನ್ನಡ – ಕನ್ನಡ ನಿಘಂಟುಗಳನ್ನು ತಯಾರಿಸಿ ಪ್ರಕಟಿಸಿದ್ದಾರೆ. ಇದು ಅಲ್ಲದೆ, ಕನ್ನಡ-ಹಿಂದಿ, ಕನ್ನಡ-ಮರಾಠಿ, ಕನ್ನಡ-ತೆಲುಗು ಪುಟ್ಟ ಪುಟ್ಟ ಕೋಶಗಳು ಹೊರ ಬಂದಿವೆ. ಕನ್ನಡ ಅಧ್ಯಯನ ಸಂಸ್ಥೆಯು ಇತ್ತೀಚೆಗೆ ವ್ಯುತ್ಪತ್ತಿ ಕೋಶವನ್ನು ತಯಾರಿಸುವ ಕಾರ್ಯವನ್ನು ನಿರ್ವಹಿಸುತ್ತಿದೆ. ಇದು ಅದಕ್ಕಾಗಿ ಸಂಬಂಧಿಸಿದ್ದು. ಕಿಟ್ಟೆಲ್ ಮಹಾಶಯರ ಕಾಲದಿಂದ ಹಿಡಿದು ಆಧುನಿಕ ರೀತಿಯಲ್ಲಿ ನಿಘಂಟುಗಳ ನಿರ್ಮಾಣ ಕಾರ್ಯ ಕನ್ನಡ ಭಾಷಾ ಕ್ಷೇತ್ರದಲ್ಲಿ ನಿರಂತರವಾಗಿ ನಡೆಯುತ್ತಿದೆ. ಅನುಭವಾಮೃತವನ್ನೊಳಗೊಂಡಿರುವ ಕನ್ನಡ ಗಾದೆಗಳನ್ನು ಸಂಗ್ರಹಿಸಿ ಅವುಗಳನ್ನು ಮುದ್ರಿಸುವ ಕಾರ್ಯ ಬಹಳ ಹಿಂದಿನಿಂದಲೂ ನಡೆಯುತ್ತಾ ಬಂದಿದ್ದು, ಈಗಾಗಲೇ ಕನ್ನಡ ಗಾದೆಗಳನ್ನು ಸಂಗ್ರಹಿಸಿ ಮಾಡಿರುವ ಗ್ರಂಥಗಳು ಸಾಕಷ್ಟು ದೊರೆಯುತ್ತವೆ. ಕನ್ನಡ ಗ್ರಂಥಸ್ಥ ಗಾದೆಗಳನ್ನು ಸಂಗ್ರಹಿಸಿ ಅಚ್ಚುಹಿಸಿ ಪ್ರಕಟಿಸಿ ಕನ್ನಡ ಸಾಹಿತ್ಯಕ್ಷೇತ್ರಕ್ಕೆ ಮಹತ್ ಉಪಕಾರ ಮಾಡಿದ್ದಾರೆ. ಇಂತಹ ಗಾದೆಗಳನ್ನು ಕುರಿತ ಹಲವಾರು ಗ್ರಂಥಗಳು, ಕೋಶಗಳು ಕನ್ನಡದಲ್ಲಿ ಬರುತ್ತಲೇ ಇವೆ. ಕನ್ನಡ ಭಾಷೆಯಲ್ಲಿ ಉಪಭಾಷಾ ಪರಿವೀಕ್ಷಣೆ ನಡೆದು ಎಲ್ಲಾ ರೀತಿಯ ವೃತ್ತಿ ಪದಕೋಶಗಳ ನಿರ್ಮಾಣವಾದರೆ ಕನ್ನಡ ಭಾಷೆಗೆ ಸಂಬಂಧಿಸಿದ ಐತಿಹ್ಯ ಸಮಸ್ಯೆಗಳನ್ನು ಸುಲಭವಾಗಿ ಪರಿಹರಿಸಬಹುದಾಗಿದೆ. ಜಾನಪದ ವಸ್ತುಕೋಶ, ಜಾನಪದಕೋಶ, ಪರ್ಯಾಯ ಪದಕೋಶ, ಐತಿಹಾಸಿಕ ಕನ್ನಡಕೋಶ, ಮತ್ತು ಕನ್ನಡ ಗಾದೆಗಳನ್ನು ಸಂಗ್ರಹಿಸಿ ಮತ್ತೆ ಅವುಗಳನ್ನು ಪರಿಷ್ಕರಿಸಿ ಪುನರ್ ಮುದ್ರಿಸುವ ಕಾರ್ಯ ಕನ್ನಡ ಭಾಷೆಯಲ್ಲಿ ನಡೆಯಬೇಕಾಗಿದೆ. ಕನ್ನಡ ಸಂಸ್ಕೃತಿ ಮತ್ತು ಸಾಹಿತ್ಯಕ್ಕೆ ಸಂಬಂಧಿಸಿದ ಒಂದು ಕೋಶವನ್ನೇ ತಯಾರಿಸಬಹುದಾದಷ್ಟು ಸಾಮಗ್ರಿ ದೊರೆಯುತ್ತದೆ. ಈ ದಿಸೆಯಲ್ಲಿ ಆಸಕ್ತಿಪೂರ್ವಕ ಅಧ್ಯಯನ ನಡೆದು ಮೇಲೆ ಹೇಳಿದ ಕೋಶಗಳ ನಿರ್ಮಾಣವಾದರೆ ಕನ್ನಡ ಭಾಷೆ ಸಂಪೂರ್ಣವಾಗಿ ಪ್ರಜ್ವಲಿಸುತ್ತದೆ.

1965ರಲ್ಲಿ ಎಂ. ಚಿದಾನಂದ ಮೂರ್ತಿಯವರು ಸಾಮಾನ್ಯ ಭಾಷಾಶಾಸ್ತ್ರವನ್ನು ಆಳವಾಗಿ ಅಭ್ಯಸಿಸಿ 'ಭಾಷಾ ವಿಜ್ಞಾನದ ಮೂಲ ತತ್ವಗಳು' ಎಂಬ ಗ್ರಂಥವನ್ನು ಕನ್ನಡದಲ್ಲಿ ಬರೆದು ಪ್ರಕಟಿಸಿದ್ದಾರೆ. ಇಲ್ಲಿ ಕನ್ನಡ ಭಾಷೆಗೆ ಸಂಬಂಧಿಸಿದ ಹಲವಾರು ವಿಚಾರಗಳ ವಿವರಣೆ ದೊರೆಯುತ್ತದೆ. ಸರಳವಾದ ಭಾಷಾಶೈಲಿಯಲ್ಲಿ ಆಧುನಿಕ ಭಾಷಾಶಾಸ್ತ್ರದ ಮೂಲತತ್ವಗಳನ್ನು ಕನ್ನಡ ಉದಾಹರಣೆಗಳೊಡನೆ ಚರ್ಚಿಸಿ ನಿರೂಪಿಸಿರುವುದು ತುಂಬ ಉಪಯುಕ್ತವಾಗಿದೆ.

1966ರಲ್ಲಿ ಹಂಪ. ನಾಗರಾಜಯ್ಯ ಅವರು 'ದ್ರಾವಿಡ ಭಾಷಾ ವಿಜ್ಞಾನ' ಎಂಬ ಗ್ರಂಥವನ್ನು ಬರೆದು ಪ್ರೊ. ದೇ. ಜವರೇ ಗೌಡ ಅವರ ಮುನ್ನುಡಿಯೊಂದಿಗೆ ಪ್ರಕಟಿಸಿದ್ದಾರೆ. ಇಲ್ಲಿ ದ್ರಾವಿಡ ಭಾಷೆಗಳ ಉಗಮ, ಬೆಳವಣಿಗೆ, ಅವುಗಳ ವರ್ಗೀಕರಣ. ಇತ್ಯಾದಿ ವಿಚಾರಗಳನ್ನು ವಿಸ್ತೃತವಾಗಿ ನಿರೂಪಿಸಲಾಗಿದೆ.

ಕನ್ನಡ ವ್ಯಾಕರಣಕ್ಕೆ ಸಂಬಂಧಿಸಿದ ವಿಚಾರಗಳು ಈ ಗ್ರಂಥದಲ್ಲಿ ಪ್ರಾಸಂಗಿಕವಾಗಿ ದೊರೆಯುತ್ತವೆ. ಅ[illegible] ಭಾಷೆಗಳ ವಿಚಾರ, ಅವುಗಳ ವ್ಯಾಕರಣ ಪ್ರಕ್ರಿಯೆ ವಿಚಾರಗಳ ಸಮಗ್ರ ಸಾಮಗ್ರಿ ಹೇರಳವಾಗಿ [illegible] ನಿರೂಪಿತವಾಗಿದೆ. ಇವರ 'ಭಾಷಾವಿಜ್ಞಾನ' ಎಂಬ ಮಹತ್ವದ ಗ್ರಂಥದಲ್ಲಿಯೂ ಕನ್ನಡಕ್ಕೆ ಸಂಬಂಧಿಸಿದ ವಿಚಾರಗಳು ಬರುತ್ತವೆ. ಆಧುನಿಕ ಭಾಷಾವಿಜ್ಞಾನದ ತಂತ್ರಗಳನ್ನು ಕನ್ನಡ ಭಾಷೆಯ[illegible] ವಿವೇಚಿಸುವ ಯತ್ನ ನಡೆದಿದೆ. ಇವುಗಳ ಜೊತೆಗೆ ಇವರ 'ಆಧುನಿಕ ಕನ್ನಡ ಭಾಷೆ' ಮುಂತಾದ ಲೇಖನಗಳು ಪ್ರಕಟಗೊಂಡಿವೆ.

1967ರಲ್ಲಿ ಪ್ರ. ಗೋ. ಕುಲಕರ್ಣಿಯವರು 'ಕನ್ನಡ ಭಾಷಾ ಚರಿತ್ರೆ'ಯನ್ನು ಬರೆದು ಪ್ರಕಟಿಸಿದ್ದಾರೆ. ಇದರಲ್ಲಿ ಕನ್ನಡ ಭಾಷೆಗೆ ಸಂಬಂಧಿಸಿದ ವಿಚಾರಗಳನ್ನು ಸಂಗ್ರಹವಾಗಿ ಇಡಲಾಗಿದೆ. ಕನ್ನಡ ಭಾಷೆಯ ಸಮಗ್ರ ಇತಿಹಾಸಕ್ಕೆ ಬೇಕಾದ ಸಾಮಗ್ರಿ ಇದರಲ್ಲಿ ಅಡಕವಾಗಿದೆ. ದ್ರಾವಿಡ, ಕನ್ನಡ ಭಾಷೆಯ ಉಗಮ, ಸಾಹಿತ್ಯ, ಲಿಪಿ ಮುಂತಾದ ಕನ್ನಡ ವ್ಯಾಕರಣ ವಿಚಾರಗಳು ಸಂಕ್ಷಿಪ್ತವಾಗಿದ್ದರೂ ಬ[illegible] ಉಪಯುಕ್ತ ಸಾಮಗ್ರಿಗಳಿವೆ. ಇದು ಕನ್ನಡ ಭಾಷಾ ಅಧ್ಯಯನಕ್ಕೆ ತುಂಬ ನೆರವಾಗುವುದರಲ್ಲಿ ಸಂದೇಹವಿಲ್ಲ. ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯು ಕನ್ನಡ ಭಾ[illegible] ಸ್ವರೂಪವನ್ನು ಕುರಿತ ಕೆಲವು ಲೇಖನಗಳನ್ನು 1967ರಲ್ಲಿ 'ಕನ್ನಡ ಸಂಪುಟ'ದಲ್ಲಿ ಪ್ರಕಟಿಸಿ[illegible] ಇದರ ಮುಖ್ಯ ಲೇಖನಗಳು ಕನ್ನಡ ಭಾಷಾ ಅಧ್ಯಯನಕ್ಕೆ ತುಂಬ ಉಪಯೋಗವಾಗಬಲ್ಲಂಥ ಸಾಮಗ್ರಿಯ[illegible] ಒದಗಿಸುತ್ತವೆ. ಪ್ರೊ. ದೇ. ಜವರೇಗೌಡ (ಕನ್ನಡ ಭಾಷೆ ಇಂದು), ಎಂ. ಚಿದಾನಂದಮೂರ್ತಿ (ಹಳೆ[illegible] ಮೈಸೂರು ಕನ್ನಡ), ಪ್ರೊ. ಆರ್. ಸಿ. ಹಿರೇಮಠ (ಧಾರವಾಡ ಪರಿಸರದ ಕನ್ನಡ), ಪ್ರೊ. ಮರಿಯಪ್ಪ ಭಟ್ಟ (ದಕ್ಷಿಣ ಕನ್ನಡದ ಕನ್ನಡ), ಪ್ರೊ. [illegible] (ಗುಲ್ಬರ್ಗ ಪರಿಸರದಲ್ಲಿನ ಕನ್ನ[illegible] [illegible] (ಬೆಂಗಳೂರಿನ [illegible] ಕನ್ನಡ), ಕೆ. ಕುಶಾಲಪ್ಪಗೌಡ (ಕನ್ನಡದ [illegible] ಪ್ರಾದೇಶಿಕ ಪ್ರಭೇದಗಳು) ಮುಂತಾದ ಅನೇಕ ಭಾಷಾವಿಜ್ಞಾನಿಗಳ ಲೇಖನಗಳು ಈ ಸಂಪು[illegible] ಸಂಕಲಿತವಾಗಿವೆ. ಕನ್ನಡ ಭಾಷೆಯ ಪ್ರಾದೇಶಿಕ ಪ್ರಭೇದಗಳನ್ನು ಕುರಿತು ಬರೆದಿರುವ ಈ ಲೇ[illegible]ಗಳಲ್ಲಿ ಹೇರಳವಾದ ಸಾಮಗ್ರಿ ಇದೆ. ಇದಲ್ಲದೆ [illegible] ಪ್ರಬಂಧ [illegible], ಕನ್ನಡ ಸಾ[illegible] ಪರಿಷತ್ ಪತ್ರಿಕೆ ಮುಂತಾದ ಪತ್ರಿಕೆಯಲ್ಲಿ ಕನ್ನಡ ಭಾಷೆಗೆ ಸಂಬಂಧಿಸಿದ ಹಲವಾರು ಲೇಖನ[illegible] ಬಂದಿವೆ. ಶ್ರೀ [illegible] '[illegible] ಕನ್ನಡ', [illegible] ಮೈಸೂರು ಕನ್ನ[illegible] ಸಾಮಾಜಿಕ ಪ್ರಭೇದಗಳು ([illegible]), ಪ್ರೊ. ಮರಿಯಪ್ಪ ಭಟ್ಟ ಅವರ [illegible] ಕನ್ನ[illegible] [illegible] – [illegible] – ವಿಭಕ್ತಿ ಪ್ರತ್ಯಯಗಳು ಮುಂತಾದ ಅನೇಕ ಲೇಖನಗಳು ಪ್ರಬುದ್ಧ ಕರ್ನಾ[illegible] ತ್ರೈಮಾಸಿಕ ಪತ್ರಿಕೆಯಲ್ಲಿ ಪ್ರಕಟವಾಗಿವೆ.

ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯ ಮುಖ್ಯ ನಿರ್ದೇಶಕರಾದ [illegible] ಡಾ. ಡಿ.ಎನ್. ಶಂಕರಭಟ್ಟರು ಆಂಗ್ಲಭಾಷೆಯಲ್ಲಿ ಕನ್ನಡ ಭಾಷೆಯ ದ್ವಿಸ್ವರೂಪವನ್ನು ಕು[illegible] "Kannada ; Literary and Colloquial : A Study of Two styl[illegible] ಎಂಬ ಪ್ರಬಂಧವನ್ನು ಬರೆದು ಪ್ರಕಟಿಸಿದರು. ಈ ಪ್ರಬಂಧಕ್ಕೆ ಅಮೆರಿಕಾದ ಇಂಡಿ[illegible] ವಿಶ್ವವಿದ್ಯಾನಿಲಯವು ಅವರಿಗೆ ಡಾಕ್ಟರೇಟ್ ಪದವಿಯನ್ನು ನೀಡಿತು. ಈ ಪ್ರಬಂಧದ[illegible] ಸಾಹಿತ್ಯಿಕ ಹಾಗೂ ಆಡುಮಾತಿನ ಕನ್ನಡ ಭಾಷೆಯ ದ್ವಿಸ್ವರೂಪವನ್ನು ವಿವರಿಸಲಾಗಿದೆ. ಕನ್ನಡ ಭಾ[illegible] ಎರಡು ಶೈಲಿಗಳ ಧ್ವನಿಗಳನ್ನೂ, ವ್ಯಾಕರಣವನ್ನೂ, ಶಬ್ದಕೋಶವನ್ನೂ ಪರಸ್ಪರ ಹೋಲಿ[illegible] [illegible] ಸಾಧ್ಯವಾದ ದೃಷ್ಟಿಗಳ ದೃಷ್ಟಿಯಿಂದ ಅಭ್ಯಸಿಸಲಾಗಿದೆ. ಈ ಗ್ರಂಥವು ಆಕ್ಸ[illegible] ವಿಶ್ವವಿದ್ಯಾನಿಲಯದ ಸಂಸ್ಕೃತ ಪ್ರಾಧ್ಯಾಪಕರಾದ ಡಾ. ಟಿ. ಬರೋ ಅವರ ಮುನ್ನುಡಿ[illegible] 1967ರಲ್ಲಿ ಪ್ರಕಟವಾಗಿದೆ. ಇದು ಕನ್ನಡ ಭಾಷೆಯ ಪೂರ್ಣ ಸ್ವರೂಪವನ್ನು ತಿಳಿಸುವ ಉತ್ತಮ [illegible]ನಿಕ ಗ್ರಂಥವಾಗಿ ಶೋಭಿಸುತ್ತದೆ. ಇದು ಕನ್ನಡ ಭಾಷಾಶಾಸ್ತ್ರ ಕ್ಷೇತ್ರದ ಅತಿ ವೈಜ್ಞಾನಿಕ ಗ್ರಂ[illegible] ಕೆಲವು ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ಇಂತಹ ಗ್ರಂಥವನ್ನು ಬರೆದು ಕನ್ನಡ ಭಾಷೆ[illegible] ಮಹತ್ವದ ಕಾಣಿಕೆಯನ್ನಾಗಿ ನೀಡಿರುವ ಕೀರ್ತಿ ಪ್ರೊ. ಡಾ. ಡಿ.ಎನ್. ಶಂಕರಭಟ್ಟರವರಿಗೆ ಸ[illegible] ಅದು ಅಲ್ಲದೆ ಇವರು ಇನ್ನೂ ಅನೇಕ ಲೇಖನಗಳನ್ನು, ಗ್ರಂಥಗಳನ್ನು ಬರೆದಿದ್ದಾರೆ. ಅ[illegible]

ಮಾತ್ರವಲ್ಲ, ಇವು ಕನ್ನಡ ಭಾಷೆಯ ಇತಿಹಾಸದ ಮೇಲೆ ಹೊಸ ಬೆಳಕನ್ನು ಚೆಲ್ಲುತ್ತವೆ ಎನ್ನಬಹುದು. ಅದು ಅಲ್ಲದೆ, ಕೇರಳ ವಿಶ್ವವಿದ್ಯಾನಿಲಯದ ಪ್ರೊ. ಸುಬ್ರಮಣ್ಯಂ, ಮದರಾಸಿನ ಅಣ್ಣಾಮಲೈ ವಿಶ್ವ ವಿದ್ಯಾನಿಲಯದ ಪ್ರೊ. ಅಗಸ್ತ್ಯಲಿಂಗಮ್ ಪಿಳ್ಳೈ, ಆಂಧ್ರದ ಉಸ್ಮಾನಿಯ ವಿಶ್ವವಿದ್ಯಾನಿಲಯದ ಪ್ರೊ. ಭಾ. ಕೃಷ್ಣಮೂರ್ತಿ, ಕರ್ನಾಟಕ ವಿಶ್ವವಿದ್ಯಾನಿಲಯದ ಪ್ರೊ. ಆರ್. ಸಿ. ಹಿರೇಮಠ ಮತ್ತು ಮೈಸೂರು ವಿಶ್ವವಿದ್ಯಾನಿಲಯದ ಪ್ರೊ. ಹಾ. ಮಾ. ನಾಯಕ್ ಮುಂತಾದವರು ಒಂದು ಸಂಸ್ಥೆಯನ್ನು ಸ್ಥಾಪಿಸಿಕೊಂಡು ದ್ರಾವಿಡಭಾಷೆಗಳ ಅಧ್ಯಯನಕ್ಕೆ ಹೆಚ್ಚಿನ ಸಾಧ್ಯತೆಗಳನ್ನು ಕಲ್ಪಿಸಿಕೊಡುವ ಯೋಜನೆ ಯನ್ನು ಹಾಕಿಕೊಂಡಿದ್ದಾರೆ. ಇದರಿಂದ ಕನ್ನಡ ಭಾಷಾ ಸಂಶೋಧನೆಗೆ ಹೆಚ್ಚಿನ ಪ್ರೋತ್ಸಾಹ ದೊರೆ ಯುವುದರಲ್ಲಿ ಸಂಶಯವಿಲ್ಲ.

ಹೀಗೆ ಕನ್ನಡ ಭಾಷಾ ಅಧ್ಯಯನ ಕಾರ್ಯ ಬಹು ಪ್ರಾಚೀನ ಕಾಲದಿಂದಲೇ ಆರಂಭವಾಗಿ ಇಪ್ಪತ್ತನೇ ಶತಮಾನದ ಮಧ್ಯಭಾಗದವರೆಗೂ ವ್ಯಾಪಕವಾಗಿ ಬೆಳೆದು ಬಂದು ತನ್ನ ಅಸ್ತಿತ್ವ ವನ್ನು ಸ್ಥಾಪಿಸಿಕೊಂಡಿದೆ. ಭಾಷಾಶಾಸ್ತ್ರವು ಬೆಳೆದಂತೆಲ್ಲಾ ಕನ್ನಡ ಭಾಷಾ ವಿಜ್ಞಾನವು ಅದೇ ಜಾಡನ್ನು ಹಿಡಿದು ಆಧುನಿಕ ಕ್ರಮವನ್ನು ಅನುಸರಿಸಿ ಮುಂದುವರಿಯುತ್ತಾ ಬಂದಿದೆ. ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯ ಉದಯದ ಫಲವಾಗಿ ಇದರ ಕ್ಷೇತ್ರ ವಿಶಾಲ ಗೊಳ್ಳಲು ತುಂಬ ಅವಕಾಶವಿದೆ. ಭಾಷಾ ವಿಜ್ಞಾನದಲ್ಲಿ ಈ ಸಂಸ್ಥೆ ಸ್ನಾತಕೋತ್ತರ ತರಗತಿಗಳನ್ನು ಪ್ರಾರಂಭಿಸಿದೆ. ಇದು ಹಾಕಿಕೊಂಡಿರುವ ಯೋಜನೆಗಳು ಭಾಷಾವಿಜ್ಞಾನ ರಂಗದಲ್ಲಿ ಹೊಸ ಮನ್ವಂತರ ವನ್ನು ತೆರೆಯಲಿವೆಯೆಂದು ನಿರೀಕ್ಷಿಸಬಹುದಾಗಿದೆ.

ಗ್ರಂಥಸೂಚಿ

ಅಣ್ಣಾರಾಯ, ಮಿರ್ಜಿ. — 'ಮಹಾರಾಷ್ಟ್ರ ಗಡಿನಾಡಿನ ಕನ್ನಡ', ಸುವರ್ಣ ಸಂಚಯ, ಮೈಸೂರು, 1967.

ಉಪಾಧ್ಯೆ, ಆ. ನಾ. — 'ದೇಶಿಕೋಶಗಳಲ್ಲಿನ ಕನ್ನಡ ಶಬ್ದಗಳು', ಮೂಲ) Annals of the Bhandarkar Research Institute XII, 3, Poona.

ಉಪಾಧ್ಯಾಯ, ಯು. ಪಿ. — 'ಕನ್ನಡ ಭಾಷೆ' ಕನ್ನಡ ವಿಶ್ವಕೋಶ. ಸಂ. 3. ಕನ್ನಡ ಅಧ್ಯಯನ ಸಂಸ್ಥೆ. ಮೈಸೂರು

ಕಟ್ಟಿ. ವಿ. ಆರ್. — ಕನ್ನಡ ಲಘು ವ್ಯಾಕರಣ, ಐದನೇ ಆವೃತ್ತಿ, ಮುಂಬೈ ಡಿ. ಪಿ. ಐ. ಆಫೀಸ್,1895.

ಕಡೆಂಗೋಡ್ಲು ಶಂಕರಭಟ್ಟ — ವಾಙ್ಮಯ ತಪಸ್ಸು, ಬೆಂಗಳೂರು, 1967.

ಕಿಟ್ಟೆಲ್,ಎಫ್. — ಸಂಕ್ಷೇಪ ವ್ಯಾಕರಣ ಸೂತ್ರಗಳು, 1866.

— ಹಳಗನ್ನಡ ವ್ಯಾಕರಣ ಸೂತ್ರಗಳು, 1889

— ಕನ್ನಡ–ಇಂಗ್ಲಿಷ್ ಕೋಶ, 1894

ಕನ್ನಡ — ಕನ್ನಡ ಕೈಪಿಡಿ. ಎಂಬ ಕನ್ನಡ ವ್ಯಾಕರಣವು. ಧಾರವಾಡ, 1890

ಕ್ಯಾಂಬೆಲ್ ಸಿ, ಕನ್ನಡ ವ್ಯಾಕರಣ ಸಾರವು. ಬೆಂಗಳೂರು, 1893

ಕುಲಕರ್ಣಿ, ಪಿ. ಜಿ. — ಕನ್ನಡ ಭಾಷೆಯ ಚರಿತ್ರೆ, 1967.

ಕುಶಾಲಪ್ಪಗೌಡ, ಕೆ. — 'ಕನ್ನಡದ ಈಗಿನ ಪ್ರಾದೇಶಿಕ ಪ್ರಭೇದಗಳು', ಸುವರ್ಣ ಸಂಚಯ, 1967.

ಕೃಷ್ಣ, ಎಂ. ಎಚ್. — ಕನ್ನಡನಾಡಿನ ಭೂಪಟ, ಸಂಭಾವನೆ, 1941

— 'ಹಳಗನ್ನಡದ ಶಾಸನಗಳು', ಪ್ರ. ಕ. 20–3

ಕೃಷ್ಣಭಟ್ಟ, ಸೇಡಿಯಾಪು — 'ಪಂಚಮೀ ವಿಭಕ್ತಿ', ಪ್ರ. ಕ. 26–2

— ಕನ್ನಡ ವ್ಯಾಕರಣದ ಕೆಲವು ಸಮಸ್ಯೆಗಳು.(ಭಾಗ–1)

— ಕನ್ನಡ ವರ್ಣಗಳು, ಧಾರವಾಡ, 1955.

ಕೃಷ್ಣಮಾಚಾರ್ಯ, ಎಸ್. — ಹೊಸಗನ್ನಡ ನುಡಿಗನ್ನಡಿ, ಮಂಗಳೂರು.1882 (ಏಳನೇ ಆವೃತ್ತಿ)

ಕೃಷ್ಣಾಚಾರ್ಯ, ಟಿ. ಜಿ. — ಕರ್ನಾಟಕ ಭಾಷಾ ವಿಷಯವು, 1891.

— ಕರ್ನಾಟಕ ಭಾಷಾ ಸಮೀಕರಣೋಪನ್ಯಾಸ, 1899.

ಕೃಷ್ಣಮೂರ್ತಿ, ಕೆ. ಎಂ. — ಕನ್ನಡಭಾಷಾ ಸ್ವರೂಪ, ಮೈಸೂರು, 1968.

ಕೇಶಿರಾಜ — ಶಬ್ದಮಣಿದರ್ಪಣ, 1260.

Sabdamani darpana;– Celebrated, Grammatical manual of ancient canarese Literature, ed, by, J. Grarrett; Bangalore 1868.

— Sabdamanidarpanam;–ed: by,F. Kittell Mangalore, Basel Mission 1872

— Sabdamanidarpanam;- ed. by. A. Venkata Rao and H. Sesa Iyngar Madras, 1939

— Sabdamanidarpanam; ed, by. D. L. Narasimhachar, Mysore, 1964.

ಕೊಳಕೆ ಪರಮೇಶ್ವರಯ್ಯ — 'ಭಾಷೆಯ ವಿಕಾರಜನ್ಯ ಸಮಾನ ಜಾತೀಯ ಮತ್ತು ಸಮಾನ ಪ್ರಕೃತಿಕವಾದ ಭಾಷೆಗಳು', ಕ. ಸಾ. ಪ. ಪ.12-3

ಗೋವಿಂದ ಪೈ, — ಮೂರು ಉಪನ್ಯಾಸಗಳು, 1940.

ಚಿಕ್ಕಣ್ಣಯ್ಯ, ಬಿ. — ಸಚಿತ್ರ ನವೀನ ವ್ಯಾಕರಣ ಪಾಠಗಳು, ಬೆಂಗಳೂರು, 1947

ಚಿದಾನಂದಮೂರ್ತಿ, ಎಂ. — ಭಾಷಾವಿಜ್ಞಾನದ ಮೂಲತತ್ವಗಳು, ಮೈಸೂರು, 1965

— 'ಹಳೆಯ ಮೈಸೂರು ಕನ್ನಡ', ಸುವರ್ಣ ಸಂಚಯ, ಮೈಸೂರು, 1967.

ಚಿಂತಾಮಣಿ ಪೆತಕರ್, ಪಿ. ವಿ. — ಸಂಸ್ಕೃತ-ಕನ್ನಡ ಶಬ್ದ ವ್ಯುತ್ಪತ್ತಿ, (ಐದನೇ ಆವೃತ್ತಿ) ಮುಂಬಯಿ, ಡಿ. ಪಿ. ಐ. 1895,

ಜವರೇಗೌಡ, ದೇ. — 'ಕನ್ನಡ ಭಾಷೆ ಇಂದು', ಸುವರ್ಣ ಸಂಚಯ, ಮೈಸೂರು, 1967.

— ದ್ರಾವಿಡ ಭಾಷಾ ವಿಜ್ಞಾನಕ್ಕೆ ಮುನ್ನುಡಿ,1966.

— ಕನ್ನಡ ವಿಶ್ವಕೋಶಕ್ಕೆ ಮುನ್ನುಡಿ, ಸಂ. 1. 1969, ಕನ್ನಡ ಅಧ್ಯಯನ ಸಂಸ್ಥೆ.

ಜಾಗಿರ್‌ದಾರ್, ಆರ್. ವಿ. — ಶಾರದೆಯ ಸಂಸಾರ, 1933.

ಜೀಗ್ಲರ್, ಎಫ್. — ಕನ್ನಡ ಶಾಲಾ ವ್ಯಾಕರಣ, ಮಂಗಳೂರು, 1866

ಜೋಶಿ, ಎಸ್. ಬಿ. — 'ಮರಾಠಿಯಲ್ಲಿ ಹುದುಗಿರುವ ಕನ್ನಡದ ಹಲವು ಅವಶೇಷ ಗಳು',ಪ್ರ.ಕ.20

— ಕನ್ನುಡಿಯ ಹುಟ್ಟು, ಧಾರವಾಡ; 1937.

— ಕನ್ನುಡಿಯ ಜೀವಾಳ, ಧಾರವಾಡ; 1944.

ತಾತಾಚಾರ್ಯ, ಆರ್. — 'ಕಿತ್ತೀಳಿಯೂ-ಕನ್ನಡವೂ',ಕ. ಸಾ. ಪ. ಪ. 1-3.

— 'ಕನ್ನಡ ಶಬ್ದದ ವ್ಯುತ್ಪತ್ತಿ' , ಕ. ಸಾ. ಪ. ಪ. 3-1

ತೊಗರೆ ನಂಜುಂಡ ಶಾಸ್ತ್ರಿ — ಕರ್ನಾಟಕ ವರ್ಣ ಸಮಾಮ್ನಾಯ,' ಕ. ಸಾ. ಪ. ಪ. 5-3

— 'ಕರ್ನಾಟ-ಕರ್ಣಾಟ ಯಾವುದು ಸಾಧು', ಕ. ಸಾ. ಪ. ಪ. 4-4.

— 'ಕರ್ಣಾಟಕ ಭಾಷಾಲಿಪಿ',ಕ. ಸಾ. ಪ. ಪ. 4-4.

ತೊಂಟದಾರ್ಯ — ಕರ್ನಾಟ ಶಬ್ದ ಮಂಜರಿ, ಮದರಾಸು, 1870.

ದಕ್ಷಿಣಮೂರ್ತಿ ಶಾಸ್ತ್ರಿ, ಯ, — ಶಬ್ದ ಭಾಸ್ಕರ, 1871.

ಧಾರವಾಡಕರ, ರಾ.ಯ. — ಕನ್ನಡಭಾಷಾಶಾಸ್ತ್ರ; ಧಾರವಾಡ,1950.

ದೇಶಪಾಂಡೆ — 'ಕನ್ನಡ ನುಡಿಯ ಬೆಳವಣಿಗೆಗೆ ಇರುವ ತೊಂದರೆಗಳ ನಿವಾರಣೆ', ಕ. ಸಾ. ಪ. ಪ. 1-2

ನರಸಿಂಹಯ್ಯ, ಕೆ.ಆರ್. — ಕರ್ನಾಟಕ ಬಾಲ ವ್ಯಾಕರಣಂ, ಬೆಂಗಳೂರು, 1947.

ಎನ್. ಕೆ. ಆರ್. — ಕರ್ನಾಟಕ ವ್ಯಾಕರಣ ಸಾರಂ.

ನರಸಿಂಹಯ್ಯ, ಎನ್. — ಕನ್ನಡ ಪ್ರಥಮ ವ್ಯಾಕರಣ.

ನರಸಿಂಹರಾವ್, ಮಾನ್ವಿ — ನಡುಗನ್ನಡ, ಹೈದರಾಬಾದ್, 1956.
— 'ರಾಯಚೂರು ಕನ್ನಡ', ಪ್ರ. ಕ. 17–4

ನರಸಿಂಹ ಮೂರ್ತಿ, ಎ.ವಿ. — ಕನ್ನಡ ಲಿಪಿಯ ಉಗಮ ಮತ್ತು ವಿಕಾಸ. ಮೈಸೂರು, ಕನ್ನಡ ಅಧ್ಯಯನ ಸಂಸ್ಥೆ, 1969.

ನರಸಿಂಹಾಚಾರ್, ಆರ್. — 'ಕರ್ನಾಟಕ ದೇಶವೂ ಅದರ ಭಾಷೆಯೂ'. ಕ. ಸಾ. ಪ. ಪ. 5–1

ನರಸಿಂಹಾಚಾರ್, ಡಿ.ಎಲ್. — ಶಬ್ದವಿಹಾರ, ಮೈಸೂರು, 1950.

ನಾಗವರ್ಮ — ಕಾವ್ಯಾವಲೋಕನ, 1150
— ಕರ್ಣಾಟಕ ಭಾಷಾಭೂಷಣ, ಸಂ. ಅಳಸಿಂಗಳಾಚಾರ್ಯ, ಮೈಸೂರು, 1880
— ಕರ್ಣಾಟಕ ಭಾಷಾ ಭೂಷಣ, ed. by. B. Lewis Rice. Bangalore,1884
— Kavyavalokanam and Karnataka bhashabhushanam, ed. by. R Narasimhachar , Bangalore; 1903
— Kavyavalokanam. ed. by. H. R RangswamiAiengar. Mysore.O R I. 1939.
— ಶಬ್ದಸ್ಮೃತಿ, ಮೈಸೂರು.

ನಾಗರಾಜಯ್ಯ, ಎಚ್.ಪಿ. . — ದ್ರಾವಿಡಭಾಷಾವಿಜ್ಞಾನ. ಬೆಂಗಳೂರು. 1966
— 'ಉತ್ತರ ಕನ್ನಡ ಭಾಷೆ', ಗುರುದೇವ, 10–4.
— 'ಆರು ದ್ರಾವಿಡ ಭಾಷೆಗಳು'. ಅಜಂತ. 1966
— 'ಕನ್ನಡ ಲಿಪಿಯ ಮೂಲ ಮತ್ತು ವಿಕಾಸ', ಗುರುದೇವ. 9–8
— 'ದ್ರಾವಿಡ ಭಾಷೆಗಳು', ಗುರುದೇವ. 10–3

ನಾಯಕ್, ಎಚ್. ಎಂ. — ಸಮೀಕ್ಷೆ, ಮೈಸೂರು, 1967.
— 'ಕೃತಕ ಭಾಷೆಗಳು'. ಜ್ಞಾನ ಗಂಗೋತ್ರಿ, ಭಾಗ-1. 1970
— 'ಭಾಷಾ ಪರಿವಾರಗಳು', ನಿರ್ಮಲ, 1962
— ಸಾಹಿತ್ಯ ಸಲ್ಲಾಪ, ಮೈಸೂರು, 1968.
— ಕನ್ನಡ ವಿಶ್ವಕೋಶಕ್ಕೆ ಮುನ್ನುಡಿ. ಸಂ. 2, 3. 1969 1970, ಮೈಸೂರು.

ನಾರಾಯಣರಾವ್. ಎಚ್. — 'ಕರ್ನಾಟಕ ಧಾತುಗಳು', ಕ. ಸಾ. ಪ. ಪ. 1–3
— 'ಕರ್ನಾಟಕ ಮತ್ತು ದೇಶೀಯ ಪದಗಳು', ಕ. ಸಾ. ಪ. ಪ. 2–2

ನಾರಾಯಣಾಚಾರ್ಯ. ಪಿ. ಆರ್. — 'ಪ್ರಚಲಿತವಾದ ಕನ್ನಡಭಾಷೆಗೆ ತಕ್ಕ ವ್ಯಾಕರಣ ರಚನೆ', ಕ. ಸಾ. ಪ. ಪ. 3–1.

ನೃಪತುಂಗ — ಕರ್ನಾಟಕ ಕವಿರಾಜ ಮಾರ್ಗಂ, 850 ಕ್ರಿ.ಶ.
— ಕರ್ನಾಟಕ ಕವಿರಾಜ ಮಾರ್ಗಂ, ಸಂ. ಎ. ವೆಂಕಟರಾವ್, ಮತ್ತು ಎಚ್. ಶೇಷಯ್ಯಂಗಾರ್, ಮದರಾಸು. 1930

[illegible], ಎಂ. ಎಚ್. — ಕನ್ನಡ ದೇಶದ [illegible], ಬೆಂಗಳೂರು, 1922.

[illegible], ಕೆ. ವಿ. — ಕನ್ನಡ ಕೈಪಿಡಿ (ಸಂಪಾದಕರು) ಸಂ.1 ಭಾಗ-1, 2, 3, ಮೈಸೂರು ವಿಶ್ವವಿದ್ಯಾನಿಲಯ ಮೈಸೂರು 1955.

[illegible], ಎಂ. ಪಿ. — ಕೆಲವು ಕನ್ನಡ ವ್ಯಾಕರಣ ವಿಚಾರಗಳು, ಧಾರವಾಡ, 195

— ನುಡಿಗನ್ನಡಿ, ಭಾಗ-1, 2 ಧಾರವಾಡ, 1926.

— ನುಡಿಗನ್ನಡಿ ಮತ್ತು ಛಂದೋಮಂಜರಿ, ಧಾರವಾಡ, 1929

[illegible], ಪಾಂಡುರಂಗ, ವಿ. ಕೆ. — ಸಂಸ್ಕೃತ-ಕನ್ನಡ [illegible]. 1880.

ಭಟ್ಟಾಕಳಂಕ. — ಶಬ್ದಾನುಶಾಸನ, (ಸಂಸ್ಕೃತ) 1604.

— Karnataka Shabdanushasanam wit vritti, ed. by. B. Lewis Rice. Bangalor 19

— ಕರ್ಣಾಟಕ ಶಬ್ದಾನುಶಾಸನ ಪ್ರಕಾಶಿಕಾ. ಸಂ. ಕುಂದಲಗಿಯಾಚಾರ್ಯ, ಧಾರವಾಡ, 1908

— ಕರ್ಣಾಟಕ ಶಬ್ದಾನುಶಾಸನ ಪ್ರಕಾಶಿಕೆ, ಸಂ. ಕುಂದಲಗಿಯಾಚಾರ್ಯ ಮತ್ತು ಎಸ್. ಎಸ್. ಬಸವನಾಳ, ಧಾರವಾಡ, 1914.

ಬಿಳಿಗಿರಿ, ಎಚ್. ಎಸ್. — ಆಲೋಕ, ಭಾಗ-1, ಸಾಗರ, 1969–70

— ವಿವರಣಾತ್ಮಕ ವ್ಯಾಕರಣ, ಬೆಂಗಳೂರು ವಿ. ವಿ. 19

ಭೀಮಸೇನರಾವ್, ಡಿ. ಕೆ. — 'ಕನ್ನಡದಲ್ಲಿ ಭಾರತೀಯ ಮತ್ತು ಆರ್ಯೇತರ ಶಬ್ದಗಳು', ಕ. ಸಾ. ಪ. ಪ. 22-1

— 'ಗುಲ್ಬರ್ಗ [illegible] ಕನ್ನಡ', ಸುವರ್ಣ ಸಂಪುಟ ಮೈಸೂರು, 1967

— ಶಬ್ದಮಣಿ ದರ್ಪಣದ ಪಾಠಾಂತರಗಳು, ಧಾರವಾಡ, 1951.

ಮಧುರಚೆನ್ನ. — 'ಆರ್ಯ ದ್ರಾವಿಡ ಭಾಷಾ ಸಮನ್ವಯ', ಜೀ. 11–7, 1950

ಮಂಗೇಶರಾವ್, ಪಿ. — ಕನ್ನಡ ಮೂಲ ವ್ಯಾಕರಣ, ಮಂಗಳೂರು, 1936

ಮರಿಯಪ್ಪ ಭಟ್ಟ, ಎಂ. — 'ಕನ್ನಡದೊಳಗಿನ ದೇಶ್ಯ ಶಬ್ದಗಳು ಅನ್ಯಭಾಷಾ ಮ' ಕ. ಸಾ. ಪ. ಪ. 27–2

— 'ಮಹಾಪ್ರಾಣಗಳು', ಪ್ರ. ಕ. 28–2

— 'ಸಪ್ತಮೀವಿಭಕ್ತಿ', ಪ್ರ. ಕ. 29–1

— 'ದಕ್ಷಿಣ ಕನ್ನಡದ ಕನ್ನಡ', ಸುವರ್ಣ ಸಂಪುಟ ಮೈಸೂರು, 196

— ಕಿಟ್ಟೆಲ್ ಕನ್ನಡ–ಇಂಗ್ಲಿಷ್ ಕೋಶ. ಸಂ. ಮದರಾಸು, ಭಾಗ–1, 2, 3, 4

ಮಲ್ಲಪ್ಪ, ಬಿ. — ಶಬ್ದಾದರ್ಶ, ಮೈಸೂರು, ಡಿ. ಪಿ. ಐ. ಆಫೀಸ್. (25ನೇ ಆವೃತ್ತಿ) 1933.

ಮಳ್ಳಿ, ಎಸ್. ಆರ್. — 'ಕನ್ನಡದಲ್ಲಿ ತದ್ಭವೀಕರಣ', ಕ. ಸಾ.ಪ. ಪ. 1967

ಮೈಸೂರು ಸರ್ಕಾರ — ಹೊಸಗನ್ನಡ ವ್ಯಾಕರಣ, ಬೆಂಗಳೂರು. ಬಿ.ಬಿ.ಡಿ. ಆಫೀಸ್. 1934

ಮುಗಳಿ, ಆರ್. ಎಸ್. — ಕನ್ನಡ ಸಾಹಿತ್ಯ ಚರಿತ್ರೆ, ಬೆಂಗಳೂರು, 1953

ಮಾರ್ಟಿನ್ ಥಾಮಸ್, ಎಸ್. — ಹಳೆಗನ್ನಡ ಮತ್ತು ಹೊಸಗನ್ನಡದ ಸಂಕ್ಷಿಪ್ತ ವ್ಯಾಕರಣವು, ಧಾರವಾಡ, (ಮರುಮುದ್ರಣ) 1950.

ರಘುನಾಥ ರಾವ್, ಆರ್. — 'ಕರ್ನಾಟಕ ಭಾಷಾ ಚರಿತ್ರೆಯ ಹೆಗ್ಗುರುತುಗಳು', ಕ. ಸಾ. ಪ. ಪ. 2-4

— 'ಸಂಧಿ ರೂಪಗಳ ವಿಚಾರ', ಕ. ಸಾ. ಪ. ಪ. 2-1

— 'ಕರ್ನಾಟಕ ವರ್ಣಮಾಲೆಯ ಉತ್ಪತ್ತಿ ವಿಚಾರ', ಕ. ಸಾ. ಪ. ಪ. 1-3

— 'ಕರ್ನಾಟಕ ವಿಭಕ್ತಿಗಳ ಸ್ವರೂಪ', ಕ. ಸಾ. ಪ. ಪ. 1-2.

— ಕರ್ನಾಟಕ ಭಾಷಾ ವ್ಯಾಕರಣೋಪನ್ಯಾಸ ಮಾಲಿಕೆ, ಭಾಗ 1, 2. ಬೆಂಗಳೂರು, 1894.

ರಾಮಕೃಷ್ಣಯ್ಯ, ಡಿ. — ಕನ್ನಡ ವ್ಯಾಕರಣ, 1923

— ಸಮಾಸ ಶಬ್ದಗಳ ಮತ್ತು ಸಂಧಿಪ್ರಕರಣ, 1895.

ರಾಮಸ್ವಾಮಿ, ರಾ ಸಾ. — ಕೋಡಗು, ಕನ್ನಡ ಮತ್ತು ದ್ರಾವಿಡ ಭಾಷಾ ವರ್ಗ ಗಳಲ್ಲಿರುವ ಸಾಮ್ಯತೆ ಅಭ್ಯಾಸಗಳು ಹೊಸಪೇಟೆ, 1960

ರಾಮಸ್ವಾಮಿ ಅಯ್ಯಂಗಾರ್, ಕೆ. — ಲಘುವ್ಯಾಕರಣ ಬೆಂಗಳೂರು, 1903.

ರಾಮಸ್ವಾಮಿ ಶಾಸ್ತ್ರಿ, ಎಂ. — ಕರ್ನಾಟಕ ವಾಗ್ಭೂಷಣ, ಬೆಂಗಳೂರು, ಬಿ.ಬಿ.ಡಿ. ಆಫೀಸ್, 1890

ಲಿಂಗಣ್ಣಯ್ಯ, ಡಿ. ಎಸ್. — 'ಮೈಸೂರು ಕನ್ನಡದ ಉಪಭಾಷಾ ಭಾಷಾ ಸ್ವರೂಪಗಳು', (ಅನು) ಪ್ರ. ಕ. 45-3.

ವೆಂಕಣ್ಣಯ್ಯ, ಟಿ. ಎಸ್. ಮತ್ತು
ಶ್ರೀಕಂಠಯ್ಯ, ಬಿ. ಎಂ. — ಕನ್ನಡ ಕೈಪಿಡಿ, ಭಾಗ-4.
'ಕನ್ನಡ ಭಾಷೆಯ ಚರಿತ್ರೆ', 1927, (ಸಂಪಾದಕ) ಕೆ. ವಿ. ಪುಟ್ಟಪ್ಪ, ಮೈಸೂರು ವಿ. ವಿ., 1951

ವೆಂಕಟೇಶ ಅಯ್ಯಂಗಾರ್, ಎಂ. — ನಮ್ಮ ನುಡಿ, ಬೆಂಗಳೂರು, 1960.

ವೆಂಕಟನಾರಣಪ್ಪ, ಎಸ್. ವಿ. ಮತ್ತು,
ಅನಂತರಾಮ ಶಾಸ್ತ್ರಿ, ಕೆ. — ಹೊಸಗನ್ನಡ ವ್ಯಾಕರಣ, ಭಾಗ-1, ಮೈಸೂರು, 1935

ಶಂಕರಯ್ಯ, ಬಿ. ಎಸ್. — 'ಧ್ವನಿಮಾಪನ ಮತ್ತು ವರ್ಣ ಪರಿವರ್ತನೆ', ಪ್ರ. ಕ. 43-4

— ಕನ್ನಡ ಭಾಷಾ ಚರಿತ್ರೆ, ಪೂನಾ 1968.

ಶಿವರಾಮಯ್ಯ, ಎಸ್. ವಿ. — ಕನ್ನಡ ಲಘು ವ್ಯಾಕರಣ, 1935

— ಕನ್ನಡ ಪ್ರೌಢ ವ್ಯಾಕರಣ.1935.

ಶೇಷಯ್ಯಂಗಾರ್, ಎನ್. — ವಾಕ್ಯರಚನಾಮಾಲೆ, ಮಂಗಳೂರುಭಾಗಗಳು, ಬೆಂಗಳೂರು 1935

ಶ್ರೀಕಂಠಯ್ಯ, ಬಿ.ಎಂ. — 'ಪೂರ್ವದ ಹಳಗನ್ನಡ ಮತ್ತು ಹಳೆಯ'. ಕ.ಸಾ.ಪ.ಪ.27-1

— 'ಕನ್ನಡಕ್ಕೆ ಒಂದು ಕಟ್ಟು'. ಕನ್ನಡಿಗರಿಗೆ ಒಂದು ಒಳ್ಳೆಯ ಸಾಹಿತ್ಯ-1

— ಕನ್ನಡಭಾಷೆಯ ವಿಚಾರಗಳು. ಬೆಂಗಳೂರು.1913
— 'ಕನ್ನಡ ಭಾಷೆಯ ಚರಿತ್ರೆ' .(ಕನ್ನಡ ಕೈಪಿಡಿ. ಭಾಗ–4)
— 'ಕನ್ನಡ ಸಾಹಿತ್ಯದ ಚರಿತ್ರೆ'. (ಕನ್ನಡ ಕೈಪಿಡಿ, ಭಾಗ–5) 1955

ಶ್ರೀಕಂಠಯ್ಯ, ಟಿ. ಎಸ್. — ಕನ್ನಡ ಮಧ್ಯಮ ವ್ಯಾಕರಣ. ಬೆಂಗಳೂರು. ಡಿ.ಪಿ.ಐ. ಆಫೀಸ್, 1939.
— 'ಕರ್ನಾಟಕ ಎಂಬ ರೂಪವು ಅಸಾಧುವೆ?' ಕ. ಸಾ. ಪ. ಪ. 23–3, 1938.
— 'ಕನ್ನಡದ ಈಗಿನ ವ್ಯಾಪ್ತಿ', ಪ್ರ. ಕ. 16.3

ಶ್ರೀಧರ. — 'ಕುಂದಗನ್ನಡ', ಕ. ಸಾ. ಪ. ಪ 41–1.2

ಶ್ರೀವಿಜಯ — ಕವಿರಾಜಮಾರ್ಗ. ಸಂ. ಎಂ. ವಿ. ಸೀತಾರಾಮಯ್ಯ ಬೆಂಗಳೂರು, 1968

ಶ್ರೀನಿವಾಸಯ್ಯಂಗಾರ್, ಎಂ. ಬಿ — ವಾಚಕ ಬೋಧಿನಿ. ಮೈಸೂರು. 1894.

ಶ್ರೀನಿವಾಸಾಚಾರ್ಯ, ತಿರು. — ವ್ಯಾಕರಣ ಸಾರವು. ಮೈಸೂರು. 1947.

ಶ್ರೀನಿವಾಸರಾಘವಾಚಾರ್ಯ,ಟಿ. ಮತ್ತು ಬಿ. ಕೃಷ್ಣಪ್ಪ — 'ಹಳಗನ್ನಡದ ವ್ಯಾಕರಣ' ಕನ್ನಡ ಕೈಪಿಡಿ. ಭಾಗ–1 ಮೈಸೂರು, 1955
— 'ಕರ್ನಾಟಕ ಛಂದಸ್ಸು'. (ಕನ್ನಡ ಕೈಪಿಡಿ. ಭಾಗ–2) ಮೈಸೂರು ವಿ. ವಿ., 1955

ಶ್ರೀನಿವಾಸರಂಗಾಚಾರ್ಯ, ಟಿ. — ಕನ್ನಡದ ಕನ್ನಡಿ ಅಥವಾ ಕರ್ನಾಟಕ ಮೂಲಾದರ್ಶ, ಮೈಸೂರು. 1936

ಹನುಮಂತಪ್ಪ, ಎಸ್. — ಕನ್ನಡನುಡಿಗನ್ನಡಿ ಬೆಂಗಳೂರು. 1947.

ಹಿರೇಮಠ. ಆರ್. ಸಿ. — 'ಧಾರವಾಡ ವಿಭಾಗಗಳ ಕನ್ನಡ', ಸುವರ್ಣ ಸಂಚಯ, 1967

[ಕ.ಸಾ.ಪ.ಪ.=ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆ. ಪ್ರ.ಕ.=ಪ್ರಬುದ್ಧ ಕರ್ನಾಟಕ. ಸಂ.= ಸಂಪುಟ, ಸಂಪಾದಕ.]

Alfred Master — 'Maharastra and Kannada', Indian Antiquery, 1928

Andronov, M.S. — Kannada Language, (in Russian) Mascow, 1962,(tr. into Kannada)

Biligiri, H. S. — 'The Nasal phoneme of Kannada', Indian Linguistics, Vol, 16, 1955
— 'Kannada Verbs–Two models'– Indian Linguitics Vol-2, 1959
— 'The Conjugational system of Kannada, Kannada Studies, Mysore (Half–Yearly Journal)1966

Bloch Jules — Grammatical Structure of Dravidian Languages; (tr. by R. G. Harshe from French) Poona–Deccan College, 1954.

Brigal, F. — 'A Study of Caste and Dialect in Mysore'; Indian Linguistics, Vol-21, 1960

Brigel, J. — 'A Grammar of Tulu Language; Mangalore, 1872

Bright, W. — 'Linguistics Change in some Indian Caste Dialect', L D S A. P P. 19–26

— 'Social Dialect and Language History'; C A No 1, 1960

— An outline of Colloquial Kannada; Deccan College, Poona, 1958

Burrow, T. — Collected papers on Dravidian Linguistics; (Cyclostyled) Annamalai University, 1965

Caldwell, R. — A Comparative Grammar of the Dravidian or South Indian family of Languages; London; 1875, 1913, 1956

Chatterji, S. K. — 'Old Tamil, Ancient Tamil and primitive Dravidian' ,–Indian Linguistics Vol 16, 1954

Cole, R. A. — Elementary Grammar of the Coorg Language; Bangalore. 1867.

Chidananda Murty, M. — 'Inscriptions of Karnataka' Kannada Studies, Vol-1–2, 1965 Mysore

Emeneau, M. B. — Kota Texts,– Vol-I–IV Berkely, ...1944

— 'Echo–Words in Toda,'–New Indian Antiquary; Poona.

— 'The Vowels of the Badaga Language' Language, 15, 1939.

— 'Toda, A Dravidian Language', ...Tps, 1958

Gai, G. S. — 'Historical Grammar of Kannada; Deccan College, Poona, 1946.

— The inclusive and exclusive First person in Kannada', Deccan College Bulletin, 1940

— Middle Demonstrative 'u' in old Kannada' Deccan College Bulletin, 1950

— 'Pronouns in Vaddaradane', – Indian Linguistics, Vol-16, 1955.

Godavarama, K. — 'A Study of the personal pronouns in the South Dravidian Languages', New Indian Antiquary; Poona

Grierson, G. A. — Linguistic Survey of India; Vol-IV Munda and Dravidian Languages. ······Calcutta,190

Hiremath, R. C. — Structure of Kannada; Dharwar, Karnataka University, 1961

Javare Gowda, D. — 'Contribution of Sabdamani Darpan towards an understanding of the History of Kannada Language", Kannada Studies Vol-77, Mysore University, 1965

Kelley, G. — 'Review of Bright's– An out-line of Colloquial Kannada,' JAOS, 80,196

Kittell, F. — A Grammar of the Kannada Languag Mangalore,190

— Preface to Kannada–English Dictionary, Mangalore, 1894

Mahadevan — Gulbarga Kannada; Deccan Colleg ············Poona 1968

Mariyappa Bhatta, M. — Preface to Kannada–English Dicti nary of F. Kittell & (editor) Madr 1969

Mccormack, W. — 'Social Dialects in Dharwar Kanna LDSA. PP. 79-

Mckerrell, J. M. — Grammar of the Carñataca Langua Madrass, 1

Mugli, R. S. — 'Kannada' In Encyclopaedia of Literature, Ed. Joseph, T Shipley, Vol-1, New York 1946
New York, 1946, PP.526–529
— Heritage of Karnataka; Bangalore, ... 1946

Narasimhaiah, A. N. — A Grammar of the oldest Kanarese Inscriptions, Mysore,1941.
— 'The History of 'P' in Kanarese' Bulletin of school of oriental Studies; London 8, 2–3

Narasimhachar, R. — History of Kannada Language; Mysore, 1934.

Nayak, H. M. — Kannada-Literary and Colloquial; Mysore, 1967
— 'Co-existent phonemic systems and an old Kannada Grammar', Kannada Studies, Vol-1, 2, Mysore University 1965
— "Some early evidences of Diglossia in Kannada", Kannada Studies. Vol. 2–1, Mysore University 1966.
— Kannada Literature — A Deade. Mysore, 1968.
— "Brief survey of recent Grammatical
— literature in Kannada", Kannada studies: Vol. 2–2, Mysore, 1965.

Ramaswamy Iyer, L. V. — Two Dravidian problems, – II, "Kannada variants – kem–kis – kece. etc". Quarterly Journal of the Mythic Society, Bangalore 1932–33.
— A problem of Dravidic Pohnology. 1965
— 'A problem of Dravidic Phonology; Tamil medial, –Y–, –S–, and kannada –S–, JORM,Madras, 1932.
— Collected papers; Vol-1,2. (Cyclostyled) Annamalai Univeraity. Madras. 1959

Ramanacharya, S. — Halakki Kannada; Deccan College Poona, 1968

Ramanujan, A. K. — A Generative Grammar of Kannada; Indian University, Doctoral thesis, (Unpublished) U.S.A., 1962.

Reeve, R. M. — A Dictionary of Canarese and English. (Revised, Sanderson) Bangalore, 1858,

Shankaran, C. R. — Some problems in Kannada Linguistics Dharwar, 1954

Srikantaiah, B. M. — 'Purvada Halagannada and Tamil' 10th All India Oriental Conference Tirupathi 1940

Spencer Harold — A Kanarese Grammar; (Revised by W. Perston, 1950) Mysore, 1914.

Sreekantaiya, T. N. — 'The Kannada Language through the Ages', Karnataka Darshana, Bombay, 1955

— Notes on Loans and Native replace ments in Kannada,' AA–58, 1956

— 'The mutation "i, u, e, and o", in Kannada'; proceedings of 8th Oriental Conference, Mysore, 1925.

— 'Affricates in Kannada Speech', Indian Linguistics, Vol–14, 1954.

Thomas Hodson — An Elementary Grammar of the Kanarese Language, 1859, 2nd ed,1864

Ziegler, F. — A School Dictionary, English and Kannada (2nd ed.), Mangalore, 1889

ಎಚ್. ಚಂದ್ರಶೇಖರ

ಬಾಂಗ್ಲಾಕವನ ಪಂಚಕ

ಸುವರ್ಣ ಬಂಗಾಲ*

ನನ್ನ ನಲವಿನ ಸುವರ್ಣ ಬಂಗಾಲ
ನಾ ಪ್ರೇಮಿಸುವ ನಿನ್ನ ನೆಲ ಮುಗಿಲು
ನುಡಿಸುತಿವೆ ನನ್ನೆದೆಯ ಕೊಳಲ.
ವಸಂತ ಬಂದಾಗ–
ಓ ನನ್ನ ತಾಯಿ,
ನಿನ್ನ ಮಾಮರದ ತೋಪಿನ ಸುವಾಸನೆ
ಗಾಳಿಗದು ಸುರಾಪಾನ!
ಹೇಮಂತ ಬಂದಾಗ
ಓ ನನ್ನ ತಾಯಿ
ಜೇನುಗೂಡಿನಂಥ ಫಸಲು
ಅದೆಂಥ ವೈಭವ
ಅದೆಂಥ ಗಾಡಿ
ಎಂಥ ಮೋಡಿ
ಹಸಿರು ರತ್ನಗಂಬಳಿ ಹಾಸಿದೆ ಆಲದಡಿಯಲ್ಲಿ
ಮತ್ತೆ!
ಓ ನನ್ನ ತಾಯಿ, ನಿನ್ನ ನದಿಗಳ ದಡಗಳಲಿ
ನನ್ನ ಕಿವಿಯೊಳಗೆ ನಿನ್ನದೇ ಸವಿಯುಲಿ
ಓ ನನ್ನ ತಾಯಿ
ರೈತ, ಕಾರ್ಮಿಕ
ಕರಣಿಕ, ಧಾರ್ಮಿಕ
ಇವರೆಲ್ಲ ನಿನ್ನ ಸುತರು
ನನ್ನ ಸಹಜಾತರು
ನಿನ್ನಡಿಗೆ ನಮಿಸುವೆ
ಓ ನನ್ನ ತಾಯಿ
ನಿನ್ನ ಪಾದಧೂಳಿಯನು ನೀಡೆನಗೆ

---

*ಮೂಲ ಬಂಗಾಲಿ–ರವೀಂದ್ರನಾಥ ಟಾಗೂರ್; ಇಂಗ್ಲಿಷಿಗೆ– ಸುಬ್ರತಾ ಬ್ಯಾನರ್ಜಿ

ಅದು ಪಾವನ ತಿಲಕವೆನಗೆ
ನಿನ್ನಡಿಯಲ್ಲಿ ನನ್ನ ಸರ್ವಾರ್ಪಣೆ
ಓ ನನ್ನ ತಾಯಿ
ಓ ನನ್ನ ತಾಯಿ–

ಬ್ಲಡ್‌ಬ್ಯಾಂಕ್*

1

ದಿನ ದಿನವೂ ಹರಿಯುತಿದೆ ರಕುತ
ಬಂಗಾಲದ ನೆಲದೊಳಕ್ಕೆ ಅನವರತ
ದಾನವಾಗಿತ್ತಿಹನು ಪ್ರತಿಯೊಬ್ಬ ಪಯಣಿಗ
ಈ ಬ್ಲಡ್ ಬ್ಯಾಂಕಿಗೆ–
ಬಂಗಾಲದೀ ನೆಲಕೆ,
ರೈತ, ಕಾರ್ಮಿಕ
ತರುಣ ಮುದುಕ
ಇವರೆಲ್ಲರ ರಕುತ
ಬಿಸಿಲನುಂಡ ಬೀಜದೊಲು
ನೆಲದೊಳಕ್ಕಿಳಿದಿದೆ
ಬಂಗಾಲದ ರಕ್ತವೆಲ್ಲಾ ಹರಿಯುತಿದೆ ಹುಚ್ಚು ಹೊಳೆಯಾಗಿ!
ದಿವ್ಯ ಭವ್ಯ ಭವಿಷ್ಯತ್ತಿಗಾಗಿ! !

2

ಪದ್ಮಾ ಬತ್ತಬಹುದು
ಸಾಗರಗಳು ನಿರ್ನಾಮವಾಗಬಹುದು
ಚೆಲುವೆಲ್ಲಾ ನಲುಗಬಹುದು
ಆದರೆ,
ಒಂದು ದಿನ – ಮುಂದೊಂದು ದಿನ
ಈ ರಕುತದ ಸೆಲೆಯುಂಡು
ಪದ್ಮಾ ಮತ್ತೆ ಹರಿಯುತ್ತದೆ
ಬಂಗಾಲದ ನೆಲ ನವ ಚೈತನ್ಯ ಪಡೆದು
ನವೋ ನವ್ಯ ಚೆಲುವಿನಾಗರವಾಗಿ
ಕಂಗೊಳಿಸುವಳು ತಾಯಿ ಮತ್ತೊಮ್ಮೆ ! !

3

ಆಸ್ಪತ್ರೆಯ ಬ್ಯಾಂಕಿಗಾರು ದಾನಗೈವರು?
ಅಲ್ಲಿ,
ಔಷಧಿಗಳ ವಿಷಗಾಳಿಯಲ್ಲಿ
ಕಣ್ಣೀರು ಮೊಸರಾಗುತ್ತದೆ

---

*ಮೂಲ ಬಂಗಾಲಿ: ಹುಮಾಯೂನ್ ಆಜಾದ್. ಇಂಗ್ಲಿಷ್ ಅನುವಾದ: ಸುಬ್ರತಾ ಬ್ಯಾನರ್ಜಿ

ಬಂಗಾಲದೀ ನೆಲಕಿಂತ ಸುಭದ್ರ
ಬ್ಯಾಂಕ್ ಇನ್ನೊಂದಿಲ್ಲ.
ಒಂದೊಂದು ಹನಿ ಇಲ್ಲಿ
ಹತ್ತು ಮಡಿಯಾಗುತಿದೆ ಚಣದಲ್ಲಿ
ಬಂಗಾಲದ ರಕುತವೆಲ್ಲಾ ಹರಿಯುತಿದೆ ಹುಚ್ಚು ಹೊಳೆಯಾಗಿ
ಭವ್ಯ ಭವಿಷ್ಯತ್ತಿಗಾಗಿ
ದಿವ್ಯ ಭವಿಷ್ಯತ್ತಿಗಾಗಿ.

ನನ್ನ ನಾಡು*

ನನ್ನ ನಾಡಿನ ನೆಲಜಲ
ಹೂದೋಟ ಗಿರಿಮಾಲೆ
ಬಂದರು ಬೆಳುವೊಲ
ಮೇಣ್ ಅವರ ಸುತರು
ನನ್ನ ರಕುತದಲ್ಲಿ
ಒಂದಾಗಿ ಬೆರೆತು
ನನ್ನಾತ್ಮದಲ್ಲಿಹರು.

ಚೆಲುವೆಯ ಚೆಲುವಿನಲ್ಲಿ
ಗೀತದ ಸಂಗೀತದಲ್ಲಿ
ಚೆಲುವಿನ ಪ್ರತಿ ತಾಣದಲ್ಲಿ
ನಾ ನಿನ್ನ ಕಾಂಬೆ ಓ ನನ್ನ ತಾಯಿ ! !
ನೀಲ ಸ್ಫಟಿಕದಂಥ ಸಾಗರ
ತಣ್ಣೆಳಲಿನ ಹಳ್ಳಿ ಶಾಂತಿಯಾಗರ
ಸೊಗಭರಿತ ಸುತರು
ಪಾರಿವಾಳದ ಗುಟರು
ಕೋಗಿಲೆಯ ಹಾಡು
ಸೊಗದ ಸೊಬಗಿನ ಬೀಡು
ಈ ನನ್ನ ನಾಡು
ಓ ನನ್ನ ನಾಡು.

ನೋವು†

ನನ್ನಣುಗ ಜ್ವರತಪ್ತನಾಗಿ ಮಲಗಿದ್ದ
ಕಂಗಳು ಕೆಂಪದುಂಡೆಗಳು
ಹಣೆ ಕಾದ ಕಾವಲಿ

---

*ಮೂಲ ಬಂಗಾಲಿ: ಅಬು ಹೆನಾ ಮುಸ್ತಾಫಾ ಕಮಲ್. ಇಂಗ್ಲಿಷ್ ಅನುವಾದ: ಪ್ರಿತಿಶ್ ನಂದಿ
†ಬಂಗಾಲಿ ಮೂಲ: ಶಮ್‌ಶುರ್ ರಹಮಾನ್. ಇಂಗ್ಲಿಷ್ ಅನುವಾದ: ಪ್ರೀತಿಶ ನಂದಿ

ಅಪ್ಪ ಬರಲಾರರು
ಮೊದಲಿಗೆ ಬೆಟ್ಟಗಿದ್ದ ಬಿರುಗಾಳಿ
ಬರುವುದರ ಕಾಲ ಬಾಗಿಲುಗಳ್
ನನ್ನ ತಾಯಿ ಕಾಯಿಗಳು
ಎದೆಯೊಳಗಿರುವ
ನೈವೇದ್ಯ ಕರೆಯಲಿ

ಕೆಂಡದುಂಡೆಗಳು ನನ್ನತ್ತ ಬಿಟ್ಟಿರುವ
"ಸೋಲಾಗಬಾರದು ಬಂದರೆ
ಮಲಗು ಚಿಕ್ಕ" ಹಾಡುವುದರ
ಅದರ ಹಾಡು ಬಂದಿದ್ದರೆ
ಆ ಬಳಿಗೆ ಬಿಟ್ಟರೆ.
ನಿನ್ನಪ್ಪನೆ,
ಮಾಡಿದುದ್ದಕ್ಕೂ ಬಿಟ್ಟ ಮಾತ್ರ "ನನ್ನ" ಗೆದ್ದವು
ನಿನ್ನಪ್ಪನೆ
ನಿನ್ನಾದರೂ ಬಂತೆ
ಬೇಗ ಹುಟ್ಟಿತೆ ಮತ್ತೆ!
ಅದರ ನೋಡಲು
ಹಂಚಿಕೊಂಡಿದ್ದರೆ ನಾನು...
ಆದರೆ—
ನನಗಾಗ ನೋಯುತ್ತಿತು.
ನೋಡಿದರೆ ಇಲ್ಲವಾದ ನೋಡಿ ನೋಡಿ! !

ಶಾಪ*

ಬಿಸಿ ಹಾರಿದಾಗಲೂ ಬತ್ತ
ಬರೆಯುವುದರ ಹಾಡಿದಾಗಲೂ
ನನ್ನ ನಿನ್ನ ಹೆಸರುಗಳು ಬೇರಾದರೂ
ನಾ. ನೀ. ಆ ಕಪ್ಪಿನಂತ ಇರುವುದು ಬಾಗಿಲ್ಲವೋ
ಅದು ಮನಸಿನೊಳಗಿದ್ದುದಾದರೂ
ಅದನ್ನೂ ಪ್ರೀತಿಯ ಹಣ ಅದರೊಳಗೇ!
ಬೇಗ ಬರೆಯಬೇಕೆಂದು ಶಾಪವೇ!

---

* ಬಂಗಾಳಿ ಮೂಲ: ಸಮರೇಶ್ ಸೇನ್. ಇಂಗ್ಲಿಷ್ ಅನುವಾದ: ಪ್ರೀತೀಶ ನಂದಿ. ಈ ಎರಡೂ ಕವಿತೆಗಳು 'ಇಂಟ್ರೆಗಲ್ ವಿಷ್ಣು ಆಫ್ ಇಂಡಿಯಾ' ಕೃತಿಯಿಂದ

ಕಮ್ಮಟದ ಕಿಡಿಗಳು

" ಅಟ್ಟಿಯಿಂದತ್ತಿಗೆಯೆಂಬ ಪಾತಕನ್ ...."

ಪಂಪಭಾರತ (1-79)ದಲ್ಲಿ ಬರುವ ಮೇಲಿನ ಪದ್ಯದ ಸಂದರ್ಭ ಹೀಗಿದೆ: ಭೀಷ್ಮ, ತನ್ನ ತಮ್ಮ ವಿಚಿತ್ರವೀರ್ಯನಿಗಾಗಿ ಮೂವರು ರಾಜಕುಮಾರಿಯರನ್ನು ಗೆದ್ದು ತರುತ್ತಾನೆ. ಆದರೆ ಅವರಲ್ಲಿ ಹಿರಿಯಳಾದ ಅಂಬೆ ಮಾತ್ರ ಬ್ರಹ್ಮಚರ್ಯ ವ್ರತವನ್ನು ಹಿಡಿದಿದ್ದ ಭೀಷ್ಮನನ್ನೇ ಮದುವೆಯಾಗುವುದಾಗಿ ಹಟ ಹಿಡಿದಾಗ, ತನ್ನ ಪ್ರತಿಜ್ಞೆಗೆ ಎಂದೂ ಹಾನಿ ಭಂಗ ತರುವುದಿಲ್ಲವೆಂದು ಭೀಷ್ಮ ಹೇಳುತ್ತಾನೆ. ಆ ಸಂದರ್ಭದಲ್ಲಿ ಆತನಾಡುವ ಮಾತು ಇದು:

ಅತ್ತ ಸುರೇಂದ್ರರಾಜ್ಯಪದಮಿತ್ತೊಡಮಿತ್ತ [illegible]
[illegible]
[illegible]
1ದ1ತ್ತಿಗೆಯೆಂಬ ಪಾತಕ2ನಗೇನೆ2ಗಕ್ಕುಮೆ ಪಂಕಜಾನನೇ॥

[ಪಾಠಾಂತರಗಳು: 1-ಒ(ಕ); 2-ಎಗೇ ಎನ (ಕ)]

ಮೇಲೆ ಕೊಟ್ಟಿರುವ ಪಾಠ ಪರಿಷತ್ತಿನ ಆವೃತ್ತಿಯ ಸಂಪಾದಕರು ಅಂಗೀಕರಿಸಿರುವ ಪಾಠ. ಪದ್ಯದ ನಾಲ್ಕನೆಯ ಪಾದದ್ದಾಗಿರುವ ಎರಡು ಪಾಠಾಂತರಗಳನ್ನು ಆ ಆವೃತ್ತಿಯಲ್ಲಿ ಸೂಚಿಸಿದ್ದಾರೆ. ಅದನ್ನು ಮೇಲೆ ಕಾಣಿಸಿದೆ.

ಮೇಲಿನ ಪದ್ಯಕ್ಕೆ ವಿವರಣೆ ಕೊಡುವಾಗ 'ಅತ್ತಿಗೆ' ಎನ್ನುವ ಮಾತಿಗೆ, ಆ ಸಂದರ್ಭಕ್ಕೆ ಹೊಂದಿಸಿಕೊಂಡು, 'ತಮ್ಮನ ಸೋದರನ ಹೆಂಡತಿ' ಎಂದು ಅರ್ಥ ಹೇಳುತ್ತಾರೆ. ಜೊತೆಗೆ, ಕೆಲವರು "ಅಟ್ಟಿಯಿಂದ ಕಾಯು. ತ್ರಿಗೆಯೆಂಬ ಪಾತಕನೆಗೇ ಎನಗಕ್ಕುಮೆ" ಎಂದು ಪಾಠಾಂತರದ ಸಹಾಯದಿಂದ ತಿದ್ದಿ ಓದಿ "ಕಾಯು. ತ್ರಿಗೆಯೆಂಬ ಪಾತಕನೆಗೇ ಎನಗಕ್ಕುಮೆ" [illegible] ಅತ್ತಿಗೆ ಎಂದು [illegible] ಕರೆದು ಈಗ 'ಬಗೆ' ಎಂದು ಹೆಂಡತಿಯಂತೆ ಸಂಬೋಧಿಸುವುದು ಸಾಧ್ಯವೇ" ಎಂದು ಆ ವಾಕ್ಯವನ್ನು ವ್ಯಾಖ್ಯಾನಿಸುತ್ತಾರೆ. 'ಅತ್ತಿಗೆ' ಎಂಬ ಮಾತಿಗೆ 'ತಮ್ಮನ ಹೆಂಡತಿ' ಎಂಬ ಅರ್ಥ ನಮಗೆ ತಿಳಿದ ಮಟ್ಟಿಗೆ ಇಲ್ಲ. ಜೊತೆಗೆ ಅಂಬೆ ವಿಚಿತ್ರವೀರ್ಯನನ್ನು ಮದುವೆಯಾಗಲೇ ಇಲ್ಲ. 'ಅತ್ತಿಗೆ' ಎಂಬ ಮಾತಿಗೆ 'ತಮ್ಮನ ಹೆಂಡತಿ' ಎಂದು ಅರ್ಥೈಸುವುದು ಅಸಂಗತವೆಂದೂ. ಅದಕ್ಕೆ ಆ ಸಂದರ್ಭದಲ್ಲಿ 'ಪತ್ನಿ' ಎಂದೇ ಅರ್ಥಮಾಡಬೇಕೆಂದೂ ಶ್ರೀ ಸೇಡಿಯಾಪು ಕೃಷ್ಣಭಟ್ಟರು ತೋರಿಸಿಕೊಟ್ಟಿದ್ದಾರೆ-*. ಅವರ ಅಭಿಪ್ರಾಯವನ್ನು ಒಪ್ಪಿಕೊಂಡರೆ, ಈಗ ಪರಿಷತ್ತಿನ ಆವೃತ್ತಿಯಲ್ಲಿ ಸ್ವೀಕೃತವಾಗಿರುವ ಪಾಠವೇ ನಿಲ್ಲುತ್ತದೆ.

ಶ್ರೀ ಕೃಷ್ಣಭಟ್ಟರು 'ಅತ್ತಿಗೆ' ಪ್ರಯೋಗವಿರುವ ಪೊನ್ನನ **ಶಾಂತಿಪುರಾಣದ** (6-80) ಪದ್ಯವೊಂದನ್ನು ಉದಾಹರಿಸಿದ್ದಾರೆ. ಆ ಪದ್ಯ ಹೀಗಿದೆ:

---

*. ಟಿ. ಆರ್. ಕೃಷ್ಣ ಶಾಸ್ತ್ರಿಯವರು 'ಅತ್ತಿಗೆ' ಎಂಬ ಶಬ್ದ ಲೇಖನದಲ್ಲಿ (ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆ. 41. 1-2. ಜೂನ್ - ಡಿಸೆಂಬರ್ 1956. ಪು 77-94) ಶ್ರೀ ಸೇಡಿಯಾಪು ಕೃಷ್ಣಭಟ್ಟರ ಈ ಲೇಖನವನ್ನು ಉದ್ಧರಿಸಿದ್ದಾರೆ.

ಒಡವುಟ್ಟಿದನರಸಿಯನೆ(ರೆ)
ನ್ನೊಡವುಟ್ಟಿದರೆನ್ನದಬ್ಬೆಯೆಂದತ್ತಿಗೆಯೆಂ
ದೊಡೆ ನಾಲಗೆಯಾತನ ತಲೆ
ಸಿಡಿಲ್ದು ಪಾಱೆಟ್ಟುಗುಮೆನ್ನ ಪಾಱುಂಬಳೆಯೊಳ್॥

ಇಲ್ಲಂತೂ ಸೋದರನ ಹೆಂಡತಿಯನ್ನು 'ಅಬ್ಬೆ' ಎಂದು ಗೌರವಿಸಬೇಕೇ ಹೊರತು. 'ಅತ್ತಿಗೆ' ಎಂದು ಅವಳನ್ನು ಬಯಸಬಾರದೆಂಬ ಎಚ್ಚರಿಕೆಯಿದೆ. ಇಲ್ಲಿ 'ಅತ್ತಿಗೆ' ಎಂಬ ಮಾತು ಅಣ್ಣನ ಹೆಂಡತಿಯನ್ನು ಸೂಚಿಸುವುದಿಲ್ಲವೆಂಬುದು ಸ್ಪಷ್ಟವಾಗಿದೆ ಮತ್ತು ಆ ಮಾತಿಗೆ 'ನಲ್ಲೆ' ಎಂಬುದೇ ಸರಿಯಾದ ಅರ್ಥ ವೆಂಬುದೂ ಸ್ಪಷ್ಟವಾಗಿದೆ. 'ಅಬ್ಬೆ' ಎಂದು ಎಲ್ಲರ ಮುಂದೆ ಕರೆದು, ಆಮೇಲೆ 'ಅತ್ತಿಗೆ' ಎಂದು ಕರೆದು ಪ್ರೀತಿಸುವುದು – ಇಂತಹ ಒಂದು ಗಾದೆಯ ಮಾತನ್ನು ಪಂಪ ಪೊನ್ನರು ಬಳಸಿಕೊಂಡಿದ್ದಾರೆಂಬ ಶ್ರೀ ಕೃಷ್ಣಭಟ್ಟರ ಊಹೆ ಬಹುಶಃ ಸಿಲ್ಲತಕ್ಕದ್ದು. ಇಂತಹ ಗಾದೆಯ ಮಾತನ್ನೋ ಅಥವಾ ಪಂಪನ ಉಕ್ತಿಯನ್ನೋ ಹದಿನಾರನೇ ಶತಮಾನದ ನಂಜುಂಡ ಕವಿ ತನ್ನ **ರಾಮನಾಥ ಚರಿತ** ದಲ್ಲಿ (6.97)ಬಳಸಿಕೊಂಡಿರುವಂತಿದೆ.

ಪುರುಷನ ಮುಂದಕ್ಕ ಬಾರೆಂಬರವನಿಲ್ಲ
ದಿರಲತ್ತಿಗೆಯೆಂದು ಕರೆದು
ನೆರೆವರೋರೋರ್ವರಂಗನೆಯರನೋರೋರ್ವ
ರಿರವಿದೇನಲ್ತೆ ಮಾನವರ॥

ಇಲ್ಲಿ ಸಂದರ್ಭ ಬೇರೆಯಾದರೂ. ಅರ್ಥ ಒಂದೇ. ಅಲ್ಲಿ 'ಅಬ್ಬೆ' ಇದೆ. ಇಲ್ಲಿ 'ಅಕ್ಕ' ಇದೆ–ಅಷ್ಟೇ ವ್ಯತ್ಯಾಸ.

ಆದ್ದರಿಂದ ಪಂಪನಲ್ಲಿ ಬರುವ ಪದ್ಯಕ್ಕೆ ಹೀಗೆ ಸಾರಾಂಶವನ್ನು ಹೇಳಬಹುದು. – "ಎಲ್ಲರಿಗೂ ಗೊತ್ತಾಗುವಂತೆ ಪ್ರತಿಜ್ಞೆ ಮಾಡಿರುವ ನಾನು ಕಾಮಸುಖಕ್ಕೆ ಸೋತು ನಿನ್ನ ಕೈ ಹಿಡಿದರೆ ಪುರುಷವ್ರತ2 ಅಳಿಯುತ್ತದೆ. ನಿನ್ನನ್ನು ತಾಯಿ ಎಂದು ಕರೆದು ನಂತರ ಅತ್ತಿಗೆ (=ನಲ್ಲೆ) ಎಂದು ಕರೆಯುವ ಮಾತನ್ನು ನನಗೆ—ಎಂದರೆ ನನ್ನಿಂದ—ಹೇಳಲು ಸಾಧ್ಯವೇನು?" (ಅಥವಾ– "ತಾಯಿ ಎಂದು ಕರೆದು ನಂತರ ನಲ್ಲೆ ಎಂದು ಕರೆಯುವ ಮಾತನ್ನು – ಎಂದರೆ ಲೋಕೋಕ್ತಿಯನ್ನು –ನನಗೆ ಅನ್ವಯಿಸಲು ಬರುತ್ತದೆಯೇ?".)

ಪಂಪ, ಪೊನ್ನ, ನಂಜುಂಡರು 'ಅತ್ತಿಗೆ' ಮಾತನ್ನು ನಲ್ಲೆ, ಪ್ರೀತಿಗೆ ಅರ್ಹಳಾದ ಸ್ತ್ರೀ ಎಂಬರ್ಥ ದಲ್ಲಿ ಬಳಸಿದ್ದರೆ, 'ವಡ್ಡಾರಾಧನೆ' ಮುಂತಾದ ಕಡೆಗಳಲ್ಲಿ 'ಅಣ್ಣನ ಹೆಂಡತಿ' ಎಂಬ ಪ್ರಸಿದ್ಧಾರ್ಥ ದಲ್ಲಿ ಬಳಸಲಾಗಿದೆ. ಹತ್ತನೆಯ ಶತಮಾನದಲ್ಲಿ ಆ ಮಾತಿಗೆ ಅಣ್ಣನ ಹೆಂಡತಿ, ನಲ್ಲೆ ಎಂಬ ಎರಡು ಅರ್ಥ ಗಳೂ ಇದ್ದುವು. ಸಂಬಂಧಸೂಚಕ ಪದಗಳಿಗೆ ಹೀಗೆ ಒಂದೇ ಕಡೆ ಅಥವಾ ಬೇರೆ ಬೇರೆ ಪ್ರದೇಶ ಗಳಲ್ಲಿ ಬೇರೆ ಬೇರೆ ಅರ್ಥಗಳಿರುವ ಸಾಧ್ಯತೆಗಳುಂಟು. ಉದಾಹರಣೆಗೆ ಕನ್ನಡದಲ್ಲಿ 'ಮಾವ' ಎನ್ನುವ ಪದ ತಾಯಿಯ ಸೋದರನನ್ನು ಮತ್ತು ಹೆಂಡತಿಯ ತಂದೆಯನ್ನು ಸೂಚಿಸಬಹುದು. ಅದಕ್ಕೆ ಕಾರಣ, ತಾಯಿಯ ಸೋದರನ ಮಗಳು ಹೆಂಡತಿಯಾಗುವ ಸಾಧ್ಯತೆಯಿರುವುದು. 'ಅತ್ತೆ' ಎನ್ನುವ ಮಾತು ತಂದೆಯ ಸೋದರಿಯನ್ನು, ಹೆಂಡತಿಯ ತಾಯಿಯನ್ನು ಸೂಚಿಸಬಹುದು. ಅದಕ್ಕೂ ಮೇಲಿನದೇ ಕಾರಣ. ಅಣ್ಣ, ಅಕ್ಕ, ತಮ್ಮ, ತಂಗಿ ಈ ಪದಗಳು ಒಡಹುಟ್ಟಿದವರನ್ನಲ್ಲದೆ ತಂದೆಯ ಸೋದರರ,

---

2 'ಪುರುಷವ್ರತ' ಎಂದರೆ ಬ್ರಹ್ಮಚರ್ಯ, ಸಂಯಮ, ಪತಿ ಅಥವಾ ಪತ್ನಿಯ ಬಗ್ಗೆ ನಿಷ್ಠೆ, Chastity ಎಂದರ್ಥ. ಈ ಬಗ್ಗೆ ಪ್ರೊ. ಎಂ. ವಿ. ಸೀತಾರಾಮಯ್ಯನವರು ಬರೆದಿರುವ 'ಪುರುಷವ್ರತ' ಮತ್ತು 'ಕವಿರಾಜಮಾರ್ಗ' ಎಂಬ ಲೇಖನವನ್ನು ನೋಡಬಹುದು (ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆ, 54.2. ಡಿಸೆಂಬರ್, 1969)ಅವರ ಗಮನಕ್ಕೆ ಬೀಳದಿರುವ ಒಂದು ಉಲ್ಲೇಖ ಹೀಗಿದೆ–"ವನಿತಾ ಜನವಂದ್ಯೆಯಶೋಧನೆ ಸಾವಲದೇವಿ ಸುವ್ಯಥಪುರುಷವ್ರತೆಯಂತೆಸಪಾ ಚಂದ್ರಂಗೀ ಭಾಮಿನಿ ರೋಹಿಣಿ ತಾನೆನಲೆ ವಲ್ಲಭೆಯಾದಳ್" (Ec. vii Shikaripur, 99, 1113 A.D.)

ತಾಯಿಯ ಸೋದರಿಯರ ಮಕ್ಕಳನ್ನೂ ಸೂಚಿಸಬಹುದು. ತುಳುವಿನಲ್ಲಿ 'ಅಣ್ಣೆ' ಎಂಬುದು ಅಣ್ಣನನ್ನು, ತಾಯಿಯ ಸೋದರನನ್ನು ಸೂಚಿಸುತ್ತದೆ. ತೆಲುಗಿನಲ್ಲಿ 'ಅಪ್ಪ' ಎಂಬ ಮಾತಿಗೆ ತಂದೆ, ತಾಯಿ, ಅಕ್ಕ ಎಂಬರ್ಥಗಳಿವೆ. ಹೀಗೆಯೇ ಉದಾಹರಣೆಗಳನ್ನು ಬೆಳೆಸಬಹುದು. ಕನ್ನಡದಲ್ಲಿ ಈಗ 'ಅತ್ತಿಗೆ' ಎಂಬ ಮಾತು ಎಲ್ಲ ಕಡೆಗಳಲ್ಲಿ ಅಣ್ಣನ ಹೆಂಡತಿ ಎಂಬರ್ಥದಲ್ಲಿ ವ್ಯವಹಾರದಲ್ಲಿದ್ದರೂ, ದಕ್ಷಿಣ ಕರ್ನಾಟಕದಲ್ಲಿ ಅದು 'ಹೆಂಡತಿಯ ಅಕ್ಕ' ಎಂಬರ್ಥದಲ್ಲಿಯೂ ಬಳಕೆಯಾಗುತ್ತಿದೆ. ('ಗಂಡನ ಅಕ್ಕ' ಎಂಬರ್ಥದಲ್ಲಿಯೂ ಇದೆಯೆಂದು ತಿಳಿದು ಬರುತ್ತದೆ). ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 'ಅತ್ತಿಗೆ'ಯು ಅಣ್ಣನ ಹೆಂಡತಿಯನ್ನಲ್ಲದೆ ಸೋದರ ಮಾವ ಅಥವಾ ಸೋದರತ್ತೆಯ ಮಗಳನ್ನೂ ಸೂಚಿಸುತ್ತದೆಯೆಂಬುದು ಗಮನಿಸಬೇಕಾದ್ದು. ಇಲ್ಲೆಲ್ಲ ಕೆಲವು ಸಂದರ್ಭಗಳಲ್ಲಿ ಹಾಗೆ ವ್ಯವಹರಿಸಲಿಕ್ಕೆ ಕಾರಣಗಳನ್ನು ಕೊಡಲು ಸಾಧ್ಯ. ಉದಾಹರಣೆಗೆ ಹೆಂಡತಿಯ ಅಕ್ಕನನ್ನು ಅಣ್ಣ ಮದುವೆಯಾಗುವ (ಮದುವೆಯಾಗಿರುವ) ಸಾಧ್ಯತೆಯಿರುವುದರಿಂದ ಅವಳು ಅತ್ತಿಗೆಯಾಗಬಹುದು. ಅವಳು ಮದುವೆಯಾದ ವ್ಯಕ್ತಿ ಬೇರೆಯಾಗಿದ್ದರೂ ಅವನು ಒಂದು ರೀತಿಯಲ್ಲಿ ಅಣ್ಣನಾಗಬಹುದು ಇತ್ಯಾದಿ. ಆದರೆ 'ಗಂಡನ ಅಕ್ಕ' ಎಂಬ ಕಡೆ ಅಂತಹ ವಿವರಣೆ ಸರಿ ಹೋಗುವುದಿಲ್ಲ.

ಎಂದರೆ ಹತ್ತನೇ ಶತಮಾನದಲ್ಲಿ 'ಅತ್ತಿಗೆ' ಎಂಬ ಒಂದೇ ಮಾತಿಗೆ 'ನಲ್ಲೆ', 'ಅಣ್ಣನ ಹೆಂಡತಿ'ಎಂಬ ಎರಡೂ ಅರ್ಥಗಳಿದ್ದುವೆಂದು ಭಾವಿಸಬೇಕಾಗುತ್ತದೆ. ಅಣ್ಣ, ತಮ್ಮಂದಿರು ಒಬ್ಬ ಸ್ತ್ರೀಯನ್ನೇ ಮದುವೆಯಾಗುತ್ತಿದ್ದ ಪದ್ಧತಿ ಹಿಂದೆ ಇದ್ದಿತು; ಈಗಲೂ ಕೆಲವು ಜನಾಂಗಗಳಲ್ಲಿ ಇದೆಯೆಂದು ಹೇಳುತ್ತಾರೆ.

ಆದರೆ ಕನ್ನಡ ಸಾಹಿತ್ಯ ಪರಿಷತ್ತು ಪ್ರಕಟಿಸುತ್ತಿರುವ **ಕನ್ನಡ ನಿಘಂಟಿನಲ್ಲಿ 'ಅಣ್ಣನ ಹೆಂಡತಿ'** ಎಂಬರ್ಥದ 'ಅತ್ತಿಗೆ' ಪದವನ್ನೂ (ಮೊದಲನೆಯ ಸಂಪುಟ, ಸಂಚಿಕೆ2, ಪು. 189),'ನಲ್ಲೆ' ಎಂಬರ್ಥದ 'ಅತ್ತಿಗೆ' ಪದವನ್ನೂ (ಅದೇ. ಸಂಚಿಕೆ 6, ಪು. 555)ಬೇರೆ ಬೇರೆ ಪದಗಳೆಂದು ಭಾವಿಸಿರುವುದು ಅಸಂಗತ್ಯವಾಗಿ ತೋರುತ್ತದೆ. ಎರಡನೆಯ ಅರ್ಥದ ಪದದ ಮೂಲ 'ಅಟ್ಟಿ' ಎಂದು ಭಾವಿಸಿದ್ದಾರೆ ಕನ್ನಡದಲ್ಲಿ 'ಅಟ್ಟಿಗೆ' ಎಂಬ ಪದ ದೊರಕಿದ್ದರೂ, ಅದು ಸಂಬಂಧಸೂಚಕವಾಗಿಲ್ಲ. ಜೊತೆಗೆ, 'ಅಟ್ಟಿ' ಎಂಬ ಮಾತು ಪ್ರೀತಿ ಎಂಬರ್ಥದಲ್ಲಿ ಬೇರೆ ದ್ರಾವಿಡ ಭಾಷೆಗಳಲ್ಲಿ ಹೆಚ್ಚು ದೊರಕುವುದಿಲ್ಲ. ಆದ್ದರಿಂದ 'ಅತ್ತಿಗೆ' ಎಂಬ ಮಾತು'ಅಟ್ಟಿ'ಯಿಂದ ಬಂದಿರುವುದು ಸಂದೇಹಾಸ್ಪದ. ಅದರ ಮೂಲ ಯಾವುದೇ ಇರಲಿ. ಕನ್ನಡ–ಅತ್ತೆ, ಅತ್ತಿಗೆ–ತಮಿಳು–ಅತ್ತಾಚ್ಚಿ (=ಅತ್ತಿಗೆ), ಅತ್ತನ್(=ತಂದೆ), ಅತ್ತೈ(=ಅತ್ತೆ), ಅತ್ತಿ(=ಅಕ್ಕ), ತೆಲುಗು– ಅತ್ತ (=ಅತ್ತೆ), ತುಳು–ಅತ್ತೆ(=ಅತ್ತೆ), ಅತ್ತಿಗೆ (=ಅತ್ತಿಗೆ),ಗೋಂಡಿ-ಆತಿ(=ತಂದೆಯ ಸೋದರಿ), ಕುಇ–ಅತ (=ಅಜ್ಜಿ), ಕುವಿ–ಅತ್ತೆ (=ಚಿಕ್ಕಮ್ಮ),—ಇವೆಲ್ಲ ಬಹುಶಃ ಒಂದೇ ಮೂಲದಿಂದ ಬಂದುವು-3. ಟಿ. ಬರೋ ಮತ್ತು ಎಂ. ಬಿ. ಎಮೆನೊ ಅವರು **A Dravidian Etymological Dictionary** ಗ್ರಂಥದಲ್ಲಿ ಮೇಲಿನ ಎಲ್ಲ ಪದಗಳನ್ನು ಒಟ್ಟಿಗೆ ಒಂದೇ ಕ್ರಮಾಂಕದಲ್ಲಿ (entry no. 121) ಕೊಟ್ಟಿರುವುದು ಸಮರ್ಥನೀಯವಾಗಿ ತೋರುತ್ತದೆ.

—ಎಂ. ಚಿದಾನಂದ ಮೂರ್ತಿ

---

3 'ಅಟ್ಟಿ' ಎಂಬ ಕನ್ನಡ ಪದಕ್ಕೆ ಸಂವಾದಿಯಾದ ಪದಗಳು ಎಲ್ಲ ದ್ರಾವಿಡ ಭಾಷೆಗಳಲ್ಲಿ ದೊರೆಯುವುದಿಲ್ಲ. ಮಲಯಾಳಂ–ಅಟಿವು (=ಪ್ರೇಮ), ಕೊಡಗು- ಅಕ್ಟ್(=ವಾತ್ಸಲ್ಯ), ತೊದ–ಅರ್ಕಿನ್ (ಕಾಮುಕ ಸ್ತ್ರೀ), ತುಳ–ಅರ್ಕಮೆ (=ಆಸೆ, ಆತುರ), ತೆ–ಅಕ್ಕಜ(=ಆಸೆ). 'ಅಟ್ಟಿ' ಎಂಬ ರೂಪ ಕನ್ನಡದಲ್ಲಿ ಮಾತ್ರ ಇದೆ. ಇದರಿಂದ ಮೇಲಿನ ಪದಗಳು ಬಂದುವೆಂದು ವಾದಿಸುವುದು ದುಸ್ತರವಾಗಿ ತೋರುತ್ತದೆ. ಅತ್ತೆ. ಅತ್ತಿಗೆ ಮುಂತಾದುವು ದ್ರಾವಿಡ ಪದಗಳೇ, ಸ್ವೀಕರಣಗಳೇ ಇನ್ನೂ ನಿರ್ಣಯವಾಗಬೇಕಾಗಿದೆ.

ಕವಿರಾಜಮಾರ್ಗದ ಮೂರು ಶಬ್ದಗಳ ವಿಚಾರ
ಕೀಱು, ತೂಱು, ಪೊಳ್ (ಪುಳ್ ?)

ದಿವಂಗತ ಆಚಾರ್ಯ ಡಿ. ಎಲ್. ನರಸಿಂಹಾಚಾರ್ಯರು "ಪಕ್ಷಿ > ಪಕ್ಕಿ-ಗೆ ಸಮಾನ ಕನ್ನಡ ಶಬ್ದ" ಎಂಬ ತಮ್ಮ ಸ್ವಾರಸ್ಯವಾದ ಸಂಶೋಧನಾತ್ಮಕ ಲೇಖನದಲ್ಲಿ[1] "ಕನ್ನಡದಲ್ಲಿ ಪಕ್ಷ್ಯರ್ಥಕವಾದ 'ಪುಳ್' ಎಂಬ ದೇಶ್ಯ ಶಬ್ದವಿದ್ದಿತೆಂದೂ ಸಂಸ್ಕೃತಜನ್ಯ 'ಪಕ್ಕಿ' ಬಂದು ಅದನ್ನು ಹಾರಿಸಿಬಿಟ್ಟಿದೆಯೆಂದೂ ವ್ಯಕ್ತ ಪಡುತ್ತದೆ"– ಎಂಬ ತೀರ್ಮಾನಕ್ಕೆ ಬಂದಿದ್ದಾರೆ. ಈ ತೀರ್ಮಾನಕ್ಕೆ 'ವಡ್ಡಾರಾಧನೆ', 'ಚಾವುಂಡರಾಯ ಪುರಾಣ', ಮತ್ತು 'ಕವಿರಾಜಮಾರ್ಗ' .–ಈ ಗ್ರಂಥಗಳಲ್ಲಿ ದೊರೆತ ಪ್ರಯೋಗಗಳೇ ಆಧಾರ. ವಡ್ಡಾರಾಧನೆಯ ಪ್ರಯೋಗ: 'ಪುಳುಂಗಾಱ'(= ಪಕ್ಕಿಯ ಬೇಟೆಗಾರ); ಚಾವುಂಡರಾಯ ಪುರಾಣದ ಪ್ರಯೋಗ: ಕಬ್ಬಿಲೆ (ಕರ್ + ಪುಳ್ > ಕರ್ಪುಳ್, ಕರ್ಬುಳ್, ಕರ್ಬುಳು, ಕಬ್ಬುಳು, ಕಬ್ಬಿಳೆ, ಕಬ್ಬೀಳೆ, ಕಬ್ಬಿಲೆ = ಕರಿಯ ಪಕ್ಕಿ, ಕಾಗೆ); ಕವಿರಾಜಮಾರ್ಗದ ಪ್ರಯೋಗ: ಪುಳ್ಗಳಂ (?) (= ಪಕ್ಕಿಗಳನ್ನು). "ಕವಿರಾಜಮಾರ್ಗದಲ್ಲಿ 'ಪುಳ್' ಎಂಬ ಶಬ್ದಕ್ಕೆ ಸ್ವತಂತ್ರ ಪ್ರಯೋಗ ದೊರೆತ ಹಾಗಾಯಿತು" ಎಂದು ಹೇಳಿ, ಇತರ ದ್ರಾವಿಡ ಭಾಷೆಗಳಲ್ಲಿ ದೊರೆಯುವ ಜ್ಞಾತಿ ಶಬ್ದಗಳನ್ನು ಕೊಟ್ಟು ತಮ್ಮ ತೀರ್ಮಾನವನ್ನು ಪುಷ್ಟೀಕರಿಸಿ, "ಪ್ರೊ. ಎಮೆನೋ ಮತ್ತು ಬರೋ ಅವರು ರಚಿಸಿರುವ 'ದ್ರಾವಿಡಭಾಷಾ ಜ್ಞಾತಿ ಶಬ್ದಕೋಶ'ದಲ್ಲಿ 3544ನೆಯ ವಿಷಯದ ಕೆಳಗೆ ಕನ್ನಡದ 'ಪುಳ್' ಎಂಬ ಶಬ್ದವನ್ನು ಸೇರಿಸಬೇಕು" ಎಂದು ಸೂಚಿಸಿದ್ದಾರೆ.

ಪಕ್ಷಿ ಎಂಬ ಅರ್ಥದಲ್ಲಿ 'ಪುಳ್' ಶಬ್ದದ ಅಸ್ತಿತ್ವ ಸ್ಥಾಪನೆಯನ್ನು ಪ್ರಶ್ನಿಸುವುದು ಈ ಲೇಖನದ ಉದ್ದೇಶವಲ್ಲ. ಆಚಾರ್ಯ ಡಿ. ಎಲ್. ಎನ್. ಅವರು ಕವಿರಾಜಮಾರ್ಗದ ಪದ್ಯವೊಂದರಲ್ಲಿ (1-131) 'ಪೋೞ್ಗಳಂ–ಪೋೞ್ಗಳಂ' ಎಂಬ ಪಾಠಗಳನ್ನು ಒಪ್ಪದೆ, ಅದಕ್ಕೆ ಪ್ರತಿಯಾಗಿ 'ಪುಳ್ಗಳಂ' ಎಂದು ತಿದ್ದುಪಡಿ ಮಾಡಿರುವುದು ಸಮರ್ಥನೀಯವಾಗಿಲ್ಲ; ಆದ್ದರಿಂದ, 'ಪುಳ್' ಶಬ್ದದ ಸ್ವತಂತ್ರ ಪ್ರಯೋಗ ಬೇರೆಯಕಡೆ ದೊರೆಯುವವರೆಗೂ ಅದಕ್ಕಾಗಿ ನಾವು ಕಾಯಬೇಕಾಗಿದೆ– ಎಂದು ತಿಳಿಸುವುದು ಈ ಲೇಖನದ ಮುಖ್ಯೋದ್ದೇಶ. ಪ್ರಾಸಂಗಿಕವಾಗಿ, ಅದೇ ಪದ್ಯದ 'ಕೀಱು' ಎಂಬ ಶಬ್ದದ ಅರ್ಥದ ಮತ್ತು 'ತೋಱು' ಎಂಬ ಶಬ್ದದ ಪಾಠದ ಪರಿಶೀಲನೆ. ಈ ಲೇಖಕ ಸಂಪಾದನೆ ಮಾಡಿರುವ ಕವಿರಾಜಮಾರ್ಗದ ತೃತೀಯ ಮುದ್ರಣದಲ್ಲಿ ಮೇಲ್ಕಂಡ ಭಿನ್ನಪಾಠದ್ವಯದ ಸ್ಥಾನದಲ್ಲಿ 'ಪೊಳ್‌ಗಳಂ' (= ಜೊಳ್ಳನ್ನು, ಪೊಳ್ಳುಗಾಳನ್ನು) ಎಂದು ತಿದ್ದುಪಾಟು ಮಾಡಿದ್ದಾನೆ. ಇಬ್ಬರ ಪಾಠ ಪರಿಷ್ಕರಣವೂ ಪದ್ಯದ ಅರ್ಥ ನಿರ್ಣಯವನ್ನು ಅವಲಂಬಿಸಿದೆ.[2] ಪದ್ಯಕ್ಕೆ ಡಿ. ಎಲ್. ಎನ್. ಅವರು ನೀಡಿರುವ ಅರ್ಥ ವಿವರಣೆಯನ್ನು ಮೊದಲು ಪರಿಶೀಲಿಸಬಹುದು. ಕವಿರಾಜಮಾರ್ಗದ ಪದ್ಯ ಇದು:

---

1 ನೋಡಿ: ಪ್ರಬುದ್ಧ ಕರ್ಣಾಟಕ, ಸಂಪುಟ 44 – ಸಂಚಿಕೆ 2, 1962; ಪು. 125–129. (ಈ ಲೇಖನ ಈಚೆಗೆ ಪ್ರಕಟವಾಗಿರುವ ದಿವಂಗತರ 'ಪೀಠಿಕೆಗಳು – ಲೇಖನಗಳು' ಎಂಬ ಗ್ರಂಥದಲ್ಲೂ ಸೇರಿದೆ: ಪ್ರಕಾಶಕರು: ಡಿ. ವಿ. ಕೆ. ಮೂರ್ತಿ, ಮೈಸೂರು; 1971)

2 ಡಾ. ಡಿ. ಎಲ್. ನರಸಿಂಹಾಚಾರ್ಯರು ಜೀವಂತರಾಗಿದ್ದಾಗಲೇ 'ಪುಳ್'–'ಪೊಳ್' ಈ ಭಿನ್ನ ಪಾಠ ಪರಿಷ್ಕರಣಗಳ ಬಗೆಗೆ ಇಬ್ಬರೂ ಚರ್ಚೆ ಮಾಡಿದ್ದೆವು: ಅರ್ಥ ನಿರ್ಣಯವನ್ನು ಸಮರ್ಥಿಸಲು ಇಬ್ಬರಿಗೂ ಅನ್ಯ ಪ್ರಮಾಣಗಳು ತತ್ಕಾಲದಲ್ಲಿ ಲಭ್ಯವಿಲ್ಲದೆ, ಊಹಾತ್ಮಕ ನಿರ್ಣಯದಲ್ಲಿ ಇಬ್ಬರೂ ಬಲವಾಗಿ ಪಟ್ಟು ಹಿಡಿದಿದ್ದೆವು! ಕೆಲಕಾಲವಾದ ಮೇಲೆ, ನನ್ನ ನಿಲುವನ್ನು ಪುಷ್ಟೀಕರಿಸುವ ಕೆಲವು ಬಾಹ್ಯ ಸಾಕ್ಷ್ಯಗಳು ದೊರಕಿವೆ ಎಂದು ಅವರಿಗೆ ತಿಳಿಸಿದ್ದೆ. "ಲೇಖನ ಬರಿ. ಸುಮ್ಮನೆ ಹೇಳಿದರೇನು ಬಂತು" ಎಂದು ಅವರಿಗೆ ಸಹಜವಾದ ಮುಗುಳುನಗೆ ಬೆರೆತ ಬಿಂಕದಿಂದ ಅಪ್ಪಣೆ ಕೊಡಿಸಿದ್ದರು. ಅವರು ಜೀವಂತವಾಗಿರುವಾಗಲೇ ಲೇಖನ ಬರೆದು ನನ್ನ ನಿಲುವಿಗೆ ಅಸ್ತು ಎನ್ನಿಸಿಕೊಳ್ಳುವ ಪುಣ್ಯ ನನ್ನ ಪಾಲಿಗೆ ಉಳಿಯಲಿಲ್ಲ. ಅವರ ನೆನಪಿಗೆ ಈ ಚಿಕ್ಕ ಲೇಖನ ಮುಡಿಪು. ತಪ್ಪನ್ನು ಒಪ್ಪಿಕೊಳ್ಳುವ, ಸರಿಯಾದ್ದನ್ನು ಸ್ವೀಕರಿಸುವ ಔದಾರ್ಯ ಅವರದ್ದು.

ಬೇಱಿವೇಱಿರೆ ವಿಕಲ್ಪ ಸಮುಚ್ಚಯ ಯುಗ್ಮದೊಳ್
ತೋಱುವೆಂ ಕ್ರಮವಿಕಲ್ಪನೆಯಿಂ ಗುಣದೋಷಮಂ
ಕೀಱಿಕೊಂಡು ಗುಣಮಂ ಕಳೆಗಲ್ಲಿಯ ದೋಷಮಂ
ತೋಱಿ ಪಿಂಗಿಸುವವೋಲ್ ಪೊಸನೆಲ್ಲಿರೆ ಪೋಟ್ಗಳಂ
(1–131)

"ಇದು ಮದ್ರಾಸು ಮುದ್ರಣದ (1930) ಪಾಠ. ಪಾಠಕ್ ಅವರಿಂದ ಸಂಪಾದಿತವಾದ ಮುದ್ರಿತಪ್ರತಿಯಲ್ಲಿ (1898)ವಿಕಲ್ಪನೆಯಂ, ಸಲೆ ನೆಲ್ಲಿರೆ, .ಪೋಳ್ಗಳಂ– ಎಂಬ ಭಿನ್ನಪಾಠಗಳಿವೆ. ಪ್ರಕೃತ ಬೇಕಾದದ್ದು ಈ ಪದ್ಯದಲ್ಲಿರುವ 'ಪೋಟ್ಗಳಂ' ಎಂಬ ಶಬ್ದ. ಇದಕ್ಕೆ ಹೋಳುಗಳು, ಚೂರುಗಳು ಎಂಬರ್ಥವಾಗುತ್ತದೆ. ಈ ಪದ್ಯದ ಆಶಯ: ಹಲವು ಬೇರೆ ಬೇರೆ ಶಬ್ದಗಳು ಒಟ್ಟಿಗೆ ವಾಕ್ಯದಲ್ಲಿ ಸಮುಚ್ಚಯ ಸಂಬಂಧದಲ್ಲಿ ಬಂದಾಗ ಪ್ರತಿಯೊಂದು ಶಬ್ದಕ್ಕೂ ಸಮುಚ್ಚಯ ಸೂಚಕ ಪ್ರತ್ಯಯಗಳನ್ನು ಸೇರಿಸಬೇಕು, ಹೀಗಲ್ಲದೆ ಕೆಲವಕ್ಕೆ ಹತ್ತಿಸಿ ಕೆಲವಕ್ಕೆ ಬಿಟ್ಟರೆ ದೋಷವಾಗುತ್ತದೆ. ಇಂಥ ದೋಷವನ್ನು ಕಳೆದು ಹಾಕಿ ಗುಣವನ್ನು ಎಂದರೆ ಸಮುಚ್ಚಯ ಸೇರಿಸುವುದನ್ನು ಗ್ರಹಿಸಬೇಕು, ಹೊಸ ಬತ್ತವಿರಲು ಪೋಳುಗಳನ್ನು ಹೇಗೆ ತೆಗೆದು ಹಾಕಬೇಕೋ ಹಾಗೆ. ಇಲ್ಲಿ ಹೋಳುಗಳು ಎಂದರೆ ಯಾವ ಹೋಳುಗಳನ್ನು? ಹೊಸ ಬತ್ತದಲ್ಲಿ ಹೋಳುಗಳು ಎಂದರೇನು? ಇಲ್ಲಿ ಅರ್ಥವ್ಯಕ್ತಿ ಇಲ್ಲ. ಅದ್ದರಿಂದ ಈ ರೀತಿ ಅರ್ಥಮಾಡುವುದು ಸಮರ್ಪಕವಾಗಲಾರದು. ಈ ಶಬ್ದಕ್ಕೆ 'ಪೋಳ್ಗಳಂ' ಹೊರತಾಗಿ ಎರಡು ಮುದ್ರಣಗಳಿಗೂ ಬಳಸಿಕೊಂಡಿರುವ ಪ್ರತ್ಯಂತರಗಳಲ್ಲಿ ಬೇರೆ ಪಾಠವಿಲ್ಲ."

ಆಚಾರ್ಯರ ಈ ವಿವರಣೆ ಸರಿಯಾಗಿಯೇ ಇದೆ. ಅವರ ಮುಂದಿನ ತಿದ್ದುಪಡಿಯ ಸಲಹೆ ಮಾತ್ರ ಒಪ್ಪುವಂತಿಲ್ಲ. ಅವರು ಹೇಳುವಂತೆ, ಮದರಾಸು ಮುದ್ರಣದ 'ಪೋಟ್ಗಳಂ' ಎಂಬ ಪಾಠವನ್ನು ಇಟ್ಟುಕೊಂಡು ಅರ್ಥಮಾಡುವುದು ಸಮರ್ಪಕವಾಗುವುದಿಲ್ಲ. ಆದರೆ, 'ಪೊಳ್ಗಳಂ'(ಪಾಠಕರ ಮುದ್ರಣದಲ್ಲಿ 'ಪೊಟ್ಗಳಂ' ಎಂದಿದೆ) ಎಂಬ ಪಾಠಾಂತರ ಇರುವಲ್ಲಿ, ಅದಕ್ಕೂ ಅರ್ಥ ಹೇಳಲಾಗದಿದ್ದರೆ ಮಾತ್ರ, ಅನಂತರ ತಿದ್ದುವ ಯೋಚನೆ. 'ಪೊಳ್' ಎಂದರೆ 'ಜೆಳ್ಳು', 'ಹುಸಿಕಾಳು' ಎಂದು ಸಂದರ್ಭೋಚಿತವಾಗಿ ಅರ್ಥ ಮಾಡಬಹುದಾಗಿರುವಾಗ, 'ಪುಳ್' ಎಂದು ತಿದ್ದುವ ಗೋಜಿಗೆ ಹೋಗಬೇಕಾಗಿಲ್ಲ. "ಹಸ್ತ ಪ್ರತಿಗಳಲ್ಲಿ 'ಪೊಳ್ಗಳಂ' ಎಂದೇ ಬರೆಯುವುದು ರೂಢಿ. ಇದು 'ಪುಳ್ಗಳಂ' ಎಂಬ ಶಬ್ದಕ್ಕೆ ಪ್ರತಿಕಾರರ ಕೈಯಲ್ಲಿ ಉಂಟಾಗಿರುವ ಸ್ಖಾಲಿತ್ಯ" ಎಂದು ಸಂದೇಹಪಟ್ಟು, "ಪುಳ್ಗಳಂ ಎಂದು ತಿದ್ದಿಕೊಂಡು ಅರ್ಥ ಮಾಡಿದರೆ, 'ಹೊಸ ಬತ್ತವಿರಲು ಹಕ್ಕಿಗಳನ್ನು ಎಬ್ಬಿಸಿ ಓಡಿಸುವ ಹಾಗೆ' ಎಂಬ ಅಭಿಪ್ರಾಯ ಬರುತ್ತದೆ" ಎಂದು ಉಪಮಾನವಾಕ್ಯಕ್ಕೆ ಅರ್ಥಮಾಡಿದ್ದಾರೆ ಆಚಾರ್ಯರು.

'ಪೊಳ್' ಎಂದರೆ 'ಜೆಳ್ಳು' ಎಂಬ ಅರ್ಥ ನರಸಿಂಹಾಚಾರ್ಯರಿಗೆ ಗೊತ್ತಿಲ್ಲದೆ ಇಲ್ಲ. ಇತರ ಕಾವ್ಯಗಳಲ್ಲಿ ಹಕ್ಕಿ ಎಂಬ ಅರ್ಥದ 'ಪುಳ್' ಶಬ್ದವನ್ನು ಸಂಯುಕ್ತಪದಗಳಲ್ಲಿ ಬೇಟೆಯಾಡುತ್ತಿದ್ದ ಅವರಿಗೆ, ಕವಿರಾಜಮಾರ್ಗದಲ್ಲಿ 'ಪೊಳ್ಗಳಂ' ಕಂಡಾಗ ಅದರಲ್ಲಿ 'ಪುಳ್' ಅವಿತುಕೊಂಡಿದೆ ಎಂದು ತೋರಿದ್ದರಲ್ಲಿ ಆಶ್ಚರ್ಯವಿಲ್ಲ. ಆ ಗಳಿಗೆಯಲ್ಲಿ ಅವರಿಗೆ ಬೇರೆಯ ಅರ್ಥ ಬಹುಶಃ ತೋಚಿಲ್ಲ. ತೋಚಿದ್ದರೆ, ಎರಡನ್ನೂ ತೂಗಿ ನೋಡಿ, ಹೆಚ್ಚು ಸಂದರ್ಭೋಚಿತವೂ ಸಮಂಜಸವೂ ಆದ 'ಜೆಳ್ಳು' ಎಂಬ ಅರ್ಥವನ್ನೇ ಬಹುಶಃ ಸ್ವೀಕರಿಸುತ್ತಿದ್ದರು.

ಉಪಮೇಯ ವಾಕ್ಯಕ್ಕೆ, "ದೋಷವನ್ನು ಕಳೆದು ಹಾಕಿ ಗುಣವನ್ನು ಗ್ರಹಿಸಬೇಕು" ಎಂದು ಅವರೇ ಅರ್ಥ ಮಾಡಿದ್ದಾರೆ. ಇದರ ಪ್ರತಿಬಿಂಬ ಭಾವವನ್ನು ಉಪಮಾನ ವಾಕ್ಯದಲ್ಲಿ ಕಾಣಬೇಕಷ್ಟೆ? ನರಸಿಂಹಾಚಾರ್ಯರ ಅರ್ಥದ ಪ್ರಕಾರ, ಗುಣವನ್ನು ಪೊಸನೆಲ್ಲಿಗೂ ದೋಷವನ್ನು 'ಪುಳ್'ಗೂ ಹೋಲಿಸಬೇಕು. ಆಚಾರ್ಯರು ಪಂಪರಾಮಾಯಣದಿಂದ ಎತ್ತಿಕೊಟ್ಟಿರುವ ಪದ್ಯದಲ್ಲಿ(vii–168)'ಪಾಲ್ಗೆನೆಯ ಪಾಲಸುಂಡುವು ಗಿಳಿಗಳ್' ಎಂಬ ಚಿತ್ರ ಇದೆಯೇ ಹೊರತು, ಹಕ್ಕಿಗಳನ್ನು ಓಡಿಸುವ ಚಿತ್ರ ಇಲ್ಲ. (ಬತ್ತದ ಗದ್ದೆಯಲ್ಲಿ ಪಾಮರಿಯರು ಹಕ್ಕಿಗಳನ್ನು ಓಡಿಸುವ ಚಿತ್ರ ಕೆಲವು ಕನ್ನಡ ಕಾವ್ಯಗಳಲ್ಲಿ ದೊರಕುತ್ತದೆ). ಅದು ಹಾಗಿರಲಿ, ಓಡಿಸಿದ ಹಕ್ಕಿಗಳು ಮತ್ತೆ ಮತ್ತೆ ಬರುತ್ತಲೇ ಇರುತ್ತವೆ; ಮತ್ತೆ ಮತ್ತೆ ಓಡಿಸಬೇಕು.

ಆದರೆ, ಕಾವ್ಯದಲ್ಲಿ ಒಮ್ಮೆಲೇ ದೋಷಗಳನ್ನು ಕಳೆದು ಬಿಡಬೇಕು. ಆದ್ದರಿಂದ 'ಪೊಸನೆಲ್' ಎನ್ನುವುದಕ್ಕೆ 'ಹೊಸ ಬತ್ತದ ಪಯಿರು' ಎಂಬ ಅರ್ಥವಿವಕ್ಷೆ ಇಟ್ಟುಕೊಳ್ಳದೆ, 'ಹೊಸ ಬತ್ತ' ಎಂಬ ಅರ್ಥ ವಿವಕ್ಷೆಯನ್ನು ಗ್ರಹಿಸಬೇಕು. ಪಂಪರಾಮಾಯಣದ ಪದ್ಯದಲ್ಲಿ 'ಪಾಲ್ದೆಸೆ' ಇರುವಂತೆ, ಇಲ್ಲಿಯೂ ತೆನೆನೆಲ್' ಎಂದೋ 'ನೆಲ್ದೆಸೆ' ಎಂದೋ ಪ್ರಯೋಗವಿದ್ದರೆ, ಹಕ್ಕಿಗಳಿಗೂ ಎಡೆಯಿರುತ್ತಿತ್ತು; ಅವನ್ನು ಓಡಿಸಲೂಬಹುದಾಗಿದ್ದಿತು.

ಬತ್ತದ ಗದ್ದೆಯಲ್ಲಿ ಒಂದು ಕಡೆ ಕಣ ಮಾಡಿ, ಅಲ್ಲಿ ಹೊಸ ಬತ್ತವನ್ನು ರಾಶಿ ಹಾಕುತ್ತಾರೆ. ರಾಶಿಯ ಒಂದು ಪಕ್ಕದಲ್ಲಿ ಒಬ್ಬರೋ ಇಬ್ಬರೋ ನಿಂತು ಬತ್ತವನ್ನು ಗಾಳಿಗೆ ಮೊರದಿಂದ ಎತ್ತಿ ಸುರಿದು ತೂರ ಬಿಡುತ್ತಾರೆ. ಗಟ್ಟಿಕಾಳು ನೇರವಾಗಿ ಕೆಳಕ್ಕೆ ಬಿದ್ದು, ಜೊಳ್ಳು ಗಾಳಿಗೆ ಒಮ್ಮೆಲೇ ತೂರಿಹೋಗಿ, ದೂರಬೀಳುತ್ತದೆ. ಪೊಸನೆಲ್ಲಿನ ಗಟ್ಟಿಕಾಳು (=ಗುಣ) ಉಳಿಯುತ್ತದೆ; 'ಪೊಳ್' (ಜೊಳ್ಳು=ದೋಷ) ತೂರಿ ಹೋಗುತ್ತದೆ; ಇದು ಸರಿಯಾದ ಅರ್ಥ.

'ತೋಱಿ ಪಿಂಗಿಸುವವೊಲ್ ಪೊಸನೆಲ್ಲಿರೆ ಪೊಳ್ಗಳಂ'

ಎಂಬ ಲೋಕಾನುಭವಸಿದ್ಧವಾದ ಉಪಮಾನವಾಕ್ಯ ಉಪಾದೇಯವೆನಿಸುತ್ತದೆ.

ಬಹುಶಃ ಈವರೆಗೆ ಯಾರೂ (ನಾನು ಕೂಡ) ಗಮನಿಸದೆ ಇದ್ದ ಲಿಪಿಕಾರನ ಕೈತಪ್ಪು ಒಂದು ಈ ಉಪಮಾನ ವಾಕ್ಯದಲ್ಲಿ ನುಸುಳಿರುವಂತೆ ಕಂಡು ಬರುತ್ತದೆ. ಮೇಲ್ಕಾಣಿಸಿದ ಅರ್ಥ ವಿವರಣೆಗೆ 'ತೋಱಿ' ಎಂಬ ಶಬ್ದ ಕೂಡಿ ಬರುವುದಿಲ್ಲ. ಜೊಳ್ಳನ್ನು (ಕೈಯಿಂದ) 'ತೋರಿ' ಕಳೆಯುವುದು ಹೇಗೆ?

'ತೂಱಿ' ಲಿಪಿಕಾರರ ಕೈಯಲ್ಲಿ 'ತೋಱಿ' ಆಗಿ ಪರಿಣಮಿಸಿದೆ. 'ತೂಱಿ' ಎಂದು ತಿದ್ದಿಕೊಂಡರೆ. ವಾಕ್ಯದ ಅರ್ಥ ಸುಸಂಗತವಾಗುತ್ತದೆ. ಒಂದು ತಿದ್ದುಪಾಟು ಇನ್ನೊಂದು ತಿದ್ದುಪಾಟಿಗೆ ಸುಲಭವಾಗಿ ದಾರಿ ಮಾಡಿಕೊಡುತ್ತದೆ– ಅರ್ಥನಿರ್ಣಯ ಖಚಿತವಾಗಿದ್ದರೆ.

ಈ ಮೇಲ್ಕಂಡ ಅರ್ಥನಿರ್ಣಯಕ್ಕೆ ಬಾಹ್ಯಪ್ರಮಾಣದ ಬೆಂಬಲವೂ ಇದೆ. ರಾಜಶೇಖರನು ತನ್ನ 'ಕಾವ್ಯಮೀಮಾಂಸೆ'ಯಲ್ಲಿ 'ಕಾವ್ಯಪಾಕಕಲ್ಪ'ವನ್ನು ವಿವರಿಸುವಾಗ (ಅಧಿಕರಣ I–ಅಧ್ಯಾಯ 5; ಗಾಯಕವಾಡ ಓರಿಯಂಟಲ್ ಸೀರೀಸ್, ಪು. 21)–

"ಅನವಸ್ಥಿತ ಪಾಕಂ ಪುನಃ ಕಪಿತ್ಥಪಾಕಮಾಮನನ್ತಿ।
ತತ್ರ ಪಲಾಲ ಧೂನನೇನ ಅನ್ನಕಣಲಾಭವತ್
ಸುಭಾಷಿತ ಲಾಭಃ".

"ಅವ್ಯವಸ್ಥಿತವಾದ ಪಾಕವನ್ನು 'ಕಪಿತ್ಥಪಾಕ' ಎನ್ನುತ್ತಾರೆ (ಕಪಿತ್ಥ=ಬೇಲ). ಜಳ್ಳನ್ನು ತೂರಿ ಕಾಳನ್ನು ಸಂಗ್ರಹಿಸುವಂತೆ ಅದರಲ್ಲಿ ಸೂಕ್ತಿಯನ್ನು ಆರಿಸಿಕೊಳ್ಳಬಹುದು." (ಡಾ. ಕೆ. ಕೃಷ್ಣಮೂರ್ತಿಯವರ ಅನುವಾದ: ಕನ್ನಡ ಕಾವ್ಯಮೀಮಾಂಸೆ, ಪು. 42). ರಾಜಶೇಖರನು ಕವಿರಾಜಮಾರ್ಗವನ್ನು ನೋಡಿದ್ದಿರಬಹುದು, ಅಥವಾ ಕವಿರಾಜಮಾರ್ಗಕಾರ ರಾಜಶೇಖರರಿಬ್ಬರೂ ಸಮಾನ ಆಕರಗಳಿಂದ ಕೆಲವು ವಿಚಾರಾಂಶಗಳನ್ನು ಸ್ವೀಕರಿಸಿರಬಹುದು–ಎಂಬ ನನ್ನ ಈ ಮೊದಲಿನ ಊಹೆಗೆ-3 ಈ ಉಪಮಾನವಾಕ್ಯ ಮತ್ತೊಂದು ನಿದರ್ಶನ. ಅದು ಹೇಗೇ ಇದ್ದರೂ, ಕವಿರಾಜಮಾರ್ಗದ ಉಪಮಾನವಾಕ್ಯಕ್ಕೆ ನರಸಿಂಹಾಚಾರ್ಯರ ಅರ್ಥವಿವರಣೆಯ ಪ್ರಕಾರ 'ಪುಳ್' ಎಂಬ ಪಾಠ ಪರಿಷ್ಕರಣ ಊರ್ಜಿತವಾಗುವುದಿಲ್ಲ; ಭಿನ್ನ ಪಾಠದಲ್ಲಿರುವ 'ಪೊಳ್'(=ಜೊಳ್ಳು) ಪರಿಗ್ರಾಹ್ಯವಾಗುತ್ತದೆ. 'ಹಕ್ಕಿ' ಎಂಬ ಸಂಸ್ಕೃತ ಜನ್ಯಪದಕ್ಕೆ 'ಪುಳ್' ಎಂಬ ಕನ್ನಡ ಸ್ವತಂತ್ರ ಪದವನ್ನು ಅವರು ಕೊಟ್ಟಿರುವ ಇತರ ಪ್ರಯೋಗಗಳಿಂದ ನಿಷ್ಪನ್ನಮಾಡಲು ಅಡ್ಡಿಯಿಲ್ಲ. ಆದರೆ ಕವಿರಾಜ ಮಾರ್ಗದಲ್ಲಿ ಆ ಶಬ್ದ ಇಲ್ಲ; ಇತರ ಪ್ರಾಚೀನ ಗ್ರಂಥಗಳಲ್ಲಿ ಹುಡುಕಿ ನೋಡಬೇಕು.

---

3 ಪ್ರ. ಕ. ಸಂಪುಟ 53–1, 1971: ಕಮ್ಮಟದ ಕಿಡಿಗಳು– 'ಕವಿರಾಜಮಾರ್ಗದ ಹೆಸರು ಒಂದು ಟಿಪ್ಪಣಿ.'

ಮೇಲಿನ ಪದ್ಯದಲ್ಲಿಯೇ ನಮ್ಮೆಲ್ಲರ ಗಮನದಿಂದ ತಪ್ಪಿಸಿಕೊಂಡು ಕುಳಿತಿರುವ ವಿರಳ ಪ್ರಯೋಗದ ಅಪೂರ್ವ ಶಬ್ದವೊಂದಿದೆ. ಅದು 'ಕೀಱು'.

ನರಸಿಂಹಾಚಾರ್ಯರ ಪದ್ಯಾರ್ಥ ವಿವರಣೆಯಲ್ಲಿ "ಗುಣವನ್ನು ಗ್ರಹಿಸಬೇಕು" ಎಂಬ ಮಾತು ಬಂದಿದೆಯಷ್ಟೆ. ಇಲ್ಲಿ ಅವರು 'ಕೀಱು' ಪದದ ಅರ್ಥವನ್ನು ಸರಿಯಾಗಿಯೆ ಗ್ರಹಿಸಿದ್ದಾರೆ. ಕವಿರಾಜಮಾರ್ಗದ ತೃತೀಯ ಪರಿಷ್ಕರಣದಲ್ಲಿ ಟಿಪ್ಪಣಿಯಲ್ಲಿ (ಪು. 181) ಈ ಶಬ್ದಕ್ಕೆ "ಕೀಱಿಕೊಳ್ =(ಧಾ. ಕೀಱು[=ಕೇಱು?])ಸಂಗ್ರಹಿಸು, ಬೇರ್ಪಡಿಸು(?)" ಎಂದು ಸಂದೇಹವನ್ನು ಸೂಚಿಸಿಯೇ ಅರ್ಥವನ್ನು ಕೊಟ್ಟಿದೆ. ಪ್ರಕರಣ ಬಲದಿಂದ ಊಹಿಸಿದ ಅರ್ಥ ಇದು.

ಕಿಟ್ಟೆಲ್ ಅವರ ನಿಘಂಟಿನಲ್ಲಿ ಮೂರು ಅರ್ಥಗಳಲ್ಲಿ ಈ ಪದವನ್ನು ಕೊಟ್ಟಿದೆ:

1. ಭಯಧ್ವನಿ (ಶ. ಮ. ದ., ಧಾತುಪಾಠ) (=ಚೀಱ್ etc) To Cry out, scream (ತೆಲುಗು: ಕುಱುಚ)

2. ಆಗ್ರಹ (ಶ. ಮ. ದ., ಧಾ. ಪಾ.) To rage, to fume.

(ತಮಿಳು, ಮಲೆಯಾಳಿ: ಚೀಱು)

3. ಪ್ರಮಾರ್ಜನ (ಶ. ಮ. ದ., ಧಾ. ಪಾ.) (=ಗೀಱು, ಗೀಚು) To rub off or away to scrape, to scratch (ತಮಿಳು, ಮಲೆಯಾಳಿ: ಕೀಱು, ತೆಲುಗು : ಗೀಱು; ತುಳು: ಕೀರು).

ಶಾಸನ ಪದ್ಯಮಂಜರಿಯ ಕೆಲವು ಪದ್ಯಗಳಲ್ಲಿ ಬರುವ ಈ ಶಬ್ದಕ್ಕೆ ಆರ್. ನರಸಿಂಹಾಚಾರ್ಯರು 'ಕೋಪಿಸು' ಎಂಬ (ಮೇಲೆ ಕಾಣಿಸಿರುವ ಎರಡನೆಯ) ಅರ್ಥವನ್ನು ಕೊಟ್ಟಿದ್ದಾರೆ. (ಶಾಸನ ಪದ್ಯ ಮಂಜರಿ, ಪದ್ಯಗಳು: 489, 618).

ವಡ್ಡಾರಾಧನೆಯಲ್ಲಿಯೂ ಈ ಧಾತು ಪ್ರಯೋಗವಾಗಿದೆ. ಸಂಪಾದಕರಾದ ಡಿ. ಎಲ್. ನರಸಿಂಹಾಚಾರ್ಯರು ಪ್ರಯೋಗ ಸಂದರ್ಭಗಳಿಗೆ 'ಗಟ್ಟಿಯಾಗಿ ಕೂಗಿ' 'ಬಲಾತ್ಕರಿಸಿ' ಎಂಬ ಅರ್ಥಗಳನ್ನು ಕೊಟ್ಟಿದ್ದಾರೆ.4

ಪಂಪಭಾರತದಲ್ಲಿ ಒಂದು ಕಡೆ ಮಾತ್ರ 'ಕೀಱು' ಪ್ರಯೋಗವಾಗಿದೆ (VI–67ವಚನ); ಸಂಪಾದಕರು 'ರೇಗು' ಎಂದು ಅರ್ಥಕೊಟ್ಟಿದ್ದಾರೆ.

ಮೇಲ್ಕಂಡ ಯಾವ ಅರ್ಥವೂ ಕವಿರಾಜಮಾರ್ಗದ ಪ್ರಯೋಗಕ್ಕೆ ಹೊಂದಿಬರುವುದಿಲ್ಲ. ಆದರೂ, ಶಾಸನವೊಂದರ ಮತ್ತು ಪಂಪಭಾರತದ ಪ್ರಯೋಗಗಳನ್ನು ಈ ಸಂದರ್ಭದಲ್ಲಿ ಪರಿಶೀಲಿಸುವುದು ಸೂಕ್ತ. ಏಕೆಂದರೆ ಅವುಗಳಿಗೆ ಸಂಪಾದಕರುಗಳು ಕೊಟ್ಟಿರುವ ಅರ್ಥ ಆಯಾ ಸಂದರ್ಭಕ್ಕೆ ಸರಿ ಎನಿಸುವುದಿಲ್ಲ.

ಪಂಪಭಾರತದ ಪ್ರಯೋಗ ಸಂದರ್ಭ:

"………ಸುಯೋಧನಂ ಬೆಱಗಾದಂ ॥67॥

"ವ॥ ಆಗಿ ದುಶ್ಶಾಸನ ಕರ್ಣ ಶಕುನಿ ಸೈಂಧವರೆಂಬ ದುಷ್ಟ ಚತುಷ್ಟಯದೊಳ್ ಮಂತಣಮಿರ್ದು ದಾಯಿಗರಪ್ಪೊಡೆ ಕರಂ ಪೆರ್ಚಿದರವರ ಪೆರ್ಚಂಗೇಗೆಯ್ವಂ ಬೆಸನಂಗಳಂ ಸಮಕಟ್ಟುವಮಪ್ಪೊಡೆ ಸಪ್ತವ್ಯಸನಂಗಳಪ್ಪುರುಮನೊಂದುಂ ಗೆಲ್ವುದಲ್ಲ ರಾಷ್ಟ್ರವ್ಯಸನಮುಂ ಬಳವ್ಯಸನಮುಂ ಪಾರ್ವಮಪ್ಪೊದವು ದುಸ್ಸಹಮಿಲ್ಲ ಪರಮಂಡಳ ವ್ಯಸನಮುನಾರಯ್ವುದು-ಪ್ಪೊದಿತ್ತುಂ ತೆತ್ತುಂ ಬಾಳ್ವ ಮಂಡಲಮಲ್ಲದೆ ಕೀಱಿಯುಂ ಮಾಱಿಯುಂ ನೆಗಳ್ವ ಮಂಡಲಮಿಲ್ಲ ಪುರುಷಮುಂ ಸಮಕಟ್ಟುವಮಪ್ಪೊಡೆ ಪೊಕ್ಕಿಱಿಯಲಾಗ್ವುದಲ್ಲಿ ರಸದಾನಾದಿಗಳೊಳ್ ಛಿದ್ರಿಸುವಮಪ್ಪೊಡವರಾಪ್ತವಂತರುಂ ಬುದ್ಧಿವಂತರುಮಾಗಿ ನೆಗಳ್ದಿರ್ದಾವ ಮಾಟ್ಕೆಯೊಳ್ ಪಗೆಯುಂ ಕೆಯ್ಗೆ ಮಾಡುವಂ ಪೇೞಿಮೆನೆ ಶಕುನಿಯಿಂತೆಂದಂ–"

---

4 ಪರಿಷ್ಕೃತ ಮುದ್ರಣ, ಮೈಸೂರು ಶಾರದಾ ಮಂದಿರದ ಪ್ರಕಟಣೆ, 1970; ಪ್ರಯೋಗಗಳ ಪುಟ–ಪಂಕ್ತಿ: 8–5; 18–7; 82–6; 88–14.

ಶಾಸನ ಪದ್ಯ (ಸೊರಬ, 138; ಕಾಲ: ಸು. 1145; ಶಾಸನಪದ್ಯಮಂಜರಿ, ಪು. 86. ಎರಡನೆಯ ಜಗದೇಕಮಲ್ಲನ ಸಾಮಂತ ಎಕ್ಕಲದೇವನ ಪರಾಕ್ರಮದ ವರ್ಣನೆ):

> ಶರಣೆಮಗೆಂದು ಬಂದು ಮಱಿವೊಕ್ಕು ಬರ್ದುಂಕದೆ ಕೀಱಿಮೀಱಿ ಮ।
> ಚ್ಚರಿಸುವ ವೈರಿಮನ್ನೆಯರ ಕೋಟಿಗ್ರ್ಮುಳಿಂ ಪೊಸಕಂಡದಿಂಡೆಯಿಂ।
> ಕರುಳ ಪಿಣಿಲ್ಗಳಿಂ ರುಧಿರದಿಂದೆ ಮರುಳ್ವಡೆಗುದ್ಘ್ರರಾಗಮುಂ।
> × ×ವಿಪನೆಂದೊಡಾಹವದೊಳೆಕ್ಕಲವೀರನನಾಂಪ ಗಂಡರಾರ್॥

ಪಂಪಭಾರತದ ಪ್ರಕರಣದಲ್ಲಿ, ರಾಜಸೂಯಯಾಗವಾದ ಮೇಲೆ ಪಾಂಡವರ ಏಳಿಗೆಯನ್ನು ಸಹಿಸದ ಸುಯೋಧನ ತನ್ನ ದುಷ್ಟ ಚತುಷ್ಟಯದೊಡನೆ ಮಂತ್ರಾಲೋಚನೆ ಮಾಡುತ್ತಿದ್ದಾನೆ. ನಮಗೆ ಪ್ರಕೃತವಾದ ವಚನ ಭಾಗದ ಆಶಯವನ್ನು ಹೀಗೆ ಗ್ರಹಿಸಬಹುದು: "ಪಾಂಡವರ ಶತ್ರುರಾಜರನ್ನು ಉಪಯೋಗಿಸಿಕೊಂಡು ಕೆಲಸ ಮಾಡೋಣವೆಂದರೆ, ಅವರೆಲ್ಲ ಪಾಂಡವರಿಗೆ ಕಪ್ಪಕಾಣಿಕೆ ಕೊಟ್ಟು ಬಾಳುವವರೇ ಹೊರತು, ಪ್ರತಿಭಟಿಸಿ ಆಜ್ಞೆಮೀರಿ ನಡೆದುಕೊಳ್ಳುವ ರಾಜರಿಲ್ಲ('ಕೀಱಿಯುಂ ಮೀಱಿಯುಂ ನೆಗೞ್ವ ಮಂಡಲಿಯುಮಿಲ್ಲ)". ಶಾಸನಪದ್ಯದ ಪ್ರಯೋಗಕ್ಕೂ ಇದೇ ಅರ್ಥ ಕೂಡಿಬರುತ್ತದೆ. 'ಕೀಱು'= ಚೀರು, ಗಟ್ಟಿಯಾಗಿ ಕೂಗು' ಎಂಬ ಅರ್ಥದ ವಿಕಾಸವನ್ನು ಇಲ್ಲಿ ಕಾಣಬಹುದು. ಆದ್ದರಿಂದ, 'ಕೀಱು' ಎಂದರೆ ಇಲ್ಲಿ 'ಪ್ರತಿಭಟನೆಯನ್ನು ಘೋಷಿಸಿ, ಸಾರಿ ಹೇಳಿ' (Declare, proclaim, defiance or defiant attitude) ಎಂದು ಅರ್ಥ ಮಾಡಬಹುದು; ಹೇಗೂ ರೇಗು, ಕೋಪಿಸು, ಎಂಬ ಅರ್ಥ ಉಚಿತವಾಗಿ ಕಾಣುವುದಿಲ್ಲ. (ಇಲ್ಲಿನ 'ಕೀಱಿಮೀಱಿ' ಎಂಬ ಯುಗ್ಮ ಪ್ರಯೋಗವೂ ಗಮನಾರ್ಹ). ಈ ಯಾವ ಅರ್ಥವೂ ಕವಿರಾಜಮಾರ್ಗದ ಪ್ರಯೋಗಕ್ಕೆ ಹೊಂದುವುದಿಲ್ಲ.

ಕೇಶಿರಾಜನ ಅರ್ಥವಿವರಣೆ ('ಕೀಱು = ಆಗ್ರಹ ಧಮುದ್ಘಾನಿ ಪ್ರಮಾರ್ಜನೇಷು') ಸ್ವಲ್ಪ ಬೆಳಕು ಚೆಲ್ಲುವಂತಿದೆ. 'ಆಗ್ರಹ' ಪದಕ್ಕೆ ಆಪ್ಟೆಯವರು –1. Seizing, taking, 2. Attack, 3. Determination, strong attachment, persistence ಎಂಬ ಅರ್ಥಗಳನ್ನು ಕೊಟ್ಟಿದ್ದಾರೆ. ಇವಕ್ಕನುಗುಣವಾಗಿ, ಪಂಪಭಾರತ ಮತ್ತು ಶಾಸನ ಪದ್ಯಗಳ ಪ್ರಯೋಗಕ್ಕೆ, 'ಆಕ್ರಮಣ ಮಾಡಿ ಮತ್ತು ಅತಿಕ್ರಮಿಸಿ' ಎಂದೂ ಅರ್ಥ ಮಾಡಬಹುದು; ಈ ಅರ್ಥವನ್ನು ಸ್ವಲ್ಪ ವಿಸ್ತರಿಸಿ, 'ಮುತ್ತಿಗೆ ಹಾಕಿ ಹಿಡಿಯುವ, ತೆಗೆದುಕೊಳ್ಳುವ' ಎಂದು ಅರ್ಥವಿಸಿದರೆ ಅನುಚಿತವಾಗದು.

ಈಗ, ನಾವು ಕವಿರಾಜಮಾರ್ಗದ ಪ್ರಯೋಗಕ್ಕೆ ಮರಳಬಹುದು. ಕೇಶಿರಾಜನು ಕೊಡುವ 'ಆಗ್ರಹ' ಪದದ ಸರಳವಾದ ಮೂಲಾರ್ಥ(= taking; ಹಿಡಿಯುವುದು, ಪಡೆಯುವುದು, ತೆಗೆದುಕೊಳ್ಳುವುದು, ಸ್ವೀಕರಿಸುವುದು, ಗ್ರಹಿಸುವುದು) ಕವಿರಾಜಮಾರ್ಗದ ಪದ್ಯಕ್ಕೆ ಚೆನ್ನಾಗಿ ಹೊಂದುತ್ತದೆ. (ಈ ಅರ್ಥವನ್ನು ಕಿಟ್ಟೆಲ್ ಉಲ್ಲೇಖಿಸಿಲ್ಲ– ಬಹುಶಃ ಪ್ರಯೋಗ ದೊರಕದೆ ಇದ್ದದ್ದರಿಂದ.). ಆದ್ದರಿಂದ "ಕೀಱಿಕೊಂಡು ಗುಣಮಂ ಕಳೆಗಲ್ಲಿಯು ದೋಷಮುಂ" ಎಂಬ ವಾಕ್ಯಕ್ಕೆ "ಗುಣವನ್ನು ಸ್ವೀಕರಿಸಿ (ಅಥವಾ ಹಿಡಿದು, ಪಡೆದು, ಗ್ರಹಿಸಿ) ದೋಷವನ್ನು ವರ್ಜಿಸಲಿ (=ಬಿಟ್ಟು ಬಿಡಲಿ, ಕಳೆಯಲಿ, ನಿವಾರಿಸಲಿ)" ಎಂದು ಅರ್ಥಮಾಡಬಹುದು. "ಗುಣಗ್ರಹಣ, ದೋಷವರ್ಜನ": ಹೇಗೆ ಎಂದರೆ, "ಹೊಸಬತ್ತ ಇರಲಾಗಿ, ಜೊಳ್ಳನ್ನು ತೂರಿ ಕಳೆಯುವ ಹಾಗೆ" (ಬತ್ತವನ್ನು ಪಡೆಯುವುದು, ಉಳಿಸಿಕೊಳ್ಳುವುದು – ಇದು ಅಧ್ಯಾಹಾರ).

'ಕೀಱು' ಶಬ್ದದ ಈ ಇನ್ನೊಂದು ಅರ್ಥವನ್ನು ಸಮರ್ಥಿಸುವಂತಿರುವ ಪ್ರಯೋಗಗಳು ಕಾವ್ಯಾವಲೋಕನದಲ್ಲಿಯೂ ಕುಮಾರರಾಮ ಸಾಂಗತ್ಯದಲ್ಲಿಯೂ ಕಂಡು ಬಂದಿವೆ.

ಕಾವ್ಯಾವಲೋಕನದ ಒಂದು ಲಕ್ಷ್ಯಪದ್ಯದಲ್ಲಿ ಈ ಪದ ಪ್ರಯೋಗವಾಗಿದೆ. ಪದ್ಯದ ಕರ್ತೃ ಯಾರೋ ತಿಳಿಯದು.

"ಕೀಱಿ ಪೌರುಷಮನಾತ್ಮಪುಣ್ಯದಿಂ
ಬೇಱೆಮಾಡದೆಸಪೊಂ ವಿರೋಧಿಯಂ
ಮೀಱುಗುಂ ವೆಱಮೆ ಱಂಕೆಯೊಂದಱಿಂ
ಪಾಱಲಾರ್ಕುಮೆ ಪತತ್ರಿರಾಜನುಂ.

(ಸೂ. 115ಕ್ಕೆ ಲಕ್ಷ್ಯ: ಪ. 492)

ವೆಱಂ ಮುಂತಾದ ಅನರ್ಥಕಪದಗಳ ಉಚಿತ ಪ್ರಯೋಗಕ್ಕೆ ಇದು ಒಂದು ಉದಾಹರಣೆ. ಪದ್ಯದ ಅರ್ಥವನ್ನು ಹೀಗೆ ನಿರೂಪಿಸಬಹುದು– "ಪೌರುಷವನ್ನು ಸಂಗ್ರಹಿಸಿಕೊಂಡು, ಕೂಡಿಸಿಕೊಂಡು, ಅದನ್ನು ತನ್ನ ಪುಣ್ಯದಿಂದ ಬೇರೆ ಮಾಡದೆ (ಎಂದರೆ ಅದರ ಸಂಗಡಲೇ) ಕಾರ್ಯಮಾಡುವವನು ಖಂಡಿತವಾಗಿಯೂ ಶತ್ರುವನ್ನು ಮೀರಿಸುತ್ತಾನೆ. ಪಕ್ಷಿರಾಜನಾದರೂ ಕೂಡ ಒಂದು ರೆಕ್ಕೆಯಿಂದ ಹಾರಲು ಸಾಧ್ಯವೆ?" ಪಕ್ಷಿರಾಜನು ಹಾರಲು ಎರಡು ರೆಕ್ಕೆಗಳೂ ಹೇಗೆ ಅಗತ್ಯವೋ ಹಾಗೆ ಶತ್ರುವನ್ನು ಮೀರಿಸಬೇಕಾದರೆ ಪುಣ್ಯ ಮತ್ತು ಪೌರುಷಗಳೆರಡೂ ಅಗತ್ಯ ಎಂದು ಭಾವ. ಹೀಗೆ, ಈ ಪದ್ಯದಲ್ಲಿ 'ಕೀಱು' ಶಬ್ದಕ್ಕೆ ಸಂಗ್ರಹಿಸು, ಕೂಡಿಸಿಕೊ, ಪಡೆದುಕೊ, ಸಂಪಾದಿಸಿಕೋ ಎಂದು ಅರ್ಥಮಾಡಿದರೆ ಸಮಂಜಸವೆನಿಸುವುದು.

ಕುಮಾರರಾಮ ಚರಿತೆಯ ಪದ್ಯ:

ಮೂಱು ಸಾವಿರ ವಾಜಿ ಮೂವತ್ತು ಸಾವಿರ
ಕೀಱಿ ತೆಗೆದ ಮಂದಿವೆರಸು
ಮಾಱೂಂತನು ಮಾದಿಗಿತ್ತಿಯ ಪೌಜಿಗೆ
ಚೀಱುವ ಕಹಳೆಯೊಗ್ಗಿನಲಿ

ದೆಹಲಿಯ ಸುಲ್ತಾನನ ಪರವಾಗಿ ಅವನ ಸೈನ್ಯವನ್ನು ನಡೆಸಿಕೊಂಡು ಮಾದಿಗಿತ್ತಿಯಾದ ಮಾತಂಗಿ ಕಂಪಿಲರಾಯನ ದುರ್ಗದ ಮೇಲೆ ಮುತ್ತಿಗೆ ಹಾಕಿದ್ದಾಳೆ. ಅಗ ಕುಮಾರರಾಮನು ಅವಳನ್ನು ಎದುರಿಸಲು ಸನ್ನದ್ಧನಾಗುತ್ತಾನೆ. ಆ ಸಂದರ್ಭದಲ್ಲಿ ಅವನು ಮೂರು ಸಾವಿರ ರಾವುತರನ್ನೂ ಮೂವತ್ತು ಸಾವಿರ ಕಾಲಾಳುಗಳನ್ನೂ ಕೂಡಿಸಿಕೊಂಡು ಹೊರಟ ಸಂಗತಿಯನ್ನು ಈ ಪದ್ಯ ವರ್ಣಿಸುತ್ತದೆ. ಪದ್ಯದ ನಾಲ್ಕನೆಯ ಸಾಲಿನಲ್ಲಿ'ಚೀಱುವ ಕಹಳೆ' ಎಂದಿರುವುದರಿಂದ, 'ಕೀಱಿ ತೆಗೆದ' ಎಂಬ ಮಾತಿಗೆ 'ಗಟ್ಟಿಯಾಗಿ ಕೂಗು, ಚೀರು' ಎಂಬ ಅರ್ಥ ಆಗದು ಎಂಬುದು ಸ್ವಯಂ ಸ್ಪಷ್ಟ. 'ತೆಗೆದ' (=ಪಡೆದ) ಎಂಬ ಶಬ್ದವೂ ಜೊತೆಗೂಡಿ. ಒಟ್ಟು ಮಾತಿಗೆ 'ಆಯ್ದು, ಆರಿಸಿ. ಪರೀಕ್ಷಿಸಿ(?),– ಶೇಖರಿಸಿದ, ಒಟ್ಟುಗೂಡಿಸಿದ'ಎಂಬ ವಿಶೇಷ ಅರ್ಥಚ್ಛಾಯೆ ಕಂಡುಬರುತ್ತದೆ; 'ಕೀಱು' ಶಬ್ದಕ್ಕೆ 'ಅಯ್', ಆರಿಸು (=Select 'ವಿರಲವಸ್ತ್ವಾಕರ್ಷಣೇ'.ಶ. ಮ.ದ)' ಎಂಬ ಧಾತ್ವರ್ಥ ಉಳಿಯುತ್ತದೆ. ಕವಿರಾಜಮಾರ್ಗ ಪ್ರಯೋಗದಲ್ಲಿ. 'ಗುಣವನ್ನು ಸ್ವೀಕರಿಸು, ಗ್ರಹಿಸು' ಎಂದು ಅರ್ಥ ಮಾಡುವಾಗ, ದೋಷದೊಡನೆ ಗುಣ ಸೇರಿಕೊಂಡಿರುವುದರಿಂದ ಅದನ್ನು ಪ್ರಯತ್ನಪೂರ್ವಕ 'ಆಯಲೇ' ಬೇಕು. ಆದ್ದರಿಂದ, ಕವಿರಾಜಮಾರ್ಗ ಪ್ರಯೋಗದ ಅರ್ಥವೇ ಕುಮಾರರಾಮನ ಸಾಂಗತ್ಯದ ಪ್ರಯೋಗದಲ್ಲಿ ಸ್ವಲ್ಪಮಟ್ಟಿಗೆ ಪರಿಮಿತವ್ಯಾಪ್ತಿಯನ್ನು ಹೊಂದಿ. ಸ್ವಲ್ಪ ಭಿನ್ನವಾದ ಅರ್ಥವನ್ನು ಕೊಡುವಂತಿದೆ.

ಮೇಲಿನ ವಿವೇಚನೆಯ ಫಲವಾಗಿ 'ಕೀಱು' ಶಬ್ದಕ್ಕೆ (1) ಶಬ್ದಮಣಿದರ್ಪಣದ 'ಆಗ್ರಹ' ಎಂಬ ಸಂಸ್ಕೃತ ಪದದ ಅರ್ಥಾಂತರಗಳಾದ 'ಸ್ವೀಕರಿಸು, 'ಗ್ರಹಿಸು', 'ಪಡೆ', 'ಸಂಗ್ರಹಿಸು', 'ಶೇಖರಿಸು'– ಇವುಗಳನ್ನೂ, (2) 'ಆಯ್', 'ಆರಿಸು', 'ಪರೀಕ್ಷಿಸು' ಎಂಬ ಅರ್ಥಗಳನ್ನೂ ಹೇಳಬಹುದು. ಕಿಟ್ಟೆಲ್ ಅವರ ನಿಘಂಟುವಿನಲ್ಲಿಯಾಗಲಿ, ಎಮೆನೋ ಮತ್ತು ಬರೋ ಅವರ 'ದ್ರಾವಿಡ ಭಾಷಾ ಜ್ಞಾತಿ ಶಬ್ದಕೋಶ'ದಲ್ಲಿಯಾಗಲಿ ಈ ಅರ್ಥಗಳನ್ನು ಕೊಟ್ಟಿಲ್ಲ.

ಸರಿಯಾದ ಅರ್ಥ ನಿರ್ಣಯವನ್ನು ಅವಲಂಬಿಸಿ, ಕವಿರಾಜಮಾರ್ಗದ ಪದ್ಯದ 3 ಮತ್ತು 4ನೆಯ ಪಾದಗಳ ಪಾಠ ಬಹುಮಟ್ಟಿಗೆ ಅಂತಿಮವಾಗಿ ಪರಿಷ್ಕೃತವಾದಂತೆ ಭಾವಿಸಬಹುದು. ಪರಿಷ್ಕೃತಪಾಠ:

"ಕೀಱಿಕೊಂಡು ಗುಣಮಂ ಕಳೆಗಲ್ಲಿಯ ದೋಷಮಂ
[ತೂ]ಱಿ ಪಿಂಗಿಸುವವೊಲ್ ಪೂಸಲ್ದಿರೆ [ಪ್ರೊಳ್ಳ]ಕಂ.

ಕೀಱು, ತೂಱು, ಪ್ರೊಳ್–ಈ ಮೂರು ಪದಗಳೂ ಕನ್ನಡ ನಿಘಂಟಿನಲ್ಲಿ ಇರುವಂಥವೆ. ಈ ಪದಗಳ ಪ್ರಯೋಗಗಳಿಗೆ ಕವಿರಾಜಮಾರ್ಗದಿಂದ ಚಾರಿತ್ರಿಕ ಪ್ರಾಚೀನತೆ ದೊರಕಿದೆ. 'ಕೀಱು' ಶಬ್ದವನ್ನು ಪ್ರಚಲಿತ ಅರ್ಥಗಳಿಗಿಂತ ಭಿನ್ನವಾದ ಹೊಸ ಅರ್ಥದಲ್ಲಿ ಬಳಸಿರುವುದು ಕವಿರಾಜಮಾರ್ಗದ ವಿಶೇಷ ಪ್ರಾಮುಖ್ಯ. ಚಾರಿತ್ರಿಕ ಪ್ರಾಚೀನತೆ, ಹೊಸ ಅರ್ಥ-ಈ ಎರಡು ದೃಷ್ಟಿಗಳಿಂದ 'ಕೀಱು' ಶಬ್ದ ಗಮನಾರ್ಹ. ಅಂತೆಯೆ, ಕಾವ್ಯಾವಲೋಕನದ ಉದಾಹರಣ ಪದ್ಯದಲ್ಲಿಯೂ ಕು. ರಾ. ಸಾಂಗತ್ಯದಲ್ಲಿಯೂ ಹೊಸ ಅರ್ಥಗಳಲ್ಲಿ ಈ ಶಬ್ದದ ಬಳಕೆ ಗಮನಾರ್ಹ.

—ಎಂ. ವಿ. ಸೀತಾರಾಮಯ್ಯ

"ಮಹಾಭಾರತದ ಉದಯರಾಗ"ವನ್ನು ಬರೆದ ಕವಿ ಯಾರು?

ಶ್ರೀಮತಿ ಟಿ. ಎಸ್. ಲೀಲಾವತಿಯವರು ಪ್ರಬುದ್ಧ ಕರ್ನಾಟಕ (ಸಂಪುಟ 52 ಸಂಚಿಕೆ 2)ದಲ್ಲಿ 'ಹರಿದಾಸರ ಕೀರ್ತನೆಗಳಲ್ಲಿ ಮಹಾಭಾರತ' ಎಂಬ ಲೇಖನವನ್ನು ಪ್ರಕಟಿಸಿದ್ದಾರೆ. ಅವರು ಆ ಲೇಖನದ ಕೊನೆಯ ಭಾಗದಲ್ಲಿ "ಚಂಪಕಾಪುರದ ಅರಸ ವೆಂಕಟರಮಣ" ಎಂಬ ಅಂಕಿತದಲ್ಲಿ ಒಂದು 'ಮಹಾಭಾರತದ ಉದಯರಾಗ' ದೊರೆಯುತ್ತದೆ. ನಲವತ್ತೊಂದು ನುಡಿಗಳಿರುವ ಈ ಹಾಡಿನಲ್ಲಿ ಇಡೀ ಮಹಾಭಾರತವಿದೆ. ಆದರೆ ಇದು ಯಾವ ದಾಸರದು ಎಂಬುದು ಇನ್ನೂ ಗೊತ್ತಾಗಿಲ್ಲ" ಎಂದು ಬರೆದಿರುತ್ತಾರೆ. ಈ ವಿಚಾರವನ್ನು ಕುರಿತು ಶ್ರೀ ಎಸ್. ಶಿವಣ್ಣನವರು ಪ್ರಬುದ್ಧ ಕರ್ನಾಟಕದ (ಸಂಪುಟ 53, ಸಂಚಿಕೆ 1) ಕಮ್ಮಟದ ಕಿಡಿಗಳು ಎಂಬ ವಿಭಾಗದಲ್ಲಿ "ಕಡಬದ ಅನಂತರಾಮದಾಸ: ಒಂದು ಟಿಪ್ಪಣಿ" ಎಂದು ಈ ಕೃತಿಕಾರನ ಮತ್ತು ಅವನ ರಚನೆಗಳ ವಿಚಾರದಲ್ಲಿ ಕೆಲವು ಅಂಶಗಳನ್ನು ಸೂಚಿಸಿರುತ್ತಾರೆ. "ಪೊಡವಿಯೊಳ್ ಕಡಬಪುರವೆಂಬ ಗ್ರಾಮದಲಿ ವಡೆಯ ನಾರಾಯಣನ ಚರಣ ಸೇವಕನು ಕಡು ಹಸುಳೆ ದಾಸ ಅನಂತರಾಮನಲಿ ಮೃಡಮಿತ್ರ ಚಂಪಕಾಪುರದ ಶ್ರೀ ರಮಣ ಕರುಣದಿಂ ಯಕ್ಷಗಾನದಿ ಪೇಳಿಸಿದನ್" ಎಂದು ಕ್ರಿ. ಶ. 1876ರಲ್ಲಿ ಪ್ರಕಟವಾದ 'ಅಜಮಿಳ ಚರಿತ್ರೆ' ಎಂಬ ಯಕ್ಷಗಾನ ಕೃತಿಯಲ್ಲಿ ಅಚ್ಚಾಗಿರುವುದನ್ನು ಹೇಳಿ, ಅದರ ಪರಿಸಮಾಪ್ತಿ ಭಾಗದಲ್ಲಿ ಕೃತಿಕಾರನ ಸ್ಥಳ, ನಾಮಧೇಯ, ಮತ್ತು ಆರಾಧ್ಯ ದೈವತದ ಅಂಕಿತಗಳನ್ನು ತಿಳಿಸಿರುವುದಾಗಿ ಶ್ರೀ ಶಿವಣ್ಣನವರು ಉಲ್ಲೇಖಿಸಿರುತ್ತಾರೆ. "ಕಡಬಪುರದ ವಾಸ್ತವ್ಯನೂ ನಾರಾಯಣನ ಚರಣ ಸೇವಕನೂ ಆದ ಅನಂತರಾಮದಾಸ ಚಂಪಕಾಪುರದ ಶ್ರೀರಮಣನ ಅಂಕಿತದಲ್ಲಿ ಪೂರ್ವೋಕ್ತ 'ಅಜಮಿಳ ಚರಿತ್ರೆ'ಯನ್ನು ಯಕ್ಷಗಾನದಲ್ಲಿ ರಚಿಸಿದ ಸಂಗತಿ ತಿಳಿಯುತ್ತದೆ. ಚಂಪಕಾಪುರದ ಶ್ರೀರಮಣ 'ವೆಂಕಟರಮಣ'ನೆಂಬ ಅಂಶ ಅನಂತದಾಸನ ಮತ್ತೊಂದು ಯಕ್ಷಗಾನಕೃತಿಯಾದ 'ಬಾಣಾಸುರನ ಕಥೆ'ಯಿಂದ ಗೊತ್ತಾಗುವುದು. ಆ ಕೃತಿಯ ಅಂತ್ಯಭಾಗದಲ್ಲಿ "ಚಂಪಕಪುರದ ವೆಂಕಟರಮಣ" ಮತ್ತು ಕಡಬದನಂತರಾಮದಾಸ ಎಂದು ಸ್ಪಷ್ಟವಾಗಿ ಉಕ್ತವಾಗಿದೆ"– ಎಂದು ಶ್ರೀ ಶಿವಣ್ಣನವರು ನಿರೂಪಿಸಿರುತ್ತಾರೆ. "ಈತನ ಬಗೆಗೆ ಪೂಜ್ಯ ಕವಿಚರಿತೆಕಾರರಾದ ಆರ್. ನರಸಿಂಹಾಚಾರ್ ಅವರು 'ಕರ್ನಾಟಕ ಕವಿಚರಿತೆ' ತೃತೀಯ ಸಂಪುಟ, ಪು. 227ರಲ್ಲಿ "ಕ. ಅನಂತರಾಮಯ್ಯ. ಈತನು ಸ್ಮಾರ್ತ ಕವಿ. ಗ್ರಂಥಗಳು 'ಅಜಾಮಿಳ ಚರಿತೆ', 'ಪ್ರಹ್ಲಾದ ಚರಿತೆ' ಎಂದಿದ್ದಾರೆ. ಇವೆರಡರೊಡನೆ ಈತ ಯಕ್ಷಗಾನ ರೂಪದಲ್ಲಿನ 'ಬಾಣಾಸುರನ ಕಥೆ'ಯನ್ನು ರಚಿಸಿದ ಸಂಗತಿಯನ್ನು ಗ್ರಂಥಾಂತರ್ಗತ ಉಲ್ಲೇಖ ಹಾಗೂ ಅಂಕಿತಗಳ ಆಧಾರ ಪೂರ್ವಕವಾಗಿ ತಿಳಿಸಿದೆ. –ಎಂದೂ ಶ್ರೀ ಶಿವಣ್ಣನವರು ವಿವರಿಸಿದ್ದಾರೆ. ಇದರಂತೆಯೇ ಡಾ. ಕೆ. ಎಂ. ಕೃಷ್ಣರಾವ್ ಅವರು 'ಬಾಲಲೀಲೆ' 'ಭಾಗಾನಗರದ ಕಥೆ'ಗಳೆಂಬ ಯಕ್ಷಗಾನಗಳನ್ನು ಅನಂತರಾಮಯ್ಯ ಕೃತವೆಂದು 'ಯಕ್ಷಗಾನ ಸಾಹಿತ್ಯ'ದಲ್ಲಿ ಬರೆದಿರುತ್ತಾರೆಂದು ಹೇಳಿ ಶ್ರೀ ಶಿವಣ್ಣನವರು ತಮಗೆ 'ಬಾಲಲೀಲೆ' ಎಂಬ ಕೃತಿ ದೊರೆಯಲಿಲ್ಲವೆಂದೂ 'ಭಾಗಾನಗರದ ಕಥೆ' ಅನಂತರಾಮದಾಸನದಲ್ಲವೆಂದೂ ಸ್ಪಷ್ಟಪಡಿಸಿದ್ದಾರೆ. ಇದರಿಂದ ದಾಸ ಅನಂತರಾಮ ಚಂಪಕಾಪುರದ ಶ್ರೀರಮಣನ ಅಂಕಿತದಲ್ಲಿ ಅಜಮಿಳ ಚರಿತ್ರೆಯನ್ನು

ಬರೆದನೆಂದೂ 'ಚಂಪಕಾಪುರದ ಶ್ರೀರಮಣ' 'ವೆಂಕಟರಮಣ'ನೆಂಬ ಅಂಶ ಅನಂತದಾಸನ (ಅನಂತ ರಾಮದಾಸನದ್ದು) ಬಾಣಾಸುರನ ಕಥೆಯಿಂದ ಗೊತ್ತಾಗುವುದೆಂದೂ ಶ್ರೀ ಶಿವಣ್ಣನವರು ತಿಳಿಯಿಸಿದ್ದಾರೆ. ಇದರಿಂದ ಶ್ರೀಮತಿ ಪಿ. ಎಸ್. ಲೀಲಾವತಿ ಅವರು ಹೇಳಿರುವ 'ಚಂಪಕಾಪುರದ ಅರಸ ವೈಂಕಟರಮಣ' ಎಂಬ ಅಂಕಿತದ 'ಮಹಾಭಾರತದ ಉದಯರಾಗ' ಎಂಬ ಕೃತಿಯನ್ನು ಕ. ಅನಂತರಾಮಯ್ಯ ರಚಿಸಿರಬಹುದೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. "ಕಡಬದ ಅನಂತರಾಮದಾಸನ ಕೃತಿಗಳಲ್ಲೆಲ್ಲಾ 'ಚಂಪಕಪುರದ ಶ್ರೀರಮಣ' ಅಥವಾ ಚಂಪಕಪುರದ ವೈಂಕಟರಮಣ'ನ ಅಂಕಿತವಿದೆ. ಅಂಕಿತದ ಹಿನ್ನ ಚಂಪಕಪುರ ಕಡಬಗಳಲ್ಲಿವೆ? ಈತನು ಇನ್ಯಾವ ಕೃತಿಗಳನ್ನಾದರೂ ರಚಿಸಿರುವನೇ? ಇತ್ಯಾದಿ ಪ್ರಶ್ನೆಗಳ ಉತ್ತರಗಳು ಮುಂದಿನ ಸಂಶೋಧನೆಯನ್ನು ಅವಲಂಬಿಸಿವೆ" ಎಂದು ಶ್ರೀ ಶಿವಣ್ಣನವರು ಹೇಳಿದ್ದಾರೆ. ಈ ಮಾತು ಸರ್ವಸಮ್ಮತವಾಗಿದೆ. ಅನಂತರಾಮದಾಸ ಸರಿಸುಮಾರು ಹದಿನೆಂಟನೆಯ ಶತಮಾನದಲ್ಲಿ ಬಾಳಿ ಬದುಕಿರಬಹುದೆಂಬ ಕವಿಚರಿತೆಕಾರರ ಅಭಿಪ್ರಾಯವನ್ನು ಒಪ್ಪಬಹುದೆಂದು ಶ್ರೀ ಶಿವಣ್ಣನವರು ಹೇಳಿರುತ್ತಾರೆ. ಇದನ್ನೆಲ್ಲಾ ಸಾವಧಾನವಾಗಿ ಅವಲೋಕಿಸಿದರೆ. 'ಮಹಾಭಾರತದ ಉದಯರಾಗ' ಎಂಬ ಹಾಡನ್ನು ಬರೆದ ದಾಸರು ಯಾರು? ಎಂಬ ಅನುಮಾನ ಪರಿಹಾರವಾಗುವುದಿಲ್ಲ ಎಂದು ಹೇಳಬಹುದು.

ಕವಿಚರಿತೆಕಾರರು ಅಜಾಮಿಳ ಚರಿತೆ, ಪ್ರಹ್ಲಾದ ಚರಿತೆಗಳನ್ನು ಕ. ಅನಂತರಾಮಯ್ಯ ಬರೆದನೆಂದು ಹೇಳಿರುತ್ತಾರೆ. ಅವನು ಸ್ಮಾರ್ತ ಬ್ರಾಹ್ಮಣ. ಅನಂತ ರಾಮಯ್ಯನನ್ನು ಕವಿಚರಿತೆಯಲ್ಲಿ ದಾಸ ಅನಂತರಾಮನೆಂದು ಹೇಳಿಲ್ಲ. ಅವರು ಬಾಣಾಸುರನ ಕಥೆಯ ಹೆಸರನ್ನು ಸೂಚಿಸಿಲ್ಲ. ಬಹುಶಃ ಶ್ರೀ ನರಸಿಂಹಾಚಾರ್ಯರಿಗೆ ಈ ಗ್ರಂಥ ಸಿಕ್ಕಿರಲಿಲ್ಲವೆಂದು ಹೇಳಬಹುದು. ಇದರಂತೆಯೇ 'ಮಹಾಭಾರತದಲ್ಲಿ ಉದಯರಾಗ' ಎಂಬ ಕೃತಿಯು ಶ್ರೀ ಆಚಾರ್ಯರ ಗಮನಕ್ಕೆ ಬಂದಿರಲಾರದೆಂದು ಊಹಿಸಬಹುದು. ಅಜಾಮಿಳ ಚರಿತೆಯಲ್ಲಿ ನಾರಾಯಣನ ಚರಣ ಸೇವಕನು ದಾಸ ಅನಂತರಾಮ ಎಂದು ಹೇಳಿದೆಯೇ ಹೊರತು ಅವನ 'ಚಂಪಕಾಪುರದ ಅರಸ ವೈಂಕಟರಮಣ' ಎಂಬ ಅಂಕಿತವನ್ನು ಹೇಳಿಲ್ಲ. ಅವನದೆಂಬ ಇನ್ನೊಂದು ಕೃತಿಯಾದ 'ಬಾಣಾಸುರನ ಕಥೆ'ಯಲ್ಲಿ 'ಚಂಪಕಾಪುರದ ಶ್ರೀರಮಣ' 'ವೆಂಕಟರಮಣ' ಎಂಬ ಅಂಶ ಉಕ್ತವಾಗಿದೆ. ಹರಿದಾಸರು ತಮ್ಮ ಅಂಕಿತವನ್ನು ಯಾವಾಗಲೂ ಒಂದೇ ರೂಪದಲ್ಲಿ ಹೇಳಿಕೊಳ್ಳುತ್ತಾರೆ. ಅವರು ಒಂದೊಂದು ಕೃತಿಯಲ್ಲಿ ಒಂದೊಂದು ಅಂಕಿತವನ್ನು ಹೇಳಿಕೊಳ್ಳುವ ಸಂಪ್ರದಾಯವಿಲ್ಲ. ಕಡಬದ ಅನಂತರಾಮದಾಸನ ಕೃತಿಗಳಲ್ಲೆಲ್ಲಾ "ಚಂಪಕಪುರದ ಶ್ರೀರಮಣ" ಅಥವಾ 'ಚಂಪಕಪುರದ ವೆಂಕಟರಮಣ" ಎಂಬ ಅಂಕಿತವಿದೆಯೆಂಬ ಅಂಶವನ್ನು ಶ್ರೀ ಶಿವಣ್ಣನವರು ಒಪ್ಪಿರುತ್ತಾರೆ. ಅನಂತರಾಮಯ್ಯ ಸ್ಮಾರ್ತ ಬ್ರಾಹ್ಮಣ. ಅವನು ತನ್ನನ್ನು ನಾರಾಯಣನ ದಾಸನೆಂದು ಭಕ್ತಿಯಿಂದ ಹೇಳಿಕೊಂಡಿರಬಹುದು. ಅಷ್ಟು ಮಾತ್ರಕ್ಕೆ ಶ್ರೀಮತಿ ಲೀಲಾವತಿಯವರ ಲೇಖನದಲ್ಲಿ ಉಕ್ತರಾಗಿರುವ ಹರಿದಾಸರ ಪಂಕ್ತಿಯಲ್ಲಿ ಅನಂತರಾಮಯ್ಯ ಬರಲು ಅವಕಾಶವಿಲ್ಲ. ಹರಿದಾಸರಲ್ಲಿ ಪ್ರತಿಯೊಬ್ಬರೂ ತನ್ನ ಗುರುವಿನಿಂದ ಅಂಕಿತವನ್ನು ಪಡೆದು ಆ ಅಂಕಿತದಿಂದ ತನ್ನ ಕೀರ್ತನೆಗಳನ್ನು ಹಾಡಿದ್ದಾರೆ. ಹರಿದಾಸರ ಕೀರ್ತನೆಗಳಲ್ಲಿ ಮಾಧ್ವ ಮತತತ್ತ್ವ ಪ್ರಕ್ರಿಯೆಗಳೂ ಸಂಪ್ರದಾಯಗಳೂ. ಹರಿನಾಮಸ್ಮರಣೆಯೂ ಪ್ರಧಾನವಾಗಿರುತ್ತವೆ. ಕನಕದಾಸನಂಥ ಶೂದ್ರ ಹರಿದಾಸನಿಗೆ ದಾಸಕೂಟದಲ್ಲಿ ಸಮಾನ ಗೌರವಾದರಗಳಿರಲಿಲ್ಲ. ಸ್ಮಾರ್ತ ಬ್ರಾಹ್ಮಣ ನಾರಾಯಣ ದಾಸ ಅನಂತರಾಮಯ್ಯ ದ್ವೈತದೀಕ್ಷೆಯನ್ನು ಸ್ವೀಕರಿಸಿದ್ದರೆ ಮಾತ್ರ ದಾಸಕೂಟದಲ್ಲಿ ಪರಿಗಣಿತನಾಗುತ್ತಿದ್ದನು. ಆಗ ಅವನು ತನ್ನ ಅಂಕಿತದಲ್ಲಿಯೇ ಕಾವ್ಯರಚನೆ ಮಾಡಬೇಕಾಗಿತ್ತು. ಕನಕದಾಸ ಹರಿದಾಸನಾಗಿದ್ದಂತೆಯೇ ಅನಂತರಾಮಯ್ಯ ನಾರಾಯಣ ದಾಸನಾಗಿದ್ದಿರಬಹುದು. ಅವನು ವೈಷ್ಣವದೀಕ್ಷೆಯನ್ನು ಪಡೆದಿರಲಾರನೆಂದು ಅವನ ಗ್ರಂಥಗಳಿಂದ ವ್ಯಕ್ತವಾಗುತ್ತದೆ. ಆದ್ದರಿಂದ 'ಮಹಾಭಾರತದ ಉದಯರಾಗ'ವನ್ನು ಬರೆದ ಕವಿ 'ಚಂಪಕಾಪುರದ ಅರಸ ವೈಂಕಟರಮಣ'ನೆಂಬ ಅಂಕಿತದ ಬೇರೊಬ್ಬ ಹರಿದಾಸನಿರಬಹುದೆಂದು ನಮಗೆ ಅನಿಸುತ್ತದೆ. ಕಡಬದ ಅನಂತ ರಾಮಯ್ಯನೇ 'ಉದಯರಾಗ'ವನ್ನು ಬರೆದಿದ್ದರೆ. ಅವನು ತನ್ನ ಇತರ ಕಾವ್ಯಗಳಲ್ಲಿ ಹೇಳಿಕೊಂಡಿರುವಂತೆ ತನ್ನ ಹೆಸರನ್ನೂ ತನ್ನ ಊರಿನ ಹೆಸರನ್ನೂ ಹೇಳಿಕೊಳ್ಳಬಹುದಾಗಿತ್ತು. ಆದ್ದರಿಂದ ಶ್ರೀಮತಿ ಪಿ. ಎಸ್. ಲೀಲಾವತಿ ಅವರ ಅನುಮಾನ ಪರಿಹಾರವಾದಂತಾಗಲಿಲ್ಲ.

ಶ್ರೀ ಶಿವಣ್ಣನವರ ಇದೊಂದು ಪ್ರಶ್ನೆಯನ್ನು ಪರಿಶೀಲಿಸಬಹುದು. ಅದರಂತೆ ಕಡಬ ಮತ್ತು ಚಂಪಕಾಪುರ ಎಂಬ ಸ್ಥಳಗಳಲ್ಲಿವೆ ಎಂಬುದನ್ನು ಇತಿಹಾಸದಿಂದ ತಿಳಿಯಬಹುದು. ಅನಂತರಾಮಯ್ಯನ ಊರು ಕಡಬ ಎಂಬುದು ತುಮಕೂರು ಜಿಲ್ಲೆಯ ಗುಬ್ಬಿ ತಾಲ್ಲೂಕಿನಲ್ಲಿದೆ. ಇದು ಹಿಂದೆ ಕಡಬ ತಾಲ್ಲೂಕಿನ ಕಸಬೆಯಾಗಿತ್ತು. ಈಗ ಇದು ಅದೇ ಹೆಸರಿನ ಹೋಬಳಿಯ ಕಸಬೆಯಾಗಿದೆ. ಇದೊಂದು ದೊಡ್ಡ ಗ್ರಾಮ. ಇದು ಶಿಂಷಾನದಿಯ ಬಲಗಡೆಯ ದಡದಲ್ಲಿ ತುಮಕೂರು-ಮಾಯಸಂದ್ರ ರಾಜಮಾರ್ಗದಲ್ಲಿದೆ. 1 ಕದಂಬ ಋಷಿ ಇಲ್ಲಿ ತಪಸ್ಸು ಮಾಡಿದನೆಂದೂ 2 ಶ್ರೀರಾಮನು ಇಲ್ಲಿ ಸೀತಾ ಲಕ್ಷ್ಮಣರೊಂದಿಗೆ ಕೆಲಕಾಲವಿದ್ದು ಇಲ್ಲಿ ಒಂದು ದೊಡ್ಡ ಕೆರೆಯನ್ನು ಕಟ್ಟಿಸಿದನೆಂದೂ ಸ್ಥಳಪುರಾಣ ದಿಂದ ಗೊತ್ತಾಗುತ್ತದೆ. ಪೂರ್ವ ಶ್ರೀವೈಷ್ಣವ ಪಂಗಡದವರ ಪಂಚಗ್ರಾಮಗಳೆಂದು -ಕಡಬ, ಮಾಯಸಂದ್ರ, ತುಗ್ಗಿಹಳ್ಳಿ, ನೊಣವಿನಕೆರೆ ಮತ್ತು ಬಿಂಡಿಗನವಿಲೆ- ಇವು ಶ್ರೀ ರಾಮಾನುಜಾಚಾರ್ಯರ ಕಾಲದಲ್ಲಿ ಪ್ರಸಿದ್ಧಿಗೆ ಬಂದುವು. 3 ಇಲ್ಲಿನ ತಮಿಳು ಶಾಸನಗಳಲ್ಲಿ ಕಡಬವನ್ನು ದಶರಥರಾಮ ಚತುರ್ವೇದಿ ಮಂಗಲ ಎಂದು ಹೇಳಿದೆ. ಇಲ್ಲಿರುವ ಪ್ರಾಚೀನ ಶ್ರೀರಾಮದೇವಾಲಯ ಬಹಳ ಪ್ರಸಿದ್ಧ ವಾಗಿದೆ. ಇದು ಶ್ರೀ ವೈಷ್ಣವ ಕ್ಷೇತ್ರ. ನಮಗೆ ತಿಳಿದ ಮಟ್ಟಿಗೆ ಇಲ್ಲಿ ಮಾಧ್ವ ಮತಾನುಯಾಯಿಗಳಿಲ್ಲ. ಉದ್ಯೋಗ ನಿಮಿತ್ತದಿಂದ ಬಂದವರಿರಬಹುದು. ಇಲ್ಲಿ ಹಿಂದಿನಿಂದಲೂ ಸ್ಮಾರ್ತರಿದ್ದಾರೆ. ಇಲ್ಲಿಂದ ಪಶ್ಚಿಮಕ್ಕೆ ಸುಮಾರು ಒಂದು ಹರದಾರಿ ದೂರದಲ್ಲಿ4 ಸಂಪಿಗೆ ಎಂಬ ಗ್ರಾಮವಿದೆ. ಇದು ಹಿಂದೆ ಗುಬ್ಬಿ ತಾಲ್ಲೂಕಿಗೆ ಸೇರಿತ್ತು. ಈಗ ಇದನ್ನು ತುರುವೇಕೆರೆ ತಾಲ್ಲೂಕಿಗೆ ಸೇರಿಸಿರುತ್ತಾರೆ. ಇದು ಮಹಾಭಾರತ ಕಾಲದಿಂದಲೂ ಪ್ರಸಿದ್ಧವಾಗಿದೆ. ಜೈಮಿನಿ ಭಾರತದಲ್ಲಿ ಹೇಳಿರುವ ಸುಧನ್ವನ ರಾಜಧಾನಿಯಾಗಿದ್ದ ಚಂಪಕನಗರ ಅಥವಾ ಚಂಪಕಪುರವೆಂದರೆ ಈ ಸಂಪಿಗೆ ಎಂದು ತಿಳಿದು ಬರುತ್ತದೆ. (It is said to be the site of Champakanagara the Capital of Sudhanva). ಈ ವಿಚಾರವನ್ನು ರೈಸ್ ಸಾಹೇಬರು ಮೈಸೂರು ಗೆಜೆಟಿಯರ್‌ನಲ್ಲಿ ಬರೆದಿರುತ್ತಾರೆ.5 ಆದ್ದರಿಂದ ಕಡಬ ಮತ್ತು ಸಂಪಿಗೆ (ಚಂಪಕಾಪುರ) ಅತ್ಯಂತ ಪ್ರಾಚೀನಕಾಲದಿಂದಲೂ ಪ್ರಸಿದ್ಧಿಯಾಗಿದೆ. ಸಂಪಿಗೆಯಲ್ಲಿ ಈಗಲೂ ಶ್ರೀಲಕ್ಷ್ಮೀರಮಣ ಸ್ವಾಮಿಯ ರಥೋತ್ಸವ ನಡೆಯುತ್ತಿದೆ. ಶ್ರೀ ಲಕ್ಷ್ಮೀರಮಣ ಸ್ವಾಮಿಯನ್ನು ವೆಂಕಟರಮಣ ಸ್ವಾಮಿಯೆಂದೂ ಕರೆಯುತ್ತಾರೆ. ಈ ಪ್ರಾಂತದಲ್ಲಿ ನಾನು ಕೆಲವು ವರ್ಷಗಳ ಕಾಲ ಸರ್ಕಾರಿ ಉದ್ಯೋಗದಲ್ಲಿದ್ದುದರಿಂದ ಈ ಸ್ಥಳಗಳ ಜನಜೀವನ ಮತ್ತು ಇತಿಹಾಸ ವಿಷಯಗಳನ್ನು ತಿಳಿಯಲು ಅವಕಾಶವಾಯಿತು. ಶ್ರೀ ಶಿವಣ್ಣನವರ ಟಿಪ್ಪಣಿ ಒಂದು ಹೊಸ ಬೆಳಕನ್ನು ಚೆಲ್ಲುತ್ತಿದೆ. ಶ್ರೀಮತಿ ಬಿ. ಎಸ್. ಲೀಲಾವತಿ ಅವರ ಸಂದೇಹ ವಿದ್ವಾಂಸರ ಗಮನವನ್ನು ಸೆಳೆಯುತ್ತದೆ. 'ಮಹಾಭಾರತದ ಉದಾಹರಣ' ಕೃತಿಯನ್ನು ಬರೆದ ಹರಿದಾಸ – ಕವಿ ಯಾರೆಂಬುದನ್ನು ಪಂಡಿತರು ಸಂಶೋಧನೆಯಿಂದ ನಿರ್ಧರಿಸಬೇಕಾಗಿದೆ.

—ಓ. ಎಸ್. ಲಿಂಗಣ್ಣಯ್ಯ

'ಬೆದಂಡೆ—ಚತ್ತಾಣ'

ಪದ್ಯಕಾವ್ಯ–ಚಂಪೂಕಾವ್ಯ, ಹಾಡುಗಬ್ಬ–ಓದುಗಬ್ಬ, ನಾಟಕ–ಮುಕ್ತಕ, ಎಂಬಂತೆ ಲಕ್ಷ್ಯಗ್ರಂಥಗಳ
ಕಾಣುವ ಪುರಾತನ ಕನ್ನಡಕಾವ್ಯಭೇದಗಳಲ್ಲಿ ನಮಗೆ ಉಳಿದು ಬಂದಿರುವುದೆಂದರೆ ಪ್ರಾಯಶಃ ಚಂ
ಪ್ರಬಂಧಗಳೇ ಆಗಿರುವುದರಿಂದ, ಅಂದಿನ ಪದ್ಯಕಾವ್ಯ ಹಾಗೂ ಹಾಡುಗಬ್ಬಗಳ ಸ್ವರೂಪ ಹೇಗಿದ್ದಿ
ಬಂದು ಯಥಾರ್ಥ ಕಲ್ಪನೆಗೆ ಬರುವುದಿಲ್ಲ. ಲಕ್ಷಣ ಗ್ರಂಥಗಳಲ್ಲಿಯೂ ಆ ಕುರಿತು ಹೆಚ್ಚಿನ ಮಾ
ದೊರೆಯುವುದಿಲ್ಲ. ಕವಿರಾಜಮಾರ್ಗದಲ್ಲಿ 'ಪರಮ ಶ್ರೀ ವಿಜಯಕವೀಶ್ವರ ಪಂಡಿತ ಚಂದ್ರ ಲೋ
ಪಾಲಾದಿಗಳಾ ನಿರತಿಶಯವಸ್ತುವಿಸ್ತರರಚನೆಗಳು ಮಾರ್ಗವಿಪ್ಪತಿಯ ಪದ್ಯಕಾವ್ಯಕ್ಕೆ ಉದಾಹ

1, 2, 3, 4 5 ನೋಡಿ: _ ಮೈಸೂರು ಗೆಜೆಟಿಯರ್ ಸಂಪುಟ V ಪುಟ 402, 491 ಮ
532.

ಗಳಾಗಿವೆಯೆಂದೂ, ಕಾವ್ಯಮೀಮಾಂಸೆ ಲಕ್ಷಣಗ್ರಂಥಗಳಲ್ಲಿ 'ಬೆದಂಡೆ' ಮತ್ತು 'ಚತ್ತಾಣ' ಎಂಬ ಹೆಸರುಗಳಿಂದ ಪ್ರಸಿದ್ಧವಾಗಿದ್ದ ಎರಡು ಪ್ರಭೇದಗಳು, ಅಥವಾ ಪ್ರಸಿದ್ಧ ಪದ್ಯಕಾವ್ಯಗಳಿಗೆ ಲಕ್ಷ್ಯಗಳಾಗಿವೆ ಎಂದೂ ಆ ಹಿಂದಿನ ಲಾಕ್ಷಣಿಕರೇ ಬರೆಯುತ್ತಾರೆ ಎಂದಿದೆ. ಮತ್ತು ಬೆದಂಡೆ, ಚತ್ತಾಣಗಳಲ್ಲಿರತಕ್ಕ ಛಂದೋವಿಶೇಷಗಳನ್ನು ಸೂಚಿಸಿದೆ. ಕಾವ್ಯಾವಲೋಕನದಲ್ಲಿ ನಾಗವರ್ಮನೂ ಬೆದಂಡೆಯ ಲಕ್ಷಣವನ್ನು ಕೊಟ್ಟಿರುತ್ತಾನೆ. ಆ ಪ್ರಕಾರ, ಇವುಗಳ ಸ್ವರೂಪ ವೈಶಿಷ್ಟ್ಯಗಳೇನಿದ್ದಿರಬಹುದು. ಈ ಹೆಸರುಗಳ ಅರ್ಥ ಹಾಗೂ ಮಹತ್ವಗಳೇನಿದ್ದಿರಬೇಕು ಎಂಬುದನ್ನು ಯಥಾಮತಿ ಪರಿಶೀಲಿಸುವುದು ಈ ಲೇಖನದ ವಿಷಯವಾಗಿದೆ.

ಕವಿರಾಜಮಾರ್ಗದಲ್ಲಿ ಇವುಗಳ ಲಕ್ಷಣಗಳನ್ನು ಹೇಳುವ ಆ ಮೂರು ಪದ್ಯಗಳು ಹೀಗಿವೆ:-

ನುಡಿಗೆಲ್ಲಂ ಸಲ್ಲದ ಕ
ನ್ನಡದೊಳ್ ಚತ್ತಾಣಮುಂ ಬೆದಂಡೆಯುಮೆಂದೀ
ಗಡಿನ ಪೆಗಱ್ಪಿಯ ಕಬ್ಬದೊ
ಳೊಡಂಬಡಂ ಮಾಡಿದರ್ ಪುರಾತನಕವಿಗಳ್ ॥33॥

ಕಂದಮುಮಮಳಿನ ವೃತ್ತಮು
ಮೊಂದೊಂದೆಡೆಗೊಂಡು ಜಾತಿಜಾಣೆಸೆಯೆ ಬೆಡಂ
ಗೊಂದಿಪಱಿಕೊಳಮರೆ ಪೇೞಲ್
ಸುಂದರರೂಪಿಂ ಬೆದಂಡೆಗಬ್ಬಮುಮಕ್ಕುಂ॥34॥

ಕಂದಂಗಳ್ ಪಲವಾಗಿರೆ
ಸುಂದರವೃತ್ತಂಗಳಕ್ಕರಂ ಚೌಪದಿ ಮ
ತ್ತಂ ದಲ್ ಗೀತಿಕೆ ತಿವದಿಗ
ಳಂದಂಬೆತ್ತೆಸೆಯೆ ಪೇೞ್ವೊಡದು ಚತ್ತಾಣಂ ॥35॥

ಮೊದಲನೆಯ ಪದ್ಯದಲ್ಲಿ 'ನುಡಿಗೆಲ್ಲಂ ಸಲ್ಲದ ಕನ್ನಡದೊಳ್' ಎಂಬ ಮಾತಿಗೆ ಉದ್ದಿಷ್ಟಾರ್ಥವೇನೆಂಬುದು ನಿರ್ಣಯವಾಗುವುದಿಲ್ಲ. ಆದರೆ, ಇದರ ಹಿಂದಿನ ಪದ್ಯದಲ್ಲಿ, ಮೇಲೆ ಹೇಳಿದಂತೆ ಶ್ರೀ ವಿಜಯಾದಿಗಳ ಪದ್ಯ ಕಾವ್ಯಗಳು ಪುರಾತನ ಮಾರ್ಗಪದ್ಧತಿಗೆ ಲಕ್ಷ್ಯಗಳಾಗಿವೆ ಎಂದು ಉಲ್ಲೇಖಿಸಿರುವುದರಿಂದ ಇಲ್ಲಿ ಈ ಮಾತಿಗೆ ಪ್ರಾಯಶಃ ಆ ಪ್ರಸಿದ್ಧ ಕಾವ್ಯಗಳ ಎಲ್ಲ ಲಕ್ಷಣಗಳನ್ನೂ ಒಳಕೊಳ್ಳದ ಕನ್ನಡಕಾವ್ಯಗಳು ಹೀಗೆ ಎರಡು ವಿಧವಾಗಿವೆ, ಎಂಬ ಅರ್ಥವಿರಬಹುದೆಂದು ತೋರುವುದು. ಆ ಪ್ರಕಾರ, ಅಸಂಪೂರ್ಣ ಲಕ್ಷಣದ ರಚನೆಗಳೆನ್ನಬಹುದಾದ ಚತ್ತಾಣ ಮತ್ತು ಬೆದಂಡೆ ಎಂಬುವುಗಳನ್ನು ಆಧುನಿಕ ಪದ್ಧತಿಯ ಪದ್ಯಕಾವ್ಯಗಳೆಂದು ಹಿಂದಿನ ಲಾಕ್ಷಣಿಕರು ಅಂಗೀಕರಿಸಿರುತ್ತಾರೆ ಎಂದು ಈ ಮೊದಲನೆಯ ಪದ್ಯದ ತಾತ್ಪರ್ಯವಾಗುವುದು. ಎರಡನೇ ಪದ್ಯದಿಂದ ಬೆದಂಡೆ ಎಂಬುದು ಎಡೆ ಎಡೆಯಲ್ಲಿ ಒಂದೊಂದು ಕಂದ ಮತ್ತು ಒಂದೊಂದು ವೃತ್ತಗಳನ್ನು ಒಳಗೊಂಡಿರುವ 'ಜಾತಿ'ಗಳ ರಚನೆ ಎಂದು ವ್ಯಕ್ತವಾಗುವುದು. 'ಜಾತಿ' ಎಂಬ ಛಂದಸ್ಸುಗಳಲ್ಲಿ ಅನೇಕ ವಿಧಗಳಿರುತ್ತಾ ಇಂಥ ಒಂದು ಜಾತಿ ಎಂಬ ವಿಶೇಷ ನಿರ್ದೇಶವಿಲ್ಲದೆ ಏಕವಚನದಲ್ಲಿ ಹೇಳಿರುವುದರಿಂದ ಅದು ಜಾತ್ಯೇಕ ವಚನ ಪ್ರಯೋಗವೆಂಬುದು ಸ್ಪಷ್ಟವೇ ಸರಿ. ಆದುದರಿಂದ ಬೆದಂಡೆ ಎಂಬುದು ಬಹ್ವಂಶ ಜಾತಿ ಛಂದಸ್ಸುಗಳಿಂದ ರಚಿಸಲ್ಪಡುವ ಕಾವ್ಯವೆಂದೂ, ಅಲ್ಲಲ್ಲಿ ಇಲ್ಲೊಂದಂತೆ, ದೊರದೂರಕ್ಕೆ ಒಂದೊಂದು ಕಂದಗಳೂ ವೃತ್ತಗಳೂ ಅದರಲ್ಲಿರುತ್ತವೆ ಎಂದೂ ಊಹಿಸಬಹುದಾಗಿದೆ.

ಈ ಜಾತಿಗಳಾವುವು? ಮಾತ್ರಾಗಣಬದ್ಧವಾದ ಆರ್ಯೆ ಮೊದಲಾದ ಪ್ರಾಕೃತ ಜಾತಿಗಳೋ ಅಥವಾ ಅಕ್ಕರ ತ್ರಿಪದಿ ಮೊದಲಾದ ಕರ್ಣಾಟಕ ವಿಷಯಜಾತಿಗಳೋ ಎಂಬ ಸಂದೇಹಕ್ಕೆ ಇಲ್ಲಿ

ಅವಕಾಶ ಕಾಣುವುದು. ಆದರೆ ಇಲ್ಲಿ ಮಾತ್ರಾಜಾತಿಗೆ ಸೇರಿದ ಕಂದವನ್ನು ಬೇರೆ ಹೇಳಿರುವುದರಿಂದ, ಈ ಜಾತಿಗಳೆಂದರೆ ಅಕ್ಕರ ಮೊದಲಾದ ಕರ್ಣಾಟಕ ಭಾಷಾಜಾತಿಗಳೇ ಆಗಿರಬೇಕೆಂದು ನ್ಯಾಯವಾಗಿ ಊಹಿಸಬೇಕು. ಮುಂದಿನ ಚತ್ತಾಣಕ್ಕೆ ಹೇಳಿದ ಆರು ಬಗೆಯ ಛಂದಸ್ಸುಗಳಲ್ಲಿ ಕಂದವೃತ್ತಗಳನ್ನುಳಿದ ಇತರ ನಾಲ್ಕೂ ಛಂದಸ್ಸುಗಳು ಕರ್ಣಾಟಕ ಜಾತಿಗಳೇ ಆಗಿರುತ್ತವೆ ಎಂಬುದನ್ನೂ ಇಲ್ಲಿ ಗಮನಿಸಬಹುದು.

ಕಾವ್ಯಾವಲೋಕನದಲ್ಲಿ ನಾಗವರ್ಮನು ಬೆದಂಡೆ 'ಎಂಬುದು 'ಪಾಡುಗಬ್ಬ' ವೆಂದು ಅದರ ಲಕ್ಷಣವನ್ನು ಹೀಗೆ ಕೊಡುತ್ತಾನೆ:

ಪಾಡುಗಳಿಂದಂ ತಚಿಸಲಿ
ಮಾಡಿದುದಂ ಪಾಡುಗಬ್ಬಮೆಂದು ಬುಧರ್ ಕೊಂ
ಡಾಡುವರದರಿಂ ದಲ್ ಮೇಲ್
ವಾಡುಂ ರೂಢಿಯ ಬೆದಂಡೆಗಬ್ಬಮುಮಕ್ಕುಂ॥

ಹೆಚ್ಚಿನ ಅಂಶ ಪಾಡುಗಳಿಂದ ರಚಿಸಲ್ಪಡುವ ಕೃತಿಯು ಪಾಡುಗಬ್ಬವೆಂದು ಕರೆಯಲ್ಪಡುತ್ತದೆ. ಆದ್ದರಿಂದ ಮೇಲ್ಪಾಡು ಎಂಬ ರಚನೆಯೂ, ರೂಢಿಯಲ್ಲಿ ಬೆದಂಡೆ ಎಂದು ಹೆಸರಾದ ಕಾವ್ಯವೂ ಪಾಡುಗಬ್ಬಗಳೇ ಆಗಿವೆ ಎಂದು ಈ ಪದ್ಯದ ಅಭಿಪ್ರಾಯವಾಗಿದೆ.

ಆತನು ಕಾವ್ಯ ವಿಭಾಗವನ್ನು ಎರಡು ವಿಧವಾಗಿ ಹೇಳುತ್ತಾನೆ: ಗದ್ಯಕಾವ್ಯ, ಪದ್ಯಕಾವ್ಯ, ಇವೆರಡೂ ಮಿಶ್ರಿತವಾದ ಚಂಪೂಕಾವ್ಯವೆಂಬ ಮಾರ್ಗಪರಂಪರೆಯ ವಿಭಾಗವು ಒಂದು ವಿಧ. ಪ್ರಾಯಶಃ ದೇಶೀಪರಂಪರೆಯನ್ನು ಅನುಲಕ್ಷಿಸಿ, ಪಾಡುಗಬ್ಬ ಮತ್ತು ಬಾಜನೆಗಬ್ಬ ಎಂಬ ವಿಭಾಗವು ಇನ್ನೊಂದು ವಿಧ ಎನ್ನುತ್ತಾನೆ. ಇವುಗಳ ಪ್ರತ್ಯೇಕ ಲಕ್ಷಣಗಳನ್ನು ಪರಿಶೀಲಿಸಿದಲ್ಲಿ ಪದ್ಯಕಾವ್ಯವೆಂಬುದು ಬೇರೆ, ಪಾಡುಗಬ್ಬವು ಬೇರೆ ಎಂದು ಆತನ ಮತಕ್ಕೆ ಇದ್ದಂತೆ ಕಾಣುವುದು. ಎಂದರೆ ಪದ್ಯ, ಪಾಡು, ಇವೆರಡೂ ಒಂದೇ ಅಲ್ಲ ಎಂಬ ಅಭಿಪ್ರಾಯವಾಗುವುದು. ಪಾಡುಗಬ್ಬದಲ್ಲಿರುವ ಪಾಡುಗಳೆಂದರೆ ಗಾನಕ್ಕೆ ಪ್ರಶಸ್ತವಾದ ವಿಶಿಷ್ಟ ಗೇಯ ವಸ್ತುಗಳೆಂದೂ ಬಾಜನೆಗಬ್ಬದಲ್ಲಿರುವ ಪದ್ಯಗಳೆಂದರೆ ಸರ್ವಸಾಮಾನ್ಯ ಪಾಠಯೋಗ್ಯವಾದ ಛಂದೋರಚನೆಗಳೆಂದೂ ಅರ್ಥವಾಗುವುದು. ಬಾಜನೆ ಎಂಬುದು ಸಂಸ್ಕೃತ 'ವಾಚನ' ಶಬ್ದದ ತದ್ಭವರೂಪ. ಬಾಜನೆಗಬ್ಬ ಎಂದರೆ ಓದುವ ಕಾವ್ಯ ಎಂದರ್ಥ. ಸಂಸ್ಕೃತ ಕಾವ್ಯಗಳಲ್ಲಿಯೂ ಗೇಯ, ಪಾಠ್ಯ ಎಂಬ ವಿಭಾಗವಿದ್ದಿರುವಂತೆ ನಾಟ್ಯಶಾಸ್ತ್ರಾದಿ ಲಕ್ಷಣಗ್ರಂಥಗಳಿಂದ ತಿಳಿಯುವುದು. ಗೇಯ ಕಾವ್ಯದಲ್ಲಿರತಕ್ಕ, ಗಾನಯೋಗ್ಯವಾದ ಛಂದೋವಿಶೇಷಗಳಿಗೆ ಪಾರಿಭಾಷಿಕವಾಗಿ 'ಜಾತಿ' ಎಂಬ ಸಂಜ್ಞೆ ಇದೆ-1. ನಾಟಕದಲ್ಲಿ ಪಾಡತಕ್ಕ ಧ್ರುವಾಪದಗಳನ್ನೂ ಜಾತಿಗಳೆಂದು ಕರೆಯಲಾಗಿದೆ.

ಕಾವ್ಯಾವಲೋಕನದಲ್ಲಿ ಬಾಜನೆಗಬ್ಬದ ಲಕ್ಷಣವು ಹೀಗಿದೆ:-

---

1 ನಾಟ್ಯಶಾಸ್ತ್ರ ಅ 32—ಯಾನಿ ಚೈವಂ ನಿಬದ್ಧಾನಿ ಛಂದೋವೃತ್ತ ವಿಧಾನತಃ।
ಧ್ರುವಾರೂಪಾಣಿ ಪೂರ್ವಾಣಿ ತಾನಿ ವಕ್ಷ್ಯಾಮಿ ತತ್ತ್ವತಃ ॥34॥
ಅತ್ಯುಕ್ತಂ ಚ ಪ್ರತಿಷ್ಠಂ ಚ ಮಧ್ಯಂ ಗಾಯತ್ರಮೇವ ಚ।
ಏತಾಃ ಸ್ಥಿತಾಪಕೃಷ್ಟಾಸು ತ್ರ್ಯಸ್ರಾಜ್ಞೇಯಾಸ್ತು ಜಾತಯಃ॥35॥
ಪ್ರಾವೇಶಿಕಾನಾಂ ಜಾತೀನಾಮುದ್ಧೃತಾನಾಂ ನಿಬೋಧತ ॥38॥
ಇತ್ಯಾದಿ

ಜಾತೀನಾಂ ತ್ವಥ ಸರ್ವಾಸಾಂ ಛಂದೋವೃತ್ತ ನಿದರ್ಶನಂ। ಸ್ಥಾನ ಪ್ರಮಾಣ ಸಂಜ್ಞಾಭಿರ್ಗದತೋ ಮೇ ನಿಬೋಧತ॥ ಶ್ಲೋಕ. 46. ವ್ಯಾ.- ಜಾತೀನಾಮಿತಿ ಧ್ರುವಾಣಾಂ।

ಪಲತೆಱದ ಪದ್ಯದಿಂದಂ
ಲಲಿತವಚೋರಚನನಿಚಯ ಪದ್ಧತಿಕೆಗಳಿಂ।
ಸಲೆ ನಿಲೆ ಸಮೆದುದು ಸರಸಾ
ಖಿಲವರ್ಣನಮಾದೊಡದುವೆ ಬಾಜನೆಗಬ್ಬಂ ॥955॥

ನಗರಾರ್ಣವ ಸರಿದಟವೀ
ನಗ ಚಂದ್ರಾರ್ಕೋದಯರ್ತು ಸಲಿಲ ಕ್ರೀಡಾ
ದಿಗಳಾದಿಯಾಗೆ ಸರಸೋ
ಕ್ತಿಗಳಿಂ ವರ್ಣಿಸುಗೆ ವರ್ಣಕಂಗಳನದಱಿೊಳ್ ॥956॥

ಪಲವು ತರದ ಪದ್ಯಗಳಿಂದಲೂ, ವಚನಗಳಿಂದಲೂ ಎಂದರೆ ಅನಿಬದ್ಧವಾಕ್ಯ ರಚನೆಗಳಿಂದಲೂ,ಪದ್ಧತಿಕೆಗಳಿಂದ ಎಂದರೆ ರಗಳೆ (ರಘಟಾ ಬಂಧ)ಗಳಿಂದಲೂ ಕೂಡಿರುವ ವಿಸ್ತಾರವಾದ ವಸ್ತುವೆಂದರೆ ಇದು ಚಂಪೂಕಾವ್ಯವೆಂಬುದು ಸ್ಪಷ್ಟವೇ ಸರಿ. (ಸ್ವಚ್ಛಂದೆ ಸಂಜ್ಞೋ ರಘಟಾ ಮಾತ್ರಾಕ್ಷರ ಸಮೋದಿತಾಃ। ಪಾದದ್ವಂದ್ವ ಸಮಾಕೀರ್ಣಾ ಸುಶ್ರಾವ್ಯಾ ಸೈವ ಪದ್ಧತಿಃ –ಜಯಕೀರ್ತಿಯ ಛಂದೋನುಶಾಸನ.)

ಪಾಡುಗಬ್ಬದಲ್ಲಿ ಮೆಲ್ವಾಡು, ಪಾಡು ಎಂಬ ಎರಡು ವಿಭಾಗವನ್ನು ಕಲ್ಪಿಸುತ್ತಾನೆ. ಮೆಲ್ವಾಡೆಂಬುದು ಆ ಹೆಸರೇ ಸೂಚಿಸುವಂತೆ ಕೆಲವೇ ಪಾಡುಗಳುಳ್ಳ ಸಣ್ಣ ರಚನೆ ಅಥವಾ ಕ್ಷುದ್ರ ಪ್ರಬಂಧವಾದರೆ 'ಪಾಡು' ಎಂಬುದು ಹೆಚ್ಚು ಪಾಡುಗಳಿರುವ ದೊಡ್ಡ ರಚನೆ. ಅವುಗಳ ಲಕ್ಷಣ ಹೀಗಿದೆ:

ಸೂ. 42 ಸಂದಿಸಿರೆ ಕಂದಮುಂ ಪೆಱ
ತೊಂದಱಿಕೆಯ ವೃತ್ತಜಾತಿಯುಂ ಪದಮವು ತ
ಳ್ತೊಂದಿರೆ ಪನ್ನೆರಡುವರಂ
ಸಂದುದು ಮೆಲ್ವಾಡೆನಿಕ್ಕುಮದು ಕನ್ನಡದೊಳ್ ॥952॥

ಕಂದಪದ್ಯ ಯಾವುದಾದರೊಂದು ವಿಧದ ವೃತ್ತ, ಮತ್ತು ಪದಗಳು – ಪದಂ ಎಂದು ಜಾತ್ಯೇಕವಚನ ಪ್ರಯೋಗ – ಈ ಪದಗಳು ಹನ್ನೆರಡಕ್ಕಿಂತ ಹೆಚ್ಚಿಲ್ಲದ ಚಿಕ್ಕ ಪ್ರಬಂಧವಾದರೆ ಕನ್ನಡದಲ್ಲಿ ಅದು ಮೆಲ್ವಾಡು ಎಂದು ಕರೆಯಲ್ಪಡುತ್ತದೆ, ಎಂದು ಈ ಲಕ್ಷಣದಿಂದ ವ್ಯಕ್ತವಾಗುವುದು. ಇಲ್ಲಿ ಪದಗಳು ಎಂದಿರುವುದು ಪಾಡುಗಳನ್ನೇ ಎಂಬುದರಲ್ಲಿ ಸಂದೇಹವಿಲ್ಲ. 'ಮೆಲ್ವಾಡು' ಎಂಬ ಹೆಸರಿನಿಂದಲೇ ಇದು ಸ್ಪಷ್ಟವಾಗುವುದಷ್ಟೆ?

ಈ ಪದಗಳು ಅಥವಾ ಪಾಡುಗಳು ಹನ್ನೆರಡಕ್ಕಿಂತ ಹೆಚ್ಚಿದ್ದರೆ ಆ ಪ್ರಬಂಧವು, ಮೆಲ್ವಾಡಲ್ಲ, ಅದು 'ಪಾಡು' ಎಂದು ಕರೆಯಲ್ಪಡುತ್ತದೆ ಎನ್ನುತ್ತಾನೆ. ಆ ಲಕ್ಷಣ ಹೀಗಿದೆ:

ಸೂ 242 ಪದಿನೈದುಮಿರ್ಪತ್ತೈದುಂ
ಪದಂ ಯಥಾಸಂಭವಂ ಪ್ರಬಂಧದ ಮೆಯ್ಯೊಳ್।
ಪುದಿದೊದವಿ ನೆಗೞ್ದೊಡಂತದು
ಸದಲಂಕಾರಂ ರಸಾಸ್ಪದಂ ಪಾಡಕ್ಕುಂ॥953॥

ಹದಿನೈದೋ ಇಪ್ಪತ್ತೈದೋ ಅಥವಾ ವಿಷಯಗೌರವಕ್ಕೆ ತಕ್ಕಂತೆ ಇನ್ನೆಷ್ಟಾದರೋ ಸಂಖ್ಯೆಯ ಪದಗಳಿರುವುದಾದ ಪ್ರಬಂಧಕ್ಕೆ 'ಪಾಡು' ಎಂಬ ಹೆಸರೆಂದು ಈ ಪದ್ಯಕ್ಕೆ ಅರ್ಥ ಕಾಣುವುದು. ಕೆಲವರು ಇದಕ್ಕೆ ಹದಿನೈದರಿಂದ ಇಪ್ಪತ್ತೈದರ ವರೆಗೆ ಮಾತ್ರ ಪದಗಳಿರುವ ಪ್ರಬಂಧ ಎಂದು ಅರ್ಥಮಾಡುತ್ತಾರೆ. ಅದು ಸರಿಯಲ್ಲವೆಂದು ನನಗೆ ತೋರುವುದು. ಏಕೆಂದರೆ, ಹಾಗಿದ್ದರೆ ಇಪ್ಪತ್ತೈದಕ್ಕಿಂತ ಹೆಚ್ಚು ಪದಗಳಿರುವ

ಪ್ರಬಂಧಕ್ಕೆ ಹೆಸರೇನು ಎಂಬ ಪ್ರಶ್ನೆ ಉಳಿಯುತ್ತದೆ. ಅದಕ್ಕಿಂತ ಹೆಚ್ಚು ಪದಗಳಿರಲೇಬಾರದೆಂದರೆ
ಅದೂ ನ್ಯಾಯವಲ್ಲ. ಈ ಆಕ್ಷೇಪಕ್ಕೆ ಹೀಗೂ ಸಮಾಧಾನವನ್ನು ಹೇಳುತ್ತಾರೆ– ಎಂದರೆ, ಹಿಂದೆ ಹೇಳಿದ
'ಪಾಡುಗಳಿಂದಂ ತರಿಸಲೆ ಮಾಡಿದುದಂ ಪಾಡುಗಬ್ಬಮೆಂಬರ್' ಎಂಬ ಲಕ್ಷಣವಿದೆಯಷ್ಟೆ? ಅಲ್ಲಿ ಪಾಡು
ಗಳಿಂದ ಎಂದರೆ ಇಪ್ಪತ್ತೈದಕ್ಕೆ ಮೀರದ ಪದಗಳಿರುವ ಈ 'ಪಾಡು' ಎಂಬ ಪ್ರಬಂಧಗಳೇ ಹಲವು
ಒಂದಾಗಿ ಸೇರುವುದರಿಂದ ಪಾಡುಗಬ್ಬ ಎಂದಾಗುವುದು ಎಂದೆಣಿಸುತ್ತಾರೆ. ಇದೂ ಸಮಂಜಸವಾಗಿ
ಕಾಣುವುದಿಲ್ಲ. ಏಕೆಂದರೆ, 'ಪಾಡು' ಎಂಬುದಕ್ಕೆ ಲಕ್ಷಣದಲ್ಲಿ 'ಸದಲಂಕಾರಂ ರಸಾಸ್ಪದಂ' ಎಂಬ ವಿಶೇಷಣ
ಗಳನ್ನು ಕೊಟ್ಟಿರುತ್ತಾನೆ; ಮತ್ತು ಅದರಲ್ಲಿರಬಹುದಾದ ಕಂದವೃತ್ತಗಳಿಗೆ ಇಂತಿಷ್ಟೇ ಎಂಬ ಪರಿಮಿತಿ
ಯನ್ನು ಹೇಳಿರುವುದಿಲ್ಲ; ಆದುದರಿಂದ ಇದೂ ಪಾಡುಗಬ್ಬವೇಕಲ್ಲ? ಎಂಬ ಪ್ರಶ್ನೆಗೆ ಇಲ್ಲಿ ಸಮಾಧಾನ
ಕಾಣುವುದಿಲ್ಲ. ಅದೂ ಅಲ್ಲದೆ, ಕಬ್ಬ (ಕಾವ್ಯ)ವೆಂಬುದು ಕವಿತಾ ಸಾಮಾನ್ಯವಾಚಕವಾದ ಪದ .ಯಾವುದೇ
ಕವಿರಚನೆಗೆ ಕಾವ್ಯ ಎಂಬ ವ್ಯಪದೇಶವು ಅದರ ಗಾತ್ರ ವಿಸ್ತಾರವನ್ನು ಹೊಂದಿಕೊಂಡಿರುವುದೆಂಬುದಕ್ಕೆ
ಪ್ರಮಾಣವಿಲ್ಲ. ಮಾತ್ರವಲ್ಲ, ಮೇಲ್ನಾಡೂ ಹಾಡುಗಬ್ಬವೆಂದಾಗುವುದು ಎಂಬ ಅಭಿಪ್ರಾಯವು ಆ
ಸೂತ್ರದ ಉತ್ತರಾರ್ಧದಲ್ಲೇ ಕಾಣುವುದಷ್ಟೆ? ಆದುದರಿಂದ ಅಲ್ಲಿ 'ಪಾಡುಗಳಿಂದಂ' ಎಂದಿರುವುದಕ್ಕೆ
ಹಾಡತಕ್ಕ ಪದಗಳಿಂದ ಎಂಬ ಸಾಮಾನ್ಯಾರ್ಥವೇ ಸಾಧೀಯವಾಗಿ ಕಾಣುವುದು. ಇರಲಿ.

ನಾಗವರ್ಮನು ಹೇಳುವ ಪ್ರಕಾರ, ಬೆದಂಡೆಗಬ್ಬದಲ್ಲಿ ಒಂದೊಂದಾಗಿ ಬರುವ ಅಲ್ಪಸಂಖ್ಯೆಯ
ಕಂದವೃತ್ತಗಳನ್ನು ಬಿಟ್ಟರೆ ಉಳಿದುವೆಲ್ಲವೂ ಪದಗಳು, ಎಂದರೆ ಹಾಡುಗಳು ಎಂದು ಸ್ಪಷ್ಟವಾಗುವುದು.
ಪೂರ್ವದ ನಮ್ಮ ಕವಿಗಳೂ ಬೆದಂಡೆಯೆಂಬುದು ಹಾಡುಗಳ ರಚನೆ, ಎಂದಿರುವುದನ್ನೂ ಲಕ್ಷಿಸಬಹುದು.
ಆಂಡಯ್ಯನ 'ಕಬ್ಬಿಗರ ಕಾವ'ದಲ್ಲಿ 'ಆ ಮಂಜುವೆಟ್ಟಿನ ಗೊರವಂ... ಬೆದಂಡೆಯೊಳಾದೊಡಂ ಪಾಡೆಂ
ಬುದಂ, ಕೇರಿಯೊಳಾದೊಡಂ ನೆರೆ ಎಂಬುದಂ ಸೈರಿಸಂ'(148) ಎಂದಿದೆ.

ಆದುದರಿಂದ 'ಕಂದಮುಮಮಳಿನ ವೃತ್ತಮುಮೊಂದೊಂದೆಡೆಗೊಂಡು ಜಾತಿ ಜಾಣೆಸೆಯೆ......'
ಎಂಬ ಕವಿರಾಜಮಾರ್ಗಕಾರನ ಬೆದಂಡೆಯ ಲಕ್ಷಣದಲ್ಲಿರುವ ಆ 'ಜಾತಿ' ಎಂದರೆ ಹಾಡುಗಳೇ
ಎಂಬುದರಲ್ಲಿ ಸಂದೇಹವಿಲ್ಲ. ಹಾಡು, ಪದ, ಜಾತಿ, ಈ ಮೂರು ಸಂಜ್ಞೆಗಳಿಗೂ ಅರ್ಥ ಒಂದೇ. ಫಲಿ
ತಾಂಶವೆಂದರೆ, ಬೆದಂಡೆ ಎಂಬುದು ವಸ್ತುತಃ ಸಂಗೀತರೂಪದಲ್ಲಿ ಹಾಡತಕ್ಕ ಗೇಯ ಕಾವ್ಯವೆಂದು
ಸಿದ್ಧವಾಗುವುದು. ಈ ಜಾತಿಗಳು ನಮ್ಮ ಛಂದೋಗ್ರಂಥಗಳಲ್ಲಿ ಹೇಳುವ ಏಲೆಯೇ ಮೊದಲಾದ
ಕರ್ಣಾಟಕಭಾಷಾಜಾತಿಗಳಾಗಿರಬೇಕೆಂಬುದನ್ನು ಹಿಂದೆ ನೋಡಿದೆವು. ಇವೇ ನಮ್ಮ ಸಂಗೀತದಲ್ಲಿ ಬಹಳ
ಪ್ರಸಿದ್ಧವಾದ ಗೇಯವಸ್ತುಗಳಾಗಿದ್ದುವೆಂಬುದನ್ನು ಸಂಗೀತಶಾಸ್ತ್ರಗ್ರಂಥಗಳಿಂದ ತಿಳಿಯಬಹುದು.
ಇವಕ್ಕೆ 'ಪದ' ಎಂಬ ವ್ಯವಹಾರವೂ ಸಂಗೀತಶಾಸ್ತ್ರದಲ್ಲಿ ಸಾಮಾನ್ಯವಾಗಿರುವುದೇ ಆಗಿದೆ. ಅವುಗಳಲ್ಲಿ
ಏಲೆಯನ್ನು (ಏಲಾಪದ) ಸರ್ವೋತ್ತಮವಾದ ಗೇಯವಸ್ತುವೆಂದು ವರ್ಣಿಸಲಾಗಿದೆ. ಈ ಕುರಿತು ಈ
ಮೊದಲಿನ ನನ್ನ ಲೇಖನಗಳಲ್ಲಿ ಸವಿಸ್ತರವಾಗಿ ನಿರೂಪಿಸಿರುತ್ತೇನೆ. (ಮಾನವಿಕ ಕರ್ಣಾಟಕ' ಸಂ 3–
ದೇಶೀಯ ಛಂದಸ್ಸುಗಳ ಮೂಲ). ಸಂಗೀತರೂಪದಲ್ಲಿ ಹಾಡತಕ್ಕ ಗೇಯ ಪ್ರಬಂಧಗಳಾದುದರಿಂದಲೇ
ಈ ಕನ್ನಡ ಛಂದಸ್ಸುಗಳು 'ಜಾತಿ' ಎಂದು ಕರೆಯಲ್ಪಟ್ಟಿದೆ. ಇವೆಲ್ಲವೂ ಸಂಗೀತಶಾಸ್ತ್ರಗ್ರಂಥಗಳಲ್ಲಿ
ಗೇಯವಸ್ತುಗಳೆಂದು ನಿರೂಪಿಸಲ್ಪಟ್ಟಿರುತ್ತವೆ. ಗಾನಕ್ಕೆ ಪ್ರಶಸ್ತವಾದ ಛಂದೋರಚನೆಯನ್ನು ಪಾರಿ
ಭಾಷಿಕವಾಗಿ 'ಜಾತಿ' ಎಂದೂ 'ಪದ' ಎಂದೂ 'ಅಕ್ಷರ' ಎಂದೂ ನಾಟ್ಯಶಾಸ್ತ್ರದಲ್ಲಿಯೇ ಕರೆಯಲಾಗಿದೆ.
ಎಂದರೆ ಇವು ಮೂರೂ ಪಾರಿಭಾಷಿಕ ಪರ್ಯಾಯಪದಗಳಾಗಿವೆ. ಆದುದರಿಂದಲೇ ಕನ್ನಡ ಛಂದಸ್ಸಿನ
ಜಾತಿಗೆ 'ಅಕ್ಕರ'ಎಂಬ ಹೆಸರು, ಅದು ಗೇಯವಸ್ತುವಾದ್ದರಿಂದ, ಸಾರ್ಥಕವಾಗಿಯೇ ಬಂದುದಿರಬೇಕೆಂದು
ನ್ಯಾಯವಾಗಿ ಊಹಿಸಬಹುದು. ಈ ಜಾತಿಗಳಿಗೆ. ಛಂದಸ್ಸಿನ ಗುರು ಲಘುನಿಯಮಕ್ಕಾಗಲಿ, ತಾಳದ
ಮಾತ್ರಾನಿಯಮಕ್ಕಾಗಲಿ. ಅಕ್ಷರ ನಿಯಮಕ್ಕಾಗಲಿ ಒಳಪಡದ ವಿಶಿಷ್ಟರೀತಿಯ ಗಣ ವಿಭಾಗವನ್ನು
ಕಲ್ಪಿಸಿರುವುದಾದರೂ. ಇವುಗಳ ರಚನೆಯಲ್ಲಿ ಸ್ವಭಾವತಃ ಗೇಯಾನುಗುಣವಾದ ಶೈಥಿಲ್ಯವಿರುವುದ
ರಿಂದಲೇ ಎಂಬುದನ್ನೂ ಊಹಿಸಿಕೊಳ್ಳಬಹುದು. ಆ ಗೇಯಾಂಶವನ್ನು ಲಕ್ಷಿಸಿಕೊಂಡಲ್ಲದೆ ಈ
ತ್ರಿಮೂರ್ತಿಗಣಗಳ (ಅಂಶಗಣಗಳ) ವರ್ಗೀಕರಣದ ಔಚಿತ್ಯವನ್ನೂ. ಛಂದೋಲಯದ ಕಾಲಮರ್ಯಾ
ದೆಯನ್ನೂ, ಬಂಧಗಳಲ್ಲಿ ಅವುಗಳ ಬಾಂಧವ್ಯವನ್ನೂ ಕಂಡುಕೊಳ್ಳುವುದು ಸಾಧ್ಯವಿಲ್ಲ. ಈ ಗಣಗಳ

ಕುರಿತು ವಿಸ್ತಾರವಾಗಿಯೇ ಬರೆಯಬೇಕಾಗಿದ್ದಿರುವುದರಿಂದ ಪ್ರಕೃತ ಆ ವಿಷಯವನ್ನು ಸಂಕ್ಷೇಪವಾಗಿರಿಸಿ ಪ್ರಸ್ತುತವನ್ನು ಪೂರೈಸೋಣ.

ಇಲ್ಲಿ ಇನ್ನೊಂದು ವಿಚಾರವು ಸೂಚಿಸತಕ್ಕದ್ದಿದೆ. ಎಂದರೆ, ಮೇಲೆ ಹೇಳಿದಂತೆ ಹಾಡತಕ್ಕ 'ಪದ'ಕ್ಕೆ ಅಥವಾ ವಾಗ್ಗೇಯ ಪ್ರಬಂಧಕ್ಕೆ 'ವರ್ಣಕ' ಎಂಬ ಸಂಜ್ಞೆಯೂ, ಗಾನಕ್ರಿಯೆಗೆ ಎಂದರೆ ಹಾಡುವಿಕೆಗೆ ವರ್ಣ ಎಂಬ ವ್ಯವಹಾರವೂ ಸಂಗೀತಶಾಸ್ತ್ರದ ಪರಿಭಾಷೆಯಲ್ಲಿದ್ದುದೇ ಆದುದರಿಂದ ನಮ್ಮ ಆಲಂಕಾರಿಕರ ವಸ್ತುಕ– ವರ್ಣಕ ಎಂಬ ಕಾವ್ಯವಿಭಾಗದಲ್ಲಿ 'ವರ್ಣಕ' ಅಥವಾ 'ವರ್ಣಕವಿತೆ' ಎಂದು ಹಾಡುಗಬ್ಬವನ್ನೇ ಹೇಳಿದ್ದಿರಬೇಕೆಂದು ನ್ಯಾಯವಾಗಿ ಊಹಿಸಬಹುದು. ಕವಿಗಳು ಹಾಗೂ ಲಕ್ಷಣಕಾರರು ಕೆಲವರಲ್ಲಿ ಇದೇ ಅಭಿಪ್ರಾಯವಿದ್ದಿರುವಂತೆ ತಿಳಿಯುವುದು.-1 ತಾತ್ಪರ್ಯವಾಗಿ ವರ್ಣಕವೆಂದರೆ ಹಾಡುಗಬ್ಬವೆಂದೂ ವಸ್ತುಕವೆಂದರೆ ಬಾಜನೆಗಬ್ಬವೆಂದೂ ಮೂಲಾರ್ಥವಿದ್ದಿರುವುದು ಸಹಜವಾಗಿ ಕಾಣುವುದು.

ಹೀಗೆ ಲಕ್ಷಣ ಶುದ್ಧವಾಗಿ ಬೆದಂಡೆ ಎಂಬುದು ಕರ್ಣಾಟಕ ಜಾತಿಛಂದಸ್ಸುಗಳಿಂದ ರಚಿಸಲ್ಪಡುತ್ತಿದ್ದ ಹಾಡುಗಬ್ಬ. ನಿಜವಾದ ವರ್ಣಕವೆಂದರೆ ಅದೇ ಸರಿ. ಬೆದಂಡೆ ಎಂಬುದು ಅದಕ್ಕಿದ್ದ ರೂಢಿಯ ಹೆಸರೆಂದು ನಾಗವರ್ಮನೇ ಹೇಳಿರುತ್ತಾನಷ್ಟೆ? ಈ ರೂಢಿಗಾದರೂ ನಿಜವಾದ ಅರ್ಥವೇನಾದರೂ ಇದೆಯೇ ಎಂಬುದನ್ನೀಗ ಪರಿಶೀಲಿಸಬೇಕು.

ಕೇಶಿರಾಜನು ಶಬ್ದಮಣಿದರ್ಪಣದಲ್ಲಿ 'ಬೆದಂಡೆ' ಎಂಬುದು 'ವೈದಂಡಿಕಂ' ಎಂಬ ಸಂಸ್ಕೃತಪದದ ತದ್ಭವ ರೂಪವೆಂದೂ ಅದು ಒಂದು ಕಾವ್ಯವೆಂದೂ ಹೇಳುತ್ತಾನೆ. ಆದರೆ ಸಂಸ್ಕೃತದಲ್ಲಿ ಆ ಹೆಸರಿನ ಕಾವ್ಯಭೇದವಿದ್ದಂತೆ ತಿಳಿಯುವುದಿಲ್ಲ. ಹಾಗಾಗಿ ಸಾಹಿತ್ಯದೃಷ್ಟಿಯಿಂದ ಇದು ಅನ್ವರ್ಥನಾಮವೆಂದು ಹೇಳುವಂತಿಲ್ಲ. ಸಂಗೀತದ ದೃಷ್ಟಿಯಲ್ಲಿ ಪರಿಶೀಲಿಸಿದ್ದಾದರೆ ಈ ಹೆಸರು ಅನ್ವರ್ಥವಾಗಿಯೇ ರೂಢಿಯಲ್ಲಿ ಬಂದುದಿರಬೇಕೆಂದು ತೋರುವುದು. ಹಿಂದಿನ ದೇಶೀಗಾನ ಸಂಪ್ರದಾಯದಲ್ಲಿ ವಿಶಿಷ್ಟವಾದ ಒಂದೊಂದು ಗೇಯಭಾಗಕ್ಕೂ 'ದಂಡೀ' ಎಂಬ ಹೆಸರು ರೂಢಿಯಲ್ಲಿದ್ದಂತೆ ತಿಳಿಯುವುದು. ಆ ಪ್ರಕಾರ ಠಾಯಿ, ಆಲಾಪ, ಗೀತ, ಪ್ರಬಂಧ ಇವು ನಾಲ್ಕೂ ಒಂದೊಂದು ದಂಡಿಗಳು. ಈ ನಾಲ್ಕು ದಂಡಿಗಳನ್ನು ಕ್ರಮದಂತೆ ವಿಸ್ತರಿಸುವ ಸಂಪೂರ್ಣ ಗಾನಕ್ಕೆ 'ಚತುರ್ದಂಡೀ' ಸಂಪ್ರದಾಯವೆಂದು ಹೆಸರು. ಇದಕ್ಕನುಸಾರವಾಗಿಯೇ ಪ್ರಸಿದ್ಧ ಸಂಗೀತಶಾಸ್ತ್ರಕರ್ತನಾದ ವೆಂಕಟಮಖಿಯು ತನ್ನ ಗ್ರಂಥವನ್ನು 'ಚತುರ್ದಂಡೀ ಪ್ರಕಾಶಿಕೆ' ಎಂದು ಕರೆದಿದ್ದಾನೆ. ಹಾಗೂ ಈ ನಾಲ್ಕು ದಂಡಿಗಳನ್ನು ಪ್ರತ್ಯೇಕ ನಾಲ್ಕು ಅಧ್ಯಾಯಗಳಲ್ಲಿ ನಿರೂಪಿಸಿರುತ್ತಾನೆ. ಪೂರ್ವದಲ್ಲಿ ಗೋಪಾಲ ನಾಯಕನೆಂಬ ಸಂಗೀತ ಪರಿಣತನು ಈ ಚತುರ್ದಂಡೀ ಗಾನದಲ್ಲಿ ಪ್ರಖ್ಯಾತನಾಗಿದ್ದನೆಂದು ವೆಂಕಟಮಖಿಯ ಗ್ರಂಥದಿಂದ ತಿಳಿಯಬಹುದು. ಈ ದಂಡೀಗಾನ ಸಂಪ್ರದಾಯವು ಬಹಳ ಪುರಾತನ ಪರಂಪರೆಯದೆಂದು ತಂಜಾವೂರಿನ ತುಳಜೀ ಮಹಾರಾಜನ ಸಂಗೀತ ಶಾಸ್ತ್ರ ಗ್ರಂಥದಿಂದಲೂ ವ್ಯಕ್ತವಾಗುವುದು. ಗಾನದಲ್ಲಿ ಪ್ರಬಂಧಗಳನ್ನು ಹಾಡುವ ಕ್ರಮವೆಂಬುದು ವಿಶೇಷವಾದ ಒಂದು ದಂಡಿಯಾಗಿತ್ತು. ಈ ದಂಡೀ ವಿಷಯಕವಾದ ವಸ್ತುವೇ ಎಂದರೆ ಪ್ರಬಂಧವೇ ವಿದಂಡಿಕ. 'ವಿ' ಎಂಬ ಉಪಸರ್ಗವು ಇಲ್ಲಿ ವಿಶೇಷಾರ್ಥ ಸೂಚಕವಾಗಿ ಸೇರಿದ್ದೆಂದೆಣಿಸಬೇಕು. ಈ ವಿದಂಡಿಕವೇ ತದ್ಧಿತ ವೃತ್ತಿಯಲ್ಲಿ ಕಾವ್ಯಕ್ಕೆ ವಿಶೇಷಣವಾಗಿ 'ವೈದಂಡಿಕಂ' ಎಂದು ನಪುಂಸಕ ಲಿಂಗದ ಸ್ವರೂಪವನ್ನು ಪಡೆದಿದೆ ಎಂದು ನ್ಯಾಯವಾಗಿ ಅನುಮಾನಿಸಬಹುದು. ಆದುದರಿಂದ 'ವೈದಂಡಿಕಂ' ಪದದ ತದ್ಭವ ರೂಪವಾದ ಬೆದಂಡೆ ಎಂಬ ಹೆಸರು, ಸಂಗೀತರೂಪದಲ್ಲಿ ಹಾಡತಕ್ಕುದಾಗಿದ್ದ 'ಹಾಡುಗಬ್ಬ' ಅಥವಾ 'ವರ್ಣಕ' ಎಂಬ ಕಾವ್ಯರಚನೆಗಳಿಗೆಲ್ಲ ಸಾಮಾನ್ಯವಾಗಿ ರೂಢಿಯಲ್ಲಿದ್ದುದಿರಬೇಕೆಂದು ತಿಳಿಯಬಹುದಾಗಿದೆ.

ಇನ್ನು ಚತ್ತಾಣವೆಂದರೆ, ಕವಿರಾಜಮಾರ್ಗದಲ್ಲಿ ಕೊಟ್ಟಿರುವ ಲಕ್ಷಣದ ಪ್ರಕಾರ ಕನ್ನಡದ ಭಾಷಾಜಾತಿಗಳ ರಚನೆಯಾಗಿರುವುದರಿಂದ ನ್ಯಾಯವಾಗಿ ಅದೂ ಹಾಡುಗಬ್ಬವೇ ಸರಿ. ಬೆದಂಡೆಗೂ ಇದಕ್ಕೂ ಇರುವ ವ್ಯತ್ಯಾಸವೇದರೆ – ಇದರಲ್ಲಿ ಕಂದವೃತ್ತಗಳು ಅದಕ್ಕಿಂತ ಹೆಚ್ಚು, ಮತ್ತು ಜಾತಿಗಳಲ್ಲಿ

---

1 "ವಸ್ತುಕ ಕವಿಗಳ ಕಾವ್ಯಗೋಷ್ಠಿಯುಂ ವರ್ಣಕ ಕವಿಗಳ ಗೀತಗೋಷ್ಠಿಯುಂ ಮನಂಗೊಳಿಸೆ" (ಗುಣವರ್ಮ, ಪುಷ್ಪದಂತಪುರಾಣ., ಪು.125)

ಅಕ್ಷರ, ಚೌಪದಿ, ಗೀತಿಕೆ ತ್ರಿಪದಿ ಎಂಬ ನಾಲ್ಕೇ ಇರಬೇಕು ಎಂಬ ನಿಯಮ. ಎಂಬುದಿಷ್ಟೇ ಹೊರತು ಬೇರೇನೂ ಇಲ್ಲ. ಹೀಗೆ ಕಂದವೃತ್ತಗಳು ಅಧಿಕ ಸಂಖ್ಯೆಯಲ್ಲಿರುವ ಪ್ರಬಂಧಗಳು ಹಿಂದಿನ ದೇಶೀ ಸಂಗೀತ ಸಂಪ್ರದಾಯದಲ್ಲಿ ಪ್ರಸಿದ್ಧವಾದ ಗೇಯರೂಪಗಳಾಗಿದ್ದುವೆಂದು ಸಂಗೀತಶಾಸ್ತ್ರಗ್ರಂಥಗಳಿಂದ ತಿಳಿಯಬಹುದು. ಪ್ರಬಂಧಗಳಲ್ಲಿ 'ಸೂಡಕ್ರಮ' 'ಆಲಿಕ್ರಮ' 'ಸಂಕೀರ್ಣಕ್ರಮ' (ಸೂಡಾದಿಕ್ರಮ) ಎಂಬ ಮೂರು ವಿಧಗಳಿದ್ದುವು. ಸೂಡಕ್ರಮ ಎಂದರೆ ಒಂದು ಕಟ್ಟುನಿಟ್ಟಿನ ಅಥವಾ ನಿಯತ ವ್ಯವಸ್ಥೆಗೆ ಒಳಪಟ್ಟ ಕ್ರಮ ಎಂದರ್ಥ. 'ಸೂಡ' ಶಬ್ದಕ್ಕೆ ಸಾಮಾನ್ಯವಾಗಿ ಕಟ್ಟು ಎಂಬ ಅರ್ಥ. ಆದು ದರಿಂದ ಸಂಗೀತದ ಪರಿಭಾಷೆಯಲ್ಲಿ ಪ್ರಬಂಧ ಶಬ್ದಕ್ಕೆ ಪರ್ಯಾಯವಾಗಿಯೂ ಅದು ಪ್ರಯೋಗ ಸಲ್ಲುತ್ತದೆ. ಪ್ರಬಂಧಗಳಲ್ಲಿ 'ಸೂಡಕ್ರಮ' ಹಾಗೂ 'ಸೂಡಸ್ಥ ಪ್ರಬಂಧಗಳು' ಎಂದರೆ, ಮೊದಲು ದೊಡ್ಡದು ಆಮೇಲೆ ಅನುಕ್ರಮವಾಗಿ ಚಿಕ್ಕದು ಎಂಬಂತೆ ನಿಯತಕಾಲಕ್ರಮದಲ್ಲಿರುವ ಕೆಲವೊಂದು ಪ್ರಬಂಧ ಗಳನ್ನು ಅದೇ ಕಟ್ಟು ಪ್ರಕಾರ ಒಂದಾದ ಮೇಲೆ ಒಂದರಂತೆ ಹಾಡುವುದು ಎಂದರ್ಥ. ಹಾಗೆ ಒಟ್ಟಿನಲ್ಲಿ ಹಾಡಬೇಕಾದ ಏಲಾ ಮೊದಲಾದ ಎಂಟು ಪ್ರಬಂಧಗಳನ್ನು 'ಸೂಡಸ್ಥ ಪ್ರಬಂಧಗಳು' ಎಂದು ಕರೆಯಲಾಗಿದೆ. ಹೀಗೆ 'ಶುದ್ಧಸೂಡ' 'ಸಾಲಗಸೂಡ' ಎಂಬ ಎರಡು ವಿಧದ ಸೂಡ ಕ್ರಮಗಳು ಹಿಂದೆ ಪ್ರಸಿದ್ಧ ವಾಗಿದ್ದುವು.[1] ಈ ಕುರಿತು ಹೆಚ್ಚಿನ ವಿವರಗಳಿಗೆ ನಾನು ಈ ಮೊದಲು ಬರೆದಿರುವ 'ಸೂಡ-ಸಾಲಾದಿ-ಸಾಲಗ' ಎಂಬ ಲೇಖನವನ್ನು ನೋಡಬಹುದು. (ಪ್ರಕಟಣೆ : ಬಿ. ಎಂ. ಶ್ರೀ. ಪ್ರತಿಷ್ಠಾನದ ವ್ಯಾಖ್ಯಾನಗ್ರಂಥ). ಶುದ್ಧ ಸೂಡಕ್ರಮದ ಏಲಾದಿ ಪ್ರಬಂಧಗಳಲ್ಲಿ ಅಧಿಕಸಂಖ್ಯೆಯ ಕಂದವೃತ್ತಗಳಿರುವ ದೊಡ್ಡ ಪ್ರಬಂಧವನ್ನೇ ಮೊದಲಾಗಿ ಹಾಡಬೇಕು ಎಂಬ ನಿಯಮವಿರುತ್ತದೆ. ಸಂಗೀತ ರತ್ನಾಕರದ ಪ್ರಬಂಧಾಧ್ಯಾಯದಲ್ಲಿ ಈ ಲಕ್ಷಣಶ್ಲೋಕವು ಹೀಗಿದೆ:–

> ಕಂದವೃತ್ತಾಧಿಕಃ ಕಶ್ಚಿತ್ ಪ್ರಬಂಧೋ ಗೀಯತೇ ಮಹಾನ್।
> ಅಲ್ಪಃ ಪಶ್ಚಾತ್ ಪ್ರಗಾತವ್ಯ ಏಷ ಸೂಡಕ್ರಮೋ ಮತಃ॥

ಹೀಗಿರುವುದರಿಂದ ಈ ಚತ್ಪಾಣವೆಂಬುದೂ ಸ್ವತಂತ್ರವಾಗಿ ಅಂಥ ಒಂದು ಗೇಯಕಾವ್ಯವೆಂಬು ದರಲ್ಲಿ ಸಂದೇಹವಿಲ್ಲ. ಅದರ ಈ ಹೆಸರೂ ಅನ್ವರ್ಥವಾಗಿಯೇ ಬಂದಿದೆ ಎಂಬುದನ್ನು ಗಮನಿಸಬಹುದು. ಕಂದ, ವೃತ್ತ, ಅಕ್ಕರ, ಚೌಪದಿ, ಗೀತಿಕೆ, ತ್ರಿಪದಿ ಎಂಬ ಆರು ವಿಧದ ಛಂದಸ್ಸುಗಳೇ ಇದರಲ್ಲಿರುವುದ ರಿಂದ ಇದು 'ಷಟ್ಸ್ಥಾನಕಾವ್ಯ'ವೆಂಬ ಹೆಸರನ್ನು ಸಾರ್ಥಕವಾಗಿಯೇ ಪಡೆದಿರಬೇಕು. ಷಟ್ಸ್ಥಾನದ ತದ್ಭವರೂಪವೇ ಚತ್ಪಾಣ. ಕನ್ನಡ ಹೆಸರಾದ್ದರಿಂದ 'ಚತ್ಪಾಣ' ಎಂಬುದು ನಪುಂಸಕಲಿಂಗವಾಗಿರುವುದೂ ಸಹಜವೇ ಸರಿ. ಈ ಆರೇ ವಿಧದ ಬಂಧಗಳಿಗೆ ಅತ್ಯಂತ ಪ್ರಧಾನವಾದ ವಿಶಿಷ್ಟಗೇಯಕಾವ್ಯ ಅಥವಾ ಹಾಡು ಗಬ್ಬವೇ 'ಚತ್ಪಾಣ'– (ಷಣ್ಣಾಂ ಛಂದೋವಿಶೇಷಾಣಾಂ ಸ್ಥಾನಂ ಷಟ್ಸ್ಥಾನಂ)

ನಮ್ಮ ಕರ್ಣಾಟಕ ದೇಶೀ ಸಂಗೀತ ಸಂಪ್ರದಾಯದಲ್ಲಿ, 'ಗೊಂದಲಿ' ಮುಂತಾದ ಕರ್ಣಾಟಕ ದೇಶೀಯ ನೃತ್ಯಪದ್ಧತಿಗಳಲ್ಲಿ ಸಮೇತ, ಏಳೆಯೇ ಮೊದಲಾದ ಕನ್ನಡ ಪದಜಾತಿಗಳು, ಮತಂಗನ ಕಾಲ ದಲ್ಲಿಯೇ ಅತ್ಯಂತ ಪ್ರಸಿದ್ಧವಾಗಿದ್ದುವೆಂದು 'ಬೃಹದ್ದೇಶಿ'ಯಿಂದ ತಿಳಿಯಬರುತ್ತದೆ. ಕನ್ನಡ ಜಾತಿ ಛಂದಸ್ಸುಗಳಲ್ಲಿ ಅಕ್ಕರಗಳೆಂದು ಕರೆಯಲ್ಪಡುವವಕ್ಕೆ ಸಂಗೀತಗ್ರಂಥಗಳಲ್ಲಿ ಮದನ, ಮಾನಸ, ಎಂಬ ಹೆಸರುಗಳಿದ್ದಂತೆ ತಿಳಿಯಬಹುದು. ಬಿರುದಕ್ಕರದ ಎರಡು ಭಾಗಗಳೆಂದೇ ಹೇಳಬಹುದಾದ, ಹಾಗೂ ಸಂಗೀತಶಾಸ್ತ್ರದಲ್ಲಿ ಹೇಳುವ ಕಾಮಲೇಖೆ ಎಂಬ ಏಲಾ ಪ್ರಭೇದಕ್ಕೆ ಹಿರಿಯರೆನಿಸಿದ ನಮ್ಮ 'ಸಾಂಗತ್ಯ'ಕ್ಕೂ

---

1 ಶುದ್ಧಸೂಡ– ಏಲಾ, ಕರಣ, ಢೇಂಕೀ, ವರ್ತನೀ, ಝೊಂಬಡಃ, ಚ।
ಲಂಭ, ರಾಸೈ, ಕತಾಲೀ, ಧರಷ್ಟಧಾ ಸೂಡ ಉಚ್ಯತೇ॥ಸಂ. ರ॥

ಸಾಲಗಸೂಡ– ಆದ್ಯೋ ಧ್ರುವಸ್ತತೋ ಮಂಠ ಪ್ರತಿಮಂಠ ನಿಸಾರುಕಾಃ।
ಅಡ್ಡತಾಲಸ್ತತೋ ರಾಸ ಏಕತಾಲೀತ್ಯಸೌ ಮತಃ॥

[illegible]

—ಕುಕ್ಕಿಲ ಕೃಷ್ಣಭಟ್ಟ

ಕಾವ್ಯಾವಲೋಕನ

ಪರಿಭಾವನೆ, ಲೇಖಕರು: ಶ್ರೀ ಸಿ. ಪಿ. ಕೆ. : ಪ್ರಕಾಶಕರು: ತ. ವೆಂ. ಸ್ಮಾರಕ ಗ್ರಂಥ ಮಾಲೆ,ಕೃಷ್ಣ ಮೂರ್ತಿಪುರಂ, ಮೈಸೂರು–4; ಪುಟಗಳು 146; ಬೆಲೆ: ಸಾಧಾರಣ ಪ್ರತಿ, ರೂ. 3.50; ಉತ್ತಮಪ್ರತಿ: ರೂ. 7.50; 1969.

ಶ್ರೀ ಸಿ. ಪಿ. ಕೆ. ಅವರ 'ಪರಿಭಾವನೆ' ಹನ್ನೆರಡು ವಿಮರ್ಶಾತ್ಮಕ ಪ್ರಬಂಧಗಳ ಸುಂದರ ಸಂಕಲನ. ಇಲ್ಲಿ ಕನ್ನಡದ ಜೊತೆಗೆ ಸಂಸ್ಕೃತ ಸಾಹಿತ್ಯಕ್ಕೆ ಸಂಬಂಧಪಟ್ಟ ವಿಮರ್ಶೆಯಿದೆ; ಅನುವಾದದ ಜೊತೆಗೆ ಹಿರಿಯ ಗ್ರಂಥಗಳ ಸಾರಸಂಗ್ರಹವಿದೆ; ಎಲ್ಲಕ್ಕಿಂತ ಮಿಗಿಲಾಗಿ ಆರ್ದ್ರವಾದ ವ್ಯಕ್ತಿ ಚಿತ್ರಗಳಿವೆ.

'ಸುಪ್ರಭಾತ'ವಾದ ಮೇಲೆ ಮುಂದಿನ ಪ್ರಬಂಧಗಳು. 'ಕೌಸಲ್ಯಾ ಸುಪ್ರಜಾ ರಾಮ...' ಎಂಬ ವಾಲ್ಮೀಕಿ ರಾಮಾಯಣದ ಶ್ಲೋಕವನ್ನು ನಿಮಿತ್ತವಾಗಿಟ್ಟುಕೊಂಡು ಸುಪ್ರಭಾತ ಸಾಹಿತ್ಯದ ಸಾಂಕೇತಿಕತೆಯನ್ನೂ, ಔಚಿತ್ಯವನ್ನೂ ಕುರಿತು ವಿಚಾರ ಮಾಡಿದ್ದಾರೆ. .ಈ ಸಂದರ್ಭದಲ್ಲಿ ವಾಲ್ಮೀಕಿಗಳ ಶ್ಲೋಕದ ಪ್ರತಿಯೊಂದು ಮಾತಿನ ಔಚಿತ್ಯವನ್ನೂ ಸಮರ್ಪಕವಾಗಿ ವ್ಯಾಖ್ಯಾನಿಸಿದ್ದಾರೆ.

'ಕವಿರಾಜಮಾರ್ಗ'ದಲ್ಲಿ ಕವಿಸ್ವರಗಳು' ಎಂಬುದು ಎರಡನೆಯ ಪ್ರಬಂಧ. "ಹಳಗನ್ನಡದಲ್ಲಿರುವ ಅಲಂಕಾರ ಗ್ರಂಥಗಳೆಲ್ಲಾ ಸಂಸ್ಕೃತಗ್ರಂಥಗಳನ್ನು ಅನುಸರಿಸಿ ಬರೆಯಲ್ಪಟ್ಟುವು. ಕನ್ನಡ ಅಲಂಕಾರಿಕರು ಪ್ರಾಯಶಃ ತಮ್ಮ ಗ್ರಂಥಗಳಲ್ಲಿ ಯಾವ ಹೊಸ ಸಂಗತಿಯನ್ನು ಎತ್ತಿಯಾಗಲಿ, ವಿಚಾರ ಮಾಡಿಯಾಗಲಿ ಹೇಳಿಲ್ಲ" ಎಂಬ ದಿವಂಗತ ಎ. ಆರ್. ಕೃಷ್ಣಶಾಸ್ತ್ರಿಗಳ ಮಾತನ್ನು ಎತ್ತಿಕೊಂಡು ಅದಕ್ಕೆ ಉತ್ತರ ಕೊಡುತ್ತಾ "ಕಾವ್ಯ ಮೀಮಾಂಸೆಯ ಕ್ಷೇತ್ರದಲ್ಲಿ ಕನ್ನಡಿಗರ ಸ್ವೋಪಜ್ಞತೆಯನ್ನು ಕಾಣಬೇಕಾದರೆ, ಕನ್ನಡ ಅಲಂಕಾರ ಗ್ರಂಥಗಳಿಗಿಂತ ಹೆಚ್ಚಾಗಿ ಪ್ರಸಿದ್ಧ ಕನ್ನಡ ಕವಿಗಳು ತಮ್ಮ ಕಾವ್ಯಗಳ ಪೀಠಿಕಾ ಭಾಗಗಳಲ್ಲಿ ಅಥವಾ ಅನ್ಯತ್ರ ಹೇಳುವ ಮಾತುಗಳನ್ನು ಅವಲಂಬಿಸುವುದು ಮೇಲು" ಎಂದು ಹೇಳಿ ಶ್ರೀ ಎ. ಆರ್. ಕೃ. ಅವರ ಮಾತನ್ನು "ಈ ಮಾತಿನಲ್ಲಿ ಸತ್ಯವೇನೋ ಉಂಟು; ಆದರೆ ಅದು ಪೂರ್ಣ ಸತ್ಯವಲ್ಲ" ಎಂದು ನಮ್ರವಾಗಿ ವಿರೋಧಿಸಿದ್ದಾರೆ. ಇದಕ್ಕೆ ಸಮರ್ಥನೆಯಾಗಿ 'ಕವಿರಾಜಮಾರ್ಗ'ದಿಂದಲೇ ಒಂದು ಉದಾಹರಣೆಯನ್ನು ಎತ್ತಿ ಕೊಟ್ಟಿದ್ದಾರೆ. ಕವಿರಾಜಮಾರ್ಗಕಾರನು ಪ್ರಥಮ ಪರಿಚ್ಛೇದದ ನಾಲ್ಕು ಪದ್ಯಗಳಲ್ಲಿ ಕವಿಗಳ ಬೇರೆ ಬೇರೆ ಸ್ವರಗಳನ್ನು ಅನುಕ್ರಮವಾಗಿ ವ್ಯಾಖ್ಯಾನಿಸಿರುವುದನ್ನು ವಿವೇಚಿಸಿದ್ದಾರೆ. ಸಂಸ್ಕೃತ ಅಲಂಕಾರಿಕರು ಹೇಳದ ಎಷ್ಟೋ ವಿಚಾರಗಳು ನಮ್ಮವರಿಂದ ಪ್ರಣೀತವಾಗಿವೆ ಎಂಬ ಮಾತನ್ನು ಈ ಪ್ರಬಂಧ ಆಂಶಿಕವಾಗಿಯೇ ಆದರೂ ಸಮರ್ಥವಾಗಿ ಎತ್ತಿ ತೋರಿಸುತ್ತದೆ.

'ಜಿನಶ್ರೀರೂಪಮಾತ್ಮೋಪಮಂ'ಎಂಬುದು ಮೂರನೆಯ ಪ್ರಬಂಧ. ಬೊಪ್ಪಣ ಪಂಡಿತನ 'ಗೊಮ್ಮಟಸ್ತುತಿ'ಯ 'ಅತಿ ತುಂಗಾಕೃತಿಯಾದೊಡಾಗದದರೊಳ್...' ಎಂದು ಆರಂಭವಾಗುವ ಒಂದೇ ಒಂದು ಪದ್ಯವನ್ನು ಅವಲೋಕಿಸಲೆತ್ತಿಕೊಂಡು ಅಲ್ಲಿ ಒಂದೊಂದು ಮಾತೂ ಹೇಗೆ ಅರ್ಥ ವತ್ತಾಗಿದೆ, ಧ್ವನಿಯುಕ್ತವಾಗಿದೆ ಎಂಬುದನ್ನು ಮನಮುಟ್ಟುವಂತೆ ವರ್ಣಿಸಿದ್ದಾರೆ. ಕಡೆಯಲ್ಲಿ ಬರುವ 'ಆತ್ಮೋಪಮಂ' ಎಂಬ ವಿಶೇಷಣವನ್ನು ವಿಶ್ಲೇಷಿಸುವ ಸಿಪಿಕೆ ಅವರ ರೀತಿ ಇಲ್ಲಿ ಮೆಚ್ಚತಕ್ಕದ್ದು. 'ಅನುಪಮವಾದ' ಎಂಬುದು ಇದಕ್ಕೆ ವಾಚ್ಯಾರ್ಥ. ಆದರೆ ಇಲ್ಲಿ ಧ್ವನಿಯನ್ನು ಅರಸಬಹುದು. ಈ ಪ್ರತಿಮೆ ಒಬ್ಬ ವ್ಯಕ್ತಿಯ ಪ್ರತಿಕೃತಿಯಲ್ಲ. ಹಾಗಿದ್ದರೆ ಐದು ಅಡಿ ಎತ್ತರವೇ ಸಾಕಾಗುತ್ತಿತ್ತು. ಇದ "ಆತ್ಮತತ್ತ್ವ ಮತ್ತು ಜಿನತತ್ತ್ವಗಳಿಗೆ ಸಮೆದ ಒಂದು ಮಹೋನ್ನತ ಪ್ರತಿಮೆ" ಎಂದು ಹೇಳಿ 'ಆತ್ಮೋ ಪಮಂ' ಎಂದರೆ 'ನಿರುಪಾಧಿಕವಾದ, ನಿರಾವರಣವಾದ ಆತ್ಮದ ಪ್ರತೀಕ' ಎಂದಿದ್ದಾರೆ.

"ಎ. ಆರ್. ಕೃಷ್ಣಶಾಸ್ತ್ರಿಗಳ 'ಭಾಸಕವಿ' " ಎಂಬುದು ನಾಲ್ಕನೆಯ ಪ್ರಬಂಧ. "ಒಂದು ಸಾಹಿತ್ಯಕ

ಮತ್ತೊಂದಕ್ಕೂ ನಡುವೆ ಸೇತುವೆ ಕಲ್ಪಿಸುವ, ಬಾಂಧವ್ಯ ಕುದುರಿಸುವ ವಿಧಾನಗಳು ಎರಡಿವೆ: ಒಂದು ವಿಮರ್ಶೆ, ಮತ್ತೊಂದು ಅನುವಾದ" ಎಂದು ಹೇಳುತ್ತಾ ಈ ಎರಡೂ ದಿಸೆಗಳಲ್ಲೂ ಅದ್ಭುತವಾಗಿ ಕೆಲಸ ಮಾಡಿರುವ ಶ್ರೀ ಎ.ಆರ್.ಕೃ. ಅವರ ಸೇವೆಯನ್ನು ಸಂಗ್ರಹವಾಗಿ ವಿವೇಚಿಸಿ 'ಭಾಸಕವಿ'ಎಂಬ ಅವರ ವಿಮರ್ಶಾಗ್ರಂಥವನ್ನು ಸ್ಥೂಲವಾಗಿ ಪರಾಮರ್ಶಿಸಿದ್ದಾರೆ. ಶ್ರೀಕೃಷ್ಣಶಾಸ್ತ್ರಿಗಳ ಕವಿಹೃದಯ ವನ್ನು ಹಿಡಿದು ವಿವರಿಸುವ ವಿಮರ್ಶಕಶಕ್ತಿಯನ್ನು ವಿಶೇಷವಾಗಿ ಕೊಂಡಾಡಿದ್ದಾರೆ. "ಶಾಸ್ತ್ರಿಗಳ ವಿಮರ್ಶೆ ಶುಷ್ಕ ಪೃಥಕ್ಕರಣವಾಗಿರದೆ, ಜೀವಂತವಾಗಿ ಆರ್ದ್ರವಾಗಿ ಕಳಕಳಿಸುತ್ತದೆ". "……ಈ ಉದ್ರೇಕ ದೂರವಾದ ಸಂಯಮಪೂರ್ಣ ವಿಮರ್ಶೆ ಅನುಕರಣಾರ್ಹವಾದುದಾದರೂ ಅನುಕರಿಸ ಲಾಗದ್ದು" ; "ಕೃಷ್ಣಶಾಸ್ತ್ರಿಗಳ ಮಾತುಗಳಲ್ಲಿ ಯಾವುದನ್ನೂ ತೆಗೆಯುವಂತಿಲ್ಲ; ಮತ್ತೆ ಏನನ್ನೂ ಸೇರಿಸ ಬೇಕಾಗಿಲ್ಲ"; "ಕೃಷ್ಣಶಾಸ್ತ್ರಿಗಳು ಭಾಸಸಾಹಿತ್ಯವನ್ನೆಲ್ಲಾ ಏಕಪ್ರಕಾರವಾಗಿ ಕಣ್ಣುಮುಚ್ಚಿಕೊಂಡು ಹೊಗಳು ತ್ತಾರೆಂದು ನಿರೀಕ್ಷಿಸುವವರಿಗೆ ಈ ನಾಟಕಗಳ ವಿಮರ್ಶೆಯಿಂದ ನಿರಾಶೆಯಾದೀತು"; "ಕೃಷ್ಣಶಾಸ್ತ್ರಿಗಳದು ಬರಿಯ ಪಂಡಿತ ವಿಮರ್ಶೆಯಲ್ಲ; ಅವರ ಕವಿ ಮನೋಧರ್ಮ 'ಭಾಸಕವಿ'ಯ ಉದ್ದಕ್ಕೂ ಸ್ಪಷ್ಟವಾಗಿ ಗೋಚರಿಸುತ್ತದೆ"; "ಭಾಸನ ಸ್ವಭಾವಕ್ಕೆ ತಕ್ಕ ವಿಮರ್ಶೆಯ ರೀತಿ ಅವರದು"– ಇವೇ ಮುಂತಾದ ಸೂತ್ರಪ್ರಾಯವಾದ ಮಾತುಗಳು ಶಾಸ್ತ್ರಿಗಳ ವಿಮರ್ಶನ ಶಕ್ತಿಗೆ ಹಿಡಿದ ರನ್ನಗನ್ನಡಿಗಳಂತಿವೆ.

"ಕುವೆಂಪು ಅವರ ವಿಮರ್ಶೆ" ಎಂಬುದು ಐದನೆಯ ಪ್ರಬಂಧ. ವಿಮರ್ಶೆಯ ತಾತ್ವಿಕ ಹಾಗೂ ಅನ್ವಯಿಕ ಮುಖಗಳ ಪರಿಚಯ ಮಾಡಿಕೊಡುತ್ತಾ ಭಾರತೀಯ ಕಾವ್ಯಮೀಮಾಂಸೆಯ ಕನ್ನಡದ ಕ್ಷೇತ್ರದಲ್ಲಿ ನೂತನ ವಿಚಾರ ವಿಮರ್ಶೆಗಳನ್ನೂ, ಸ್ವತಂತ್ರವಾದ ಕಾವ್ಯಮೀಮಾಂಸೆಯನ್ನೂ ನೀಡಿದವ ರೆಂದರೆ ಕುವೆಂಪು ಹಾಗೂ ಪುತಿನ ಎಂದು ಹೇಳಿ ಕುವೆಂಪು ಅವರ ಕೊಡುಗೆಯನ್ನು ಸವಿಸ್ತರವಾಗಿ ವರ್ಣಿ ಸಿದ್ದಾರೆ. ವಿಷಯ ಪ್ರತಿಪಾದನೆಗೆ ಅನುಕೂಲವಾಗುವಂತೆ ಪ್ರಬಂಧವನ್ನು ನಾಲ್ಕುಭಾಗ ಮಾಡಿಕೊಂಡಿ ದ್ದಾರೆ. ಮೊದಲಭಾಗದಲ್ಲಿ ಕುವೆಂಪು ಅವರ ವಿಮರ್ಶೆಯ ಪ್ರಮುಖ ಲಕ್ಷಣಗಳನ್ನು ಸಂಗ್ರಹಿಸಿ ವಿವೇ ಚಿಸಿದ್ದಾರೆ. ಎರಡನೆಯ ಭಾಗದಲ್ಲಿ ಕುವೆಂಪು ಅವರು ದರ್ಶನ, ಪೂರ್ಣದೃಷ್ಟಿ, ಪ್ರತಿಮೆ, ಭವ್ಯತೆ, ಮಹೋಪಮೆ ಮುಂತಾದ ಪದಗಳಿಗೆ ನೀಡಿರುವ ವ್ಯಾಖ್ಯಾನವನ್ನು ವಿಸ್ತರಿಸಿದ್ದಾರೆ. ನಡುನಡುವೆ ಆ ಪದಗಳಿಗೆ ತಾವೂ ಸ್ವತಂತ್ರವಾದ ರೀತಿಯಲ್ಲಿ ವಿವರಣೆ ನೀಡಿ ವಿಷಯ ಸುಲಭಗ್ರಾಹ್ಯವಾಗುವಂತೆ ಮಾಡಿದ್ದಾರೆ. ಮೂರನೆಯ ಭಾಗದಲ್ಲಿ ಕುವೆಂಪು ಅವರ ಅನ್ವಯಿಕ ವಿಮರ್ಶೆಯ ಹಕ್ಕಿನೋಟವಿದೆ. 'ಮಹಾಶ್ವೇತೆಯ ತಪಸ್ಸು' 'ಸರೋವರದ ಸಿರಿಗನ್ನಡಿಯಲ್ಲಿ' 'ದ್ರೌಪದಿಯ ಶ್ರೀಮುಡಿ'– ಈ ಮೂರು ಪ್ರಬಂಧಗಳನ್ನು ಆಧಾರವಾಗಿಟ್ಟುಕೊಂಡಿದ್ದಾರೆ. ಕಡೆಯ ಭಾಗದಲ್ಲಿ ವಿಮರ್ಶೆಗೆ ದಾರಿದೀಪವಾಗ ಬಹುದಾದ. ಎಚ್ಚರಿಕೆಯ ಘಂಟಾನಾದದಂತಿರುವ ಕುವೆಂಪು ಅವರ ಸೂಕ್ತಿಗಳನ್ನು ಎತ್ತಿಕೊಟ್ಟಿದ್ದಾರೆ.

ವಿಸ್ತಾರವಾದ ವ್ಯಾಪ್ತಿಯುಳ್ಳ ಕುವೆಂಪು ಅವರ ಕಾವ್ಯಮೀಮಾಂಸೆ ಹಾಗೂ ವಿಮರ್ಶೆಯ ತತ್ವ ಗಳನ್ನು ಅನಾಯಾಸವಾಗಿ, ಸೂತ್ರಬದ್ಧವಾಗಿ ಹಿಡಿದಿಟ್ಟಿರುವುದು ತುಂಬಾ ಮೆಚ್ಚತಕ್ಕ ಅಂಶ. ಕುವೆಂಪು ಅವರ ಬಹುಮುಖ ಪ್ರತಿಭೆಯಲ್ಲಿ ಸ್ವವಿಶಿಷ್ಟ ಸುಂದರ ಮುಖವೊಂದನ್ನು ಉದ್ಘಾಟಿಸಲು ಕೀಲಿಕೈ ಇಲ್ಲಿ ದೊರಕಿದೆ.

'ಶ್ರೀ ರಾಮಾಯಣ ದರ್ಶನಂ' ಆರನೆಯ ಪ್ರಬಂಧ. ಈ ಪುಟ್ಟ ಪ್ರಬಂಧ ಆ ಮಹಾಕಾವ್ಯದ ಸಮಗ್ರ ವಿಮರ್ಶೆಯಲ್ಲ. ಈ ಯುಗದಲ್ಲಿ 'ಸಮಷ್ಟಿ ಪ್ರಜ್ಞೆಯ ಅಭಿವ್ಯಕ್ತಿಯಾಗಿ ಅವತರಿಸಿರುವ' ಕಾವ್ಯ ವಾದ ಶ್ರೀ ರಾಮಾಯಣ ದರ್ಶನದ ವೈಶಿಷ್ಟ್ಯ ಅಥವಾ ಅದರ ತಿರುಳನ್ನು ಅತ್ಯಂತ ಸಂಗ್ರಹವಾಗಿ ಹೇಳಿ ದ್ದಾರೆ. ರಾವಣನ ಪಾತ್ರದ ಅಂತ್ಯವನ್ನು ಸ್ವಲ್ಪ ವಿಸ್ತರಿಸಿ ವಿವೇಚಿಸಿ ಅದರ ಸಾಫಲ್ಯವನ್ನು ಎತ್ತಿ ತೋರಿಸಿದ್ದಾರೆ.

'ದಿವಂಗತ ತೀ. ನಂ. ಶ್ರೀ.' ಎಂಬುದು ಏಳನೆಯ ಪ್ರಬಂಧ; ಶ್ರೀ ತೀನಂಶ್ರೀ ಅವರು ತೀರಿಕೊಂ ಡಾಗ ಬರೆದದ್ದು. ಈ ಪ್ರಬಂಧವನ್ನು ಪ್ರಭಾವಶಾಲಿಯಾದ ವ್ಯಕ್ತಿಚಿತ್ರವನ್ನೊಳಗೊಂಡ ಗದ್ಯಗೀತೆ ಎಂದು ಹೇಳಬಹುದು. ಶ್ರೀ ತೀನಂಶ್ರೀ ಅವರ ಜೀವನವನ್ನು ಸಂಕ್ಷಿಪ್ತವಾಗಿ ವಿವರಿಸಿದ್ದಾರೆ. ಕನ್ನಡ ಸಂಸ್ಕೃತ. ಇಂಗ್ಲಿಷ್, ಕಾವ್ಯ. ಅಲಂಕಾರ, ವ್ಯಾಕರಣ, ಛಂದಸ್ಸು, ಗ್ರಂಥಸಂಪಾದನೆ, ಭಾಷಾಶಾಸ್ತ್ರ, ವಿಮರ್ಶೆ– ಮೊದಲಾದ ಕ್ಷೇತ್ರಗಳಲ್ಲಿ ಅವರಿಗಿದ್ದ ಪಾಂಡಿತ್ಯವನ್ನು ಕೊರಳುಬ್ಬಿ ಕೈವಾರಿಸಿದ್ದಾರೆ. ಅವರ

ವಾಗ್ಮಿತೆ, ಬೋಧನಕ್ರಮ, ಸೌಜನ್ಯಪರತೆ, ಸಂಪ್ರದಾಯಾತೀತ ಉದಾರ ಮನೋಧರ್ಮ ಇವುಗಳನ್ನು ಎತ್ತಿ ಹೇಳಿದ್ದಾರೆ. ಅವರ ಕೃತಿಗಳನ್ನು ಸಂಕ್ಷಿಪ್ತವಾಗಿ ಪರಿಚಯ ಮಾಡಿಕೊಟ್ಟಿದ್ದಾರೆ. "ಕನ್ನಡದ ಪಾಲಿಗೆ ಆ ವಿದ್ಯಾಸಾಗರ ಇಲ್ಲ ಎಂದು ನಂಬಲೇ ಬೇಕಾಗಿದೆ. ಕನ್ನಡದ ಬಾನಿನ ಜ್ವಲಂತ ನಕ್ಷತ್ರವೊಂದು ಅಸ್ತಂಗತವಾಯಿತು; ಮತ್ತೊಂದು ಕಳಸ ಕಳಚಿ ಬಿತ್ತು; ಪ್ರತಿಭಾಗೃಹಕ್ಕೆ ಮತ್ತೊಂದು ಪ್ರವೇಶ ವಾಯಿತು"; "ವಿದ್ವಾಂಸರು ಶುಷ್ಕ ಹೃದಯರಾಗಿರುವುದು ಲೋಕದಲ್ಲಿ ಸಾಮಾನ್ಯ. ಆದರೆ ತೀನಂಶ್ರೀ ಶುಷ್ಕ ಪಂಡಿತರಲ್ಲ. ಅತ್ಯುತ್ತಮ ರಸಜ್ಞರು. ಎಂತಹ ಕ್ಲಿಷ್ಟ ನೀರಸ ವಸ್ತುವಿನಲ್ಲೂ ರಸವನ್ನು ಹಿಂಡಿ ತೆಗೆಯಬಲ್ಲ ಮೋಡಿಗಾರರು"; "ಅವರ ಮಾತು ಮುತ್ತು ಪೋಣಿಸಿದಂತಲ್ಲ, ಮುತ್ತಿನ ಮಳೆಯಂತೆ. ಒಂದೊಂದು ನುಡಿಯೂ ತೂಕವಾಗಿ ಅಳೆದದ್ದು; ಆಲೋಚನೆಯ ಆಳದಿಂದ ಮೂಡಿದ್ದು"; "ತೀನಂಶ್ರೀ ಅವರು ಮುಖ್ಯವಾಗಿ ಬರೆಯುವ ಜಾತಿಯಲ್ಲ, ಬರೆಯಿಸುವ ಜಾತಿ"—ಇವೇ ಮುಂತಾದ ವಾಕ್ಯಗಳು ಶ್ರೀ ತೀನಂಶ್ರೀ ಅವರ ವ್ಯಕ್ತಿತ್ವವನ್ನು ಕಂಡರಿಸುವ ಶಿಲ್ಪವಾಕ್ಯಗಳಾಗಿವೆ.

'ಕನ್ನಡ ಕವಿಗಳು ಕಂಡ ಚಂದ್ರ' ಎಂಟನೆಯ ಪ್ರಬಂಧ. ಈ ಪ್ರಬಂಧದಲ್ಲಿ ಪ್ರಾಚೀನ ಹಾಗೂ ನವೀನ ಕನ್ನಡ ಕವಿಗಳು, ಜನಪದ ಕವಿಗಳು ಚಂದ್ರನನ್ನು ಎಷ್ಟು ತನ್ಮಯತೆಯಿಂದ ಚಿತ್ರಿಸಿದ್ದಾರೆ ಎಂಬುದನ್ನು ತುಂಬಾ ಹೃದ್ಯವಾಗಿ ಬಣ್ಣಿಸಿದ್ದಾರೆ. ಹರಿಹರ, ನೇಮಿಚಂದ್ರ, ಪಂಪ, ತಿರುಮಲಾರ್ಯರಲ್ಲಿ ಮೂಡಿಬಂದಿರುವ ಉದಯಚಂದ್ರ ವರ್ಣನೆ; ಹರಿಹರ, ರುದ್ರಭಟ್ಟರ ಪೂರ್ಣಚಂದ್ರ ವರ್ಣನೆ; ರಾಘವಾಂಕ ಹಾಗೂ ಮತ್ತೊಬ್ಬ ಕವಿಯ ಅರ್ಧಚಂದ್ರ ವಿನ್ಯಾಸ; ಪಂಪ, ಕುಮಾರವ್ಯಾಸರ ಬಿದಿಗೆ ಚಂದ್ರನ ವರ್ಣನೆ—ಮುಂತಾದವುಗಳನ್ನು ಸೋದಾಹರಣವಾಗಿ ವಿವರಿಸಿದ್ದಾರೆ. ಅಲ್ಲಿಂದ ಮುಂದೆ ರನ್ನನ ಚಂದ್ರಿಕಾ ತನ್ಮಯತೆಯ ವರ್ಣನೆಯಿದೆ. "ಆಧುನಿಕ ಕವಿಗಳ ಚಂದ್ರ ವರ್ಣನೆಗಳಲ್ಲಿ ಔಚಿತ್ಯಪ್ರಜ್ಞೆ ಹೆಚ್ಚಾಗಿ ಕಾಣುತ್ತದೆ" ಎಂದು ಹೇಳಿ ಬೇಂದ್ರೆ, ಪುತಿನ, ಕುವೆಂಪು, ಜಿ. ಎಸ್. ಶಿವರುದ್ರಪ್ಪ, ಹೆಂಡಗುಂಡಕ 'ರತ್ನ' ಮುಂತಾದವರು ಚಂದ್ರನನ್ನು ಹೇಗೆ ಕಂಡಿದ್ದಾರೆ ಎಂಬುದನ್ನು ವಿವರಿಸಿದ್ದಾರೆ. ಮೊದಲಿನಿಂದ ಕೊನೆಯವರೆಗೂ ಪ್ರಬಂಧ ಹೃದ್ಯವಾಗಿದೆ. ಲಲಿತ ಪ್ರಬಂಧದ ಸರಸ ಧಾಟಿಯಲ್ಲಿದೆ.

'ಸಂಸ್ಕೃತದಲ್ಲಿ ಶೃಂಗಾರ ಶತಕಗಳು' ಒಂಬತ್ತನೆಯ ಪ್ರಬಂಧ. ಕನ್ನಡ ಹಾಗೂ ಸಂಸ್ಕೃತ ಕವಿಗಳು ಶೃಂಗಾರರಸಕ್ಕೆ ಪ್ರಾಶಸ್ತ್ಯ ಕೊಟ್ಟಿರುವ ವಿಷಯವನ್ನು ಪ್ರಸ್ತಾಪಿಸುತ್ತಾ ಭರ್ತೃಹರಿಯ ಶೃಂಗಾರ ಶತಕ, ಅಮರುಕನ 'ಅಮರುಶತಕ', ಬಿಲ್ಹಣಕವಿಯದೆಂದು ಹೇಳಲಾದ 'ಚೋರ ಪಂಚಾಶಿಕಾ' ಎಂಬ ಅರ್ಧ ಶತಕ, ಜಗನ್ನಾಥ ಪಂಡಿತನ 'ಭಾಮಿನೀ ವಿಲಾಸ'ದಲ್ಲಿ ಅಂತರ್ಗತವಾಗಿರುವ 'ಶೃಂಗಾರ ವಿಲಾಸ'—ಈ ಶತಕಗಳನ್ನು ಸಮರ್ಪಕವಾಗಿ, ವಿಶದವಾಗಿ ವಿವರಿಸಿದ್ದಾರೆ. ಸಾಕಷ್ಟು ಮೂಲ ಪದ್ಯಗಳನ್ನು ಉದಾಹರಿಸಿ, ಸರಳಗನ್ನಡದಲ್ಲಿ ವಿವರಿಸಿ, ತಮ್ಮ ವಿಚಾರಗಳನ್ನು ಮಂಡಿಸಿದ್ದಾರೆ.

'ಕಾಳಿದಾಸ ಚಿತ್ರಿಸಿರುವ ಸ್ತ್ರೀಯರು ಮತ್ತು ಆದರ್ಶ' ಎಂಬುದು ಹತ್ತನೆಯ ಪ್ರಬಂಧ. ಡಾ. ಎಸ್. ರಾಧಾಕೃಷ್ಣನ್ ಅವರು ಇಂಗ್ಲಿಷಿನಲ್ಲಿ ಬರೆದಿರುವ ಪ್ರಬಂಧದ ಕನ್ನಡ ಅನುವಾದ ಇದು. ಕಾಳಿದಾಸನನ್ನು ಕುರಿತಂತೆ ಮಹತ್ವದ ಪ್ರಬಂಧವೊಂದು ಈ ಮೂಲಕ ಕನ್ನಡಕ್ಕೆ ಬಂದಂತಾಗಿದೆ. ಅನುವಾದ ಸಮರ್ಪಕವಾಗಿದೆ, ಸಮರ್ಥವಾಗಿದೆ. ಮೂಲಲೇಖಕರು ಉದಾಹರಿಸಿರುವ ಸಂಸ್ಕೃತ ಪದ್ಯಗಳಿಗೆ ಸಂವಾದಿಯಾಗಿ ಶ್ರೀಗಳಾದ ಬೇಂದ್ರೆ, ಎಸ್. ವಿ. ಪರಮೇಶ್ವರ ಭಟ್ಟ, ಬಸಪ್ಪಶಾಸ್ತ್ರಿ ಮೊದಲಾದವರ ಕನ್ನಡ ಅನುವಾದಗಳನ್ನು ಕೊಟ್ಟಿರುವುದು ತುಂಬಾ ಪ್ರಯೋಜನಕಾರಿಯಾಗಿದೆ.

'ಸಾಹಿತಿ, ಕಲಾವಿಮರ್ಶಕ ವಿವೇಕಾನಂದರು' ಎಂಬುದು ಹನ್ನೊಂದನೆಯ ಪ್ರಬಂಧ. ಶ್ರೀ ವಿವೇಕಾನಂದರ ಭಾಷಣಗಳನ್ನೂ, ಬರಹಗಳನ್ನೂ ಅವರನ್ನು ಕುರಿತ ವಿದ್ವತ್ಕೃತಿಗಳನ್ನೂ ಅಧ್ಯಯನ ಮಾಡಿ ಪ್ರಸ್ತುತ ಪ್ರಬಂಧವನ್ನು ರಚಿಸಿದ್ದಾರೆ. 'ನವಭಾರತದ ನಿರ್ಮಾಪಕರಲ್ಲೊಬ್ಬರು' ಎಂದು ವಿವೇಕಾನಂದರನ್ನು ಬಣ್ಣಿಸುತ್ತಾ, ಅವರನ್ನು ಸಾಹಿತಿ ಎಂದು ಕರೆಯಬಹುದೆ ಎಂಬ ಪ್ರಶ್ನೆಯನ್ನೆತ್ತಿಕೊಂಡು "ಅವರ ಜೀವನವೇ ಒಂದು ಮಹಾಕಾವ್ಯ... ದ್ರಷ್ಟಾರರಾದ ಸ್ವಾಮಿ ವಿವೇಕಾನಂದರ ವಾಣಿ ನಿಸರ್ಗಸಹಜವಾದದ್ದು, ಸಾಹಿತ್ಯಗುಣದಿಂದ ಕೂಡಿದ್ದು ಎನ್ನಲು ಅಡ್ಡಿಯಿಲ್ಲ" ಎಂದಿದ್ದಾರೆ. ಸ್ವಾಮೀಜೀಯವರ ಕೃತಿಗಳಿಗೆ 'ಶಕ್ತಿ ಸಾಹಿತ್ಯ' ಎಂಬ ಮಾತು ಪೂರ್ಣವಾಗಿ ಅನ್ವಯಿಸುತ್ತದೆ ಎಂದು ಹೇಳಿ ಅವರ ಸಾಹಿತ್ಯಶಕ್ತಿಯನ್ನು ಗದ್ಯಕೃತಿಗಳ ಹಾಗೂ ಕವಿತೆಗಳ ಮೂಲಕ ತೋರಿಸಿಕೊಟ್ಟಿದ್ದಾರೆ. ಸ್ವಾಮಿಜೀ

ಯವರು ಸಂಸ್ಕೃತ, ಇಂಗ್ಲಿಷ್ ಹಾಗೂ ಬಂಗಾಳಿ ಭಾಷೆಗಳಲ್ಲಿ ಬರೆದಿರುವ ಕವನಗಳನ್ನು ವಿಮರ್ಶಿಸುವ ಸಂದರ್ಭದಲ್ಲಿ "ವಿವೇಕಾನಂದರು ಸಾಹಿತಿಯೆಂಬುದನ್ನು ಸಾಧಿಸಲು ಇಷ್ಟು ಪ್ರಯಾಸಪಡುವ ಅಗತ್ಯವಿಲ್ಲ. ಏಕೆಂದರೆ, ಅವರು ರಚಿಸಿರುವ ಕವನಗಳಿಂದ ಕವಿಯೆಂಬ ಅಭಿಧಾನಕ್ಕೆ ಅವರು ನಿರ್ವಿವಾದವಾಗಿ ಅರ್ಹರಾಗಿದ್ದಾರೆ" ಎಂದು ಹೇಳಿದ್ದಾರೆ. "ವಿವೇಕಾನಂದರು ಒಳ್ಳೆಯ ವಿಮರ್ಶಕರೂ ಹೌದು" ಎಂದು ಹೇಳಿ ಉಪನಿಷತ್ತುಗಳನ್ನು ಕುರಿತ ಅವರ ವಿಮರ್ಶನೋಕ್ತಿಗಳನ್ನು ಉದಾಹರಿಸಿದ್ದಾರೆ. ಸ್ವಾಮೀಜಿಯವರ ಸರಸ ಹೃದಯ, ಸೌಂದರ್ಯಪ್ರಜ್ಞೆ, ಹಾಸ್ಯಪರತೆಗಳನ್ನು ಕುರಿತು ಸಂಗ್ರಹವಾಗಿ ವಿವೇಚಿಸಿದ್ದಾರೆ. ಪ್ರಬಂಧದ ಕೊನೆಯ ಭಾಗದಲ್ಲಿ ವಿವೇಕಾನಂದರಿಗೆ ಚಿತ್ರ, ಸಂಗೀತ, ನಾಟಕ, ಮುಂತಾದುವುಗಳ ಮೇಲಿದ್ದ ಅಭಿರುಚಿಯನ್ನು ವಿವರಿಸಿ ಅವರು ಹೇಗೆ ಪ್ರಬುದ್ಧ ಕಲಾವಿಮರ್ಶಕರು ಎಂಬುದನ್ನು ಭಾಷಣ ಹಾಗೂ ಬರಹಗಳಿಂದ ಅವರ ಅಭಿಪ್ರಾಯಗಳನ್ನು ಸಂಗ್ರಹಿಸಿಕೊಟ್ಟು ಸಮರ್ಥಿಸಿದ್ದಾರೆ. ವಿಶಿಷ್ಟ ಪ್ರತಿಭಾಸಂಪನ್ನರಾದ ಸ್ವಾಮಿ ವಿವೇಕಾನಂದರ ಪ್ರೋಜ್ವಲ ಮುಖವೊಂದರ ಚಿತ್ರಣ ಇಲ್ಲಿ ಯಶಸ್ವಿಯಾಗಿ ಮೂಡಿ ಬಂದಿದೆ ಎನ್ನುವುದರಲ್ಲಿ ಸಂದೇಹವಿಲ್ಲ.

ಸಂಕಲನದ ಕಡೆಯ ಪ್ರಬಂಧ 'ಸೋದರಿ ನಿವೇದಿತಾಳ ಕೆಲವು ಭಾರತ ಚಿತ್ರಗಳು'. 'Studies from an Eastern Home' ಎಂಬ ಹೆಸರಿನಲ್ಲಿ ಸಂಕಲನಗೊಂಡಿರುವ ನಿವೇದಿತಾ ಪ್ರಬಂಧಗಳನ್ನು ಅಧ್ಯಯನ ಮಾಡಿ ಅವುಗಳ ಸಂಕ್ಷಿಪ್ತ ಪರಿಚಯ ಮಾಡಿಕೊಟ್ಟಿದ್ದಾರೆ. 'ಭರತಭೂಮಿಯ ದೇಹಜರಲ್ಲದಿದ್ದರೂ ಆತ್ಮಜರಾದ ಮಹಿಮಾನ್ವಿತ ಚೇತನಗಳಲ್ಲಿ' ಅಗ್ರಸ್ಥಾನಕ್ಕೆ ಅರ್ಹಳಾಗಿರುವ ಐರಿಷ್ ಮಹಿಳೆ ನಿವೇದಿತಾಳ ಬರಹದಲ್ಲಿ ಆಕೆಗೆ ಭಾರತದ ಬಗ್ಗೆ ಇರುವ ಭಕ್ತಿ, ತಾದಾತ್ಮ್ಯ, ಅನುಕಂಪಗಳನ್ನು ಇಲ್ಲಿ ಸಂಗ್ರಹವಾಗಿ ವಿವರಿಸಿದ್ದಾರೆ. ಭಾರತದ ಬಡತನ. ಜೇವಿನಮರ, ಹಿಂದೂ ವಿಧವೆಯ ಸೀರೆಯ ಗುಟ್ಟುಗಳು. ಭಾರತೀಯ ಏಕಾದಶಿ. ಭಾರತೀಯ ಸ್ತ್ರೀಯರ ದಿನಚರಿ, ಭಾರತದ ಹಬ್ಬಗಳ ಹಿನ್ನೆಲೆಯಲ್ಲಿರುವ ಪ್ರಕೃತಿಪ್ರೇಮ. ಇವೇ ಮುಂತಾದ ವಿಷಯಗಳ ಬಗ್ಗೆ ನಿವೇದಿತಾಳು ವ್ಯಕ್ತಪಡಿಸಿರುವ ಆಲೋಚನೆಗಳ ಸಾರ ಇಲ್ಲಿದೆ. ಐರಿಷ್ ಮಹಿಳೆಯೋರ್ವಳ ಭಾರತದ ಬಗೆಗಿನ ಇಂಗ್ಲಿಷ್ ಬರಹಗಳ ಸಾರಸಂಗ್ರಹ ಕನ್ನಡಿಗರಿಗೆ ಪ್ರಯೋಜನಕಾರಿಯಾದ ರೀತಿಯಲ್ಲಿ ಈ ಪ್ರಬಂಧದಲ್ಲಿ ಒಡಮೂಡಿದೆ.

ಈ ವರೆಗೆ ಒಂದೊಂದೇ ಪ್ರಬಂಧಗಳನ್ನು ಕುರಿತು ವಿಚಾರ ಮಾಡಿದ್ದಾಯಿತು. ಇನ್ನು ಪ್ರಬಂಧಗಳನ್ನು ಒಟ್ಟಾರೆ ಗಮನಿಸಿದಾಗ ತೋರಿ ಬರುವ ಸಾಮಾನ್ಯ ಲಕ್ಷಣಗಳನ್ನು ಹೀಗೆ ಪರಿಭಾವಿಸಬಹುದು:

1) ಪ್ರಬಂಧಕಾರರ ಸ್ವೋಪಜ್ಞತೆ ಮೆಚ್ಚುವಂಥದು. ಒಂದೊಂದೇ ಶ್ಲೋಕದಲ್ಲಿ, ಪದ್ಯದಲ್ಲಿ ಇರುವ ವಿಶಿಷ್ಟಾಂಶಗಳನ್ನು ಹೊರಗೆಡಹಿರುವಲ್ಲಿ ಅವರ ಸ್ವೋಪಜ್ಞತೆ ವ್ಯಕ್ತವಾಗಿದೆ. ವಿಶೇಷವಾಗಿ ಸಂಕಲನದ ಮೊದಲ ಮೂರು ಪ್ರಬಂಧಗಳು ಈ ಮಾತಿಗೆ ಸಾಕ್ಷಿಯಾಗಿವೆ. ಇಷ್ಟೇ ಅಲ್ಲದೆ ಈ ಸ್ವೋಪಜ್ಞತೆಗೆ ಅಭಿವ್ಯಕ್ತಿಯನ್ನು ನೀಡಬಲ್ಲ ಸಮರ್ಥ ವರ್ಣನಾ ಕೌಶಲ ಅವರಿಗೆ ಸಿದ್ಧಿಸಿದೆ. 2) ಪ್ರಬಂಧಕಾರರ ವಿಮರ್ಶೆಯ ಹಾದಿ ಗಂಭೀರವಾದುದು. ತಾವು ಒಪ್ಪದ ವಿಷಯಗಳನ್ನು ನಮ್ರತೆಯಿಂದ ಖಂಡಿಸುತ್ತಾರೆ: ತಮ್ಮ ಅಭಿಪ್ರಾಯಗಳನ್ನು ಅಷ್ಟೇ ನಮ್ರವಾಗಿ ಮಂಡಿಸುತ್ತಾರೆ. ಶ್ರೀ ರಾಮಾಯಣ ದರ್ಶನಂ ಕುರಿತಂತೆ "ಆಧ್ಯಾತ್ಮಿಕ ಹಿನ್ನಲೆಯಿಲ್ಲದೆ, ಕಲೆಗಾಗಿ ಕಲೆ ಕವಿತೆಗಾಗಿ ಕವಿತೆ ಎಂಬ ಜೊಳ್ಳು ನಿಲುವಿನಿಂದ ವಿಮರ್ಶೆಗೆ ಹೊರಡುವವರಿಗೆ ಈ ಮಹಾಕಾವ್ಯ ಗ್ರಾಹ್ಯವಾಗುವುದಿಲ್ಲವೆಂದೆ ಹೇಳಬೇಕು"; ಶೃಂಗಾರ ಶತಕವನ್ನು ಕುರಿತಂತೆ "ಸಾಕಷ್ಟು ವೈವಿಧ್ಯವಿಲ್ಲದಿದ್ದರೂ ಶೃಂಗಾರಶತಕ ರಕ್ತಿ ವಿರಕ್ತಿಗಳ ಪರಿಣಾಮಕಾರಿ ಭಾವಗೀತವಾಗಿದೆ"; ವಿವೇಕಾನಂದರ ಸಂಸ್ಕೃತ ಕವನಗಳನ್ನು ವಿಮರ್ಶಿಸುತ್ತಾ "ಇವುಗಳಲ್ಲಿ ಕಲ್ಪನೆ, ಭಾವನಿರ್ಭರತೆಗಳಿದ್ದರೂ ಸ್ವಲ್ಪಮಟ್ಟಿಗೆ ಕ್ಲಿಷ್ಟತೆಯುಂಟು: ಪಾಂಡಿತ್ಯ ಪ್ರದರ್ಶನಕ್ಕೆ ಸ್ವಾಮಿಜಿ ಪ್ರಯತ್ನಿಸಿದರೇನೋ ಎಂಬ ಸಂಶಯ ಕೆಲವೆಡೆ ಬರುತ್ತದೆ"–ಎಂದು ಹೇಳಿರುವ ಮಾತುಗಳು ಸಮತೂಕ ವಿಮರ್ಶೆಗೆ ಸಾಕ್ಷಿಯಾಗಿವೆ. ಇದು ರಚನಾತ್ಮಕ ವಿಮರ್ಶಾವಿಧಾನ, ಅನುಕರಣೀಯವಾದುದು. 3) ಪ್ರಬಂಧಕಾರರ ಶೈಲಿ ತುಂಬಾ ಹಸನಾದುದು, ಪರಿಷ್ಕೃತವಾದುದು, ಕಾವ್ಯಮಯವಾದುದು, ಸಂಸ್ಕೃತಪದಗಳ ಮಿಶ್ರಣ ಮಿತವಾದುದು. ಶೈಲಿಯಲ್ಲಿ ಆಡಂಬರವಿಲ್ಲದಿದ್ದರೂ ಗಾಂಭೀರ್ಯವಿದೆ. "ಬಿಗಿಯುಂಟು ಕೃತಕತೆಯ, ನಿರ್ಜೀವತೆಯ ಸೋಂಕಿಲ್ಲ. ಕೃಷ್ಣಶಾಸ್ತ್ರಿಗಳ ಶೈಲಿಯನ್ನು ಟೆರಿಲೀನ್ ವಸ್ತ್ರಕ್ಕೆ ಹೋಲಿಸಬಹುದು; ಅದರಲ್ಲಿ ನಯಮಾರ್ದವಗಳಿವೆ, ಹೊಳಪು ಹಗುರತನಗಳಿವೆ: ಆದರೆ

ಅಷ್ಟೇ ಪ್ರಮಾಣದಲ್ಲಿ ಕಸುವು, ಗಟ್ಟಿತನಗಳಿವೆ" ಎಂದು ಶ್ರೀ ವಿ.ಆರ್.ಕೃ. ಅವರ ಶೈಲಿಯನ್ನು ಕುರಿತಂತೆ ಹೇಳಿರುವ ಮಾತುಗಳು ಅಕ್ಷರಶಃ ಶ್ರೀ ಸಿ.ಪಿ.ಕೆ. ಅವರ ಶೈಲಿಗೂ ಅನ್ವಯಿಸುತ್ತವೆ ಎಂದು ಹೇಳಬೇಕು. 4) ಪ್ರಬಂಧಕಾರರ ಸಂಗ್ರಹ ಕೌಶಲ ವಿಶೇಷವಾಗಿ ಮೆಚ್ಚಬೇಕಾದ ಅಂಶ. ಐದು, ಆರು, ಹನ್ನೊಂದು ಮತ್ತು ಹನ್ನೆರಡನೆಯ ಪ್ರಬಂಧಗಳಲ್ಲಿ ಈ ಗುಣವನ್ನು ಕಾಣಬಹುದು. ಸಂಗ್ರಹದಲ್ಲಿಯೇ ಒಂದು ರೀತಿಯ ಪರಿಪೂರ್ಣತೆಯಿದೆ, ಒಪ್ಪವಿದೆ, ಓರಣವಿದೆ. ಹೆಚ್ಚು ವಿಷಯಗಳನ್ನು ಕಡಿಮೆ ಮಾತುಗಳಲ್ಲಿ ಮಂಡಿಸುವ ವಿಧಾನವನ್ನು ಉದ್ದಕ್ಕೂ ಅನುಸರಿಸಿದ್ದಾರೆ. 5) ಪ್ರಬಂಧಗಳಲ್ಲಿ ಬರುವ ಬಹುಪಾಲು ಮಾತುಗಳು ಸೂತ್ರಪ್ರಾಯವಾದುವು, ಸೂಕ್ತಿಪ್ರಾಯವಾದುವು, ಸಂಕ್ಷಿಪ್ತತೆಯಲ್ಲಿ ವಿಸ್ತೃತ ಅರ್ಥ ವ್ಯಾಪ್ತಿಯನ್ನು ಅಡಗಿಸಿಕೊಂಡಿರುವಂಥವು. ನೀರಸ ನಿರೂಪಣೆಗಳಿಗೆ ಎಲ್ಲಿಯೂ ಸ್ಥಾನವಿಲ್ಲ. "ಸಂಸ್ಕೃತದ ದೇವಗಂಗೆಯನ್ನು ಕನ್ನಡದ ನೆಲಕ್ಕೆ ಹರಿಸಿ ತಂದ ಅಭಿನವ ಭಗೀರಥ ಶಕ್ತಿಯಾಗಿ ಕೃಷ್ಣಶಾಸ್ತ್ರಿಗಳು ಸಂಪೂಜ್ಯರಾಗಿದ್ದಾರೆ"; "ಕುವೆಂಪು ಅವರ ದರ್ಶನವಿಮರ್ಶೆಯೆಂದರೆ ಬೆಳಕಿನ ಏಳು ಬಣ್ಣಗಳನ್ನು ವಿಘಟಿಸುವ, ಕದಳೀನಾಳಕ್ಕೆಳೆದು ಮುತ್ತು ರತ್ನಗಳನ್ನೆತ್ತುವ ಪವಾಡ"; "ಕಾದಂಬರಿ ಕಾವ್ಯದ ಮಹತ್ತು ಮೊದಲಬಾರಿಗೆ ಕುವೆಂಪು ಅವರಿಂದ ಪ್ರಕಾಶನಗೊಂಡಿತೆಂದು ಹೇಳಬಹುದು. ಜಾಣ ಕನ್ನಡಕ್ಕೆ ಬಂದು ಬದುಕಿಕೊಂಡ"; "ಶ್ರೀ.ನಂ.ಶ್ರೀಯವರ ಮರಣ ಒಂದು ವ್ಯಕ್ತಿಯ ಮರಣವಲ್ಲ; ಶಕ್ತಿಯ ಮರಣ. ಒಂದು ಪೀಳಿಗೆಯ ಕಣ್ಮರೆ. ಹಳತು – ಹೊಸತರ ನಡುವಣ ಕೊಂಡಿಯೊಂದು ಅವರ ಸಾವಿನಿಂದ ಕಳಚಿಕೊಂಡಿತು; ಕನ್ನಡ ಸಾರಸ್ವತ ಪ್ರಪಂಚ ಅದರಿಂದ ಬಹಳ ರಿಕ್ತವಾಯಿತು"–ಇಂತಹ ಅಚ್ಚುಕಟ್ಟಾದ ವಾಕ್ಯಗಳನ್ನು ಉದ್ದಕ್ಕೂ ಕಾಣಬಹುದು. 6) ಪ್ರಬಂಧ ರಚನೆಯಲ್ಲಿ ಎಲ್ಲೆಲ್ಲಿಯೂ ಇರುವ ಅಚ್ಚುಕಟ್ಟು ತುಂಬಾ ಗಮನಾರ್ಹ. ಪ್ರಬಂಧವನ್ನು –ಅದು ವಿಸ್ತಾರವಾಗಿದ್ದರೆ–ನಾಲ್ಕಾರು ವಿಭಾಗಗಳಾಗಿ ಮಾಡಿಕೊಂಡು ಒಂದೊಂದು ವಿಭಾಗದಲ್ಲಿ ಒಂದೊಂದು ವಿಷಯವನ್ನು ಮಂಡಿಸುತ್ತಾ ಸಾಗುತ್ತಾರೆ. ಉದ್ದಕ್ಕೂ ವೈಜ್ಞಾನಿಕ ವಿಶ್ಲೇಷಣಾಕ್ರಮವನ್ನು ಕಾಣುತ್ತೇವೆ. ವ್ಯರ್ಥವಾದ ಲಂಬನೆಗಾಗಲಿ, ಪುನರುಕ್ತಿಗಾಗಲಿ, ಅಡ್ಡಗೋಡೆಯ ಮೇಲೆ ದೀಪವಿಡುವ ಪ್ರವೃತ್ತಿಗಾಗಲಿ ಎಲ್ಲಿಯೂ ಎಡೆಯಿಲ್ಲ. 7) ಪ್ರಬಂಧಗಳು ವಿಮರ್ಶಾತ್ಮಕ, ವಿಚಾರಾತ್ಮಕ ಅಥವಾ ವಿವರಣಾತ್ಮಕ – ಇವುಗಳಲ್ಲಿ ಯಾವ ಗುಂಪಿಗೆ ಸೇರಿದ್ದರೂ ಸರಿಯೆ, ಎಲ್ಲಿಯೂ ಭಾರ ಎನಿಸುವುದಿಲ್ಲ. ಅನೇಕ ಕಡೆ ಲಲಿತ ಪ್ರಬಂಧಗಳ ಸರಸತೆ ಇಲ್ಲಿ ಮೆರುಗು ಪಡೆದಿದೆ. ಒಂದು, ಮೂರು ಏಳು ಮತ್ತು ಎಂಟನೆಯ ಪ್ರಬಂಧಗಳು ಈ ದಿಕ್ಕಿನಲ್ಲಿ ವಿಶೇಷ ಉಲ್ಲೇಖನೀಯವಾದುವು. "ಚಂದ್ರಿಕಾ ಪ್ರಪಂಚವನ್ನು ಗತಾನುಗತಿಕವಾಗಿ ಬಣ್ಣಿಸಿದ ಕವಿಗಳೇ ನಮ್ಮಲ್ಲಿ ಹೆಚ್ಚು ಮಂದಿ; ಅವರ ಪ್ರಕಾರ ಚಂದ್ರೋದಯವೆಂದರೆ ವೇಶ್ಯಾವಾಟಿಕೆಗಳ ಉದ್ಘಾಟನೆ, ಜಾರೆಯರ ಸಂಭ್ರಮ, ವಿರಹಿಗಳ ಪರಿತಾಪ, ಕುಮುದಗಳ ಅರಳುವಿಕೆ, ಕಮಲಗಳ ನರಳುವಿಕೆ, ಚಕ್ರವಾಕಗಳ ಗೋಳು – ಇವನ್ನೆಲ್ಲ ಅವರು ತಪ್ಪದೆ ತರುತ್ತಾರೆ"– ಎಂಬಲ್ಲಿ ವಿಮರ್ಶೆಯ ಜೊತೆಗೆ ಮಿಳಿತವಾಗಿರುವ ಮೃದುಹಾಸ್ಯ ಮೆಚ್ಚುವಂಥದು. 8) ಪ್ರಬಂಧಗಳ ಆರಂಭ ಹಾಗೂ ಅಂತ್ಯ ವಿಶಿಷ್ಟ, ಸುಂದರವಾದುದು. ವಿಷಯಕ್ಕೆ ಇಳಿಯುವ ಮುನ್ನ ಪರಿಷ್ಕಾರವಾದ ಪೀಠಿಕೆಯನ್ನು ಕಟ್ಟುತ್ತಾರೆ. ಕ್ರಮಕ್ರಮವಾಗಿ ವಿಷಯದೊಳಕ್ಕೆ ಇಳಿಯುತ್ತಾರೆ. ಮುಂದು ಮುಂದಕ್ಕೆ ಓದಿಕೊಂಡು ಹೋಗಬೇಕು ಎಂಬ ಅಭಿರುಚಿಯನ್ನು ಎಲ್ಲ ಪ್ರಬಂಧಗಳ ಆರಂಭವೂ ಕೆರಳಿಸುತ್ತದೆ. ಇನ್ನು ಮುಕ್ತಾಯ ಬಲುಸೋಜಿಗ. ಒಮ್ಮೆ ಮೃದುವಾದ ಹಾಸ್ಯವನ್ನು ಚಿಮ್ಮಿಸುತ್ತಾ ಮುಕ್ತಾಯಗೊಳಿಸಿದರೆ ಮತ್ತೊಮ್ಮೆ ಒಟ್ಟು ಪ್ರಬಂಧದ ಸಾರಸಂಗ್ರಹಣೆ ಮಾಡುತ್ತಾ ಪೂರ್ತಿಗೊಳಿಸುತ್ತಾರೆ. ಒಮ್ಮೆ ಭಾವಪೂರ್ಣವಾಗಿ ತುಂಬು ಮನದಿಂದ ಅಂತ್ಯಕ್ಕೆ ಬಂದರೆ ಮತ್ತೊಮ್ಮೆ ಮಿಂಚಿನಂತೆ ಸೂತ್ರಪ್ರಾಯವಾದ ಮಾತೊಂದನ್ನಾಡಿ ವಿರಮಿಸುತ್ತಾರೆ. ಮೂರು, ನಾಲ್ಕು, ಏಳು, ಎಂಟು, ಒಂಬತ್ತು, ಹನ್ನೊಂದು– ಈ ಪ್ರಬಂಧಗಳ ಮುಕ್ತಾಯವನ್ನು ವಿಶೇಷವಾಗಿ ಗಮನಿಸಬೇಕು. 9) ಪ್ರಬಂಧಕಾರರ ಅನುವಾದ ಶಕ್ತಿ ತುಂಬಾ ಉನ್ನತ ಮಟ್ಟದ್ದು. ಕನ್ನಡದ ಜಾಯಮಾನವನ್ನರಿತು ಇಂಗ್ಲಿಷು – ಸಂಸ್ಕೃತಗಳನ್ನು ಲೀಲಾಜಾಲವಾಗಿ ಅನುವಾದಿಸುವ ಸಾಮರ್ಥ್ಯವುಳ್ಳವರು. ಹತ್ತನೆಯ ಪ್ರಬಂಧದ ಭಾಷೆ ಎಷ್ಟು ಅಕೃತ್ರಿಮವಾಗಿದೆಯೆಂದರೆ ಅವರೇ ಹೇಳಿಕೊಂಡಿರುವುದರಿಂದ ಮಾತ್ರ ಅದೊಂದು ಅನುವಾದ ಎಂದು ಗೊತ್ತಾಗುವುದು.

ಒಟ್ಟಿನಲ್ಲಿ ಹೇಳುವುದಾದರೆ ಕವಿತೆ, ವಿಮರ್ಶೆ, ಅನುವಾದಗಳ ಮೂಲಕ ಆಧುನಿಕ ಕನ್ನಡ ಸಾಹಿತ್ಯದ

ಕ್ಷೇತ್ರದಲ್ಲಿ ದೊಡ್ಡ ಹೆಸರು ಮಾಡಿರುವ ಶ್ರೀ ಸಿ.ಪಿ.ಕೆ. ಅವರ ಈ ಪ್ರಬಂಧ ಸಂಕಲನ ವೈವಿಧ್ಯಪೂರ್ಣವಾದುದು. ಅವರ ಪರಿತವಾದ ವಿಮರ್ಶನ ಶಕ್ತಿಯನ್ನೂ, ಸ್ವೋಪಜ್ಞತೆಯನ್ನೂ ಸುಪ್ರಕಟವಾಗಿಸುವಂಥದು. ಸಂಕಲನದ ಶೀರ್ಷಿಕೆ 'ಪರಿಭಾವನೆ' ತುಂಬಾ ಸಾರ್ಥಕವಾಗಿದೆ. ವಿದ್ಯಾರ್ಥಿಗಳಿಗೂ ಪ್ರಾಚೀನ ಸಾಹಿತ್ಯಾಭ್ಯಾಸಿಗಳಿಗೂ ಇದೊಂದು ಕೈದೀವಿಗೆ.

—**ಕೆ. ಅನಂತರಾಮು**

ಮೂರು ಕವನ ಸಂಕಲನಗಳು

ಅಗೆದು ತೆಗೆದದ್ದು, ಕವಿ: ಎಚ್. ವಿ. ಶ್ರೀನಿವಾಸ ಶರ್ಮ; ಅಭಿವ್ಯಕ್ತಿ ಪ್ರಕಾಶನ,ಬೆಂಗಳೂರು; ಪುಟ: 31. ಕ್ರಯ: 3.00.

ಬಾಗಿಲು ಬಡಿವ ಜನ, ಕವಿ: ಯಚ್. ಎಸ್. ವೆಂಕಟೇಶಮೂರ್ತಿ. ಸಂಪದ ಪ್ರಕಾಶನ, ಬೆಂಗಳೂರು; ಪುಟ: 35. ಕ್ರಯ: 3.00.

ಬೆಂಕಿ– ಕವಿ: ಸೋಮಶೇಖರ ಇಮ್ರಾಪೂರ; ಪ್ರಕಾಶಕರೂ ಅವರೇ; ಪುಟ 74: ಕ್ರಯ: 3.00.

ಕವನ ಸಂಕಲನವನ್ನು ಪ್ರಕಟಿಸಿ, ಪ್ರಚಾರ ನಡೆಸಿ, ಟೀಕೆ–ಟಿಪ್ಪಣಿ, ವಿಮರ್ಶೆ, ಅಭಿಪ್ರಾಯ, ಪ್ರತಿಕ್ರಿಯೆಗಳನ್ನು ಹುಟ್ಟಿಸಿಕೊಂಡು ತೃಪ್ತಿ ಪಡೆಯುವುದೇ ಫ್ಯಾಶನ್ ಆಗಿರುವ ಈ ಕಾವ್ಯಕ್ರಾಂತಿಯ ಕಾಲದಲ್ಲಿ, ಅಸಂಖ್ಯಾತ ಕವನಸಂಗ್ರಹಗಳು ಸಾಹಿತ್ಯದೇವಿಯ ಮಡಿಲನ್ನು ತುಂಬುತ್ತಿರುವ ಬಗ್ಗೆ ಸಂತೋಷವೆನಿಸಿದರೂ, ಈ ಪೈರಿನಲ್ಲಿ ಕೆಲವು ಕಳೆಗಳೂ ಹುಟ್ಟಿಕೊಳ್ಳುವುದನ್ನು ನೆನೆಸಿಕೊಂಡಾಗ ವಿಷಾದವಾಗುತ್ತದೆ. ಸತ್ವ, ವಸ್ತು, ಭಾಷೆ, ಶೈಲಿಗಳಲ್ಲಿ ಭಿನ್ನತೆಯಿರುವ ನಾಲ್ಕಾರು ಸಂಗ್ರಹಗಳನ್ನು ವಿಮರ್ಶೆಗಾಗಿ ಒಟ್ಟಿಗೆ ಎತ್ತಿಕೊಂಡಾಗಲಂತೂ ವಿಮರ್ಶಕನು ತನ್ನನ್ನು ತಾನೇ ಗೊಂದಲದಲ್ಲಿ ಕೆಡವಿಕೊಳ್ಳುತ್ತಾನೆ. 'ಅಗೆದು ತೆಗೆದದ್ದು'. 'ಬಾಗಿಲು ಬಡಿವ ಜನ' ಮತ್ತು 'ಬೆಂಕಿ' ಈ ಮೂರು ಕವನ ಸಂಕಲನಗಳು ಅನುಕ್ರಮವಾಗಿ ಕವಿಗಳ ಒಂದು, ಎರಡು ಹಾಗೂ ಮೂರನೇ ಸಂಗ್ರಹಗಳಾಗಿದ್ದು ಮೊದಲ ಸಂಗ್ರಹ ನಿರಾಶೆಯನ್ನು, ಉಳಿದೆರಡು ಸಂಗ್ರಹಗಳು ಆಶೆಯನ್ನಲ್ಲವಾದರೂ ಭರವಸೆಯನ್ನು ಹುಟ್ಟಿಸುವಂತಿದೆ.

ಎಚ್. ವಿ. ಶ್ರೀನಿವಾಸ ಶರ್ಮ ಅವರ 'ಅಗೆದು ತೆಗೆದದ್ದು' ಕವನ ಸಂಗ್ರಹಕ್ಕೆ ಮುನ್ನುಡಿ ಬರೆಯುತ್ತಾ ಶ್ರೀ ಆರ್. ಸಿ. ಕುಲಕರ್ಣಿ ಅವರು ಸದ್ಯದ ಕನ್ನಡ ಕಾವ್ಯ ಸತ್ವದಿಂದ ಗಮನ ಸೆಳೆಯುವುದಕ್ಕಿಂತ ಹೆಚ್ಚಾಗಿ ಸ್ವರೂಪದಿಂದ ಆಕರ್ಷಿಸಹತ್ತಿದೆ ಎಂದಿದ್ದಾರೆ. ಆದರೆ 'ಅಗೆದು ತೆಗೆದದ್ದು' ಕವನ ಸಂಕಲನದಲ್ಲಿ ಸತ್ವ, ಸ್ವರೂಪ ಯಾವುವೂ ಇಲ್ಲವೆಂಬುದು ದುರದೃಷ್ಟಕರ. ಬಹುತೇಕ ಕವನಗಳು (ಉದಾ: ಕ್ರಿಕೆಟ್, ಎಂದು ಬರುವುದೊ ಬಿಸಿಲು) ಕಾವ್ಯಶಕ್ತಿಯಿಲ್ಲದ ಕೇವಲ ವಾಕ್ಯವೃಂದಗಳಾಗಿದ್ದು ಓದುಗರಿಗೆ ತಲೆನೋವು ಬರಿಸುತ್ತವೆ. ಈ ಕೆಳಗೆ ಕಾಣಿಸಿದಂಥ ಕೆಲವು ಭಾಗಗಳು ವ್ಯಾಸ ಸಮಸ್ಯೆಗಳಾಗಿವೆ:–

ಮೈಗೆ ಮೈಹತ್ತಿ ಒಂದೆ ಮೈರಣರಂಗ ಫುಟ್‌ಪಾತು
ಕೆದರಿ ಬಿದ್ದ ಜೀವ ಹೆಣ ಅಸ್ತವ್ಯಸ್ತ ಗುಸುಗುಸು
ವ್ಯವಹಾರ ಕಾಳಸಂತೆ ರೊಚ್ಚಿಗೆದ್ದ
ಗೆಜ್ಜಲು ಮೈ ಎಲೆ ಉದುರಿ ಬೋಳು ಮರ ಸೊಗಡು

(ನಟ್ಟಿರುಳು)

ಅಂಕಣಂಕಣಕು ನೆಯ್ದು ತೂಗು ಬಲೆ
ಕತ್ತಲೆಯೊ ಒಳಗೂಡು ಕಪ್ಪು ಕಪ್ಪೋ ಕಪ್ಪು.

ತೂಕಡಿಯೊಂದೇ ಅಪ್ಪ ಕಲಿಸಿದ ಪಾಠ
ಕೊಳ್ಳಿ ಹಿಡಿದು ನಡೆಯೋ ಬೆಳಕಾಗಲಿ
ಸುಡಬೇಕು ಐಲೆಯ ತಳ್ಳಿ ಸುಟ್ಟು

(ಶ್ರೀಸಾಮಾನ್ಯನ ಹಾಡು)

......ಒಂದೆ ಕೈಕಾಲು ಮುದುರಿ
ನುರುಕಿದ ಗೂಡೆ. ಅವನ ಪಾರ್ಸಲ್ಲು
ಅವನೆ. ಯಾರದು ಲೇಪಿಗೆ ಕಾದಿತ್ತು ಮೂಳೆ.
ಗುಜ್ಜರದ ಲಾರಿ
ಅದಕಾವ ಚಳಿ.

(ಎಂದು ಬರುವುದೊ ಬಿಸಿಲು)

ಇವುಗಳಲ್ಲಿ 'ಹದ್ದು ಹಾರುವ' ಮತ್ತು 'ನನಗೇಕೆ ಊರವರ ಸುದ್ದಿ?' ಒಳ್ಳೆಯ ಉದಾಹರಣೆಗಳಾಗಿವೆ. 'ಹೆಮ್ಮೆ-ನೆರಳಿನಂತಹ ಚರಮಗೀತೆಯಾದ 'ತೀ. ನಂ. ಶ್ರೀ' ಒಂದು ವಿಶಿಷ್ಟ ಕವನ. ಈ ಕವಿ ಇಂಥ ಪದ್ಯಗಳನ್ನು ಬರೆದಾಗ, ಯಾರಿಗಾಗಿ ಅಂದು ತೆಗೆದು ಸಂಗ್ರಹಿಸಿದರು ಎನ್ನುವುದು ಪ್ರಶ್ನೆಯಾಗಿಯೇ ಉಳಿಯುತ್ತದೆ.

'ಬಾಗಿಲು ಬಡಿವ ಜನ', ಎಚ್. ಎಸ್. ವೆಂಕಟೇಶಮೂರ್ತಿ ಅವರನ್ನು ಇಂದಿನ ಗಮನಾರ್ಹ ಕವಿಗಳ ಸಾಲಿನಲ್ಲಿ ನಿಲ್ಲಿಸಬಲ್ಲಂಥ ಕವನ ಸಂಗ್ರಹ. 'ಅವರಿವರ ಮಾತು ಕೇಳಬೇಡಿ' (ಪುಟ 14) ಎಂದು ಜನರನ್ನು ಎಚ್ಚರಿಸುವ ಕವಿ ತಾನು ತಾನೇ ಆಗಿ ಇರಲು ಬಯಸುತ್ತಾನೆ. ತನ್ನತನವನ್ನು ಮುಚ್ಚಿಕೊಂಡು ಹೊಸ ಅವಕಾಶವನ್ನು ಹೊಡೆದು ನಿಲ್ಲಿಸುವ ವ್ಯಕ್ತಿಗಳನ್ನು ಪ್ರತಿಭಟಿಸುವ ಕವನ ಜೀವನವನ್ನು. 'ಬಾಗಿಲು ಮುಚ್ಚಿ ಏನು ಸುಖ? ಬಾಗಿಲು ಇರೋದೇ ತೆರೆಯೋಕೆ. ಮುಚ್ಚೋಕೆ' (ಪುಟ 14) ಎನ್ನುವನು.

ಸೋಂಬೇರಿತನಕ್ಕೆ ಗದ್ದ ಬೋಳಿಸದೆ
ನಿಮ್ಮಜ್ಜ ಸನ್ಯಾಸಿಯಾದದ್ದು
ಗತಿಯಿಲ್ಲದ್ದಕ್ಕೆ ಗುಡಿಸಲಲ್ಲಿ ಗಂಜಿ ಕುಡಿದು
ನಿಮ್ಮ ಮುತ್ತಜ್ಜ ಸರಳ ಬಾಳ ಬಾಳಿದ್ದು
ಬಲ್ಲೆ. (ಸುಪ್ರಭಾತ)

ಎಷ್ಟೋ ವೇಳೆ ಕವಿ ಅನಿವಾರ್ಯವಾಗಿ ಅನಿರೀಕ್ಷಿತವಾಗಿ ಸಮಾಜದಲ್ಲಿ ಎತ್ತರ ಸ್ಥಾನ ಪಡೆಯುವವರ ಬಗ್ಗೆ ನಗೆಚಾಟಿ ಹಾರಿಸಿದ್ದಾರೆ.

ಶ್ರೀ ಮೂರ್ತಿ ಅವರ ಶೈಲಿ 'ಪ್ರಿಯ ಓದುಗರೇ ಶೈಲಿ' ಆಗಿದ್ದು, ಹೆಚ್ಚಿನ ಕವನಗಳನ್ನು ಇವರು ಕಥೆ ಹೇಳುವಂತೆ ಆರಂಭಿಸಿದ್ದಾರೆ. (ಉದಾ: ಕತ್ತಿ ಕೊಡ್ಲಿ, ಗೌಡ, ಕಟಿಗೆ). ಕವನಗಳ ಆರಂಭದಲ್ಲಿ ಕವಿ ಓದುಗರನ್ನು ಸಂಬೋಧಿಸುವ ರೀತಿಯೂ ಸೊಗಸಾಗಿದೆ. (ಉದಾ: ಧಾರಾವಾಹಿ, ಮತ್ತು, ಸುದರ್ಶನ, ಒಂದು ಸವಾಲು. ಹೊಸಮನೆ).

ಆಡುಮಾತಿನ ಶಬ್ದಗಳನ್ನು ಎರಡು ಕಡೆ ಎರಡರ್ಥ ಬರುವಂತೆ ದುಡಿಸಿಕೊಳ್ಳುವ ಕವಿಯ ಕೌಶಲ ಮೆಚ್ಚುವಂಥದು.

ಉದಾ: ಹೂ.. ಕೇಳಿ, ಇದೂ ಒಂದು ಕೇಳಿ (ಧಾರಾವಾಹಿ)
ಬಿಸಿಲಿಗೆ ಕಾಯ್ತಿತ್ತು ನೀರಿಗೆ ಕಾಯ್ತಿತ್ತು (ಧಾರಾವಾಹಿ)
ಕಡಿಯುತ್ತಿದ್ದಾನೆ,
ಬಾಯಲ್ಲಿ ಕಡಿಯುತ್ತಿದ್ದಾನೆ (ಕೊಡ್ಲಿ, ಗೌಡ, ಕಟಿಗೆ)
ಅವಳೆದೆಗೆ ' Pet ' ಆಗಿ (ಸುದರ್ಶನ)

ಆದರೆ,

ಮುತ್ತಿ
ಕ್ಕಿ, (ಪುಟ 9)
ಮಲಗಿ
ಸಿ ಮಲಗಿ, (ಪುಟ 13)
ಗ
ರತಿಯರ (ಪುಟ 17)
ಪೂ
ಜಾರಿಯ (ಪುಟ 18)
ಬಿಚ್ಚಿ
ದ (ಪುಟ 25)

ಮುಂತಾದ ಸ್ಥಳಗಳಲ್ಲಿ ಶಬ್ದಗಳಿಗೆ ಕವಿ ಚಿತ್ರಹಿಂಸೆ ಮಾಡಿದುದರ ಔಚಿತ್ಯವೇನೋ ಅರ್ಥವಾಗುವುದಿಲ್ಲ.

ಒಟ್ಟಿನಲ್ಲಿ ಅನುಭವದ ಪ್ರಾಮಾಣಿಕ ಅಭಿವ್ಯಕ್ತಿಗೆ ಆಡುಮಾತುಗಳನ್ನೇ ಉಪಯೋಗಿಸಿಕೊಂಡ ಕವಿ ತಮ್ಮ ಪ್ರಯತ್ನದಲ್ಲಿ ಕೊಂಚ ಯಶಸ್ಸನ್ನೂ ಪಡೆದಿದ್ದಾರೆ. ಪುಸ್ತಕಕ್ಕೆ ಯಾರದೇ ಮುನ್ನುಡಿಯನ್ನೂ ಬರೆಸದ ಕವಿ ಪ್ರಚಾರಪ್ರಿಯರಲ್ಲವಾಗಿದ್ದು, ಇತರರ ಪ್ರಭಾವ– ನೆರಳುಗಳಿಂದ ತಪ್ಪಿಸಿಕೊಂಡು ಸ್ವಂತವಾಗಿ ಬೆಳೆಯುತ್ತಾರೆಂದು ನಿರೀಕ್ಷಿಸಬಹುದಾಗಿದೆ.

'ಬೆಂಕಿ'ಯ ಸೋಮಶೇಖರ ಇಮ್ರಾಪೂರರು ಈ ಮುನ್ನವೇ ಎರಡು ಕವನ ಸಂಕಲನಗಳನ್ನು ಪ್ರಕಟಿಸಿ ಕಾವ್ಯಕ್ಷೇತ್ರದಲ್ಲಿ ಹೆಸರು ಪಡೆದವರು. ನವೋದಯ ಕಾವ್ಯವನ್ನಾಗಲೀ ನವ್ಯಕಾವ್ಯವನ್ನಾಗಲೀ ಪುರಸ್ಕರಿಸದೆ ಅಥವಾ ತಿರಸ್ಕರಿಸದೆ ಇರುವ ಇಮ್ರಾಪೂರರು ಹಳೆಯದೆಲ್ಲ ತ್ಯಾಜ್ಯ ಅಥವಾ ಹೊಸದೆಲ್ಲ ಪೂಜ್ಯ ಎಂದು ನಂಬದೆ ತಮ್ಮ ಮನಸ್ಸಿಗೆ, ಅಂತಸ್ಸಾಕ್ಷಿಗೆ ನೇರವಾಗಿ ಬರೆಯುವವರು ಎಂಬುದನ್ನು ಇವರ ಕವನಗಳಿಂದ ಗುರುತಿಸಬಹುದು.

'ಸಂಕ್ರಮಣ'ದ 41ನೇ ಸಂಚಿಕೆಯಲ್ಲಿ ಡಾ. ಜಿ. ಎಸ್. ಶಿವರುದ್ರಪ್ಪನವರು ತಮ್ಮ 'ಈ ಮೂರು ವರ್ಷಗಳ ಕವಿತೆಗಳು' ಲೇಖನದಲ್ಲಿ "ಇಮ್ರಾಪೂರರ 'ಬೆಂಕಿ'ಯಲ್ಲಿ ಕಾವು ಸಾಲದು" ಎಂದಿರುವುದು ಒಪ್ಪಿಕೊಳ್ಳಬೇಕಾದ ಸತ್ಯ. ನನ್ನ ಅಭಿಪ್ರಾಯದಲ್ಲಿ 'ಬೆಂಕಿ'ಯ ಕವನಗಳು ಜಾಣತನದ ಕವನಗಳಾಗಿದ್ದು, ಓದುಗರನ್ನು ಯಾವ ರೀತಿಯ ಚಿಂತನೆಗೂ ಎಳೆಯುವುದಿಲ್ಲ. ಕವಿ ಗ್ರಾಂಥಿಕ ಮತ್ತು ಆಡುಮಾತಿನ ಶೈಲಿಗಳಲ್ಲಿ ಸಾಮರಸ್ಯ ಸಾಧಿಸ ಹೊರಟು ವಿಫಲರಾಗಿದ್ದಾರೆ ಎಂಬುದಕ್ಕೆ 'ಜವಾಬ್ದಾರಿ' 'ಯುಗಾದಿ', 'ಬಾ ಅಜ್ಜಾ' ಮೊದಲಾದ ಕವನಗಳು ಆಡುಮಾತಿನ ಶೈಲಿಯಲ್ಲಿ ಮತ್ತು 'ಕವಿತಾ' 'ನವ್ಯಕವಿ' ಮುಂತಾದವು ಶುದ್ಧ ಗ್ರಾಂಥಿಕಶೈಲಿಯಲ್ಲಿ ಬರೆಯಲ್ಪಟ್ಟುದೇ ಉದಾಹರಣೆಯಾಗಿದೆ. 'ದುರ್ದೈವ' 'ಸ್ವಗತ' 'ಪಾತಾಳ ಪಯಣ' ಕವನಗಳಲ್ಲಿ ಕವಿ ಬದುಕಿನ ಹೋರಾಟದ ಅರ್ಥವನ್ನರಿಯಲು ಸಾಹಸಪಟ್ಟಿದ್ದಾರೆ. 'ಯುಗಾದಿ' ದೇಶದ ದಾರಿದ್ರ್ಯವನ್ನು ಚಿತ್ರಿಸಿದರೆ, 'ವೇದಾಂತ' ಮತ್ತು 'ಬಾ ಅಜ್ಜಾ' ಕವನಗಳು ಕವಿಯ ವಿಡಂಬನೆಯ ದೃಷ್ಟಿಗೆ ಸಾಕ್ಷಿಗಳಾಗಿವೆ. ಇದೇ ಸಂಗ್ರಹದಲ್ಲಿ 'ಬಾ ಅಜ್ಜಾ' ಆಡುಮಾತಿನ ಭಾಷೆಯಲ್ಲಿ ಬರೆಯಲ್ಪಟ್ಟ ಉತ್ತಮ ಕವನವಾಗಿದ್ದು ಚಂದ್ರಶೇಖರ ಕಂಬಾರರ ಕವನಗಳನ್ನು ನೆನಪಿಗೆ ತರುತ್ತದೆ. ಒಟ್ಟಿನಲ್ಲಿ ಇಂದಿನ ಕಾವ್ಯ ಪ್ರಪಂಚದಲ್ಲಿ ಇಮ್ರಾಪೂರರು ತಮ್ಮದೇ ಆದ ಸ್ಥಾನವನ್ನು ಗಳಿಸಿಕೊಂಡಿದ್ದರೂ ಅವರ ಮುಂದಿನ ಕಾವ್ಯಮಾರ್ಗ ಯಾವುದೆಂಬುದು ಅಸ್ಪಷ್ಟವಾಗಿಯೇ ಉಳಿದಿದೆ.

—ಶಂ. ಸ. ಐತಾಳ

ಮಳಲಿ ಗಿಡ್ಡಮ್ಮ, ಸಂ: ಎಂ. ಸಿ. ವಸಂತಕುಮಾರ್ ; ಪ್ರ : ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ; ಪುಟ. ೯೪ ; ಬೆಲೆ : ೪-೦೦ (೬-೦೦) ; ೧೯೭೦.

ಜಾನಪದ ಇತ್ತೀಚಿನ ದಿನಗಳಲ್ಲಿ ವಿಶೇಷ ಅಧ್ಯಯನದ ವಿಷಯವಾಗುತ್ತಿದೆ. ಕನ್ನಡದಲ್ಲಿ ಇದರ ವೈಜ್ಞಾನಿಕ ದೃಷ್ಟಿ ಬಂದದ್ದು ಈಚೆಗಾದರೂ, ಸಂಗ್ರಹದ ಕಾರ್ಯಕ್ಕೆ ಏನಿಲ್ಲವೆಂದರೂ ಒಂದು ಶತಮಾನದ ಇತಿಹಾಸವಿದೆ. ಅಭಿರುಚಿ ಅಭಿಮಾನದಿಂದಲೋ ಹವ್ಯಾಸದೃಷ್ಟಿಯಿಂದಲೋ ಹಲವರು ಕೆಲಸ ಮಾಡಿದ್ದಾರೆ. ಮಾಡುತ್ತಿದ್ದಾರೆ. ನಮ್ಮ ಜಾನಪದ ಸಂಗ್ರಹಕಾರರನ್ನೆಲ್ಲ ಮೂರು ವರ್ಗ ಮಾಡಬಹುದು: ಒಂದು. ಜಾನಪದದ ಶಾಸ್ತ್ರೀಯ ಅಭ್ಯಾಸವಿರದಿದ್ದರೂ ಜಾನಪದದ ಕೆಲವು ಭಾಗಗಳನ್ನಾದರೂ ಜನಪ್ರಿಯಗೊಳಿಸುವುದಕ್ಕೆ ಕಾರಣರಾದವರು; ಎರಡು. ಹವ್ಯಾಸಿ ಸಂಗ್ರಹಕಾರರು; ಮೂರು. ಜಾನಪದ ಶಾಸ್ತ್ರೀಯ ಅಭ್ಯಾಸ, ವೈಜ್ಞಾನಿಕ ಒಳನೋಟಗಳೊಡನೆ ಕೆಲಸ ಮಾಡಿದ ಸಿದ್ಧಾಂತ ಸಂಗ್ರಹಕಾರರು. ಜಾನಪದವನ್ನು ಅದರ ಸರ್ವಮುಖಗಳಲ್ಲಿಯೂ ನೋಡಿ ತಾತ್ವಿಕವಾಗಿ ಜಿಜ್ಞಾಸೆ ಮಾಡಿದವರು – ಬೇರೆಲ್ಲೆಯಂತೆ ಇಲ್ಲಿಯೂ ವಿರಳರಾದವರು. ಇವುಗಳಲ್ಲಿ ಮೂರನೇ ಪಂಕ್ತಿಯಲ್ಲಿ ಕಾಣಸಿಕೊಳ್ಳುತ್ತಾರೆ ಶ್ರೀ ಎಂ. ಸಿ. ವಸಂತಕುಮಾರ್ ಅವರು.

ಶ್ರೀ ವಸಂತಕುಮಾರ್ ಅವರು ಜಾನಪದದಲ್ಲಿ ಕೆಲಸ ಮಾಡುತ್ತಿರುವ ತರುಣ ಪೀಳಿಗೆಯ ಮುಖ್ಯರಲ್ಲಿ ಒಬ್ಬರು: ಜಾನಪದವನ್ನು ವೈಜ್ಞಾನಿಕ ವಿಷಯವನ್ನಾಗಿ ನೋಡಬಲ್ಲ, ಅದರ ಸಿದ್ಧಾಂತಪರ ವಿಚಾರಗಳನ್ನು ಅರಿತಿರುವ ವಿದ್ವಾಂಸರು. ಅವರು ಜಾನಪದವನ್ನು ಸಂಗ್ರಹಿಸುವ ಮೂಲ ಕೆಲಸದೊಡನೆ, ವೈಜ್ಞಾನಿಕ ಸಂಪಾದನಾ ಕಾರ್ಯವನ್ನೂ ವಿಶ್ಲೇಷಣೆಯನ್ನೂ ಜೊತೆ ಜೊತೆಗೆ ರೂಢಿಸಿಕೊಂಡು ಬಂದವರು. ಈಗಾಗಲೇ ಇವರ ಎರಡು ಗ್ರಂಥಗಳು ಪ್ರಕಟವಾಗಿವೆ. 'ಮಳಲಿ ಗಿಡ್ಡಮ್ಮ' ಇವುಗಳಲ್ಲಿ ಒಂದಾಗಿದ್ದು, ಆ ರೀತಿಯ ಪುಸ್ತಕಗಳಲ್ಲಿ ಅದು ಪ್ರಥಮವಾದುದಾಗಿದೆ. ಅವರ ಇನ್ನೊಂದು ಗ್ರಂಥ 'ಕೋಲು ಪದಗಳು' ಕೂಡ ವಿಶಿಷ್ಟರೀತಿಯ ಸಂಕಲನವಾಗಿದ್ದು, ಆ ಬಗೆಯ ಸಂಗ್ರಹಗಳಲ್ಲಿ ಅದೂ ಮೊದಲನೆಯದೇ ಆಗುತ್ತದೆ. ಹೀಗೆ ಎರಡು ಪ್ರಥಮಗಳನ್ನು ಸಾಧಿಸಿರುವ ವಸಂತಕುಮಾರ್ ಅವರು ಜನಪದ ಬೇಸಾಯ, ಜನಪದ ವೈದ್ಯ ಮೊದಲಾದ ಅಲಕ್ಷಿತ ಕ್ಷೇತ್ರಗಳ ಕಡೆಗೂ ಗಮನ ಹರಿಸಿ ಆ ಸಂಬಂಧಿಯಾದ ಗ್ರಂಥಗಳನ್ನು ಸಿದ್ಧಗೊಳಿಸಿದ್ದಾರೆ. ಇವುಗಳಲ್ಲದೆ ಕಥಾಗೀತೆಗಳ ಸಂಕಲನವೊಂದು ಅವರಲ್ಲಿದೆ. ಹೀಗೆ ಹಲವಾರು ರೀತಿಯಲ್ಲಿ ಕೆಲಸ ಮಾಡುತ್ತಿರುವ ಇವರು ಜಾನಪದ ಅಧ್ಯಯನ ಕ್ಷೇತ್ರದಲ್ಲಿ ವಿಶೇಷ ಹೆಸರಾಗಿ ಉಳಿದುಕೊಳ್ಳುವ ಸಾಧ್ಯತೆಯಿದೆ.

ಶ್ರೀ ವಸಂತ ಕುಮಾರರ 'ಮಳಲಿಗಿಡ್ಡಮ್ಮ' ಗೀತಸಂಕಲನ. ಕ್ಷೇತ್ರದೇವತೆಯೊಂದನ್ನು ಕೇಂದ್ರವಾಗಿಟ್ಟುಕೊಂಡು ಅದರ ಸುತ್ತ ಜನ ಜೀವನದಲ್ಲಿ ಹಾಸುಹೊಕ್ಕಾಗಿ ಹೆಣೆದುಕೊಂಡಿರುವ ನಂಬಿಕೆ, ಸಂಪ್ರದಾಯ, ಪದ್ಧತಿ, ಗೀತೆ, ಕಥೆ ಮೊದಲಾದವುಗಳನ್ನು ಸಂಗ್ರಹಿಸಿಕೊಡುವ ವಿಶೇಷದೃಷ್ಟಿಕೋನದ ಅಪೂರ್ವಗ್ರಂಥ. ಮಳಲಿಗಿಡ್ಡಮ್ಮನೇ ಆ ಕ್ಷೇತ್ರದ ದೇವತೆ; ಅವಳ ಬಗ್ಗೆ ಹರಡಿಕೊಂಡಿರುವ ಕಥೆಯೇ ಇಲ್ಲಿನ ವಸ್ತು. ಜನಪದರ ಮೇಲಿನ ಈ ದೇವತೆಯ ಅಸಾಧ್ಯ ಪ್ರಭಾವವನ್ನೂ ಅದನ್ನು ಕುರಿತಾದ ಜನತೆಯ ಶ್ರದ್ಧೆ, ನಿಷ್ಠೆ, ಭಕ್ತಿಗಳನ್ನೂ ಅತ್ಯುತ್ತಮ ರೀತಿಯಲ್ಲಿ ಇದು ಪರಿಚಯಿಸುತ್ತದೆ. ಜನತೆಯ ಜೀವಂತ ಸಂಸ್ಕೃತಿಯೊಂದು ಇದರಲ್ಲಿ ತೆರೆದುಕೊಂಡಿದೆ. ಸಂಸ್ಕೃತಿಯನ್ನು ಅದರ ನಿರ್ದಿಷ್ಟ ಮುಖದಲ್ಲಿ ನೋಡುವ ಈ ಕೃತಿ ಸಾಹಿತ್ಯಿಕವಾಗಿ ಮಾತ್ರವಲ್ಲದೆ, ಮಾನವಶಾಸ್ತ್ರೀಯವಾಗಿಯೂ ಮುಖ್ಯವೆನಿಸುತ್ತದೆ. ಕನ್ನಡ ಜನಪದ ಸಾಹಿತ್ಯದ ಅತ್ಯುತ್ತಮ ಸಂಗ್ರಹಗಳಲ್ಲಿ ಒಂದಾಗಿರುವ ಇದು, ಈ ತೆರನಾದ ಸಂಗ್ರಹ ಸಂಪಾದನೆ ಅಧ್ಯಯನಗಳಿಗೆ ಮಾದರಿಯೊಂದನ್ನು ಒದಗಿಸಿದೆ.

ಈ ಗೀತ ಸಂಕಲನದಲ್ಲಿ ಗಿಡ್ಡಮ್ಮನ ವಿವಿಧ ಮುಖಗಳನ್ನು ಪರಿಚಯಿಸುವ ನಾನೂರಕ್ಕೂ ಹೆಚ್ಚು ಗೀತೆಗಳಿವೆ. ಅಲ್ಲೊಂದು ಇಲ್ಲೊಂದು ಬರುವ ನಾಲ್ಕಾರು ಚೌಪದಿಗಳನ್ನು ಬಿಟ್ಟರೆ ಇಲ್ಲಿನ ಉಳಿದ ಗೀತೆಗಳೆಲ್ಲ ತ್ರಿಪದಿಗಳು. ದೈನಂದಿನ ಜೀವನದ ಏಕನಾದದಿಂದ ತಪ್ಪಿಸಿಕೊಳ್ಳುವುದಕ್ಕೋಸ್ಕರ ಜನಪದ ಸಾಹಿತ್ಯವನ್ನು ಮಾಧ್ಯಮವನ್ನಾಗಿ ಮಾಡಿಕೊಂಡ ಹದಿನೇಳು ಮಂದಿ ಸಾಮಾನ್ಯ ಗೃಹಿಣಿ ಗೃಹಸ್ಥರಿಂದ ಇಲ್ಲಿನ ಸಾಮಗ್ರಿಯನ್ನೆಲ್ಲ ಸಂಗ್ರಹಿಸಲಾಗಿದೆ. ವೈವಿಧ್ಯಪೂರ್ಣವಾದ ಇಲ್ಲಿನ ಎಲ್ಲ ಗೀತೆಗಳನ್ನು ವಸ್ತು

ಮತ್ತು ಭಾವದ ದೃಷ್ಟಿಯಿಂದ ಹದಿಮೂರು ಭಾಗಗಳನ್ನಾಗಿ ಮಾಡಿಕೊಳ್ಳಲಾಗಿದ್ದು, ವೈಜ್ಞಾನಿಕ ಸಂಪಾದನೆಗೊಂದು ಉತ್ತಮ ಸಾಕ್ಷಿಯಾಗಿದೆ. ಮೊದಲ ಭಾಗದಲ್ಲಿ ಗಿಡ್ಡಮ್ಮ ಮಳಲಿಗೆ ಬಂದು ನೆಲಸಿದ ಕಥಾಭಾಗ ಬರುತ್ತದೆ. ದೇವತೆಯಲ್ಲಿ ಜನರು ತಮಗೆ ಬೇಕಾದುದನ್ನು ಕೇಳಿಕೊಳ್ಳುವುದು ಪ್ರಾರ್ಥನೆಗಳಲ್ಲಿ ಹರಿದಿಕೊಂಡಿದೆ. ಹರಕೆ ಭಾಗದಲ್ಲಿ ಕಾರಣಾಂತರದಿಂದ ದೇವರ ಸನ್ನಿಧಿಗೆ ಬರಲಾರದವರು ದೂರದಿಂದಲೆ ತಮ್ಮ ಹರಕೆಯನ್ನು ಅರ್ಪಿಸಿಕೊಳ್ಳಬೇಕೆಂದು ಕೋರಿಕೊಳ್ಳುವುದಿದೆ. ಮುಂದಿನ ಸರ್ಪ ಭೂಷಿತೆ, ದಂಡನೆ, ಇತರ ಗೀತೆಗಳು, ದೊಡ್ಡೋಳು ದೊರೆಗಡ್ಡಿ, ಸಣ್ಣಗುಂಡಿನೋಳೆ, ದೊಡ್ಡಬೀದೀಲಿ ಮೆರೆಯೋಳೆ ಮೊದಲಾದ ಭಾಗಗಳಲ್ಲಿ ದೇವಿಯ ಮತ್ತು ಜನತೆಯ ಭಕ್ತಿಭಾವದ ಹಲವಾರು ಸ್ತರಗಳ ವರ್ಣನಾಭಾಗ ತೆರೆದುಕೊಳ್ಳುತ್ತದೆ. ಕಾಲವ್ವ ಮತ್ತು ನರಸಯ್ಯರ ಭಾಗಗಳು ಆಯಾಯ ವ್ಯಕ್ತಿಗಳನ್ನು ಕುರಿತ ಮಾಹಿತಿಯನ್ನು ಒದಗಿಸುತ್ತವೆ. ಕಡೆಯ ಎರಡು ಭಾಗಗಳು ಇಡೀ ಗ್ರಂಥದಲ್ಲಿಯೇ ರೋಚಕ ಭಾಗಗಳೆನಿಸಿವೆ: ಒಂದು, ಗಿಡ್ಡಮ್ಮ-ನರಸಯ್ಯರ ದಾಂಪತ್ಯ ಪ್ರೇಮವನ್ನು ಹೇಳಿದರೆ, ಇನ್ನೊಂದು ಗಿಡ್ಡಮ್ಮನಿಗೂ ಬೇಲೂರ ಚೆನ್ನಯ್ಯನಿಗೂ ಇದ್ದ ಪ್ರಣಯ ಸಂಬಂಧವನ್ನು ತಿಳಿಸುತ್ತದೆ. ಯಾವುದೇ ಗ್ರಾಮ ಅಥವಾ ಕ್ಷೇತ್ರ ದೇವತೆಯ ಬಗ್ಗೆ ಇಂತಹದೊಂದು ಸನ್ನಿವೇಶ ಸೇರಿರುವುದು ಮಹತ್ವಪೂರ್ಣವಾದ ವಿಷಯ. ಅದರಲ್ಲಿಯೂ ಈ ಯಾವುದೇ ದೇವತೆಯ ಕಥೆಗಳಲ್ಲಿ ಅಕ್ರಮ ಪ್ರಣಯಕ್ಕೆ ಸಂಬಂಧಿಸಿದ ಕಥೆಗಳೂ ಸೇರಿಕೊಂಡಿರುವುದು ಮತ್ತೂ ಗಮನಾರ್ಹ. ಆದರೆ ಈ ಯಾವುದೇ ಸಂದರ್ಭವನ್ನು ಕುರಿತು ಹಾಡುವಾಗಲೂ ಜನತೆಗಿದ್ದ ಸ್ಥಾಯಿ ಭಾವವೆಂದರೆ ಭಕ್ತಿಯೇ. ಹೀಗೆ ಸಮಗ್ರ ಗ್ರಂಥ ದೇವತೆಯನ್ನು ಹತ್ತು ನಿಟ್ಟಿನಲ್ಲಿ ನೋಡಿ, ಅವಳ 'ಚರಿತ್ರೆ'ಯನ್ನು ಪುನರ್ರಚಿಸುವ ಮತ್ತು ಸಾಮರಸ್ಯವನ್ನು ಮೂಡಿಸುವ ಕೆಲಸದಲ್ಲಿ ಯಶಸ್ವಿಯಾಗಿದೆ.

ಒಟ್ಟಾರೆ ವಸ್ತು ರಚನೆಯ ದೃಷ್ಟಿಯಿಂದ ಇಡೀ ಗೀತೆಗಳನ್ನು ಕಥಾತ್ಮಕ ಮತ್ತು ವರ್ಣನಾತ್ಮಕ ಎಂದು ವಿಭಾಗಿಸಿಕೊಳ್ಳಬಹುದು. ಕಥಾತ್ಮಕಭಾಗದಲ್ಲಿ ಗ್ರಾಮದೇವತೆಯ ಜನನ, ಬೆಳವಣಿಗೆ, ಸ್ಥಾಪನೆ, ಸಂಸಾರ ಸಂಬಂಧಗಳ ಚಿತ್ರಣವಿದೆ; ವರ್ಣನಾತ್ಮಕಭಾಗದಲ್ಲಿ ದೇವತೆಯ ವರ್ಣನೆ, ಜನರ ಆಚರಣೆ ಪ್ರಾರ್ಥನೆ, ವಂದನೆಗಳ ವಿವರಣೆ ಬರುತ್ತದೆ. ಭಾವದ ದೃಷ್ಟಿಯಿಂದ ನೋಡಿದಾಗ ಇವುಗಳೆಲ್ಲವನ್ನೂ ಭಕ್ತಿಗೀತೆಗಳೆಂದು ಕರೆಯಬಹುದು. ಜನತೆಯ ಭಕ್ತಿ ಭಾವವನ್ನೂ ಅದರ ಆವಶ್ಯಕತೆಯನ್ನೂ ಕುರಿತು ಇದು ಹೇಳುತ್ತದೆ. ಜನರ ಭಾವುಕ ಜೀವನದ ಮೇಲೆ ಅದರ ಒಟ್ಟು ಪ್ರಭಾವವನ್ನಿಲ್ಲಿ ನಿಚ್ಚಳವಾಗಿ ಕಾಣಬಹುದು. ಈ ಎಲ್ಲದರಲ್ಲಿಯೂ ದೇವರನ್ನು ತಮ್ಮಂತೆಯೇ ಕಲ್ಪಿಸಿಕೊಂಡು ಸಾಮಾನ್ಯವಾಗಿ ನಡೆಸಿಕೊಂಡಿರುವುದು ವಿಚಿತ್ರವಾಗಿ ತೋರಿದರೂ, ಆತ್ಮೀಯ ಭಾವವನ್ನು ತಂದು ವಿಶಿಷ್ಟವೆನಿಸುತ್ತದೆ.

ಇಂಥ ಹಲವಾರು ಜನಪದ ಕಥನ ಗೀತೆಗಳಲ್ಲಿ ಒಂದೇ ರೀತಿಯ ಗೀತೆಗಳು ಕೆಲವು ಗೋಚರವಾಗುವುದುಂಟು. ಹೀಗಾಗುವುದು ವರ್ಣನಾಭಾಗದಲ್ಲಿ ಮಾತ್ರವೇ ಹೊರತು ಕಥನ ಭಾಗದಲ್ಲಲ್ಲ ಎಂಬುದನ್ನು ಮರೆಯಬಾರದು. ಈ ಪುನರಾವರ್ತನೆ ದೋಷವಾಗಿರದೆ, ಜಾನಪದದ ಜಾಯಮಾನವಾಗಿದೆ. ಇಂಥ ಸಮಾನತೆಗೆ ಸ್ವತಂತ್ರ ಮೂಲ ಕಾರಣವಾಗಿರುವಂತೆ, ಪ್ರಸಾರ ಸಾಧ್ಯತೆಯೂ ಕಾರಣವಾಗಿರಬಹುದು. ಒಂದು ವಿಷಯವನ್ನು ಆಮೂಲಾಗ್ರ ಸಂಗ್ರಹಿಸುವುದಕ್ಕೆ ಹೊರಟಾಗ, ಇಂಥ ಎಲ್ಲ ಗೀತೆಗಳನ್ನು ತೆಗೆದುಕೊಳ್ಳಬೇಕಾಗುತ್ತದೆ; ಹಾಗಿದ್ದರೆ ಮಾತ್ರ ಅದರ ಸಮಗ್ರ ರೂಪ ಕಾಣುವುದು. ಈ ಎಲ್ಲ ದೃಷ್ಟಿಯಿಂದಲೂ 'ಮಳಲಿ ಗಿಡ್ಡಮ್ಮ' ಸಮಗ್ರವೂ ಸಮರ್ಥವೂ ಆದ ಸಂಗ್ರಹವಾಗಿದೆ.

'ಮಳಲಿ ಗಿಡ್ಡಮ್ಮ' ಶ್ರೇಷ್ಠ ಸಾಹಿತ್ಯಕೃತಿಯೂ ಹೌದು. ಇದರಲ್ಲಿ ವಿವಿಧ ವಿಷಯಗಳಿಗೆ ಸಂಬಂಧಿಸಿದಂತೆ ಹಲವಾರು ಅತ್ಯುತ್ತಮ ಗೀತೆಗಳು ಕಾಣಿಸಿಕೊಳ್ಳುತ್ತವೆ. ಅದರ ಕಥನ ಭಾಗವಾಗಲಿ ವರ್ಣನಾ ಭಾಗವಾಗಲಿ ಅಜ್ಞಾತ ಜನಪದ ಕವಿಯ ಸೃಷ್ಟ್ಯಾತ್ಮಕ ಶಕ್ತಿಯನ್ನು ಅಭಿವ್ಯಕ್ತಿಸುತ್ತದೆ. ಇದಕ್ಕೆ ಒಂದೆರಡು ಉದಾಹರಣೆಗಳನ್ನು ಕೊಡಬಹುದು. ದೇವರಲ್ಲಿ ಅನನ್ಯ ನಂಬಿಕೆ ಪ್ರೀತಿಯಿಟ್ಟ ಸ್ತ್ರೀ ಚೇತನವೊಂದು ಪ್ರಾರ್ಥಿಸಿಕೊಳ್ಳುವ ಪರಿಯಿದು:

ಬಂಡೇಯ ತೆರದಲಿ ನನ ಗಂಡಾನ ಮೈಯಿರಲಿ
ನನ ಗಂಡಾನ ಕೀರುತಿ ಜಗಕಿರಲಿ – ಗಿಡ್ಡವ್ವ
ನಿನಗೆನ್ನ ಮಂಡೇಯ ಕೊಟ್ಟು ಬೇಡೇನು.

[illegible] ವಾದ ಕಾವ್ಯ ಮೌಲ್ಯವನ್ನು ಸಾಧಿಸಿದೆ.

[illegible] ಚಿತ್ರಿಸಿದೆ:

ಮಾರ್ನವಮಿಯ ಮಾಯಿಪಕ್ಕೆ ತಾನ್ಹೋಯಿಗಲ ಗಿಡ್ಡವ್ವ
ಆಳ್ಹೋಯಿತು ಅಡಿಕೆ ದಾಸಿ ಹಂಗೆ –ಗಿಡ್ಡವ್ವ
ತಾನ್ಹೋಯಿಗಲ ನವಿಲು ನಗಿಹಂಗೆ

[illegible]

[illegible]

[illegible] ಗಿದೆ : ಆ ಕಾರ್ಯಕ್ಕೆ ಇದು ನಾಂದಿಯಾಗಿದೆ.

—ರಾಗೌ

[illegible] ಶ್ರೀ ಜ. ಚ. ನಿ. [illegible] ಪುಟ 252: [illegible]

'ಜ. ಚ. ನಿ.' [illegible]

[illegible]

'[illegible]' [illegible]

[illegible] ಶ್ರೀ [illegible] 'ಶ್ರೀ ಜ. ಚ. ನಿ.' [illegible] ಆರಂಭವಾಗಿದೆ.

ಪರಮಾರ್ಥದಲಿ ಶರಣರನುಭಾವಕ್ಷೇತ್ರದಲಿ
ಕನ್ನಡದ ಹೊಸ ಬೆಳೆಯ ಬೆಳೆದು ತಣಿದು
ಧನ್ಯರಾದವರಲಿ ಸುಗಣ್ಯರಾದಿರಿ 'ಜಚನಿ'

ಎಂದು ಆರಂಭವಾದ ಈ ಕವನ

" [illegible]
[illegible]
[illegible]"

[illegible]

[illegible] ಅದುದು" ಎಂದು ಹೇಳಿದ್ದಾರೆ.

[illegible] (ಪು. 31).

ಶ್ರೀ [illegible] JACHANI : His life and works [illegible] ಕನ್ನಡೇತರರಿಗಾಗಿ [illegible]

[illegible]

[illegible] 764 [illegible] 612 [illegible] 626 [illegible] 500 [illegible] 424 [illegible] 306 [illegible]

ದಿರದು. "ಪ್ರಾಚೀನ ವೀರಶೈವರ ಪದಾರ್ಥ ಪ್ರಜ್ಞೆಗೆ ಸತತ ವಿಶ್ಲೇಷಣೆಗೆ ಸೀಮೆ ಇಲ್ಲ"ವೆಂಬ ಶ್ರೀಯವರ ಬಯಕೆ ಅವರ ನವನವೋನ್ಮೇಷ ಶಾಲಿನಿಯಾದ ಬತ್ತದ ಪ್ರತಿಭೆಯ, ಅಮಲ ವೈದುಷ್ಯದ ಪ್ರತೀಕ.

ಭಕ್ತ ಸಂಪುಟದ ವಿಚಾರ ವಿಮರ್ಶೆ ಮಾಡಿರುವ ಪ್ರೊ. ಸ. ಸ. ಮಾಳವಾಡರ ಅಭಿಪ್ರಾಯ ವಿದು:

"ದೈವೀ ಆನಂದವನ್ನು ಪಡೆಯುವಲ್ಲಿ ಜೀವನ ಸಾರ್ಥಕ್ಯವಿದೆ. ಬುವಿಯ ಬಾಳಿನೊಂದಿಗೇ ದೈವೀ ಆನಂದ ಪಡೆಯುವ ಪಥವು ಸಾಗಬೇಕು. ಇಲ್ಲಿ ಸಲ್ಲುವರೇ ಅಲ್ಲಿಯೂ ಸಲ್ಲಬಲ್ಲರು. ಅಂತೆಯೇ ಇಹಪರಗಳೆರಡನ್ನೂ ಸಾಧಿಸುವ ಕಲೆ ಷಟ್‌ಸ್ಥಲ ಎಂಬ ಭೂಮಿಕೆಯೊಂದಿಗೆ ಜೀವನ ಸಿದ್ಧಾಂತದ ಭಕ್ತಸಂಪುಟವನ್ನು ನಿರೂಪಿಸಲಾಗಿದೆ (ಪು. 103) ಮಾನವೀಯ ಬಾಳಿನಲ್ಲಿ ದಿವ್ಯ ಜೀವನಯಾತ್ರೆ ಸಾಗಿಸುವುದೇ ಷಟ್‌ಸ್ಥಲಮಾರ್ಗದ ಸೊಬಗು".

ಈ ದಿಶೆಯಲ್ಲಿ ಉಳಿದ ಸಂಪುಟಗಳ ಸಮೀಕ್ಷೆಗೆ ತೊಡಗಿರುವ ವಿದ್ವಾಂಸರಲ್ಲಿ ಸುಪ್ರಸಿದ್ಧ ಸಾಹಿತಿಗಳೂ, ಸಂಶೋಧಕರೂ ಮತ್ತು ನಿಶಿತ ವಿಮರ್ಶಕರೂ ಆಗಿರುವ ಡಾ. ಆರ್. ಸಿ. ಹಿರೇಮಠ ಅವರು (ಮಾಹೇಶ ಸಂಪುಟ), ಡಾ. ಕೆ. ಕೃಷ್ಣಮೂರ್ತಿಗಳು (ಪ್ರಸಾದಿ ಸಂಪುಟ), ಪ್ರೊ. ಬಿ. ಸಿ ಜವಳಿ ಅವರು (ಪ್ರಾಣಲಿಂಗಿ ಸಂಪುಟ), ಪಂಡಿತ ಶ್ರೀ ನಾಗಭೂಷಣ ಶಾಸ್ತ್ರಿಗಳು ಮತ್ತು ಪ್ರೊ. ಎಸ್. ಎಸ್. ಭೂಸನೂರು ಮಠ ಅವರು (ಶರಣಸಂಪುಟ), ಡಾ. ಎಚ್. ಪಿ.ಮಲ್ಲೇದೇವರು ಮತ್ತು ಶ್ರೀ ಜಿ. ಸುಂದರೇಶನ್ ಅವರು (ಐಕ್ಯಸಂಪುಟ) ಆಯಾ ಸಂಪುಟಗಳ ಸಮೀಕ್ಷೆಯನ್ನು ಸಮರ್ಥವಾಗಿ ನಡೆಸಿದ್ದಾರೆ.

ಆದರ ಒಂದೊಂದು ವಿಷಯವನ್ನೂ ಅಧಿಕಾರವಾಣಿಯಿಂದ ಬರೆಯಬಲ್ಲ ಈ ವಿದ್ವಾಂಸರ ಕೆಲವು ಸಮೀಕ್ಷೆಗಳು ಸಮಯಾಭಾವದಿಂದಲೋ ಎಂಬಂತೆ ತಕ್ಕಷ್ಟು ವಿಷಯವನ್ನು ಅರಗಿಸಿಕೊಂಡಂತೆ ಕಾಣದಿರುವುದು ವಿಷಾದದ ಸಂಗತಿ. ಉದಾಹರಣೆಗಾಗಿ ಡಾ. ಹಿರೇಮಠರು ಹೇಳುವಂತೆ "ನವವಿಧ ಲಿಂಗ ಸಕೀಲವನ್ನು ಜಗದ್ಗುರು ನಿಡುಮಾಮಿಡಿ ಶ್ರೀಗಳವರು ಬಿಚ್ಚಿ ತೋರಿಸಿದಷ್ಟು ಬೇರೆ ಯಾರೂ ಮಾಡಿಲ್ಲವೆಂದು ಧಾರಾಳವಾಗಿ ಹೇಳಬಹುದು. ನವವಿಧಲಿಂಗಗಳ ಸಂಬಂಧವನ್ನು ತೋರಿಸುವುದೇ ಜೀವನ ಸಿದ್ಧಾಂತ ಸಂಪುಟಗಳ ಗುರಿ" (ಪು. 115) ವೀರಶೈವ ಸಿದ್ಧಾಂತದ ಗೂಢಾಗೂಢ ತತ್ತ್ವದ ರಹಸ್ಯಗಳನ್ನು ನಿಷ್ಕೃಷ್ಟವಾಗಿ ತಿಳಿದಿರುವ ಅತಿ ವಿರಳರಾದ ಸಿದ್ಧಪುರುಷರಲ್ಲಿ ಶ್ರೀಗಳೂ ಒಬ್ಬರು ಎಂಬುದು ಅವರ ಈ ಮೇರುಕೃತಿಯಲ್ಲಿ ಹೆಜ್ಜೆ ಹೆಜ್ಜೆಗೂ ವೇದ್ಯವಾಗುತ್ತದೆ.

ಮಾಹೇಶ್ವರ ಸಂಪುಟದಲ್ಲಿ ಸುಮಾರು 613 ಪುಟಗಳ ಈ ನವ ಲಿಂಗಗಳ ಸಂಬಂಧವನ್ನು ವಿವರಿಸಿರುವುದು ಮಾತ್ರವಲ್ಲದೆ ಅನುಬಂಧದ ಸು. 139 ಪುಟಗಳಲ್ಲಿ ಶ್ರೀಯವರು ಉಲ್ಲೇಖಿಸಿರುವ "ಮಾಹೇಶ್ವರ ಸ್ಥಲ ಅಥವಾ ಗುರುಸ್ಥಲ ನಿಷ್ಠೆಯ ನೆಲೆ, ಪೂರ್ವಾಶ್ರಯ- ಪರಾಶ್ರಯ. ವರ್ಣಾಧ್ವ- ಮಂತ್ರಾಧ್ವ. ಸ್ವರ್ಗ-ಅಪವರ್ಗ ಮತ್ತು ಆಗಮ-ವಿಚಾರ ಎಂಬ ಹಲವಾರು ಶೀರ್ಷಿಕೆಗಳಲ್ಲಿ ಪ್ರಸ್ತಾಪಿಸಿರುವ ವಿಚಾರ ಪರಿಪ್ಲುತ ವಿಷಯಗಳ ಬಗ್ಗೆ ವಿಮರ್ಶಕರ ದೃಷ್ಟಿ ಹರಿಯದಿದ್ದುದು ಆಶ್ಚರ್ಯ. ಅದರಂತೆ ಜೀವನ ಸಿದ್ಧಾಂತದ ಆರು ಸಂಪುಟಗಳಲ್ಲಿ ಅತಿದೊಡ್ಡ (976 ಪುಟ)ದಾದ ಪ್ರಸಾದಿ ಸಂಪುಟ ಸಮೀಕ್ಷೆ ನಡೆಸಿರುವ ಡಾ. ಕೆ. ಕೃ. ಅವರ ಕೇವಲ ಆರು ಪುಟಗಳ ಸಮೀಕ್ಷೆ ಓದುಗರಿಗೆ ತುಂಬಾ ನಿರಾಶೆಯನ್ನು ಉಂಟುಮಾಡುತ್ತದೆ.

ಪ್ರಸಾದಿಯ ಮುಖ್ಯಗುರಿಯ ಬಗ್ಗೆ ಶ್ರೀಯವರು "ನಿರ್ಮಲತೆ ನಿಶ್ಚಲತೆ ಇವು ಮುಖ್ಯ. ಇವಿಲ್ಲದೆ ಪರಮಾನಂದ ಪ್ರಾಪ್ತಿಯಾಗದು. ಪರಮಶಾಂತಿ ಕಿರಣ ಪ್ರಸರಿಸದು. ಸ್ವಾರ್ಥ, ಮತ್ಸರ ರಾಗ, ದ್ವೇಷ, ದುರಾಶೆ, ದುರ್ಬುದ್ಧಿ, ಅಶಾಂತಿ ಇವು ತೊಲಗಬೇಕು. ಇವು ತಿಳಿಬಾಳನ್ನು ಕದಡುತ್ತವೆ:... ತನುಮನ ಭಾವಗಳು ನಿರ್ಮಲವಾಗದೆ ಶಾಂತಿ ಸಾಧ್ಯವಿಲ್ಲ. ತನುಮನಭಾವಗಳ ನಿರ್ಮಲತೆಯನ್ನು ಸಾಧಿಸುವುದೇ ಪ್ರಸಾದಿಯ ಪ್ರಮುಖಗುರಿ" (ಮೊದಲ್ನುಡಿ ಪು. 10) ಎಂದು ಹೇಳಿ ಮುಂದೆ ಸುಮಾರು 68 ಪ್ರಕರಣಗಳಲ್ಲಿ ಪ್ರಕೃತಿ – ವಿಕೃತಿ, ಅಗ್ನಿತತ್ತ್ವ, ಅಗ್ನ್ಯಂಗ ಮುಂತಾದ ಶೀರ್ಷಿಕೆಗಳಲ್ಲಿ ಪ್ರಸಾದ ತತ್ತ್ವದ ಪೂರ್ವಾಂಗವನ್ನು ವಿಸ್ತರಿಸಿದ್ದಾರೆ. ಮುಂದೆ ಪ್ರಸಾದ- ಪ್ರಸಾದಿ, ಪ್ರಸಾದವೇ ಪರ

ತತ್ತ್ವ, ಮುಂತಾಗಿ ವಿವರಿಸುತ್ತಾ ವೇದೋಪನಿಷತ್ ಪುರಾಣಾದಿಗಳ ಸಮ್ಮತಿಯನ್ನು ನೀಡಿರುವುದು ಮಾತ್ರವಲ್ಲದೆ ಅನುಬಂಧದಲ್ಲಿ 'ಉಂಡು ಉಪವಾಸಿ, ಬಳಸಿ ಬ್ರಹ್ಮಚಾರಿ' 'ಆರುನೆಲೆಯಲ್ಲಿ ಏರು ಜವ್ವನಿಗನಿಗೆ ಹಸಾದಿ' ಮುಂತಾದ ವಿಚಾರ ಪ್ರಚೋದಕ ಅಂಶಗಳನ್ನು ಬಿಡಿಸಿರುವ ಜಾಣ್ಮೆ ಅಭಿನಂದನೀಯ. ಇದರಂತೆ ಉಳಿದ ಸಂಪುಟಗಳ ಸಮೀಕ್ಷೆಗಳು ಸಹ. ಸಾವಧಾನವಾಗಿ ಮೂಲವನ್ನು ಓದಿ ಅರಗಿಸಿಕೊಳ್ಳಲು ಅಥವಾ ಹಾಗೆ ಅರಗಿಸಿದುದನ್ನು ಅಭಿವ್ಯಕ್ತ ಮಾಡಲು ತಕ್ಕಷ್ಟು ಕಾಲಾವಕಾಶ ಹಾಗೂ ಸ್ಥಳಾವಕಾಶಗಳು ಅಗತ್ಯ. ಇನ್ನು ಒಂದು ಮುಖ್ಯವಾದ ಅಂಶವೆಂದರೆ ಆ ಸುಸಂಸ್ಕಾರಿ ಶಿವ್ವವಾಣಿಯ ಹೃದಯಾಳವನ್ನು ಹೊಗುವ ಪರಿಪಕ್ವ ಅಧಿಕಾರವನ್ನು ನಾವು ಪಡೆಯಬೇಕಾದುದು ಅನಿವಾರ್ಯವೇ!

ಇನ್ನು ಶ್ರೀ ಜ. ಮಾತೆ ಮಹಾದೇವಿಯವರ 'ಆರು ಸಂಪುಟಗಳ ಅನುಸಂಧಾನ' ಈ ಮೇರು ಕೃತಿಯ ತುದಿ ಮುಟ್ಟಿಲೆಳಸಿದ ಪುಟ್ಟನಿಚ್ಚಣಿಕೆ. ಕಾಯ - ಜೀವದ ಜೋಳಿಗೆ ಬಿಚ್ಚುವ ಸಾಧನೆಗೆ ನಿದರ್ಶಿಸಿರುವ "ಹಾಲು ನೀರನ್ನು ಬೇರ್ಪಡಿಸುವ ಎರಡು ವಿಧಾನಗಳುಂಟು. ಒಂದು ಬೆಂಕಿಯಂತೆ ನೀರನ್ನು ಸುಟ್ಟು ಹಾಲನ್ನು ಬೇರೆ ಮಾಡುವುದು; ಇನ್ನೊಂದು ಹಂಸಪಕ್ಷಿಯಂತೆ ಪಿಂಗಡಿಸುವುದು" (ಪು.210) ನಿದರ್ಶನ ಕೇವಲಾಧ್ಯಾತ್ಮವಾದಿಗಳ ಹಾಗೂ ಶಿವಾದ್ವೈತಿಗಳ ಸಾಧನ ಮಾರ್ಗದ ವೈಶಿಷ್ಟ್ಯವನ್ನು ಬೆಳಗುವುದಾದರೂ "ಶರಣ ಸತಿ–ಲಿಂಗ ಪತಿ"ಯ ಅಪ್ಪುಗೆಯ ನಿಷ್ಠೆಗಿಗೆ ನೀಡಿರುವ "ಆಕೆಯ ಸಲ್ಲಾಪ ಬಾಯೊಳಗೆ ಬಾಯನಿಕ್ಕಿ, ಎದೆಗೆ ಎದೆಯ ತರ್ಕೈಸಿ, ದೈಗೆ ದೈಯ ಹೊಂದಿಸಿ ಕೂಡಿದಂತಾಗಿ"(ಪು.206) ಮುಂತಾದುವಲ್ಲಿ ಇನ್ನೂ ಹಸಿತನದ ಅಪರಿಪಕ್ವತೆ ಕಂಡು ಬರುತ್ತದೆ.

ಶ್ರೀ ಎಸ್. ಬಿ. ಹಂದಿಯವರ 'ಜೀವನ ಸಿದ್ಧಾಂತ ಹಾಗೂ ಸ್ಥಲಕಟ್ಟು' ಅಧ್ಯಯನ ಪೂರ್ಣವೆನಿಸಿದೆ. ಹಾಗೆಯೇ ಶ್ರೀ ಪಂಚಾಕ್ಷರ ಶಿವಾಚಾರ್ಯರ 'ಷಟ್‌ಸ್ಥಲ ಸ್ವರೂಪ ಚಿತ್ರಣ ತಂತ್ರ'ಮತ್ತು ಶ್ರೀ ಬಿ. ಬಿ. ಹೆಂಡಿಯವ ರವೀರಶೈವ ಜೀವನ ಸಿದ್ಧಾಂತಗಳು' ವಿಚಾರ ಪ್ರಚೋದಕವಾಗಿವೆ.

ಕಡೆಯದಾಗಿ ಶ್ರೀಯವರ ಶೈಲಿಯ ಭವ್ಯತೆಗೆ ವಿಮರ್ಶಕರು ಮುಗ್ಧರಾಗಿರುವರಾದರೂ ಓದುಗರ ದೃಷ್ಟಿಯಿಂದ, ಸಹೃದಯತೆಯಿಂದ ನೀಡಿರುವ ಒಂದೆರಡು ವಿನಮ್ರ ಸಲಹೆಗಳನ್ನು ಇಲ್ಲಿ ನೆನೆಯದಿರುವುದು ಕರ್ತವ್ಯ ಲೋಪವೆನಿಸೀತು. ಈ ದಿಸೆಯಲ್ಲಿ ವೃಷಭೇಂದ್ರಸ್ವಾಮಿ ಮತ್ತು ಭೂಸನೂರು ಮಠ ಅವರ ಈ ಮಾತುಗಳು ಸಂಸ್ಮರಣೀಯ:

"ಸರಳ ಶೈಲಿಯ ಉಪಾಸಕರಾದ ಶ್ರೀಗಳವರ ಬರೆಹದಲ್ಲಿ ವಿಚಾರವೂ ಅತಿ, ಮಾತೂ ಅತಿ ಎನ್ನಿಸುತ್ತದೆ. ಬರವಣಿಗೆಯಲ್ಲಿ ಕೊಂಚವಟ್ಟಿನ ಸಂಯಮ, ಒಂದೇ ವಿಷಯವನ್ನು ಮತ್ತೆ ಮತ್ತೆ ವಿವರಿಸುವ ವಿಧಾನ ನಿಯಂತ್ರಣ, ಗದ್ಯಪದ್ಯಗಳ ಅಂತ್ಯದಲ್ಲಿ ಒಮ್ಮೊಮ್ಮೆ ರಸವತ್ತಾಗಿ, ಅನೇಕ ಬಾರಿ ಯಾಂತ್ರಿಕವಾಗಿ ತೋರುವ ಪ್ರಾಸಾನುಪ್ರಾಸಗಳ ಬಾಹುಳ್ಯ ಕಮ್ಮಿಯಾದರೆ ಒಳಿತು ಎನ್ನಿಸುತ್ತದೆ. ಜೊತೆಗೆ ವಿಷಯ ವಿವರಣೆಯಲ್ಲಿ ಕೇಂದ್ರ ಬಿಂದುವಿನ ಸುತ್ತು ವಿಚಾರ ವಿಲಾಸ ಸಾಧ್ಯವಾಗಿದ್ದರೆ ಸಕ್ರಮವಾಗಿ ಮೂಡಿ ಬರುವಂಥ ತರ್ಕಬದ್ಧ ರಚನೆ ಸಾಧ್ಯವಾಗಿದ್ದರೆ ಇನ್ನೂ ಚೆನ್ನಾಗಿತ್ತು ಎಂದು ಹಂಬಲಿಸುತ್ತದೆ ಸ್ಪಹದಯ ಜೀವ. ಇದು ಓದುಗನ ಹಂಬಲ" (ಪು. 36. 145)

ಕಡೆಯದಾಗಿ ಕನ್ನಡ ಕವಿವರ ಶ್ರೀ ದ. ರಾ. ಬೇಂದ್ರೆಯವರ "ಶ್ರೀ ಜಚನಿ ಅವರಿಂದ ಜೀವನ ರಹಸ್ಯದ ಕಾವ್ಯ ಶ್ರೀ ಅರವಿಂದರ ಸಾವಿತ್ರೀ ಕಾವ್ಯದಂತೆ ಬರಲಿ" ಎಂಬ ಹಂಬಲದೊಂದಿಗೆ ಶ್ರೀಯವರ ಶಿಷ್ಯಕೋಟಿಯ ಹಾಗೂ ಸಹೃದಯ ಕನ್ನಡಿಗರೆಲ್ಲರ ಬಿಕ್ಕೊರಲ ದನಿಗೂಡಿಸಿ ನಿವೇದಿಸೋಣ. ಜೀವನ ಸಿದ್ಧಾಂತದ ಬಗೆಗೆ ಹಾಗೂ ಅವರ ಪ್ರಭಾವಪೂರ್ಣ ಸಾಹಿತ್ಯದ ಬಗೆಗೆ ಇನ್ನೂ ಅಧ್ಯಯನಪೂರ್ಣವಾದ ನಿರ್ವಿಕಾರಭಾವದ ವಿದ್ವದ್ವಿಮರ್ಶೆಗಳು ಹಲವಾರು ಬರಲಿ ಎಂದು ಹಾರೈಸೋಣ.

—ಎಂ. ಜಿ. ನಂಜುಂಡಾರಾಧ್ಯ

ಸಂಪಾದಕೀಯ

ದಿವಂಗತ ಶ್ರೀ ಕೆ. ಎಸ್. ಧರಣೇಂದ್ರಯ್ಯನವರು

[illegible]

ಮನೋಹರ ಗ್ರಂಥಮಾಲಾ, ಧಾರವಾಡ—ಇವರ ಪ್ರಕಟಣೆಗಳು

ಹಯವದನ (ನಾಟಕ). ಲೇ: ಗಿರೀಶ ಕಾರ್ನಾಡ. ಪುಟ: 110: ಬೆಲೆ: 4.00 (6.00) 1971

ಋಷ್ಯಶೃಂಗ (ನಾಟಕ). ಲೇ: ಚಂದ್ರಶೇಖರ ಕಂಬಾರ; ಪುಟ: 116; ಬೆಲೆ: 4.00 (6.00); 1971.

ಮೋಹಿತರು (ಕಾದಂಬರಿ). ಲೇ: ಸುಂದರ ನಾಡಕರ್ಣಿ. ಪುಟ:122: ಬೆಲೆ: 4.00 (6.00); 1971

ಅನ್ಯ (ಕಾದಂಬರಿ). ಮೂಲ: ಅಲ್ಬರ್ಟ್ ಕಾಮೂ: ಅನು: ಡಿ. ಎ. ಶಂಕರ; ಪುಟ:156: ಬೆಲೆ: 4.00 (6.00) 1970

**

ಬಿಸಿಲ್ಗುದುರೆಯ ಹಿಂದೆ (ನಾಟಕ). ಲೇ: ಜಿ. ಜಿ. `ಹರಿಜಿತ್'. ಪ್ರ: ಸಪ್ತಲಾ ಪ್ರಕಾಶನ ಬೆಂಗಳೂರು: ಪುಟ: 28; ಬೆಲೆ: 1.00; 1970

ಸ್ನೇಹಸೂತ್ರ (ನಾಟಕ). ಲೇ: ಜಿ. ಜಿ. 'ಹರಿಜಿತ್'. ಪ್ರ: ಸಪ್ತಲಾ ಪ್ರಕಾಶನ, ಬೆಂಗಳೂರು: ಪುಟ: 84; ಬೆಲೆ: 2.50; 1971.

ಸಮಾಜ ಕಲ್ಯಾಣ (ನಾಟಕ). ಲೇ: ಎಸ್. ಸಿದ್ದರಾಜು. ಪ್ರ: ಸೌಭಾಗ್ಯ ಪ್ರಕಾಶನ, ಕಾಡುಕೊತ್ತನಹಳ್ಳಿ, ಮದ್ದೂರು ತಾಲ್ಲೂಕು: ಪುಟ: 55; ಬೆಲೆ: 2.00; 1971

Sri Raghavendra: His life and Works. ಲೇ: ಜೆ.ಬಿ.ಜೋಶಿ; ಪ್ರ: ಶ್ರೀ ರಾಘವೇಂದ್ರಸ್ವಾಮಿ ಬೃಂದಾವನ ಕಛೇರಿ. ಮಂತ್ರಾಲಯ: ಪುಟ: 238; ಬೆಲೆ: 4.00; 1971

ಶ್ರೀ ಮಧ್ವಾಚಾರ್ಯ ತತ್ತ್ವಪ್ರಕಾಶನ ವಚನಗಳು. ಲೇ: ಟಿ. ಎನ್. ಲಿಂಗಣ್ಣಯ್ಯ; ಪ್ರ: ಸತ್ಯಶೋಧನ ದ್ವಿವಾದ್ವೈತ ಸಂಘ. ಕುದೇರು: ಬೆಲೆ: 0.50; 1971

ಕಾವ್ಯಮಾಲೆ (ಕವನಸಂಗ್ರಹ). ಕವಿ: ಟಿ. ಆರ್. ಭಟ್ಟ: ಪ್ರ: ಅಕ್ಷರ ಕಲಾ ಪ್ರಕಾಶನ, ಕತಗಾಲ. ಉತ್ತರ ಕನ್ನಡ ಜಿಲ್ಲೆ: ಪುಟ: 32: ಬೆಲೆ: 1.00: 1971

ಸಮಾಜ ಪುಸ್ತಕಾಲಯ, ಶಿವಾಜಿ ಬೀದಿ, ಧಾರವಾಡ ೧—ಇವರ ಪ್ರಕಟಣೆಗಳು

ಸುಪ್ಪಿ! ಸುಪ್ಪೀ ಸುವ್ವಾಲೆ (ಜನಪದಗೀತೆಗಳು). ಸಂ. ಎಲ್. ಆರ್. ಹೆಗಡೆ: ಪುಟ: 143; ಬೆಲೆ: 3.75; 1971

ಗರತಿಯ ಹಾಡು (ನಾಲ್ಕನೆಯ ಮುದ್ರಣ). ಸಂ. ಚೆನ್ನಮಲ್ಲಪ್ಪ. ಲಿಂಗಪ್ಪ. ರೇವಪ್ಪ; ಪುಟ: 144; ಬೆಲೆ: 2.75; 1971

ಪದ್ಮಪುರಾಣ ಕಥೆ. ಸಂಗ್ರಹಾನುವಾದ: ಕೆ. ಭುಜಬಲಿಶಾಸ್ತ್ರಿಗಳು; ಪುಟ:170; ಬೆಲೆ: 3.25; 1971.

ಕುಮಾರವ್ಯಾಸ ನಿಘಂಟು. ಸಂ: ಎನ್ಕೆ: ಪುಟ: 150: ಬೆಲೆ: 3.50: 1971

ಸಂಕ್ಷಿಪ್ತ ಇಂಗ್ಲಿಷ್ ಸಾಹಿತ್ಯ ಚರಿತ್ರೆ. ಲೇ: ಎಸ್. ರಮಾನಂದ; ಪುಟ: 333. ಬೆಲೆ: 5.00 (7.00) 1971

**

ಹೊಸ ಜನಾಂಗದ ಕವಿತೆಗಳು. ಸಂ: ಬುದ್ದಣ್ಣ ಹಿಂಗಮಿರೆ: ಪ್ರ: ಸಾಹಿತ್ಯ ಮಂಟಪ.

ಹುಬ್ಬಳ್ಳಿ ಮತ್ತು ಸಮಾಜ ಪುಸ್ತಕಾಲಯ, ಧಾರವಾಡ ಪುಟ: × × +256; ಬೆಲೆ:15.00 (20.00); 1971

ಧನ್ಯ ಭಾರತಮಾತಾ (ಕವನಸಂಗ್ರಹ), ಕವಿ: ಗ. ಶ್ರಿ ದೀ.; ಪ್ರ: ಶ್ರೀ ಕೃ. ದೀಕ್ಷಿತ, ಮಾಸೂರ, ಹಿರೇಕೆರೂರ ತಾಲ್ಲೂಕು, ಧಾರವಾಡ ಜಿಲ್ಲೆ; ಪುಟ: 88; ಬೆಲೆ: 1.20; 1970.

ಕಾವ್ಯವಿಚಾರಸಾರ (ವಿಮರ್ಶಾತ್ಮಕ ಸೂಕ್ತಿ ಸಂಗ್ರಹ), ಅನು: ಸಿ. ಪಿ.ಕೆ.; ಮಾರಾಟಗಾರರು: ತ. ವೆಂ. ಸ್ಮಾರಕಗ್ರಂಥಮಾಲೆ, ಕೃಷ್ಣಮೂರ್ತಿಪುರಂ, ಮೈಸೂರು4; ಪುಟ 144; ಬೆಲೆ: 4.00, 1971

ನಿರಾಕರಣ (ಕಾದಂಬರಿ), ಲೇ: ಎಸ್. ಎಲ್. ಭೈರಪ್ಪ; ಪ್ರ: ಸಾಹಿತ್ಯ ಭಂಡಾರ, ರಾಷ್ಟ್ರೀಯ ವಿದ್ಯಾಲಯ ಬೀದಿ, ವಿಶ್ವೇಶ್ವರಪುರ, ಬೆಂಗಳೂರು 4; ಪುಟ: 223; ಬೆಲೆ: 5.00 1971

ಏಳನೆಯ ಹೆಡೆ (ಕಾದಂಬರಿ), ಲೇ: ಚಿರಂತನ; ಪ್ರ: ಶ್ರೀ ಕಾವೇರಿ ಪ್ರಕಾಶನ, ಮಡಿಕೇರಿ; ಪುಟ: 263; ಬೆಲೆ: 5.50; 1971.

ಪಂಪಾತುಂತುರ (ಕಥಾಸಂಕಲನ), ಸಂ: ಜಯತೀರ್ಥ ರಾಜಪುರೋಹಿತ ಮತ್ತಿತರರು; ಪ್ರ: ಕನ್ನಡ ಸಾಹಿತ್ಯ ಪರಿಷತ್ತು, ಬಳ್ಳಾರಿ ಜಿಲ್ಲಾ ಸಾಹಿತ್ಯ ಸಮಿತಿ, ಬಳ್ಳಾರಿ; ಪುಟ:108 ಬೆಲೆ: 2.00; 1971

WO 9320—MUPM—2,100—18-1-72

'ಪ್ರಬುದ್ಧ ಕರ್ಣಾಟಕ'ಕ್ಕೆ ವಿನಿಮಯವಾಗಿ ಬರುವ ಪತ್ರಿಕೆಗಳು

Annals of Oriental Research, University of Madras *Brahmavidya*, Adyar, Madras; *Bulletin of the School of Oriental and African Studies*, London; *Journal of the Andhra Historical Research Society*, Rajahmundry; *Journal of the Karnataka Historical Research Society*, Dharwar; *Quarterly Journal of the Mythic Society*, Bangalore; *The Indian P.E.N.* Bombay; *Annals of the Venkateswara Oriental Institute*, Tirupati; *The Jaina Siddhanta Bhaskar and the Jaina Gazette*, Arrah; *Bulletin of the Deccan College Research Institute*, Poona; *Publication of the Kannada Research Office*, Dharwar; *Annals of the Bhandarkar Oriental Research Institute*, Poona; *Journal of the Karnatak University*, Dharwar; *Public Affairs*, Bangalore.

'ಪ್ರಪಂಚ', ಹುಬ್ಬಳ್ಳಿ; 'ಕರ್ಮವೀರ', ಹುಬ್ಬಳ್ಳಿ; 'ಆಂಧ್ರ ಸಾಹಿತ್ಯ ಪರಿಷತ್ಪತ್ರಿಕೆ (ತೆಲುಗು), ಕಾಕಿನಾಡ; 'ಜಯಕರ್ನಾಟಕ', ಧಾರವಾಡ; 'ಜಯಂತಿ', ಧಾರವಾಡ, ವಿದ್ಯಾದಾಯಿನಿ', ಮೈಸೂರು; 'ಶರಣ ಸಾಹಿತ್ಯ', ಬೆಂಗಳೂರು; 'ಶಿವಾನುಭವ' ಬಿಜಾಪುರ; 'ಸುಬೋಧ', ಬೆಂಗಳೂರು; 'ಜೀವನ', ಬೆಂಗಳೂರು; 'ಪುಸ್ತಕ ಪ್ರಪಂಚ', ಮೈಸೂರು; 'ಕನ್ನಡ ನುಡಿ', ಬೆಂಗಳೂರು; 'ಸೋವಿಯೆತ್ ದೇಶ', ಮದ್ರಾಸು; 'ಪ್ರಕಾಶ' ಉಡುಪಿ; 'ಭಾರತವಾಣಿ' (ಹಿಂದಿ), ಧಾರವಾಡ; 'ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ', ಬೆಂಗಳೂರು; 'ಕರ್ಣಾಟಕ ಭಾರತಿ', ಧಾರವಾಡ.

Reg. No. R. N. 17184/57